## 2015–16ನೇ ವರ್ಷದ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ಆಕ್ಷೇಪಣೆಗಳು ಹಾಗೂ ವಸೂಲಾತಿಗಳ ವಿವರ.

| ಕ್ರ.ಸಂ | ಕಂಡಿಕೆ ಸಂಖ್ಯೆ | ವಿವರ | | |
|---|---|---|---|---|
| **ಭಾಗ – 1** | | | | |
| 1 | 1 | ಹಿಂದಿನ ವರ್ಷದ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಯ ಬಗ್ಗೆ | | |
| 2 | 2 | ವಿಶ್ವವಿದ್ಯಾಲಯದ ವಿವಿಧ ಅಂಗ ಸಂಸ್ಥೆಗಳ ಆಕ್ಷೇಪಣೆ ಮತ್ತು ವಸೂಲಾತಿ ವಿವರದ ಬಗ್ಗೆ | | |
| **ಭಾಗ – 2** | | | **ಆಕ್ಷೇಪಣೆಗೆ ಸೂಚಿಸಿದ ಮೊತ್ತ (ರೂ.ಗಳಲ್ಲಿ)** | **ವಸೂಲಾತಿಗೆ ಸೂಚಿಸಿದ ಮೊತ್ತ (ರೂ.ಗಳಲ್ಲಿ)** |
| **ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣೆ** | | | | |
| 3 | 1 | ವಾರ್ಷಿಕ ಲೆಕ್ಕ ತಪಾಸಣಾ ವರದಿ ಜಾರಿಗೊಳಿಸಿರುವುದು. | – | – |
| 4 | 2 | ವಾರ್ಷಿಕ ಲೆಕ್ಕಪತ್ರವು ಅನುಮೋದನೆಯಾಗಿರುವ ಬಗ್ಗೆ. | – | – |
| 5 | 3 | ವಿಶ್ವವಿದ್ಯಾನಿಲಯದ ನಿಧಿ. | – | – |
| 6 | 4 | ಮೈಸೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರ ಆದೇಶ (Delegation of Financial/Technical powers) ಪ್ರತಿಯನ್ನು ಒದಗಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| **ಆಯವ್ಯಯ ಅಂದಾಜು** | | | | |
| 7 | 5 | ಆಯವ್ಯಯ ಅಂದಾಜುಗಳಲ್ಲಿ 2015–16ನೇ ಸಾಲಿಗೆ ಆರಂಭಿಕ ಶಿಲ್ಕನ್ನು ತಪ್ಪಾಗಿ ತೆಗೆದುಕೊಂಡಿರುವ ಕುರಿತು. | – | – |
| 8 | 6 | ಆಯವ್ಯಯ ಅಂದಾಜಿನಲ್ಲಿ ಹಂಚಿಕೆಯ ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚ ಭರಿಸಿರುವುದು | – | – |
| 9 | 7 | 2015–16ನೇ ಸಾಲಿಗೆ ಮಂಜೂರಾದ ವಾರ್ಷಿಕ ಕ್ರಿಯಾ ಯೋಜನೆ/ಮುಂದುವರಿದ/ಹೊಸ ಕಾಮಗಾರಿಗಳ ವಿವರ ಆಯವ್ಯಯ ಅಂದಾಜು ಅನುಮೋದನೆ ಪ್ರತಿಗಳನ್ನು ಒದಗಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| **ಯುವರಾಜ ಕಾಲೇಜು ಆಯವ್ಯಯ (Budget)** | | | | |
| 10 | 8 | ಆಯ ವ್ಯಯ ಅಂದಾಜುಗಳನ್ನು ಯುವರಾಜ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಎರಡೂ ಕಡೆಯಲ್ಲಿ ತಯಾರಿಸುತ್ತಿರುವ ಕುರಿತು **(ಯುವರಾಜ ಕಾಲೇಜು)** | – | – |
| **ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರ** | | | | |
| 11 | 9 | ವಿಶ್ವವಿದ್ಯಾನಿಲಯದ ಹಣಕಾಸು ಸ್ಥಿತಿ | – | – |
| 12 | 10 | 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ ಹಾಜರು ಪಡಿಸಲಾದ ಬ್ಯಾಂಕ್ ಸ್ಕ್ರೋಲ್‌ಗಳ ಪ್ರಕಾರ ಆರ್ಥಿಕ ಪರಿಸ್ಥಿತಿ ಘೋಷ್ವಾರೆ | – | – |
| **ವಿಶ್ವವಿದ್ಯಾನಿಲಯದ ಹೂಡಿಕೆಗಳು** | | | | |
| 13 | 11 | ಠೇವಣಿ ಹೂಡಿಕೆಗಳ ಆರ್ಥಿಕ ಪರಿಸ್ಥಿತಿ (ಎಫ್.ಡಿ. ಆರ್) | – | – |
| 14 | 12 | ಠೇವಣಿಗಳ ಮೇಲಿನ ಬಡ್ಡಿ ನಷ್ಟ ಕುರಿತು | – | 4,13,65,082 |
| 15 | 13 | ವಿಶ್ವವಿದ್ಯಾನಿಲಯದ ನಿಶ್ಚಿತ ಠೇವಣಿಯ ವಹಿಯನ್ನು | – | – |

| | | | | |
|---|---|---|---|---|
| | | ಹಾಜರುಪಡಿಸದಿರುವುದು | | |
| | | **ವಾರ್ಷಿಕ ಲೆಕ್ಕಗಳು** | | |
| 16 | 14 | 2015–16ನೇ ವಾರ್ಷಿಕ ಲೆಕ್ಕಗಳಲ್ಲಿನ ನ್ಯೂನ್ಯತೆಗಳು | – | – |
| 17 | 15 | ವಾರ್ಷಿಕ ಲೆಕ್ಕಗಳಲ್ಲಿ ವಿವಿಧ ಖಾತೆಗಳಲ್ಲಿ ಠೇವಣಿಗಳ ಮೊತ್ತವನ್ನು ತಪ್ಪಾಗಿ ದಾಖಲಿಸಿರುವುದು | – | – |
| 18 | 16 | ವಾರ್ಷಿಕ ಲೆಕ್ಕಗಳಲ್ಲಿ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣ ವರ್ಗಾವಣೆ ಮಾಡಿರುವ ಕುರಿತು | – | – |
| 19 | 17 | ನಗದಾಗದ ಧನಾದೇಶಗಳ ವಿವರ **(ಹಣಕಾಸು ವಿಭಾಗ)** | – | – |
| 20 | 18 | ಶತಮಾನೋತ್ಸವ ಸಂಭ್ರಮದ ಅಚರಣೆಗಾಗಿ ಬಿಡುಗಡೆಯಾದ ಸಹಾಯಾನುದಾನಕ್ಕೆ ಬಳಕೆ ಪ್ರಮಾಣ ಪತ್ರ (ಯು.ಸಿ) ಸಲ್ಲಿಸದಿರುವುದು **(ಹಣಕಾಸು ವಿಭಾಗ)** | 27,14,49,548 | – |
| 21 | 19 | ಆನ್‌ಲೈನ್ ಪ್ರೋಗ್ರಾಂ ಖಾತೆ (Reserve) (Escrow) ಖಾತೆಗಳ ಮತ್ತು TRUST A/c ಖಾತೆಯ ವಿವರದ ಮಾಹಿತಿ ಒದಗಿಸಿಲ್ಲದಿರುವುದು **(ಹಣಕಾಸು ವಿಭಾಗ)** | 2,03,49,911 | – |
| 22 | 20 | Online Programmeಗೆ ಸಂಬಂಧಿಸಿದಂತೆ Escrow account ಹಾಗೂ Reserve account ನಿಂದ Trust account ಗೆ ಹಣದ ವರ್ಗಾವಣೆ ಮಾಡಿರುವ ಕುರಿತು **(ಹಣಕಾಸು ವಿಭಾಗ)** | – | – |
| 23 | 21 | ಪರೀಕ್ಷಾ ಖಾತೆಯಡಿ ಸ್ವೀಕೃತವಾಗಬೇಕಾಗಿರುವ ಶಿಲ್ಕುಗಳು ಡಿ.ಡಿ/ ಚಲನ್‌ಗಳ ಮೂಲಕ ಜಮೆ ಆಗಿರುವುದನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯಗೊಳಿಸದಿರುವುದು **(ಹಣಕಾಸು ವಿಭಾಗ)** | – | – |
| 24 | 22 | ಒಂದೇ ಚಲನ್‌ಗಳನ್ನು ಎರಡು ಸಲ ನಗದು ಪುಸ್ತಕದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವುದು ಹಾಗೂ ಸಮರ್ಪಕವಾಗಿ ಲೆಕ್ಕ ಸಮನ್ವಯಗೊಳಿಸದಿರುವುದು **(ಹಣಕಾಸು ವಿಭಾಗ)** | – | 80,89,891 |
| 25 | 23 | ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರು ಧನಾದೇಶ ಪಟ್ಟಿ (Cheque drawn statement) ಯನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| 26 | 24 | ವಿವಿಧ ವೆಚ್ಚಗಳಿಗಾಗಿ ಜಿ.ಆರ್.ಎ ಖಾತೆಯಲ್ಲಿ ನಗದಿಕರಿಸಲಾಗಿರುವ ಮೊಬಲಗುಗಳ ವೆಚ್ಚ ಭರಿಸಿ ಉಳಿಯಲಾದ ಮೊತ್ತಗಳನ್ನು ಜಿ.ಆರ್.ಎ ಖಾತೆಗೆ ಪುನಃ ಜಮಾ ಮಾಡದೆ ಇರುವುದು **(ಯುವರಾಜ ಕಾಲೇಜು)** | – | 51,504 |
| | | **ವಿವಿಧ ಯೋಜನೆಗಳು** | | |
| 27 | 25 | ವಿವಿಧ ಯೋಜನೆಗಳು ಬ್ಯಾಂಕ್ ಖಾತಾ ವಿವರ | – | – |
| 28 | 26 | ಮೈಸೂರು ವಿಶ್ವವಿದ್ಯಾನಿಲಯದ 103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾರಂಭದ ಖರ್ಚುಗಳಿಗಾಗಿ ವಿವಿಧ ಏಜೆನ್ಸಿಗಳಿಂದ ಪಡೆದ ಅನುದಾನವನ್ನು ಬಳಸಿಕೊಳ್ಳದಿರುವುದು **(ಹಣಕಾಸು ವಿಭಾಗ)** | – | – |
| | | **ಒಟ್ಟು** | **29,17,99,459** | **4,95,06,477** |

| ಭಾಗ–3 | | | | |
|---|---|---|---|---|
| ಕ್ರ. ಸಂ | ಕಂಡಿಕೆ ಸಂಖ್ಯೆ | ವಿವರ | ಆಕ್ಷೇಪಣೆಗೆ ಸೂಚಿಸಿದ ಮೊತ್ತ (ರೂಗಳಲ್ಲಿ) | ವಸೂಲಾತಿಗೆ ಸೂಚಿಸಿದ ಮೊತ್ತ (ರೂಗಳಲ್ಲಿ) |
| **ಶೈಕ್ಷಣಿಕ ವಿಭಾಗ** | | | | |
| 29 | 01 | ಈಜುಕೊಳದ ರೂ.575/–ಗಳ ಮುಖ ಬೆಲೆಯ ಪಾಸುಗಳ ಸ್ವೀಕೃತಿ ಮೊತ್ತದಲ್ಲಿ ಕಂಡುಬಂದಿರುವ ವ್ಯತ್ಯಾಸ **(ಆಡಳಿತ ವಿಭಾಗ)** | – | 1,45,265 |
| 30 | 02 | ಸಾಮಾನ್ಯ ರಶೀದಿಗಳ ಸ್ವೀಕೃತಿ ಮೊತ್ತವು ವಿಶ್ವವಿದ್ಯಾನಿಲಯದ ಖಾತೆಗೆ ಹೊಂದಾಣಿಕೆಯಾಗದಿರುವುದು **(ಆಡಳಿತ ವಿಭಾಗ)** | – | 13,000 |
| 31 | 03 | ಬಯಲು ರಂಗಮಂದಿರಕ್ಕೆ ಸಂಬಂಧಿಸಿದಂತೆ ಕಡಿಮೆ ನಿರ್ವಹಣಾ ಶುಲ್ಕ ಮತ್ತು ಪೂರ್ವ ಸಿದ್ಧತೆ/ತೆರವು ಶುಲ್ಕ ಸ್ವೀಕೃತಿಯಾಗಿರುವುದು **(ಆಡಳಿತ ವಿಭಾಗ)** | – | 1,68,000 |
| 32 | 04 | ಮಹಾರಾಜ ಕಾಲೇಜು ಮೈದಾನದ ನಿರ್ವಹಣಾ ಶುಲ್ಕ ಮತ್ತು ಪೂರ್ವಸಿದ್ಧತೆ/ತೆರವು ಶುಲ್ಕಗಳನ್ನು ಕಡಿಮೆ ವಸೂಲಿ ಮಾಡಿರುವುದು **(ಆಡಳಿತ ವಿಭಾಗ)** | – | 62,27,500 |
| 33 | 05 | ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದ ನಿರ್ವಹಣಾ ಶುಲ್ಕವನ್ನು ಕಡಿಮೆ ವಸೂಲಿ ಮಾಡಿರುವುದು **(ಆಡಳಿತ ವಿಭಾಗ)** | – | 1,09,300 |
| 34 | 06 | ರಾಣಿಬಹದ್ದೂರ್ ಸಭಾಂಗಣದ ನಿರ್ವಹಣಾ ಶುಲ್ಕವನ್ನು ಕಡಿಮೆ ವಸೂಲಿ ಮಾಡಿರುವುದು **(ಆಡಳಿತ ವಿಭಾಗ)** | – | 1,69,350 |
| 35 | 07 | ಕುಕ್ಕರಹಳ್ಳಿ ಕೆರೆ, ಮಾನವಿಕ ಸಭಾಂಗಣ, ಸೆನೆಟ್ ಭವನ, ಮಾನಸ ಗಂಗೋತ್ರಿ ಹೊರಾಂಗಣ ಚಿತ್ರೀಕರಣದ ಬಾಡಿಗೆ ಶುಲ್ಕವನ್ನು ಕಡಿಮೆ ವಸೂಲಿ ಮಾಡಿರುವುದು **(ಆಡಳಿತ ವಿಭಾಗ)** | – | 3,29,650 |
| 36 | 08 | ಔಟ್‌ರೀಚ್ ಪ್ರೋಗ್ರಾಂ ನಿಯಮಗಳನ್ನು ಪಾಲಿಸದಿರುವುದು **(ಹಣಕಾಸು ವಿಭಾಗ)** | – | – |
| 37 | 09 | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶೈಕ್ಷಣಿಕ ಕೋರ್ಸುಗಳಿಗೆ 2015–16ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಬರಬೇಕಾದ ಬಾಕಿ ಶುಲ್ಕ ವಸೂಲಾಗಬೇಕಾಗಿರುವುದು **(ಆಡಳಿತಾಧಿಕಾರಿಗಳ ಕಛೇರಿ)** | – | 2,10,72,876 |
| 38 | 10 | 2015–16ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಪೂರ್ಣವಾಗಿ ಬಟವಾಡೆಯಾಗದೆ ಇರುವ ಕುರಿತು **(ಆಡಳಿತಾಧಿಕಾರಿಗಳ ಕಛೇರಿ)** | – | 2,48,91,736 |
| 39 | 11 | 2015–16ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾದ ವಿದ್ಯಾರ್ಥಿವೇತನ ಪೂರ್ಣವಾಗಿ ಬಟವಾಡೆಯಾಗದಿರುವ ಕುರಿತು **(ಆಡಳಿತಾಧಿಕಾರಿಗಳ ಕಛೇರಿ)** | – | 4,04,164 |
| 40 | 12 | ಜಯಲಕ್ಷ್ಮೀ ವಿಲಾಸ ಅರಮನೆ ವಸ್ತು ಸಂಗ್ರಹಾಲಯಕ್ಕೆ ಆಗಮಿಸಿದ ವೀಕ್ಷಕರಿಂದ/ಸಂದರ್ಶಕರಿಂದ ವೀಕ್ಷಣಾ ಶುಲ್ಕ ವಸೂಲಿಸದಿರುವುದು **(ಜಯಲಕ್ಷ್ಮೀ ವಿಲಾಸ ವಸ್ತು ಸಂಗ್ರಹಾಲಯ)** | – | 44,355 |

| | | | | |
|---|---|---|---|---|
| 41 | 13 | ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬೇಡಿಕೆ ವಸೂಲಿ ಹಾಗೂ ಬಾಕಿ ವಿವರಗಳ ಪರಿಶೀಲನೆ **(ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)** | – | 15,35,193 |
| 42 | 14 | ಪ್ರೊ॥ ಸುಚೇತನ ಸ್ವರೂಪ್‌ರವರನ್ನು ಇ.ಎಂ.ಆರ್.ಸಿ ಮಾರ್ಗಸೂಚಿಯ ನಿಯಮಾವಳಿಗಳನ್ನು ಉಲ್ಲಂಘಿಸಿ ನಿರ್ದೇಶಕರಾಗಿ ನಿಯೋಜನೆಗೊಳಿಸಿರುವುದು **(ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)** | 3,15,052 | – |
| 43 | 15 | 2011–12 ಮತ್ತು 2012–13ನೇ ಸಾಲುಗಳ ಬೋಧನಾ ಶುಲ್ಕ, ಪರೀಕ್ಷಾ ಶುಲ್ಕಗಳು ಸರ್ಕಾರದಿಂದ ಮರುಭರಿಕೆಯಾಗಿರುವ ಬಗ್ಗೆ **(ಮಹಾರಾಜ ಕಾಲೇಜು)** | 28,03,030 | – |
| 44 | 16 | ಸಂಯೋಜನಾ/ಮುಂದುವರಿಕೆ ಶುಲ್ಕಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಮೊತ್ತಕ್ಕಿಂತ ಕಡಿಮೆ ಮೊತ್ತ ಸ್ವೀಕೃತಿಯಾಗಿರುವುದು **(ಕಾಲೇಜು ಅಭಿವೃದ್ಧಿ ಮಂಡಳಿ)** | – | 12,38,938 |
| 45 | 17 | ಸಂಯೋಜನಾ ಶುಲ್ಕಗಳ ಬ್ಯಾಂಕ್ ಜಮಾ ವಿವರಗಳ ಪರಿಶೀಲನೆಗೆ ಬ್ಯಾಂಕ್ ಸ್ಟೇಟ್ಮೆಂಟ್ (Bank Statement) ಹಾಜರುಪಡಿಸದಿರುವುದು **(ಕಾಲೇಜು ಅಭಿವೃದ್ಧಿ ಮಂಡಳಿ)** | 6,70,25,766 | – |
| | | **ಸಿಬ್ಬಂದಿ ವಿಭಾಗ (Establishment)** | | |
| 46 | 18 | ಬೆರಳಚ್ಚು ಮತ್ತು ಸ್ವಚ್ಛತಾ ಕಾರ್ಯ ಹಾಗೂ ಭದ್ರತಾ ಸೇವೆಯ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ನಿಯಮಗಳನ್ನು ಪಾಲಿಸದಿರುವುದು **(ಆಡಳಿತ ವಿಭಾಗ)** | 3,18,74,391 | – |
| 47 | 19 | ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲನ್ನು ಎರಡು ಬಾರಿ ಪಾವತಿಸಿರುವುದು **(ಆಡಳಿತ ವಿಭಾಗ)** | – | 50,120 |
| 48 | 20 | ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ನಿಯಮಬಾಹಿರವಾಗಿ ಪದೋನ್ನತಿ ನೀಡಿರುವುದು **(ಆಡಳಿತ ವಿಭಾಗ)** | – | – |
| 49 | 21 | ಎನ್.ಪಿ.ಎಸ್. ಯೋಜನೆಯಡಿ ನೌಕರರುಗಳಿಂದ ಕಟಾಯಿಸಿದ ಮೊತ್ತವನ್ನು ನಿಯಮ ಬಾಹಿರವಾಗಿ ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುವುದು **(ಹಣಕಾಸು ವಿಭಾಗ)** | | |
| 50 | 22 | ವಿಶ್ವವಿದ್ಯಾನಿಲಯದ ನೌಕರರುಗಳ ಗೃಹ ನಿರ್ಮಾಣ ಮುಂಗಡ ವಹಿ ಹಾಗೂ ವಿವರಗಳನ್ನು ಒದಗಿಸದಿರುವುದು **(ಹಣಕಾಸು ವಿಭಾಗ)** | – | – |
| 51 | 23 | 'ಸಿ' ದರ್ಜೆಯ ನಗರದಲ್ಲಿ (ಚಾಮರಾಜನಗರ ಸ್ನಾತಕೋತ್ತರ ಕೇಂದ್ರ) ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಹೆಚ್ಚುವರಿ ಮನೆ ಬಾಡಿಗೆ ಭತ್ಯೆ ಪಾವತಿಸಿರುವ ಕುರಿತು **(ಹಣಕಾಸು ವಿಭಾಗ)** | – | 2,61,450 |
| 52 | 24 | ಸಂಚಿತ/ತಾತ್ಕಾಲಿಕ ಬೋಧಕೇತರ ನೌಕರರ ನೇಮಕಾತಿ ಕುರಿತು **(ಹಣಕಾಸು ವಿಭಾಗ)** | 13,65,93,603 | – |
| 53 | 25 | ಮಂಜೂರಾದ ಹುದ್ದೆಯ ಜೊತೆಗೆ ಹೆಚ್ಚುವರಿ ತಾತ್ಕಾಲಿಕ ನೇಮಕಾತಿಗಳನ್ನು ಮಾಡಿಕೊಂಡಿರುವ ಕುರಿತು **(ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆ)** | 17,01,366 | – |
| 54 | 26 | ನಿವೃತ್ತಿ ನಂತರ ಮರು ನೇಮಕಗೊಳಿಸಿರುವುದು **(ಹಣಕಾಸು ವಿಭಾಗ)** | 13,00,000 | – |

| | | | | |
|---|---|---|---|---|
| 55 | 27 | ಪ್ರೊ॥ ಹೆಚ್.ಆರ್ ಉಮಾ ಪ್ರಾಧ್ಯಾಪಕರು ಸರ್ಕಾರಿ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡದಿರುವುದು **(ಹಣಕಾಸು ವಿಭಾಗ)** | – | – |
| 56 | 28 | ಡಾ॥ ಎಂ.ಎಸ್.ಶೇಖರ್, ಪ್ರಾಧ್ಯಾಪಕರು, ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡದಿರುವುದು **(ಹಣಕಾಸು ವಿಭಾಗ)** | – | – |
| 57 | 29 | ಪ್ರೊ॥ ಸಿ. ಬಸವರಾಜು ಪ್ರಾಧ್ಯಾಪಕರವರು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡದಿರುವುದು **(ಹಣಕಾಸು ವಿಭಾಗ)** | – | – |
| 58 | 30 | 2006ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಬೋಧಕವರ್ಗದವರಿಗೆ ಯು.ಜಿ.ಸಿ ಹಿಂಬಾಕಿಯಲ್ಲಿ ಪಡೆದಿರುವ ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಾವತಿಸಿರುವುದು **(ಹಣಕಾಸು ವಿಭಾಗ)** | – | – |
| 59 | 31 | ಪ್ರೊ॥ ಸಿದ್ದೇಗೌಡ.ವೈ.ಎಸ್ ಪ್ರಾಧ್ಯಾಪಕರು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡದಿರುವುದು **(ಹಣಕಾಸು ವಿಭಾಗ)** | – | – |
| 60 | 32 | ಪ್ರೊ॥ ಯಶವಂತ ಡೊಂಗ್ರೆ ಪ್ರಾಧ್ಯಾಪಕರು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾಲಯ ಖಾತೆಗೆ ಜಮೆ ಮಾಡದಿರುವುದು **(ಹಣಕಾಸು ವಿಭಾಗ)** | – | – |
| 61 | 33 | ದೈಹಿಕ ಶಿಕ್ಷಣ ವಿಭಾಗದ ಖಾಯಂ ಸಿಬ್ಬಂದಿಗಳಿಗೆ ಬೇಸಿಗೆ ತರಬೇತಿ ಶಿಬಿರವನ್ನು ಕಾರ್ಯನಿರ್ವಹಿಸಿದ್ದಕ್ಕೆ ನಿಯಮ ಬಾಹಿರವಾಗಿ ಸಂಭಾವನೆ ನೀಡಿರುವುದು **(ಹಣಕಾಸು ವಿಭಾಗ)** | – | 1,73,812 |
| 62 | 34 | ಯು.ಜಿ.ಸಿ ವೇತನ ಪಡೆಯುವ ಬೋಧಕ ವೃಂದದವರಿಗೆ ವಿಶ್ವವಿದ್ಯಾನಿಲಯದಲ್ಲಿ ಸಭೆ ಸಮಾರಂಭಗಳು & ಸಮಿತಿ ಸದಸ್ಯರಾಗಿ ಹಾಜರಾದ ದಿನಗಳಿಗೆ ಸಭಾ ಭತ್ಯೆ ಪಾವತಿಸಿರುವುದು **(ಹಣಕಾಸು ವಿಭಾಗ)** | – | 45,000 |
| 63 | 35 | ವಸತಿ ಗೃಹ ಹಂಚಿಕೆಯಾಗಿರುವ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ವೇತನದಲ್ಲಿ ವೇತನ ಭತ್ಯೆಯನ್ನು ಡ್ರಾ ಮಾಡದೆ ಇರುವುದು ಮತ್ತು ವಸತಿ ಗೃಹ ಬಾಡಿಗೆ ಬಾಬ್ತು ವೇತನದಲ್ಲಿ ಕಡಿತಗೊಳಿಸದೇ ಕೈಬಿಟ್ಟಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| 64 | 36 | ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ವಸತಿ ಗೃಹಗಳ ಮನೆ ಬಾಡಿಗೆ ಶುಲ್ಕದ ವಸೂಲಾತಿ ಕುರಿತು **(ಇಂಜಿನಿಯರಿಂಗ್ ವಿಭಾಗ)** | – | – |
| 65 | 37 | ಡಾ॥ ಬಿ.ಸಣ್ಣಪ್ಪ, ಸಹಾಯಕ ಪ್ರಾಧ್ಯಾಪಕರು, ರೇಷ್ಮೆ ಕೃಷಿ ವಿಜ್ಞಾನ ಮತ್ತು ಡಾ॥ ಜಿ.ವಿ.ವೆಂಕಟರಮಣ, ಸಹಾಯಕ ಪ್ರಾಧ್ಯಾಪಕರು, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಇವರುಗಳಿಗೆ ಹಳೆಯ ಪಿಂಚಣಿ ಯೋಜನೆಯಡಿಯಲ್ಲಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ | – | – |

| | | | | |
|---|---|---|---|---|
| | | **(ಆಡಳಿತಾಧಿಕಾರಿಗಳ ಕಛೇರಿ)** | | |

| | | | | |
|---|---|---|---|---|
| 66 | 38 | ದಿನಾಂಕ:28.07.2009ರಲ್ಲಿ ನೇಮಕಗೊಂಡ ಸಹಾಯಕ ಪ್ರಾಧ್ಯಾಪಕರಿಗೆ ಹಳೆಯ ಪಿಂಚಣಿ ಸೌಲಭ್ಯ ವಿಸ್ತಿರಿಸಿರುವ ಬಗ್ಗೆ **(ಆಡಳಿತಾಧಿಕಾರಿಗಳ ಕಛೇರಿ)** | – | – |
| 67 | 39 | ಗಣಕ ವಿಜ್ಞಾನ ಕೇಂದ್ರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಯವರಿಗೆ ಯು.ಜಿ.ಸಿ ವೇತನ ಸೌಲಭ್ಯ ನೀಡಿರುವ ಕುರಿತು **(ಆಡಳಿತಾಧಿಕಾರಿಗಳ ಕಛೇರಿ)** | – | – |
| 68 | 40 | ದಿನಾಂಕ:28.07.2009ರಲ್ಲಿ ನೇಮಕಗೊಂಡ ಸಹಾಯಕ ಪ್ರಾಧ್ಯಪಕರಿಗೆ ಹಳೆಯ ಪಿಂಚಣಿ ಸೌಲಭ್ಯ ವಿಸ್ತರಿಸಿರುವ ಬಗ್ಗೆ **(ಆಡಳಿತಾಧಿಕಾರಿಗಳ ಕಛೇರಿ)** | – | – |
| 69 | 41 | ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವಾಗ ಮೂಲ ವೇತನವನ್ನು ತಪ್ಪಾಗಿ ನಿಗದಿಪಡಿಸಿ, ಹೆಚ್ಚುವರಿ ವೇತನ ಪಾವತಿಸಿರುವುದು **(ಆರೋಗ್ಯ ಕೇಂದ್ರ, ಮಹಾರಾಜ, ಯುವರಾಜ ಕಾಲೇಜು ಆವರಣ)** | – | 5,413 |
| 70 | 42 | ಶ್ರೀ ಟಿ. ಸದಾಶಿವಯ್ಯ, ಸಹ ಪ್ರಾಧ್ಯಾಪಕರು, ಇವರಿಗೆ ಗಳಿಕೆ ರಜೆ ನಗದೀಕರಣವನ್ನು ಅವರ ಹಕ್ಕಿನಲ್ಲಿ ರಜೆ ಇಲ್ಲದಿದ್ದರು ನೀಡಿರುವುದು **(ಯುವರಾಜ ಕಾಲೇಜು)** | – | 66,022 |
| 71 | 43 | ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | 36,54,034 | – |
| 72 | 44 | ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳ ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | 1,42,93,252 | – |
| 73 | 45 | EMRC ನೌಕರರುಗಳ ಗರಿಷ್ಠ 2 ಮಕ್ಕಳಿಗೆ ವಿದ್ಯಾಭ್ಯಾಸ ಭತ್ಯೆಯನ್ನು ಪ್ರತಿವರ್ಷ ಪಾವತಿಸಿರುವುದು **(ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)** | 5,68,520 | – |
| 74 | 46 | ಪತ್ರಾಂಕಿತವಲ್ಲದ ನೌಕರರುಗಳಿಗೆ Productivity linked bonus scheme ನಡಿಯಲ್ಲಿ ಬೊನಸ್ ಪಾವತಿಸಿರುವುದು **(ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)** | 1,88,910 | – |
| 75 | 47 | ಗ್ರಂಥಾಲಯ ಯೋಜನಾ ಸಹಾಯಕರು (Project Assistant) ಗಳನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು **(ಸ್ನಾತಕ ಗ್ರಂಥಾಲಯ, ಮಹಾರಾಜ ಕಾಲೇಜು ಆವರಣ)** | – | 8,29,500 |
| 76 | 48 | ಗ್ರಂಥಾಲಯ ಯೋಜನಾ ಸಹಾಯಕರು (Project Assistant)ಗಳನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು **(ಸ್ನಾತಕೋತ್ತರ ಗ್ರಂಥಾಲಯ)** | – | 28,25,500 |
| 77 | 49 | 2015–16ನೇ ಸಾಲಿನ ಪ್ರವೇಶಾತಿ ವಿವರಗಳು ಮತ್ತು ಶುಲ್ಕ ವಸೂಲಾತಿಯ ಪರಿಶೀಲನೆ **(ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)** | – | 20,95,920 |
| 78 | 50 | ಗ್ರಂಥಾಲಯ ಯೋಜನಾ ಸಹಾಯಕರು (Project | – | 2,14,452 |

| | | | | |
|---|---|---|---|---|
| | | Assistant)ಗಳನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು **(ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ)** | | |
| 79 | 51 | ವಿಶ್ವವಿದ್ಯಾನಿಲಯ ಧನ ಸಹಾಯಗಳ ಆಯೋಗದಿಂದ (ಯು.ಜಿ.ಸಿ) ವೇತನಕ್ಕಾಗಿ ಬಿಡುಗಡೆಯಾದ ಅನುದಾನಕ್ಕಿಂತ ಹೆಚ್ಚುವರಿ ವೇತನ ಪಾವತಿಸಿರುವುದು**(ಮಹಾರಾಜ ಕಾಲೇಜು)** | – | 30,838 |
| 80 | 52 | ಎಸ್.ಆರ್. ದರದಲ್ಲಿ (Schedule of Rates) ತಾತ್ಕಾಲಿಕ ನೌಕರರನ್ನು ನೇಮಕ ಮಾಡಿಕೊಂಡಿರುವುದಕ್ಕೆ ವಿಶ್ವವಿದ್ಯಾನಿಲಯದಿಂದ ಅನುಮೋದನೆ ಪಡೆಯದಿರುವುದು **(ಮಹಾರಾಜ ಕಾಲೇಜು)** | 52,548 | – |
| 81 | 53 | ಶ್ರೀ ಕುನ್ನೇಗೌಡ, ನಿವೃತ್ತ ಕಾವಲುಗಾರ ಇವರಿಗೆ 4ನೇ ಪರಿಷ್ಕೃತ ವೇತನ ಶ್ರೇಣಿ–1998ರ ವಾರ್ಷಿಕ ಬಡ್ತಿಯಲ್ಲಿನ ವ್ಯತ್ಯಾಸದ ಮೊತ್ತವನ್ನು ಪಾವತಿಸಿರುವುದಕ್ಕೆ ಕಡತವನ್ನು ಹಾಜರುಪಡಿಸದಿರುವುದು **(ತೋಟಗಾರಿಕೆ ವಿಭಾಗ)** | 1,13,938 | – |
| 82 | 54 | ಉಪನ್ಯಾಸ ಮಾಲೆಯನ್ನು ಮಾಡುವುದಕ್ಕೆ ಬರುವ ಸಂಪನ್ಮೂಲ ವ್ಯಕ್ತಿಗಳಿಗೆ ಹೆಚ್ಚುವರಿ ರಸ್ತೆದರ ಪಾವತಿಸಿರುವುದು **(ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ)** | – | 32,590 |
| 83 | 55 | 2015–16ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರವೇಶಾತಿ ಪಡೆಯಲಾಗಿರುವ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಬೇಡಿಕೆ, ವಸೂಲಿ ಹಾಗೂ ಬಾಕಿ ವಿವರಗಳ ಪರಿಶೀಲನೆ **(ಲಲಿತ ಕಲೆಗಳ ಕಾಲೇಜು)** | – | 68,476 |
| 84 | 56 | ಹೆಚ್ಚುವರಿ ಕೆಲಸ ನಿರ್ವಹಿಸಿದುದಕ್ಕಾಗಿ ಮುದ್ರಣಾಲಯ ಉದ್ಯೋಗಿಗಳಿಗೆ ಕಾಫಿ, ತಿಂಡಿ, ಊಟಕ್ಕಾಗಿ ನಿಯಮ ಮೀರಿ ಹಣ ಪಾವತಿಸಿರುವುದು **(ಮುದ್ರಣಾಲಯ)** | – | 22,740 |
| 85 | 57 | ಮುದ್ರಣದ ಬಾಬ್ತು ಹುಂಡಿಗಳನ್ನು ವಸೂಲಿಸದಿರುವುದು **(ಮುದ್ರಣಾಲಯ)** | – | 5,56,172 |
| 86 | 58 | ಶ್ರೀ ಈರಯ್ಯ ಪ್ರೋಸೆಸ್ ಆಪರೇಟರ್ ಇವರಿಗೆ 25/30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಯನ್ನು ನೀಡಿರುವ ಕಡತ ಹಾಗೂ ಸೇವಾವಹಿಯನ್ನು ಹಾಜರುಪಡಿಸದಿರುವುದು **(ಮುದ್ರಣಾಲಯ)** | 67,182 | – |
| 87 | 59 | ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರು ವಿಶ್ವವಿದ್ಯಾನಿಲಯದ ವಾಹನಗಳನ್ನು ಸ್ವಂತ ಬಳಕೆಗೆ ಉಪಯೋಗಿಸಿಕೊಂಡಿರುವುದರ ಕುರಿತು **(ಆಡಳಿತ ವಿಭಾಗ)** | 83,755 | – |
| **ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕ ಕಾಯ್ದೆ (K.T.P.P) ಉಲ್ಲಂಘಿಸಿರುವ ಪ್ರಕರಣಗಳು** | | | | |
| 88 | 60 | ಟೆಂಡರ್ ಕರೆಯದೆ ಮೆ॥ ನವನೀತ್ ಕೇಟರರ್ಸ್ ರವರಿಗೆ ಊಟ, ತಿಂಡಿ ಸರಬರಾಜು ಮಾಡಿರುವುದಕ್ಕೆ ಮೊಬಲಗನ್ನು ಪಾವತಿಸಿರುವುದು **(ಆಡಳಿತ ವಿಭಾಗ)** | 14,22,698 | – |
| 89 | 61 | ಐಇಎಂ ಸಂಸ್ಥೆಯವರಿಗೆ ಪರೀಕ್ಷಾ ಚಟುವಟಿಕೆ ಕಾರ್ಯಗಳಿಗಾಗಿ ಟೆಂಡರ್ ನಿಯಮ ಪಾಲಿಸದೆ ಪಾವತಿಸಿರುವುದು **(ಹಣಕಾಸು ವಿಭಾಗ)** | 1,73,53,304 | 8,04,068 |
| 90 | 62 | ಭದ್ರತಾ ಸಿಬ್ಬಂದಿಯ ನೇಮಕಾತಿ ಕುರಿತು ಟೆಂಡರ್ ಕಡತ ಪರಿಶೀಲನೆಯಲ್ಲಿ ಕಂಡು ಬಂದಿರುವ ನ್ಯೂನತೆಗಳು **(ಹಣಕಾಸು ವಿಭಾಗ)** | 1,09,34,784 | – |
| 91 | 63 | ಕೆ.ಟಿ.ಪಿ.ಪಿ ನಿಯಮವನ್ನು ಮೀರಿ ಶ್ರೀ ರಜತ್ ಸೇಲ್ಸ್ ಏಜೆನ್ಸೀಸ್ ಮೈಸೂರುರವರಿಗೆ ಪಾವತಿಸಿರುವ ಕುರಿತು | 1,67,645 | – |

| | | | | |
|---|---|---|---|---|
| | | **(ಹಣಕಾಸು ವಿಭಾಗ)** | | |
| 92 | 64 | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ E-procurement ಮೂಲಕ ಟೆಂಡರ್ ಕರೆಯದೇ ಪೂಜಾ ಫರ್ನಿಚರ್ಸ್, ಮೈಸೂರುರವರಿಗೆ ಪಾವತಿಸಿರುವ ಕುರಿತು **(ಹಣಕಾಸು ವಿಭಾಗ)** | 5,82,984 | – |
| 93 | 65 | ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ NMR ವೈಜ್ಞಾನಿಕ ಉಪಕರಣವನ್ನು ವಾರ್ಷಿಕ ನಿರ್ವಹಣೆಯನ್ನು ನೀಡಿ ಪಾವತಿಸಿರುವುದು **(ಹಣಕಾಸು ವಿಭಾಗ)** | 5,39,753 | – |
| 94 | 66 | ಒಂದೇ ಕಾರ್ಯಕ್ರಮಕ್ಕೆ ಬೇಕಾದ ಸಾಮಾಗ್ರಿಗಳು/ಪದಾರ್ಥಗಳನ್ನು ಭಾಗಗಳಾಗಿ ವಿಂಗಡಿಸಿ ಟೆಂಡರ್ ಕರೆಯದೆ ದರಪಟ್ಟಿಗಳ ಮೂಲಕ ಖರೀದಿ ಪಡೆದಿರುವುದು **(ಹಣಕಾಸು ವಿಭಾಗ)** | 5,62,849 | 8,903 |
| 95 | 67 | ಕೊಟೇಷನ್‌ಗಳನ್ನು ಪಡೆಯದೆ ಖರೀದಿ ಪ್ರಕ್ರಿಯೆ ಕೈಗೊಂಡಿರುವುದು **(ಹಣಕಾಸು ವಿಭಾಗ)** | 33,35,635 | – |
| 96 | 68 | ಕೆ.ಟಿ.ಪಿ.ಪಿ ಕಾಯ್ದೆ 2000 ರನ್ವಯ ಇ–ಪ್ರಕ್ಯೂರ್‌ಮೆಂಟ್ ಕೈಗೊಳ್ಳದೆ M/s ಕಾವೇರಿ ಟೂರ್ಸ್ & ಟ್ರಾವೆಲ್ಸ್ ರವರಿಂದ ವಾಹನಗಳನ್ನು ಬಾಡಿಗೆಗೆ ಪಡೆದಿರುವುದು **(ಪರೀಕ್ಷಾ ವಿಭಾಗ)** | 21,16,891 | – |
| 97 | 69 | ಸಾಮಾಗ್ರಿಗಳ ಖರೀದಿಯ ಸಂದರ್ಭದಲ್ಲಿ ಟೆಂಡರ್/ದರಪಟ್ಟಿಗಳನ್ನು ಕರೆಯದೆ ಖರೀದಿಸಿರುವುದು (ಪರೀಕ್ಷಾ ವಿಭಾಗ) | 9,54,910 | – |
| 98 | 70 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ (ತಿದ್ದುಪಡಿ) ಕಾಯ್ದೆ, 2001ರಲ್ಲಿ ಕಲಂ 4(ಇ) ಮತ್ತು 4(ಇಇ) ನಿಯಮವನ್ನು [KTPP (Amendment) Act, 2001 under section 4(e) & 4(ee)] ಉಲ್ಲಂಘಿಸಿ ನಿರ್ಮಾಣ ಕಾಮಗಾರಿ ಮತ್ತು ಸರಕುಗಳ ಖರೀದಿ ಬಿಲ್ಲುಗಳನ್ನು ಪಾವತಿಸಿರುವ ಬಗ್ಗೆ **(ಇಂಜಿನಿಯರಿಂಗ್ ವಿಭಾಗ)** | 20,63,173 | – |
| 99 | 71 | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿರುವ ಕುರಿತು **(ಇಂಜಿನಿಯರಿಂಗ್ ವಿಭಾಗ)** | 17,06,639 | – |
| 100 | 72 | ಆರೋಗ್ಯ ಕೇಂದ್ರಕ್ಕೆ ಔಷದಗಳನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದರೂ ದರಪಟ್ಟಿ ಮೂಲಕ ಔಷಧಿಗಳನ್ನು ಖರೀದಿಸಿರುವುದು **(ಆರೋಗ್ಯ ಕೇಂದ್ರ, ಮಾನಸಗಂಗೋತ್ರಿ, ಮೈಸೂರು)** | 31,05,640 | – |
| 101 | 73 | ಕೆ.ಟಿ.ಪಿ.ಪಿ ಕಾಯ್ದೆ 1999–2000 ರನ್ವಯ ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ರಾಸಾಯನಿಕಗಳು ಮತ್ತು ಗಾಜಿನ ಪರಿಕರಗಳನ್ನು ಖರೀದಿಸಿರುವುದು **(ಯುವರಾಜ ಕಾಲೇಜು)** | 10,37,172 | – |
| 102 | 74 | ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ಪಿ.ಜಿ. ಪ್ರವೇಶಾತಿ ಪರೀಕ್ಷೆ ನಡೆಸಲು ಟಿ.ಸಿ.ಎಸ್. ರವರಿಗೆ ಹೊರಗುತ್ತಿಗೆ ನೀಡಿರುವುದು **(ಗಣಕ ಕೇಂದ್ರ, ಮಾನಸ ಗಂಗೋತ್ರಿ)** | 81,67,130 | – |
| 103 | 75 | ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ 10ನೇ ಕನ್ನಡ ಸಾಹಿತ್ಯ ವಿಜ್ಞಾನ ಸಮ್ಮೇಳನಕ್ಕೆ ಊಟೋಪಚಾರ ವ್ಯವಸ್ಥೆ ಮಾಡಿದ | 2,92,222 | – |

| | | | | |
|---|---|---|---|---|
| | | ಕೇಟರಿಂಗ್‌ರವರಿಗೆ ಪಾವತಿಸಿರುವ ಬಗ್ಗೆ **(ಗಣಕ ಕೇಂದ್ರ, ಮಾನಸ ಗಂಗೋತ್ರಿ)** | | |
| 104 | 76 | ಕೆ.ಟಿ.ಪಿ.ಪಿ ಕಾಯ್ದೆ 2000ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಕಾವೇರಿ ಟೂರ್ಸ್ & ಟ್ರಾವೆಲ್ಸ್ ರವರಿಂದ ವಾಹನಗಳನ್ನು ಬಾಡಿಗೆಗೆ ಪಡೆದಿರುವುದು **(ವಿದ್ಯಾರ್ಥಿ ಕ್ಷೇಮಪಾಲನಾ)** | 1,76,476 | – |
| 105 | 77 | ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ನೀರು ಶುದ್ಧಿಕರಣ ಯಂತ್ರಗಳನ್ನು ಖರೀದಿಸಿರುವುದ **(ವಿದ್ಯಾರ್ಥಿ ಕ್ಷೇಮಪಾಲನಾ)** | 1,96,000 | – |
| 106 | 78 | ಕೆ.ಟಿ.ಪಿ.ಪಿ ಕಾಯ್ದೆ 2000ರನ್ವಯ ಈ–ಪ್ರೊಕ್ಯೂರ್ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ಮೆಸ್ ಗುತ್ತಿಗೆ ನೀಡಿರುವುದು **(ವಿದ್ಯಾರ್ಥಿ ಕ್ಷೇಮಪಾಲನಾ)** | 3,48,70,149 | – |
| 107 | 79 | ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಊಟ ಸರಬರಾಜು ಮಾಡಿದ ಗುತ್ತಿಗೆದಾರರ ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಬಗ್ಗೆ **(S.C/S.T Cell)** | – | – |
| 108 | 80 | ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಊಟ ಸರಬರಾಜು ಮಾಡಿದ ಗುತ್ತಿಗೆದಾರರ ಟೆಂಡರ್ ಪ್ರಕ್ರಿಯೆಯಲ್ಲಿನ ನ್ಯೂನ್ಯತೆಯ ಬಗ್ಗೆ **(S.C/S.T Cell)** | – | – |
| 109 | 81 | M/S Datanet India Pvt Ltd ರವರಿಂದ Online Statistical database ತಂತ್ರಾಂಶವನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವುದು **(ಸ್ನಾತಕೋತ್ತರ ಗ್ರಂಥಾಲಯ)** | 2,56,181 | – |
| 110 | 82 | M/S Manupatra Information Solutions Pvt Ltd ರವರಿಂದ Manupatra Legal database ತಂತ್ರಾಂಶವನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವುದು **(ಸ್ನಾತಕೋತ್ತರ ಗ್ರಂಥಾಲಯ)** | 1,71,750 | – |
| 111 | 83 | ಪಂಡಿತಾವೃತ್ತಿ ಪುಸ್ತಕ ಮಾಲೆಗಳ ಮುದ್ರಣವನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಮಾಡಿಸಿರುವುದು **(ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)** | 1,44,118 | – |
| 112 | 84 | ವಚನ ಚಿಂತನ ಮಾಲೆ ಅಡಿಯಲ್ಲಿ ಕಿರು ಪುಸ್ತಕಗಳನ್ನು ಮುದ್ರಣ ಮಾಡಿಸಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಮುದ್ರಣ ಮಾಡಿಸಿರುವುದು **(ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)** | 7,40,029 | – |
| 113 | 85 | ದರಪಟ್ಟಿಗಳನ್ನು ಕರೆಯದೇ ವಿವಿಧ ವೆಚ್ಚಗಳನ್ನು ಭರಿಸಿರುವುದು **(ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ)** | 1,44,505 | – |
| | | **ಖರೀದಿ ವಿಭಾಗ (Purchases)** | | |
| 114 | 86 | ಸಹೋದ್ಯಮ ಕೋರ್ಸುಗಳು ಶೀಷಿಕೆಯಡಿ ಆರ್ಥಿಕ ಮಿತಿಯನ್ನು ಮೀರಿ ಹೊಸ ವಾಹನ ಖರಿದಿಸಿರುವುದು **(ಹಣಕಾಸು ವಿಭಾಗ)** | 19,38,000 | – |

| | | | | |
|---|---|---|---|---|
| 115 | 87 | ಆರ್ಥಿಕ ಮಿತಿಯನ್ನು ಮೀರಿ ಹೊಸವಾಹನ ಖರೀದಿಸಿರುವುದು **(ಹಣಕಾಸು ವಿಭಾಗ)** | 15,40,481 | – |
| 116 | 88 | ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಆಚರಣೆ ಸಂಬಂಧ ನೆನಪಿನ ಕಾಣಿಕೆಯಾಗಿ ಉದ್ಯೋಗಿಗಳಿಗೆ ಹಚ್.ಎಂ.ಟಿ ಕೈಗಡಿಯಾರಗಳನ್ನು ಖರೀದಿಸಿರುವುದು **(ಹಣಕಾಸು ವಿಭಾಗ)** | 4,48,750 | – |
| 117 | 89 | ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ಮೈಸೂರು ವಿಶ್ವವಿದ್ಯಾನಿಲಯ ಎಲ್ಲಾ ಅಧ್ಯಯನ ಕೇಂದ್ರಗಳಿಗೆ ರಾಸಾಯನಿಕ ಮತ್ತು ಪ್ರಯೋಗಶಾಲೆ ಪರಿಕರಗಳನ್ನು ಖರೀದಿಸಿರುವುದು **(ಹಣಕಾಸು ವಿಭಾಗ)** | 45,15,172 | – |
| 118 | 90 | ಸ್ನಾತಕೋತ್ತರ ಪುರಷರ ವಿದ್ಯಾರ್ಥಿನಿಲಯ ಮಂಡ್ಯ ಅಡುಗೆಯ ಗ್ಯಾಸ್ ಸ್ಟವ್ ರಿಪೇರಿಗೆ ಹಣ ಪಾವತಿಸಿರುವುದು ಮತ್ತು ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಮಂಡ್ಯ ಮತ್ತು ಸ್ನಾತಕೋತ್ತರ ಪುರಷರ ವಿದ್ಯಾರ್ಥಿನಿಲಯ ಬ್ಲಾಕ್–2, ಮಾನಸ ಗಂಗೋತ್ರಿ ನಿಲಯಗಳಿಗೆ Heavy duty ರುಬ್ಬುವ ಯಂತ್ರಗಳನ್ನು ಖರೀದಿಸಿ ಹಣಪವತಿಸಿರುವುದು **(ಹಣಕಾಸು ವಿಭಾಗ)** | 2,300 | 58,500 |
| 119 | 91 | 2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಿಂದ ಪೀಠೋಪಕರಣಗಳನ್ನು ಖರೀದಿಸಿರುವ ಬಗ್ಗೆ ವಿವರಣೆಯನ್ನು ನೀಡುವುದರ ಕುರಿತಂತೆ **(ಇಂಜಿನಿಯರಿಂಗ್ ವಿಭಾಗ)** | 7,20,560 | – |
| 120 | 92 | DGS and D ಯಿಂದ ಅನುಮೋದಿಸಲ್ಪಟ್ಟ ದರದ ಅವಧಿಯು ಮುಗಿದ ನಂತರ Microscope ನ್ನು ಖರೀದಿಸಿರುವುದು **(ಯುವರಾಜ ಕಾಲೇಜು)** | 58,291 | – |
| 121 | 93 | ವಿದ್ಯಾರ್ಥಿ ನಿಲಯಗಳ ಮೆಸ್ ಗುತ್ತಿಗೆದಾರರಿಗೆ ಗ್ರೈಂಡರ್‌ಗಳನ್ನು ಖರೀದಿ ಮಾಡಿಕೊಟ್ಟಿರುವುದು **(ವಿದ್ಯಾರ್ಥಿ ಕ್ಷೇಮಪಾಲನಾ)** | – | 57,155 |
| **ಸಿವಿಲ್ ಕಾಮಗಾರಿಗಳ ವಿಭಾಗ (Civil Works)** | | | | |
| 122 | 94 | ಇಂಜಿನಿಯರಿಂಗ್ ವಿಭಾಗದ ಶಾಸನಬದ್ಧ ಅಧಿಕಾರಿಗಳ ಆರ್ಥಿಕ ಪ್ರತ್ಯಾಧಿಕಾರ (Delegation of Financial powers) ಆದೇಶ ಒದಗಿಸಿಲ್ಲದಿರುವುದು | – | – |
| 123 | 95 | ಆಯವ್ಯಯ ಅಂದಾಜುಗಿಂತ ಹೆಚ್ಚುವರಿ ವೆಚ್ಚಭರಿಸಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| 124 | 96 | ಶ್ರೀ ಗಿರೀಶ್.ಎಂ. ಸ್ವಾಮಿ Consultants ರವರಿಗೆ ಪಾವತಿಸಿರುವ ಸಲಹಾ ವೆಚ್ಚ [Consultant charger] ಕುರಿತಂತೆ **(ಇಂಜಿನಿಯರಿಂಗ್ ವಿಭಾಗ)** | 51,91,255 | – |
| 125 | 97 | ಸಣ್ಣ ಕಾಮಗಾರಿಗಳು ಮತ್ತು ದೊಡ್ಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವ ಸಂಬಂಧವಾಗಿ Work registerನ್ನು ಪ್ರತ್ಯೇಕವಾಗಿ ನಿರ್ವಹಣೆ ಮಾಡುವ ಬಗ್ಗೆ **(ಇಂಜಿನಿಯರಿಂಗ್ ವಿಭಾಗ)** | – | – |

| | | | | |
|---|---|---|---|---|
| 126 | 98 | ಕಾಮಗಾರಿಯ ನಿರ್ವಹಣೆಗಾಗಿ ಪಾವತಿಸಲಾದ ಮುಂಗಡದ (Mobilization Advance) ಮೊಬಲಗನ್ನು ಕಟಾಯಿಸಿರುವ ಬಗ್ಗೆ **(ಇಂಜಿನಿಯರಿಂಗ್ ವಿಭಾಗ)** | – | 45,89,792 |
| 127 | 99 | ಟೆಂಡರ್ ಕಡತ ಮತ್ತು ಅಳತೆ ಪುಸ್ತಕ ಲೆಕ್ಕತನಿಖೆಗೆ ಹಾಜರುಪಡಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | – | 8,790 |
| 128 | 100 | ಕ್ರಿಯಾಯೋಜನೆ, ಕಾಮಗಾರಿ ಪೂರ್ಣಗೊಂಡ ವರದಿ, ಗುಣ ಪರೀಕ್ಷಣಾ ವರದಿಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | 21,87,287 | – |
| 129 | 101 | ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಬಿಲ್ಲುಗಳು, ಟೆಂಡರ್ ಕಡತ ಕ್ರಿಯಾಯೋಜನೆ, ಅಳತೆ ಪುಸ್ತಕ, ಲೆಕ್ಕತನಿಖೆಗೆ ಹಾಜರುಪಡಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | 35,07,14,989 | – |
| 130 | 102 | ಶೇ.5% ಕ್ಕಿಂತಲೂ ಹೆಚ್ಚುವರಿ 26.69% ಅಧಿಕ ಕಾಮಗಾರಿ ಕೆಲಸ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು ಮಂಜೂರಾತಿ ನೀಡಿರುವುದು **(ಇಂಜಿನಿಯರಿಂಗ್ ವಿಭಾಗ)** | 2,31,565 | – |
| 131 | 103 | Project-01 ಕ್ರೋಢೀಕೃತ ಕಾಮಗಾರಿಯ ಬಿಲ್ಲುಗಳಲ್ಲಿ ಕಡತ ಇತರ ದಾಖಲೆ ಒದಗಿಸದೆ ಇರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| | | III] Package-01 ಕ್ರೋಢೀಕೃತ ಕಾಮಗಾರಿಗಳಲ್ಲಿ Shedule-B ರಲ್ಲಿ ನಮೂದಿಸಿರುವ Quantityಗಿಂತ ಹೆಚ್ಚುವರಿಗೆ [Excess Quantity] ಕೆಲಸ ನಿರ್ವಹಿಸಿರುವುದು ಮತ್ತು ಬಿಲ್ ಪಾವತಿಸಿರುವುದು **(ಇಂಜಿನಿಯರಿಂಗ್ ವಿಭಾಗ)** | 1,85,76,285 | - |
| | | V. EIRL ಪರಿಮಾಣ ನಿರ್ವಹಿಸಿರುವುದಕ್ಕೆ ಅನುಮೋದನೆ ಪಡೆಯದಿರುವುದು **(ಇಂಜಿನಿಯರಿಂಗ್ ವಿಭಾಗ)** | – | 23,45,067 |
| 132 | 104 | **ಪ್ಯಾಕೇಜ್ ವರ್ಕ್–2 (ಕಾಮಗಾರಿ)** ಸಕ್ಷಮ ಪ್ರಾಧಿಕಾರ/ಸರ್ಕಾರದಿಂದ ಆಡಳಿತಾತ್ಮಕ/ ತಾಂತ್ರಿಕ ಮಂಜೂರಾತಿ ಪಡೆಯದಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| | | I] ಸರ್ಕಾರ/ವಿಶ್ವವಿದ್ಯಾನಿಲಯದ ಕಾಯ್ದೆ ಹಾಗೂ ಇನ್ನಿತರೆ ಅಧಿಕೃತ ಆದೇಶ/ನಿಯಮಗಳನ್ನು ಪಾಲಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| | | II] ಬಿ.ಎಸ್.ಆರ್.ಇನ್ಫ್ರಾಟೆಕ್ ಇಂಡಿಯಾ ಲಿ., ಬೆಂಗಳೂರು ರವರ ಮೂಲಕ ಮೈಸೂರು ವಿಶ್ವವಿದ್ಯಾನಿಲಯದ ಗುಂಪು ಕಾಮಗಾರಿ–2 (Package work-2) ರ ನಿರ್ವಹಣೆಯಲ್ಲಿನ ನ್ಯೂನತೆಗಳು **(ಇಂಜಿನಿಯರಿಂಗ್ ವಿಭಾಗ)** | – | – |
| | | VIII] ಕಾಮಗಾರಿಯ ಬಿಲ್ಲುಗಳ ಪಾವತಿಯಲ್ಲಿ ಟೆಂಡರ್ ಐಟಂವಾರು ಪರಿಮಾಣ (Quantity) ಕ್ಕಿಂತ ಹೆಚ್ಚುವರಿ (Excess) ಪರಿಮಾಣವನ್ನು ಕ್ಲೈಂ ಮಾಡಿರುವುದು **(ಇಂಜಿನಿಯರಿಂಗ್ ವಿಭಾಗ)** | 2,47,27,320 | – |
| | | IX] ಪಾವತಿಸಲಾಗಿರುವ ಕಾಮಗಾರಿ ಬಿಲ್ಲುಗಳಲ್ಲಿ ನೀರಿನ ವೆಚ್ಚ (Water charges) ಅನ್ನು ಕಟಾಯಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | – | 10,00,647 |

| | | | | |
|---|---|---|---|---|
| | | X] ಕರಾರು ಒಪ್ಪಂದದ ಪ್ರಕಾರ KW–4ರ ನಿಯಮಗಳನುಸಾರ ಪ್ರಗತಿ ಸಾಧಿಸದೆ ಕುಂಠಿತ ಪ್ರಗತಿ ಕಂಡುಬಂದಿರುವುದು **(ಇಂಜಿನಿಯರಿಂಗ್ ವಿಭಾಗ)** | – | 78,13,825 |
| | | XII] ಪಾವತಿಸಲಾಗಿರುವ ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ (Royalty) ವನ್ನು ಕಡಿಮೆ ಕಟಾಯಿಸಿರುವುದು **(ಇಂಜಿನಿಯರಿಂಗ್ ವಿಭಾಗ)** | – | 8,42,053 |
| 133 | 105 | ಪ್ಯಾಕೇಜ್–3 ಕಾಮಗಾರಿ **(ಇಂಜಿನಿಯರಿಂಗ್ ವಿಭಾಗ)** | – | 6,935 |
| | | ಎ) ಬ್ಯಾಂಕ್ ಗ್ಯಾರಂಟಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆಯದಿರುವುದು **(ಇಂಜಿನಿಯರಿಂಗ್ ವಿಭಾಗ)** | 1,21,10,000 | |
| | | I. ಕಟಾಯಿಸಬೇಕಾದ ರಾಜಧನ & ಇತರೆ ತೆರಿಗೆಗಳ ವಿವರ | – | 1,66,905 |
| | | II. Gravel | – | 88,360 |
| | | V. ಟೆಂಡರ್ ಕರಾರಿನ ಪರಿಮಾಣಕ್ಕಿಂತ ಹೆಚ್ಚುವರಿಯಾಗಿ ನಿರ್ವಹಿಸಿ ಪಾವತಿಸಿರುವ ಮೊಬಲಗಿನ ವಿವರ | 30,81,624 | – |
| | | VI. ಭದ್ರತಾ ಠೇವಣಿಯನ್ನು ಕಾಮಗಾರಿ ಬಿಲ್ಲುಗಳಲ್ಲಿ ಕಡಿಮೆ ಕಟಾಯಿಸಿರುವುದು | – | 97,77,036 |
| 134 | 106 | 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿ Mobilization Advance ನಮೂದಿಸಿರುವ ವ್ಯತ್ಯಾಸ ಕುರಿತು **(ಇಂಜಿನಿಯರಿಂಗ್ ವಿಭಾಗ)** | – | – |
| 135 | 107 | ನಿಯಮಗಳನ್ನು ಅನುಸರಿಸದೆ ಕಾಮಗಾರಿ ಕೈಗೊಂಡ ನಂತರ ಕರಾರು ಒಪ್ಪಂದ ಕಾರ್ಯಾದೇಶ ನೀಡಿರುವ ಕುರಿತು **(ಇಂಜಿನಿಯರಿಂಗ್ ವಿಭಾಗ)** | 26,17,919 | – |
| 136 | 108 | ಕಾಮಗಾರಿ ಮುಕ್ತಾಯಗೊಳಿಸುವಲ್ಲಿ ವಿಳಂಬವಾಗಿದ್ದು, ದಂಡಶುಲ್ಕ ಪಾವತಿಸದಿರುವುದು ಹಾಗೂ ಇತರೆ ನ್ಯೂನತೆಗಳ ಬಗ್ಗೆ **(ಇಂಜಿನಿಯರಿಂಗ್ ವಿಭಾಗ)** | – | 7,400 |
| 137 | 109 | ಯು.ಪಿ.ಇ ಯೋಜನೆಯಡಿ Providing furniture to P.G Boys new hostel at Sir M.V P.G centre Mandya ಕಾಮಗಾರಿ ಬಿಲ್ಲಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | 8,93,800 | – |
| 138 | 110 | U.P.E ಯೋಜನೆಯಡಿ ಕಾಮಗಾರಿ ಬಿಲ್ಲಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | 42,67,137 | – |
| 139 | 111 | I.O.E ಯೋಜನೆಯಡಿಯಲ್ಲಿ ಕೈಗೊಂಡಿರುವ ಕಟ್ಟಡ ಕಾಮಗಾರಿಗಳಿಗೆ ವೆಚ್ಚ ಭರಿಸಿರುವ ಕಡತಗಳನ್ನು ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 81,93,447 | – |
| **ದಾಸ್ತಾನು ವಿಭಾಗ (Stock)** | | | | |
| 140 | 112 | ಪಿ.ಹೆಚ್.ಡಿ. ಪ್ರಮಾಣ ಪತ್ರಗಳನ್ನು ಖರೀದಿಸಿದ ಬಗ್ಗೆ ದಾಸ್ತಾನು ಪುಸ್ತಕ ಹಾಜರುಪಡಿಸದೆ ಇರುವುದು **(ಪರೀಕ್ಷಾ ವಿಭಾಗ)** | 1,14,492 | – |
| 141 | 113 | ಪಿ.ಹೆಚ್.ಡಿ ಖಾಲಿ ಪದವಿ ಪ್ರಮಾಣ ಪತ್ರಗಳ ಸ್ವೀಕೃತಿ, ರವಾನೆಯಲ್ಲಿರುವ ನ್ಯೂನತೆಗಳ ಬಗ್ಗೆ **(ಪರೀಕ್ಷಾ ವಿಭಾಗ)** | 63,000 | – |
| 142 | 114 | ದಾಸ್ತಾನಿನ ಸ್ವೀಕೃತಿ ಮತ್ತು ವಿತರಣೆಯಲ್ಲಿನ ಲೋಪಗಳು | – | 31,122 |

| | | | | |
|---|---|---|---|---|
| | | **(ಮುದ್ರಣಾಲಯ)** | | |
| 143 | 115 | ದಿನವಹಿ (Day book) ಹಾಗೂ ದಾಸ್ತಾನು ವಹಿಯಲ್ಲಿ ದಾಸ್ತಾನು ತೆಗೆದುಕೊಳ್ಳದಿರುವುದು **(ಮುದ್ರಣಾಲಯ)** | 24,301 | 9,548 |
| 144 | 116 | ದಾಸ್ತಾನು ಪುಸ್ತಕದಲ್ಲಿ ಕಂಡುಬಂದ ನ್ಯೂನ್ಯತೆಗಳು **(ಮುದ್ರಣಾಲಯ)** | – | 10,020 |
| **ಪರೀಕ್ಷಾ ವಿಭಾಗ (Exam)** | | | | |
| 145 | 117 | F&R ಖಾತೆಯಲ್ಲಿ ಯು.ಜಿ.ಸಿ ಶ್ರೇಣಿಯ ಬೋಧಕ ವರ್ಗದವರಿಗೆ ಪರೀಕ್ಷಾ ಕಾರ್ಯದ ಮೌಲ್ಯಮಾಪನ ಕಾರ್ಯಕ್ಕಾಗಿ ಸಂಭಾವನೆಯನ್ನು ಪಾವತಿಸಿರುವುದು **(ಹಣಕಾಸು ವಿಭಾಗ)** | – | 15,90,291 |
| 146 | 118 | ಪರೀಕ್ಷಾ ಕಾರ್ಯ ನಿರ್ವಹಿಸಿರುವ ಬೋಧಕ ವರ್ಗದವರಿಗೆ ಕೆ.ಸಿ.ಎಸ್.ಆರ್ ನಿಯಮದನ್ವಯ ದಿನಭತ್ಯೆ ಪಾವತಿಸದೆ ನಿಯಮಬಾಹಿರವಾಗಿ ಹೆಚ್ಚುವರಿ ದಿನಭತ್ಯೆ ಪಾವತಿಸಿರುವುದು **(ಹಣಕಾಸು ವಿಭಾಗ)** | – | 11,55,695 |
| 147 | 119 | ಪರೀಕ್ಷಾ ಕಾರ್ಯ ನಿರ್ವಹಿಸಿರುವ ವಿಶ್ವವಿದ್ಯಾನಿಲಯದ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಸಂಭಾವನೆ ಪಾವತಿಸಿರುವುದು **(ಹಣಕಾಸು ವಿಭಾಗ)** | – | 6,47,688 |
| 148 | 120 | ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ ಬಾಬ್ತು ಸಂಭಾವನೆ ಪಾವತಿಸಿರುವ ಕುರಿತು **(ಹಣಕಾಸು ವಿಭಾಗ)** | – | 59,000 |
| 149 | 121 | ಖಾಯಂ ಬೋಧಕ/ಬೋಧಕೇತರ ನೌಕರರುಗಳಿಗೆ ಕಛೇರಿ ಕರ್ತವ್ಯದ ಸಮಯದಲ್ಲಿ ಸ್ಥಳೀಯ ತನಿಖಾ ಕಾರ್ಯಕ್ಕೆ ಗೌರವ ಸಂಭಾವನೆಯನ್ನು ನೀಡಿರುವುದು **(ಹಣಕಾಸು ವಿಭಾಗ)** | – | 33,000 |
| 150 | 122 | ಅಧಿಕಾರಿಗಳು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ತನಿಖಾ ಕಾರ್ಯ ಕೈಗೊಳ್ಳಲು ವಿವಿಧ ಸ್ಥಳಗಳಿಗೆ ಪ್ರವಾಸ ಮಾಡಿರುವ ಅವಧಿಗೆ ತಂಗಿದ ಅವಧಿಗೆ ದಿನಭತ್ಯೆ ಪಾವತಿಸುವ ಬದಲು ಗೌರವ ಸಂಭಾವನೆ ಪಾವತಿಸಿರುವುದು **(ಹಣಕಾಸು ವಿಭಾಗ)** | – | 5,99,797 |
| 151 | 123 | ಪರೀಕ್ಷಾ ವಿಭಾಗದ ನೌಕರರುಗಳಿಗೆ ಪರೀಕ್ಷಾ ಕರ್ತವ್ಯ ನಿರ್ವಹಿಸಿರುವುದಕ್ಕೆ ಸಂಭಾವನೆಯನ್ನು ಪಾವತಿ ಮಾಡಿರುವುದು **(ಪರೀಕ್ಷಾ ವಿಭಾಗ)** | – | 3,48,400 |
| 152 | 124 | ಪರೀಕ್ಷಾ ಕಾರ್ಯಕ್ಕೆ ಅಧಿಕಾರಿಗಳು/ನೌಕರರುಗಳನ್ನು ಜಾಗೃತದಳದ ಸದಸ್ಯರುಗಳಾಗಿ ನಿಯೋಜಿಸಿ ಪ್ರಯಾಣ ಭತ್ಯೆ/ ದಿನಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದು **(ಪರೀಕ್ಷಾ ವಿಭಾಗ)** | – | 8,54,400 |
| 153 | 125 | ಪರೀಕ್ಷಾ ಕಾರ್ಯಗಳಿಗೆ ಹಾಜರಾದ ಪ್ರಾಧ್ಯಾಪಕರುಗಳಿಗೆ ದಿನಭತ್ಯೆ/ಪ್ರಯಾಣ ಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದು **(ಪರೀಕ್ಷಾ ವಿಭಾಗ)** | – | 8,11,418 |
| 154 | 126 | ಪರೀಕ್ಷಾ ವಿಭಾಗದ ನೌಕರರು ವಿವಿಧ ಕಾಲೇಜುಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲು ತೆರಳಿರುವುದಕ್ಕೆ ಪ್ರವಾಸ ಭತ್ಯೆಯನ್ನು ಪಾವತಿಸುವ ಬದಲು ಸಂಭಾವನೆ ಪಾವತಿಸಿರುವುದು **(ಪರೀಕ್ಷಾ ವಿಭಾಗ)** | – | 58,555 |
| 155 | 127 | ಪರೀಕ್ಷಾಂಗ ಶಾಖೆಯಲ್ಲಿಯೇ ಪ್ರಶ್ನೆ ಪತ್ರಿಕೆಗಳನ್ನು ವಿತರಣೆ ಮಾಡಲಾಗಿರುವ ಖಾಯಂ ನೌಕರರುಗಳಿಗೆ ಸಹಾಯಧನ | – | 68,510 |

| | | | | |
|---|---|---|---|---|
| | | ಮತ್ತು ಸಂಭಾವನೆಗಳನ್ನು ಪಾವತಿಸಿರುವುದು **(ಪರೀಕ್ಷಾ ವಿಭಾಗ)** | | |
| 156 | 128 | ಪ್ರಶ್ನೆ ಪತ್ರಿಕೆಗಳನ್ನು ಸ್ಥಳೀಯ ಕಾಲೇಜುಗಳಿಗೆ ವಿತರಿಸಿರುವ ಖಾಯಂ ಸಿಬ್ಬಂದಿಗಳಿಗೆ ಸಂಭಾವನೆಯನ್ನು ಪಾವತಿಸಿರುವುದು **(ಪರೀಕ್ಷಾ ವಿಭಾಗ)** | – | 37,820 |
| 157 | 129 | ಪಿ.ಹೆಚ್.ಡಿ ಕೋರ್ಸ್‌ವರ್ಕ್‌ಗಳಿಗೆ ಪ್ರಶ್ನೆಪತ್ರಿಕೆ ತಯಾರಿಕೆ, ತರಗತಿ ತೆಗೆದುಕೊಂಡಿರುವುದು ಹಾಗೂ ಸಂಶೋಧನಾ ಪ್ರಬಂಧವನ್ನು ಮೌಲ್ಯಮಾಪನ ಮಾಡಲು ಯು.ಜಿ.ಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ ಮೌಲ್ಯ ಮಾಪನ ಭತ್ಯೆಯನ್ನು ಪಾವತಿಸಿರುವುದು **(ಪರೀಕ್ಷಾ ವಿಭಾಗ)** | – | 27,34,524 |
| 158 | 130 | ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕರುಗಳಿಗೆ ಮೌಲ್ಯಮಾಪನಾ ಕಾರ್ಯಕ್ಕೆ ಪ್ರಯಾಣ ಭತ್ಯೆ, ದಿನಭತ್ಯೆ ಜೊತೆಗೆ ಸಂಭಾವನೆಯನ್ನು ನಿಯಮ ಬಾಹಿರವಾಗಿ ಪಾವತಿಸಿರುವುದು **(ಪರೀಕ್ಷಾ ವಿಭಾಗ)** | – | 47,638 |
| 159 | 131 | ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿದ ಯು.ಜಿ.ಸಿ ವೇತನ ಪಡೆಯುವ ಪ್ರಾಧ್ಯಾಪಕರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದು **(ಪರೀಕ್ಷಾ ವಿಭಾಗ)** | – | 2,15,000 |
| 160 | 132 | 95ನೇ ಘಟಿಕೋತ್ಸವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆಯಲು ಆಗಮಿಸಿದ ಗಣ್ಯರಿಗೆ ಗೌರವಧನ ಪಾವತಿಸಿರುವುದು **(ಪರೀಕ್ಷಾ ವಿಭಾಗ)** | – | 2,00,000 |
| 161 | 133 | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಪದವಿ ಕಾಲೇಜುಗಳ ಪ್ರಾಧ್ಯಾಪಕರುಗಳಿಗೆ ಮಾರ್ಗದರ್ಶಕರ ಮಾನ್ಯತೆ ನೀಡಲು ದಾಖಲಾತಿ ಪರಿಶೀಲಿಸಿದ ಪರೀಕ್ಷಾಂಗ ಸಿಬ್ಬಂದಿಗಳಿಗೆ ಸಂಭಾವನೆ ನೀಡಿರುವುದು **(ಪರೀಕ್ಷಾ ವಿಭಾಗ)** | – | 30,000 |
| 162 | 134 | ನವೆಂಬರ್/ಡಿಸೆಂಬರ್–2015ನೇ ಸಾಲಿನ ಸೆಮಿಸ್ಟರ್ ಪರೀಕ್ಷೆಗಳಿಗೆ ಉತ್ತರ ಪತ್ರಿಕೆಗಳನ್ನು ಸರಬರಾಜು ಮಾಡಿರುವಲ್ಲಿ ನ್ಯೂನತೆಗಳು **(ಪರೀಕ್ಷಾ ವಿಭಾಗ)** | – | 4,32,250 |
| 163 | 134 (ಎ) | ಉತ್ತರ ಪತ್ರಿಕೆಗಳನ್ನು ಕಾಲೇಜುಗಳಿಗೆ ಸರಬರಾಜು ಮಾಡುವಲ್ಲಿ ಬುಕ್‌ಲೆಟ್‌ಗಳು ಕಾಣೆಯಾಗಿರುವುದು **(ಪರೀಕ್ಷಾ ವಿಭಾಗ)** | – | 286 |
| 164 | 135 | ಖಾಲಿ ಅಂಕಪಟ್ಟಿ ಮುದ್ರಣ ಹಾಗೂ ಅಂಕಪಟ್ಟಿಯಲ್ಲಿ ವಿವರಗಳನ್ನು ಮುದ್ರಣ ಮಾಡುವಾಗಿನ ನ್ಯೂನತೆಗಳು **(ಪರೀಕ್ಷಾ ವಿಭಾಗ)** | – | 1,29,506 |
| 165 | 136 | ಖಾಲಿ ಪದವಿ ಪ್ರಮಾಣ ಪತ್ರ ಹಾಗೂ ಖಾಲಿ ಪದವಿ ಪ್ರಮಾಣ ಪತ್ರದಲ್ಲಿ ವಿವರ ತುಂಬುವಿಕೆ, ರವಾನೆ ಬಗ್ಗೆ ನ್ಯೂನತೆ ಕುರಿತು **(ಪರೀಕ್ಷಾ ವಿಭಾಗ)** | 9,83,500 | – |
| 166 | 137 | ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕ ಕಾಯಿದೆ 2000ರ ನಿಯಮ 4 (ಜಿ) ಅಡಿಯಲ್ಲಿ ವಿನಾಯಿತಿ ಪಡೆದಿರುವ ವಿವರಗಳನ್ನು ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | 3,74,801 | – |
| 167 | 138 | ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಖಾಯಂ ಬೋಧಕೇತರ ನೌಕರರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | – | 63,209 |

| | | | | |
|---|---|---|---|---|
| 168 | 139 | ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿದ ಯು.ಜಿ.ಸಿ ವೇತನ ಪಡೆಯುವ ಬೋಧಕ ವರ್ಗದವರಿಗೆ ಸಂಭಾವನೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | – | 28,060 |
| 169 | 140 | ಪರೀಕ್ಷಾ ಕಾರ್ಯಗಳಾದ ಪ್ರಾಯೋಗಿಕ ಪರೀಕ್ಷೆ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗಿರುವ ಬೋಧಕರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | – | 4,33,474 |
| 170 | 141 | ಪರೀಕ್ಷಾ ಕಾರ್ಯಗಳಿಗೆ ಹಾಜರಾದ ಬೋಧಕ ವೃಂದದವರಿಗೆ ದಿನಭತ್ಯೆ/ಪ್ರಯಾಣಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | – | 1,31,204 |
| 171 | 142 | ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸ್ಥಳೀಯ ಭತ್ಯೆ ಪಾವತಿಸಿರುವುದು **(ಯುವರಾಜ ಕಾಲೇಜು)** | – | 72,463 |
| 172 | 143 | 2015–16ನೇ ಸಾಲಿನ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಯುವರಾಜ ಕಾಲೇಜಿನ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | – | 10,500 |
| 173 | 144 | ಶೈಕ್ಷಣಿಕ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳ ಸಭೆಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | – | 4,94,344 |
| 174 | 145 | 2015–16ನೇ ಸಾಲಿನ ಪಿ.ಜಿ. ಪ್ರವೇಶಾತಿ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸಿರುವ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಂಭಾವನೆ ಪಾವತಿಸಿರುವುದು **(ಗಣಕ ಕೇಂದ್ರ, ಮಾನಸ ಗಂಗೋತ್ರಿಯ)** | – | 4,12,500 |
| 175 | 146 | ಪ್ರೊ॥ ಸಿ.ಬಸವರಾಜು, ಕುಲಸಚಿವರು (ಆಡಳಿತ) ಮೈ.ವಿ.ವಿ ರವರು Edusat live ಕಾರ್ಯಾಗಾರದಲ್ಲಿ ಭಾಗವಹಿಸಿರುವುದಕ್ಕೆ ಭತ್ಯೆಯನ್ನು ಪಡೆದಿರುವುದು **(ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)** | – | 4,000 |
| 176 | 147 | ವಿಶ್ವವಿದ್ಯಾನಿಲಯ ಧನಸಹಾಯಗಳ ಆಯೋಗದಡಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳಿಗೆ ಪರೀಕ್ಷಾ ಮೌಲ್ಯಮಾಪನ ಸಂಭಾವನೆಯನ್ನು ನಿಯಮಕ್ಕೆ ವಿರುದ್ಧವಾಗಿ ಪಾವತಿಸಿರುವುದು **(ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ)** | – | 22,860 |
| 177 | 148 | ಖಾಯಂ ನೌಕರರಿಗೆ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆ ಪಾವತಿಸಿರುವುದು **(ಲಲಿತ ಕಲೆಗಳ ಕಾಲೇಜು)** | – | 8,050 |
| 178 | 149 | ಹೆಚ್ಚುವರಿ ವೇಳೆ ಕಾರ್ಯನಿರ್ವಹಿಸಿದ ಪ್ರಯುಕ್ತವೆಂದು ಸಂಭಾವನೆ ಪಾವತಿಸಿರುವುದು **(ಕಾಲೇಜು ಅಭಿವೃದ್ಧಿ ಮಂಡಳಿ)** | – | 25,000 |
| **ಆದಾಯ ತೆರಿಗೆ/ಮಾರಾಟ ತೆರಿಗೆ/ಆಸ್ತಿ ತೆರಿಗೆ (Income Tax/VAT/Asset Tax)** | | | | |
| 179 | 150 | ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ಪಾವತಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ (VAT) ಕಟಾಯಿಸದಿರುವುದು | – | – |

| | | | | |
|---|---|---|---|---|
| | | **(ಹಣಕಾಸು ವಿಭಾಗ)** | | |
| 180 | 151 | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸಂಬಂಧಿಸಿದ ಸ್ಥಿರ ಆಸ್ತಿಗಳಿಗೆ ಆಸ್ತಿತೆರಿಗೆ ಪಾವತಿ ವಿವರ ಕುರಿತು **(ಇಂಜಿನಿಯರಿಂಗ್ ವಿಭಾಗ)** | – | – |
| 181 | 152 | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸಂಬಂಧಿಸಿದ ಚರ ಮತ್ತು ಸ್ಥಿರ (Movable & im movable) ಆಸ್ತಿಗಳ ವಹಿ ನಿರ್ವಹಿಸದಿರುವುದು. | | |
| 182 | 153 | ವಿವಿಧ ಔಷಧಿ ಸರಬರಾಜುದಾರರಿಗೆ ಎರಡುಬಾರಿ ಮೌಲ್ಯವರ್ಧಿತ ತೆರಿಗೆಯನ್ನು ಪಾವತಿಸಿರುವುದು **(ಆರೋಗ್ಯ ಕೇಂದ್ರ, ಮಹಾರಾಜ, ಯುವರಾಜ ಕಾಲೇಜು ಆವರಣ)** | – | 28,418 |
| 183 | 154 | ಖರೀದಿ ಬಿಲ್ಲುಗಳಲ್ಲಿ ಆದಾಯ ತೆರಿಗೆ, ಮಾರಾಟ ತೆರಿಗೆಯನ್ನು ಕಟಾಯಿಸಿ ಸಂಬಂಧಪಟ್ಟ ಇಲಾಖೆಗೆ ಪಾವತಿಸದಿರುವುದು **(ಯುವರಾಜ ಕಾಲೇಜು)** | – | 2,00,432 |
| 184 | 155 | ಖರೀದಿ ಬಿಲ್ಲುಗಳಲ್ಲಿ ಆದಾಯ ತೆರಿಗೆ, ಮಾರಾಟ ತೆರಿಗೆ ಮತ್ತು ರಾಜಧನಗಳ ಮೊಬಲಗುಗಳನ್ನು ಕಟಾಯಿಸದಿರುವುದು **(ತೋಟಗಾರಿಕೆ ವಿಭಾಗ)** | – | 11,761 |
| 185 | 156 | ಮುದ್ರಣ ವೆಚ್ಚಗಳ ಹಾಗೂ ಖರೀದಿಗಳ ಬಿಲ್ಲುಗಳಲ್ಲಿ ಆದಾಯ ತೆರಿಗೆ ಕಟಾಯಿಸದಿರುವುದು **(ಮಹಾರಾಜ ಕಾಲೇಜು)** | – | 25,273.26 |
| 186 | 157 | ಆದಾಯ ತೆರಿಗೆ ಕಟಾಯಿಸದಿರುವುದು **(ಲಲಿತ ಕಲೆಗಳ ಕಾಲೇಜು)** | – | 350 |
| | | **ಯೋಜನೆಗಳು (Projects)** | | |
| 187 | 158 | The Nursery- co-operative society ltd. Bangalore ಇವರಿಗೆ ಮಾನಸಗಂಗೋತ್ರಿ ಆವರಣದಲ್ಲಿ ಉದ್ಯಾನವನ ಕಾಮಗಾರಿ ಮಾಡಿಸಲು ಹೆಚ್ಚುವರಿ ವೆಚ್ಚ ಭರಿಸಿರುವುದು **(ಹಣಕಾಸು ವಿಭಾಗ)** | 2,96,225 | – |
| 188 | 159 | ವಿಶ್ವವಿದ್ಯಾನಿಲಯದ ವಿವಿಧ ಸಂಶೋಧನಾ ಕಾರ್ಯದ ಯೋಜನೆಗಳ ವೆಚ್ಚದ ವಿವರ ಹಾಗೂ (ಯು.ಸಿ)ಗಳನ್ನು ಸಲ್ಲಸದಿರುವುದು **(ಹಣಕಾಸು ವಿಭಾಗ)** | – | – |
| 189 | 160 | ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಧ್ಯಯನ ಕೇಂದ್ರಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗಿ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸದೆ ಇರುವ ಬಗ್ಗೆ **(ಹಣಕಾಸು ವಿಭಾಗ)** | 5,00,00,000 | – |
| | | **ಎ.ಸಿ/ಎನ್.ಡಿ.ಸಿ/ಡಿ.ಸಿ ಬಿಲ್ಲು (A.C/N.D.C/D.C Bill)** | | |
| 190 | 161 | ಡಿ.ಸಿ.ಬಿಲ್ಲುಗಳ ಮೂಲಕ ಪಾವತಿಸಿರುವ ಬಿಲ್ಲುಗಳಿಗೆ ದರಪಟ್ಟಿಗಳನ್ನು ನೀಡದಿರುವುದು **(ಆಡಳಿತ ವಿಭಾಗ)** | 7,05,919 | – |
| 191 | 162 | ಪೂರ್ಣ ಪ್ರಮಾಣದಲ್ಲಿ ಡಿ.ಸಿ. ಬಿಲ್ಲುಗಳನ್ನು ಹಾಜರುಪಡಿಸದಿರುವುದು **(ಆಡಳಿತ ವಿಭಾಗ)** | 18,25,886 | – |
| 192 | 163 | ಎ.ಸಿ.ಬಿಲ್ಲುಗಳ ಮೂಲಕ ಡ್ರಾ ಮಾಡಿರುವ ಮೊತ್ತಕ್ಕೆ ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸದಿರುವುದು **(ಆಡಳಿತ ವಿಭಾಗ)** | – | 18,27,930 |
| 193 | 164 | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವಕೋಶ ಪುನರ್ ಮುದ್ರಣ ಕಾರ್ಯಕ್ಕಾಗಿ ಬಿಡುಗಡೆಯಾದ ಹಣವನ್ನು ವಿನಿಯೋಗಿಸದಿರುವುದು **(ಹಣಕಾಸು ವಿಭಾಗ)** | – | – |
| 194 | 165 | 103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಖಾತೆಯಡಿ ಎ.ಸಿ. | – | – |

| | | | | |
|---|---|---|---|---|
| | | ಬಿಲ್ಲಿನ ಮೂಲಕ ಮುಂಗಡ ಡ್ರಾ ಮಾಡಿ ನಿರ್ದಿಷ್ಟ ಉದ್ದೇಶಕ್ಕೆ ಬಳಸದೆ ವಿಳಂಬವಾಗಿ ಪೂರ್ಣ ಹಣವನ್ನು ಹಿಂದಿರುಗಿಸಿರುವುದು **(ಹಣಕಾಸು ವಿಭಾಗ)** | | |
| 195 | 166 | ಎ.ಸಿ ಬಿಲ್ಲಿನ ಮೂಲಕ ಪಡೆದ ಮುಂಗಡದ ಮೊತ್ತಕ್ಕೆ ಎನ್.ಡಿ.ಸಿ ಬಿಲ್ಲುಗಳ ಹೊಂದಾಣಿಕೆಯಾಗದಿರುವುದು **(ಹಣಕಾಸು ವಿಭಾಗ)** | – | 2,95,57,698 |
| 196 | 167 | ಯು.ಪಿ.ಇ ಯೋಜನೆಯಡಿ ಉಪಕರಣಗಳ ಖರೀದಿಗಾಗಿ ಎ.ಸಿ.ಬಿಲ್ಲಿನ ಮೂಲಕ ಮುಂಗಡ ಹಣ ಕಾಯ್ದಿರಿಸಿರುವುದು (ಹಣಕಾಸು ವಿಭಾಗ) | – | – |
| 197 | 168 | ಜಿ.ಆರ್.ಎ, ಎಫ್&ಆರ್ ಖಾತೆಗಳಲ್ಲಿ ಎ.ಸಿ ಬಿಲ್ಲುಗಳ ಮೂಲಕ ಮುಂಗಡ ಡ್ರಾ ಮಾಡಿದ್ದು, ವಿಳಂಬವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿರುವ ಬಗ್ಗೆ **(ಹಣಕಾಸು ವಿಭಾಗ)** | – | – |
| 198 | 169 | ಡಾ॥ ಬಿ.ಆರ್ ಅಂಬೇಡ್ಕರ್ ದಿನಾಚರಣೆ ಸಂಬಂಧ ಪಡೆದ ಮುಂಗಡ ಹಣ ಬಳಸದೆ ವಿಳಂಭವಾಗಿ ಬ್ಯಾಂಕಿಗೆ ಜಮಾ ಮಾಡಿರುವ ಕುರಿತು **(ಹಣಕಾಸು ವಿಭಾಗ)** | – | – |
| 199 | 170 | ವೋಚರ್ಸ್‌ಗಳ ಪರಿಶೀಲನೆಯಲ್ಲಿ ಕಂಡು ಬಂದಿರುವ ನ್ಯೂನತೆಗಳು **(ಲಲಿತ ಕಲೆಗಳ ಕಾಲೇಜು)** | 7,533 | – |
| 200 | 171 | ಎ.ಸಿ. ಬಿಲ್ಲುಗಳಿಗೆ ಎದುರಾಗಿ ಎನ್.ಡಿ.ಸಿ. ಬಿಲ್ಲುಗಳನ್ನು ಭಾಗಶಃ ಹಾಜರುಪಡಿಸಿರುವುದು **(ಕಾಲೇಜು ಅಭಿವೃದ್ಧಿ ಮಂಡಳಿ)** | 58,823 | – |
| 201 | 172 | ಎ.ಸಿ. ಬಿಲ್ಲಿನಲ್ಲಿ ಡ್ರಾ ಮಾಡಲಾದ ಮುಂಗಡ ಹಣಕ್ಕೆ ಎನ್.ಡಿ.ಸಿ. ಬಿಲ್ಲುಗಳನ್ನು ವಿಳಂಬವಾಗಿ ಸಲ್ಲಿಸಿರುವುದು ಹಾಗೂ ಎನ್.ಡಿ.ಸಿ ಬಿಲ್ ನಲ್ಲಿರುವ ನ್ಯೂನತೆಗಳು **(ಕಾಲೇಜು ಅಭಿವೃದ್ಧಿ ಮಂಡಳಿ)** | 9,477 | 1,600 |
| 202 | 173 | ಡಿ.ಸಿ. ಬಿಲ್ಲುಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸದೇ ಇರುವುದು **(ಕಾಲೇಜು ಅಭಿವೃದ್ಧಿ ಮಂಡಳಿ)** | 3,20,911 | – |
| 203 | 174 | ಪತ್ರಿಕಾ ಪ್ರಕಟಣೆಯ ಬಾಬ್ತನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಮತ್ತು ಇತರೆ ನ್ಯೂನತೆಗಳು **(ಕಾಲೇಜು ಅಭಿವೃದ್ಧಿ ಮಂಡಳಿ)** | – | 20,250 |
| 204 | 175 | DGS & D ರವರ Rate Contract ಹಾಗೂ ಸಮೃದ್ಧಿ ಟೆಕ್ನೋ ಸೆಲ್ಯೂಷನ್ಸ್ ರವರ Invoice ಬಿಲ್‌ನಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳು **(ಕಾಲೇಜು ಅಭಿವೃದ್ಧಿ ಮಂಡಳಿ)** | 2,88,029 | – |
| | | **ಒಟ್ಟು** | **84,87,67,063** | **134,68,86,612.3** |
| **ಭಾಗ–04**<br>**ಲೆಕ್ಕ ತಪಾಸಣೆಗೆ ಓಚರ್‌ಗಳನ್ನು ಹಾಜರುಪಡಿಸದಿರುವ ವಿವರ** | | | | |
| 205 | 1 | ಲಾಗ್ ಪುಸ್ತಕ ಹಾಗೂ ಇಂಡೆಂಟ್‌ಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದು **(ಆಡಳಿತ ವಿಭಾಗ)** | 19,39,825 | – |
| 206 | 2 | ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದೇ ಇರುವುದು **(ಆಡಳಿತ ವಿಭಾಗ)** | 8,24,342 | – |
| 207 | 3 | ಪರೀಕ್ಷಾ ಖಾತೆಸಂಖ್ಯೆ–54007591200 ಗೆ ಜಮೆ ಆಗಿರುವ ಮಾಹಿತಿಯನ್ನು ಒದಗಿಸುವ ಕುರಿತು **(ಹಣಕಾಸು ವಿಭಾಗ)** | 30,47,03,664 | – |

| | | | | |
|---|---|---|---|---|
| 208 | 4 | ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯ ಮುಖ್ಯದ್ವಾರದ ಮುಂದೆ ಅಳವಡಿಸಿರುವ ರಾಷ್ಟ್ರಕವಿ ಕುವೆಂಪುರವರ ಕಂಚಿನ ಪ್ರತಿಮೆಯ ಬಾಬ್ತು ಪಾವತಿಯ ಕುರಿತು **(ಇಂಜಿನಿಯರಿಂಗ್ ವಿಭಾಗ)** | 7,49,000 | – |
| 209 | 5 | ಯು.ಪಿ.ಇ ಯೋಜನೆಯಡಿ ಖರೀದಿಸಲಾದ ಉಪಕರಣಕ್ಕೆ ದಾಸ್ತಾನಿನ ವಹಿ ಹಾಗೂ Installation certificate ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | – | 4,70,319 |
| 210 | 6 | 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿನ ಪ್ರಸಾರಾಂಗ ರಿವಾಲ್ವಿಂಗ್ ಫಂಡ್ ಖಾತೆಯ ಸ್ವೀಕೃತಿ ಮತ್ತು ವೆಚ್ಚದ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 2,34,27,993 | – |
| 211 | 7 | 2015–16ನೇ ಸಾಲಿನ ಲೆಕ್ಕಪರಿಶೋಧನಾ ವೆಚ್ಚ (Audit charges) ಹಾಗೂ ಅನ್ಯಸೇವೆಯ ಅಂಶದಾನಗಳ ವೆಚ್ಚದ ದಾಖಲಾತಿಗಳನ್ನು ಒದಗಿಸದಿರುವುದು **(ಹಣಕಾಸು ವಿಭಾಗ)** | 38,13,628 | – |
| 212 | 8 | 2015–16ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ಡಿಪ್ಲೋಮಾ/ Certificate course ಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಜಾಹೀರಾತು ವೆಚ್ಚದ ಕಡತ ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 31,64,369 | – |
| 213 | 9 | 2015–16ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | – | – |
| 214 | 10 | ಮೈಸೂರು ವಿಶ್ವವಿದ್ಯಾನಿಲಯದ ಒಟ್ಟು ವಾಹನಗಳ ವಿವರ/ಕರ್ನಾಟಕ ಜೀವ ವಿಮಾ ಇಲಾಖೆಗೆ ವಾಹನ ವಿಮೆಯನ್ನು ಜಮೆ ಮಾಡಿದ ವಿವರ ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | – | – |
| 215 | 11 | F&R ಖಾತೆಗೆ ಸಂಬಂಧಿಸಿದಂತೆ ವಾಹನಗಳ ಲಾಗ್ ಬುಕ್‌ಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 15,411 | – |
| 216 | 12 | ಐ.ಓ.ಇ ಯೋಜನೆಯಡಿಯಲ್ಲಿ ನೇಮಕಾತಿ ಮಾಡಿಕೊಂಡಿರುವ ತಾಂತ್ರಿಕ/ತಾಂತ್ರಿಕೇತರ ನೌಕರರ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 4,02,462 | – |
| 217 | 13 | ಪ್ರಯಾಣ ಭತ್ಯೆಯ ಬಿಲ್ಲುಗಳಿಗೆ ವಿಮಾನ ಪ್ರಯಾಣದ ಬೋರ್ಡಿಂಗ್ ಪಾಸ್ ಹಾಗೂ ಇತರೆ ಮಾಹಿತಿಗಳನ್ನು ನೀಡದಿರುವುದು **(ಹಣಕಾಸು ವಿಭಾಗ)** | 1,94,611 | 43,507 |
| 218 | 14 | ಜಾಹಿರಾತು ಬಿಲ್ಲುಗಳ ಪಾವತಿಗೆ ಸರ್ಕಾರದಿಂದ ನಿಗದಿಯಾಗಿರುವ ದರಗಳು ಹಾಗೂ ಇತರೆ ಮಾಹಿತಿಗಳನ್ನು ನೀಡದಿರುವುದು **(ಹಣಕಾಸು ವಿಭಾಗ)** | – | – |
| 219 | 15 | ಪಿ.ಹೆಚ್.ಡಿಯ ಸಮಗ್ರ ಮಾಹಿತಿಯ ವಿವರಣಾ ಪುಸ್ತಕಗಳ (Prospectus ಗಳ) ಮುದ್ರಣದ ಬಿಲ್ಲುಗಳ ದರಪಟ್ಟಿಯ ಪೂರ್ಣ ಮಾಹಿತಿ ನೀಡದಿರುವುದು **(ಹಣಕಾಸು ವಿಭಾಗ)** | 1,96,000 | – |
| 220 | 16 | ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಕಾರ್ಯಗಳಿಗಾಗಿ ಖಾಸಗಿ ವಾಹನಗಳನ್ನು (ವಿಶ್ವವಿದ್ಯಾನಿಲಯದ ವಾಹನಗಳಿದ್ದರೂ ಸಹ) ಬಾಡಿಗೆ ಆಧಾರದ ಮೇಲೆ ಪಡೆದಿರುವ ಪೂರ್ಣ ಮಾಹಿತಿಯನ್ನು ನೀಡದಿರುವುದು **(ಹಣಕಾಸು ವಿಭಾಗ)** | 13,76,585 | – |

| | | | | |
|---|---|---|---|---|
| 221 | 17 | ಅಂಕಪಟ್ಟಿಗಳು/ಓ.ಎಂ.ಆರ್/ಬಾರ್‌ಕೋಡ್ ಇತ್ಯಾದಿಗಳ ಮುದ್ರಣದ ಟೆಂಡರ್ ಕಡತಗಳನ್ನು ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 1,04,36,750 | – |
| 222 | 18 | ಪರೀಕ್ಷಾ ಕಾರ್ಯಚಟುವಟಿಕೆಗಳನ್ನು ಹೊರಗುತ್ತಿಗೆಯಡಿ ನೀಡಿರುವ ಪೂರ್ಣ ಮಾಹಿತಿಯನ್ನು ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 81,74,312 | – |
| 223 | 19 | ಕ್ರೀಡಾಭಿವೃದ್ಧಿ ನಿಧಿಯ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೀಲನೆಗೆ ಹಾಜರುಪಡಿಸದಿರುವುದು (ಹಣಕಾಸು ವಿಭಾಗ) | 97,80,772 | – |
| 224 | 20 | ಕಡತಗಳನ್ನು ಆಡಿಟ್ ವಿಚಾರಣೆಗೆ ಹಾಜರುಪಡಿಸದೇ ಇರುವುದು **(ಹಣಕಾಸು ವಿಭಾಗ)** | 2,17,64,826 | – |
| 225 | 21 | ಪರೀಕ್ಷಾ ಕಾರ್ಯ ನಿಮಿತ್ತ ಪ್ರಾಧ್ಯಾಪಕರು/ಅಧಿಕಾರಿಗಳು ವಿಮಾನಯಾನ ಕೈಗೊಂಡಿರುವುದಕ್ಕೆ ಬೋರ್ಡಿಂಗ್ ಪಾಸ್ ಹಾಜರುಪಡಿಸದಿರುವುದು **(ಪರೀಕ್ಷಾ ವಿಭಾಗ)** | 68,075 | – |
| 226 | 22 | ADHOC ನೌಕರರ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ತಪಾಸಣೆಗೆ ಹಾಜರುಪಡಿಸದಿರುವುದು **(ಶೈಕ್ಷಣಿಕ ಬಹುಮಾದ್ಯಮ ಸಂಶೋಧನಾ ಕೇಂದ್ರ)** | 2,61,574 | – |
| 227 | 23 | ANICAST STATION ಉಪಕರಣ ಬಿಡಿಭಾಗಗಳನ್ನು ಖರೀದಿಸಲು ಕೈಗೊಂಡಿರುವ ಟೆಂಡರ್ ಪ್ರಕ್ರಿಯೆ ಕಡತವನ್ನು ಲೆಕ್ಕತಪಾಸಣೆಗೆ ಹಾಜರುಪಡಿಸದಿರುವುದು **(ಶೈಕ್ಷಣಿಕ ಬಹುಮಾದ್ಯಮ ಸಂಶೋಧನಾ ಕೇಂದ್ರ)** | 4,80,210 | – |
| 228 | 24 | ವಿಮಾನಯಾನ ಭತ್ಯೆ ಪಡೆದಿರುವುದಕ್ಕೆ ಬೋರ್ಡಿಂಗ್ ಪಾಸ್‌ಗಳನ್ನು ಹಾಜರುಪಡಿಸದಿರುವುದು **(ವಿದ್ಯಾರ್ಥಿ ಕ್ಷೇಮಪಾಲನಾ)** | 85,768 | – |
| 229 | 25 | ಕನ್ನಡ ವಿಶ್ವಕೋಶ ಸಂಪುಟಗಳ ಮುದ್ರಣ ಮಾಡಿಸಲು ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಜರುಪಡಿಸದಿರುವುದು **(ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)** | 34,20,000 | – |
| 230 | 26 | ವೋಚರ್‌ಗಳನ್ನು ಮತ್ತು ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸದಿರುವುದು **(ಮಹಾರಾಜ ಕಾಲೇಜು)** | 4,09,648 | – |
| 231 | 27 | ಸಿ & ಐ 65 ಇತರೆ ಸ್ಕಾಲರ್‌ಷಿಪ್ ಖಾತೆಗೆ ಸಂಬಂಧಿಸಿದ ವೋಚರ್ಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದು **(ಮಹಾರಾಜ ಕಾಲೇಜು)** | 2,73,430 | – |
| 232 | 28 | ಪ್ರಾಂಶುಪಾಲರ ಬ್ಯಾಂಕ್ ಖಾತೆಯಿಂದ ನಗಧೀಕರಿಸಲಾಗಿರುವ ಮೊಬಲಗುಗಳ ವೋಚರ್ಸ್‌ಗಳನ್ನು ತಪಾಸಣೆಗೆ ಹಾಜರುಪಡಿಸದಿರುವುದು **(ಲಲಿತ ಕಲೆಗಳ ಕಾಲೇಜು)** | 22,480 | – |
| 233 | 29 | ವೆಚ್ಚಭರಿಸಲಾಗಿರುವ ಓಚರ್‌ಗಳನ್ನು ಹಾಜರುಪಡಿಸದಿರುವುದು **(ಲಲಿತ ಕಲೆಗಳ ಕಾಲೇಜು)** | 43,587 | – |
| 234 | 30 | ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಹಾಜರುಪಡಿಸದಿರುವುದು **(ಮುದ್ರಣಾಲಯ)** | 8,64,372 | – |
| 235 | 31 | ಟೆಂಡರು/ಕೊಟೇಷನ್ ಮೂಲಕ ಸರಬರಾಜುದಾರರಿಗೆ ಪಾವತಿಸಿರುವ ಪಾವತಿಗಳ ಮೂಲ ಟೆಂಡರ್/ಕಡತಗಳನ್ನು ಹಾಜರುಪಡಿಸದಿರುವುದು **(ಮುದ್ರಣಾಲಯ)** | 22,93,705 | – |
| 236 | 32 | ಸ್ಥಳೀಯ ವಿಚಾರಣಾ ಸಮಿತಿಗಳು ಬಳಸಿಕೊಂಡ ವಾಹನಗಳ ಲಾಗ್‌ಬುಕ್‌ಗಳನ್ನು ಹಾಜರುಪಡಿಸಿಲ್ಲದ ಕುರಿತು | 3,01,889 | – |

| | | | | |
|---|---|---|---|---|
| | | **(ಕಾಲೇಜು ಅಭಿವೃದ್ಧಿ ಮಂಡಳಿ)** | | |
| | | **ಒಟ್ಟು** | **39,94,89,288** | **5,13,826** |
| | | **ಒಟ್ಟು ಮೊತ್ತ** | **1,54,00,55,810** | **18,47,06,915.3** |

ಅಪರ ನಿರ್ದೇಶಕರು (ಅಧಿಕ ಪ್ರಭಾರ)
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು

**2015–16ನೇ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿರುವ ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿಯ ವಿವರಗಳು.**

| ಕ್ರ.ಸಂ | ಪದನಾಮ ಮತ್ತು ಹೆಸರು | ಸೇವಾ ಅವಧಿ |
|---|---|---|
| 1 | ಕುಲಪತಿಗಳು | ಪ್ರೊ॥ ಕೆ.ಎಸ್. ರಂಗಪ್ಪ<br>01.04.2015 ರಿಂದ 31.03.2016 |
| 2 | ಕುಲಸಚಿವರು (ಆಡಳಿತ) | ಶ್ರೀ ಸಿ. ಬಸವರಾಜು<br>01.04.2015 ರಿಂದ 31.03.2016 |
| 3 | ಕುಲಸಚಿವರು (ಮೌಲ್ಯಮಾಪನ) | ಶ್ರೀ.ಡಿ. ಜೈ ದೇವರಾಜೇಅರಸ್,<br>01.04.2015 ರಿಂದ 14.09.2015ರವರೆಗೆ<br>ಶ್ರೀ.ಆರ್. ರಾಜಣ್ಣ<br>15.09.2015 ರಿಂದ 31.03.2016ರವರೆಗೆ |
| 4 | ಹಣಕಾಸು ಅಧಿಕಾರಿಗಳು | 1. ಪ್ರೊ॥ ಮಹದೇವಪ್ಪ<br>01.04.2015 ರಿಂದ 31.03.2016 |
| 9 | ಲೆಕ್ಕ ಪರಿಶೋಧನಾ ಅವಧಿ | 2015–16 (01.04.2015 ರಿಂದ 31.03.2016) |
| 10 | ಲೆಕ್ಕ ಪರಿಶೋಧನೆ ಆರಂಭದ ದಿನಾಂಕ | 26.06.2017 |
| 11 | ಲೆಕ್ಕ ಪರಿಶೋಧನೆ ಮುಕ್ತಾಯದ ದಿನಾಂಕ | 20.06.2018 |
| 12 | ಲೆಕ್ಕ ಪರಿಶೋಧನಾ ತಂಡ | **ಶ್ರೀ/ಶ್ರೀಮತಿ**<br>ಎಂ.ಲೋಕೇಶ್, ಲೆಕ್ಕ ಪರಿಶೋಧನಾಧಿಕಾರಿಗಳು<br>ಸಿ. ನಾಗಯ್ಯ, ಲೆಕ್ಕ ಪರಿಶೋಧನಾಧಿಕಾರಿಗಳು<br>ಬಿ.ಎನ್. ಸುಮಿತ್ರ, ಲೆಕ್ಕ ಪರಿಶೋಧನಾಧಿಕಾರಿಗಳು<br>ಬಸವರಾಜ.ಜಿ.ಎಂ, ಲೆಕ್ಕ ಪರಿಶೋಧನಾಧಿಕಾರಿಗಳು<br>ಕೆ.ಎನ್.ರಾಜಶೇಖರ, ಲೆಕ್ಕ ಪರಿಶೋಧನಾಧಿಕಾರಿಗಳು<br>ರಮೇಶ, ಲೆಕ್ಕಾಧೀಕ್ಷಕರು<br>ಸಿ. ನಿರ್ಮಲಕುಮಾರಿ, ಲೆಕ್ಕಾಧೀಕ್ಷಕರು<br>ಸುಧಾಕರ್.ಎನ್.ಬಿ, ಲೆಕ್ಕಾಧೀಕ್ಷಕರು<br>ಆನಂದ್.ಕೆ, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಭಗತ್‌ಬಾಪಟ್, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಲೋಕೇಶ್ವರಿ.ಕೆ.ಎಸ್, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಪ್ರತಿಭಾ.ಎಂ.ಎಸ್, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಕೃಷ್ಣ. ಆರ್, ಲೆಕ್ಕ ಸಹಾಯಕರು<br>ಸರ್ವಮಂಗಳಮ್ಮ.ಎನ್, ಲೆಕ್ಕ ಸಹಾಯಕರು<br>ಪ್ರಕಾಶ್.ಎಂ, ಲೆಕ್ಕ ಸಹಾಯಕರು<br>ಹರೀಶ, ಲೆಕ್ಕ ಸಹಾಯಕರು<br>ದಿವ್ಯ.ಎನ್, ಲೆಕ್ಕ ಸಹಾಯಕರು<br>ಬಾಲರಾಜ, ಲೆಕ್ಕ ಸಹಾಯಕರು<br>ಅಭಿಲಾಷ್, ಲೆಕ್ಕ ಸಹಾಯಕರು<br>ಸೌಮ್ಯ.ಹೆಚ್.ಎಸ್, ಲೆಕ್ಕ ಸಹಾಯಕರು<br>ನಾಗೇಂದ್ರ.ಹೆಚ್.ಕೆ, ಲೆಕ್ಕ ಸಹಾಯಕರು<br>ತೇಜಸ್ವಿನಿ.ಬಿ.ಎನ್, ಲೆಕ್ಕ ಸಹಾಯಕರು<br>ಮಂಜುನಾಥ್.ಆರ್, ಕಿರಿಯ ಲೆಕ್ಕ ಸಹಾಯಕರು |
| 14 | ಅಪರ ನಿರ್ದೇಶಕರು | ಎಸ್.ಎನ್.ಚಂದ್ರಶೇಖರ್, ಕೆ.ಎಸ್.ಎ.ಎಸ್. |
| 15 | ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾಧಿಕಾರಿಗಳು | ಎಸ್.ಎನ್.ಚಂದ್ರಶೇಖರ್,<br>ಅಪರ ನಿರ್ದೇಶಕರು |
| 16 | ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾ ದಿನಾಂಕ | 26.10.2018 |

| | |
|---|---|
| **ಭಾಗ – 1**<br>**1988–89ನೇ ಸಾಲಿನಿಂದ ಬಾಕಿ ಇರುವ ಲೆಕ್ಕಪರಿಶೋಧನಾ ವರದಿಗಳು**<br><br>**1. ಹಿಂದಿನ ವರ್ಷದ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಯ ಬಗ್ಗೆ :–**<br><br>1988–89 ರಿಂದ 2014–2015ನೇ ವರ್ಷಗಳವರೆಗೆ ಕಂಡುಬಂದ ಆಕ್ಷೇಪಣೆ ಮತ್ತು ವಸೂಲಾತಿಗಳ ತೀರುವಳಿ ಹಾಗೂ ಬಾಕಿ ಉಳಿದಿರುವ ಮೊತ್ತದ ವರ್ಷವಾರು ವಿವರವನ್ನು ಅನುಬಂಧ–1, 1(ಎ), 1(ಬಿ) ಗಳಲ್ಲಿ ನೀಡಲಾಗಿದೆ. ಸದರಿ ಅನುಬಂಧದ ರೀತ್ಯಾ **ಆಕ್ಷೇಪಣೆ ಮೊತ್ತ ರೂ.187,81,17,889.59ಗಳು** ಹಾಗೂ **ವಸೂಲಾತಿ ಮೊತ್ತ ರೂ.27,50,19,976.70ಗಳಾಗಿರುತ್ತದೆ.** ಬಾಕಿ ಇರುವ ವಸೂಲಾತಿ ಹಾಗೂ ಆಕ್ಷೇಪಣೆ ಕಂಡಿಕೆಗಳ ತ್ವರಿತ ಇತ್ಯರ್ಥದ ಬಗ್ಗೆ ತ್ವರಿತ ಕ್ರಮಜರುಗಿಸಿ ಅನುಪಾಲನಾ ವರದಿ ಸಲ್ಲಿಸುವುದು. ಕಂಡಿಕೆಗಳು ತೀರುವಳಿಯಾಗದಿದ್ದಲ್ಲಿ ವರ್ಷದಿಂದ ವರ್ಷಕ್ಕೆ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತವು ಅಧಿಕವಾಗುತ್ತಿದ್ದು, ಇದು ವಿಶ್ವವಿದ್ಯಾನಿಲಯದ ಘನತೆಗೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಈ ಬಗ್ಗೆ ಕ್ರಮ ಅಗತ್ಯವಾಗಿದೆ. | 1988–89 ನೇ ಸಾಲಿನಿಂದ 2014–15 ನೇ ಸಾಲಿನವರೆಗೆ ತೀರುವಳಿ ಆಗದೇ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ಬಗ್ಗೆ ಆಯಾ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಿಗೆ ಕಂಡಿಕೆವಾರು ಅನುಸರಣಾ ವರದಿ ತಯಾರಿಸಿ ಸಲ್ಲಿಸುವುದರ ಮೂಲಕ ಅವುಗಳ ತೀರುವಳಿಗಾಗಿ ಅಗತ್ಯಕ್ರಮ ವಹಿಸಲಾಗಿದೆ.<br><br>2012–13 ಮತ್ತು 2014–15 ರ ಸಾಲುಗಳ ತನಿಖಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಕಂಡಿಕೆವಾರು ಅನುಪಾಲನಾ ವರದಿ ತಯಾರಿಸಿ ಕ್ರಮವಾಗಿ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ ಜಿ.ಎಲ್.4/278/ಲೆತವ/2017–18/2562–63 ದಿನಾಂಕ:25–10–2017 ಮತ್ತು ಪತ್ರ ಸಂಖ್ಯೆ ಮೈ.ವಿ.ವಿ/ಲೆತವ/2014–15/2018–2019/1658–62, ದಿನಾಂಕ:08–02–2019ರಲ್ಲಿ ಈಗಾಗಲೇ ಅಪರ ನಿರ್ದೇಶಕರು ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.<br><br>2014–15ರ ಸಾಲಿನ ವರದಿಯ ಭಾಗ(1)ರ ಕಂಡಿಕೆ(1)ಕ್ಕೆ ಈಗಾಗಲೇ ಸಲ್ಲಿಸಲಾಗಿರುವ ಉತ್ತರಗಳಂತೆ 1988–89 ನೇ ಸಾಲಿನಿಂದ 2013–14 ರ ಸಾಲಿನವರೆಗೆ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳನ್ನು ಪರಿಶೀಲಿಸಲಾಗಿ ಅನೇಕ ಕಂಡಿಕೆಗಳಿಗೆ ಸಂಬಂಧಿಸಿದ ಮೊತ್ತಗಳು ಈ ಹಿಂದೆಯೇ ತೀರುವಳಿ ಆಗಿದ್ದರೂ ಸಹ ಅವುಗಳನ್ನು ಬಾಕಿ ತ:ಖ್ತೆಯಲ್ಲಿ ಮುಂದುವರಿಸಿರುವ ಬಗ್ಗೆ; ಮತ್ತು ಜುಮ್ಲಾ ವ್ಯತ್ಯಾಸದಿಂದಾಗಿ ಹೆಚ್ಚಿನ ಮೊತ್ತಗಳನ್ನು ಬಾಕಿ ತೋರಿಸಿರುವ ಪ್ರಕರಣಗಳ ಪಟ್ಟಿಯನ್ನೂ ಸಹ 2014–15 ರ ಸಾಲಿನ ಅನುಸರಣಾ ವರದಿಯೊಂದಿಗೆ ಈಗಾಗಲೇ ಸಲ್ಲಿಸಲಾಗಿದೆ. ಈ ಸಂಬಂಧ 18 ಕಂಡಿಕೆಗಳ ಆಕ್ಷೇಪಣೆ ಮೊತ್ತ ರೂ5,05,61,067–00 ಮತ್ತು 31 ಕಂಡಿಕೆಗಳ ವಸೂಲಾತಿ ಮೊತ್ತ ರೂ92,24,347–15ಗಳನ್ನು ಅನುಬಂಧ (1)(ಬಿ) ಯ ಬಾಕಿ ತ:ಖ್ತೆಯಲ್ಲಿ ಕಡಿತಗೊಳಿಸಬೇಕಾಗಿ ಮೇಲಿನ ಉಲ್ಲೇಖಿತ ಪತ್ರ (2)ರಲ್ಲಿ ಕೋರಲಾಗಿತ್ತು. ಈ ಮೊತ್ತಗಳನ್ನು ಅನುಬಂಧ–1(ಬಿ)ಯ ತೀರುವಳಿಯಾಗದೇ ಬಾಕಿ ಇರುವ ತಃಖ್ತೆಯಲ್ಲಿ ಕಡಿತಗೊಳಿಸಿ ಪರಿಷ್ಕೃತ ತಃಖ್ತೆಯನ್ನು ಕಳುಹಿಸಿಕೊಡುವಂತೆ ಮತ್ತೊಮ್ಮೆ ಕೋರಲಾಗಿದೆ.<br><br>ಹಾಗೂ 2012–13 ಮತ್ತು 2014–15ರ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಮತ್ತು ಸಲ್ಲಿಸಿರುವ ಅನುಪಾಲನಾ ವರದಿಯ ಸಮರ್ಪಕ ಮತ್ತು ವಾಸ್ತವಿಕ ಅಂಶಗಳನ್ನು |

| | |
|---|---|
| | ಪರಿಗಣಿಸಿ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ತೀರುವಳಿಗೊಳಿಸಿಕೊಡಬೇಕೆಂದು ಹಾಗೂ ತೀರುವಳಿ ಪತ್ರ ಸಹ ಕಳುಹಿಸಿಕೊಡುವಂತೆ ತಮ್ಮಲ್ಲಿ ಕೋರಲಾಗಿದೆ. |
| 2. **ವಿಶ್ವವಿದ್ಯಾಲಯದ ವಿವಿಧ ಅಂಗ ಸಂಸ್ಥೆಗಳ ಆಕ್ಷೇಪಣೆ ಮತ್ತು ವಸೂಲಾತಿ ವಿವರದ ಬಗ್ಗೆ :-**<br>2015-16ನೇ ಆರ್ಥಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ವಿವಿಧ ಅಂಗ ಸಂಸ್ಥೆಗಳ ಲೆಕ್ಕ ತಪಾಸಣಾ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಅನುಬಂಧ-2ರಲ್ಲಿ ಸೂಚಿಸಲಾದ **ಆಕ್ಷೇಪಣೆ ಮೊತ್ತ ರೂ.157,73,26,172/- ಗಳು ಮತ್ತು ವಸೂಲಾತಿ ಮೊತ್ತ ರೂ.24,71,36,542/-ಗಳ** ವಿವರಗಳನ್ನು ನೀಡಲಾಗಿದೆ. ಬಾಕಿ ಇರುವ ವಸೂಲಾತಿ ಹಾಗೂ ಆಕ್ಷೇಪಣೆ ಕಂಡಿಕೆಗಳ ತ್ವರಿತ ಇತ್ಯರ್ಥದ ಬಗ್ಗೆ ತ್ವರಿತ ಕ್ರಮಜರುಗಿಸಿ ಅನುಪಾಲನಾ ವರದಿ ಸಲ್ಲಿಸುವುದು. | 2015-16 ನೇ ಸಾಲಿನ ವಿಶ್ವವಿದ್ಯಾನಿಲಯದ ವಿವಿಧ ಅಂಗ ಸಂಸ್ಥೆಗಳ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ಬಗ್ಗೆ ತ್ವರಿತ ಕ್ರಮವಹಿಸಿ ಕಂಡಿಕೆವಾರು ಉತ್ತರ ತಯಾರಿಸಿ ಹಣಕಾಸು ಅಧಿಕಾರಿಗಳ ಅಭಿಪ್ರಾಯದೊಂದಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ ಎಲ್ಲಾ ಅಂಗ ಸಂಸ್ಥೆಗಳಿಗೆ ಅಗತ್ಯ ಕ್ರಮವಹಿಸುವಂತೆ ಆದೇಶಿಸಲಾಗಿದೆ. |
| **ಭಾಗ – 2**<br>**ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣೆ**<br>**1. ವಾರ್ಷಿಕ ಲೆಕ್ಕ ತಪಾಸಣಾ ವರದಿ ಜಾರಿಗೊಳಿಸಿರುವುದು :-**<br>ಕರ್ನಾಟಕ ವಿಶ್ವವಿದ್ಯಾಲಯದ ಕಾಯಿದೆ 2000ರ ಅಧಿನಿಯಮ 47 (3)ರಂತೆ ಮೈಸೂರು ವಿಶ್ವವಿದ್ಯಾಲಯದ 2015-16ನೇ ವರ್ಷದ ಲೆಕ್ಕ ತಪಾಸಣಾ ವರದಿಯನ್ನು ಜಾರಿಗೊಳಿಸಿದೆ.<br>2015-16ನೇ ವಾರ್ಷಿಕ ಲೆಕ್ಕತನಿಖಾ ವರದಿಯನ್ನು ವಿಶ್ವವಿದ್ಯಾಲಯದ ಸ್ಟ್ಯಾಚ್ಯೂಟ್, ಆರ್ಡಿನೆನ್ಸ್‌ಗಳು, ರೆಗ್ಯುಲೇಷನ್ಸ್ ಹಾಗೂ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ, ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಮತ್ತು ಲೆಕ್ಕ ಪತ್ರಗಳ ಸಂಹಿತೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ನಿಯಮಗಳು 2000 ರಲ್ಲಿ ಅಡಕವಾಗಿರುವ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಈ ವರದಿಯನ್ನು ಸಿದ್ಧಪಡಿಸಲಾಗಿದೆ.<br>ಪ್ರಸಕ್ತ ಸಾಲಿನ ಲೆಕ್ಕ ತಪಾಸಣಾ ವರದಿಯಲ್ಲಿ ಸೂಚಿಸಲಾಗಿರುವ ಅಂಶಗಳಿಗೆ ವಿಶ್ವವಿದ್ಯಾಲಯದ ಕಾಯಿದೆ 2000ರ ಅಧಿನಿಯಮ 47 (4) ರ ಪ್ರಕಾರ ಕ್ರಮಕೈಗೊಳ್ಳಲಾಗಿದೆ. | ಮಾಹಿತಿಗಾಗಿ |
| 2. **ವಾರ್ಷಿಕ ಲೆಕ್ಕಪತ್ರವು ಅನುಮೋದನೆಯಾಗಿರುವ ಬಗ್ಗೆ :-**<br>ಕರ್ನಾಟಕ ವಿಶ್ವವಿದ್ಯಾನಿಲಯ ಕಾಯಿದೆ 2000ರ ಪ್ರಕರಣ 47(3) ರಂತೆ ಸಿಂಡಿಕೇಟ್‌ನಿಂದ ಅಂಗೀಕೃತಗೊಂಡ 2015-16ನೇ ವರ್ಷದ ವಾರ್ಷಿಕ ಲೆಕ್ಕಪತ್ರದ ಪ್ರತಿಯನ್ನು ಲೆಕ್ಕ ತಪಾಸಣೆಗೆ ಒದಗಿಸಿದೆ. | ಮಾಹಿತಿಗಾಗಿ |

| | |
|---|---|
| ವರದಿಯನ್ನು **ಅನುಬಂಧ–3 ರಲ್ಲಿ** ಲಗತ್ತಿಸಿದೆ.<br><br>ವಾರ್ಷಿಕ ಲೆಕ್ಕ ಪತ್ರವು ದಿನಾಂಕ:13.07.2016 ರಂದು ಹಣಕಾಸು ಸಮಿತಿಯಿಂದ, ದಿನಾಂಕ:25.07.2016 ರಂದು ಸಿಂಡಿಕೇಟ್ ಸಮಿತಿಯಿಂದ ಹಾಗೂ ದಿನಾಂಕ:28.07.2016 ರಂದು ವಿದ್ಯಾವಿಷಯಕ ಪರಿಷತ್‌ನಿಂದ ಅನುಮೋದನೆಯಾಗಿರುತ್ತದೆ. ಅನುಮೋದಿತ ಪ್ರತಿಗಳನ್ನು ಲಗತ್ತಿಸಿದೆ. | |
| **3. ವಿಶ್ವವಿದ್ಯಾನಿಲಯದ ನಿಧಿ :–**<br><br>ಕರ್ನಾಟಕ ವಿಶ್ವವಿದ್ಯಾನಿಲಯ ಕಾಯಿದೆ 2000ರ ಅಧಿನಿಯಮ 46ರ ಪ್ರಕಾರ ತನ್ನದೇ ಆದ ನಿಧಿಯನ್ನು ಹೊಂದಿದ್ದು, ಈ ನಿಧಿಗೆ ಸಂಬಂಧಿಸಿದ ಬ್ಯಾಂಕ್ ಖಾತಾ ವಿವರ, ರಾಜ್ಯ ಸರ್ಕಾರದಿಂದ ಬಂದಿರುವ ಅನುದಾನ, ಯು.ಜಿ.ಸಿ ಅಭಿವೃದ್ಧಿ ಶುಲ್ಕಗಳು ಮತ್ತು ಇತರೆ ಅನುದಾನಗಳ ಬಗ್ಗೆ ಬ್ಯಾಂಕಿನಲ್ಲಿ 34 ಯೋಜನೆಗಳ ಸ್ವೀಕೃತಿ ಮತ್ತು ಪಾವತಿ ವಿವರಗಳನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸಬೇಕಾಗಿರುತ್ತದೆ. ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯ್ದೆ ಅಧಿ ನಿಯಮ–2000ರಲ್ಲಿ ಅಧ್ಯಾಯ–VI ನಿಯಮ–46 ರಂತೆ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗುವ ಕೇಂದ್ರ ಸರ್ಕಾರದ ಅನುದಾನ/ರಾಜ್ಯ ಸರ್ಕಾರದ ಅನುದಾನ/ಕೊಡುಗೆಗಳು/ದತ್ತಿನಿಧಿ/ವಿವಿಧ ಶುಲ್ಕ/ವಿದೇಶಿ ಸರ್ಕಾರ/ಸಂಸ್ಥೆಗಳಿಂದ ಸ್ವೀಕೃತ ಅನುದಾನಗಳು ದೇಣಿಗೆ/ಇತರೆ ಸಂಪನ್ಮೂಲಗಳ ಮೊಬಲಗು ವಿಶ್ವವಿದ್ಯಾನಿಲಯದ ನಿಧಿಯಾಗಿದ್ದು, ವಿಶ್ವವಿದ್ಯಾನಿಲಯದಲ್ಲಿ ವಿವಿಧ ಯೋಜನೆ/ಪೀಠಗಳು ಹಾಗೂ ಯೋಜನಾ ಕಾರ್ಯಕ್ರಮಗಳನ್ನೊಳಗೊಂಡಂತೆ ಸಮಗ್ರ ನಿಧಿಗಳನ್ನು ಮಾಡಿ ಈ ನಿಧಿಯನ್ನು Sheduled Bank ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೊಡಗಿಸಬೇಕಾಗಿರುತ್ತದೆ. | ಮಾಹಿತಿಗಾಗಿ |
| **4. ಮೈಸೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರ (Delegation of Financial/Technical powers) ಆದೇಶ ಒದಗಿಸಿಲ್ಲದಿರುವುದು:– (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು/ಇಲಾಖಾ ಮುಖ್ಯಸ್ಥರುಗಳು/ಡ್ರಾಯಿಂಗ್ ಅಧಿಕಾರಿಗಳು/ಸ್ನಾತಕೋತ್ತರ ವಿಭಾಗ/ ಕೇಂದ್ರದ ಮುಖ್ಯಸ್ಥರುಗಳು ಇತರೆ ಅಧಿಕಾರಿಗಳು ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರದ ಅನುಮೋದನೆ ಪ್ರತಿಯನ್ನು (Delegation of Financial powers) ಲೆಕ್ಕತನಿಖೆಗೆ ಒದಗಿಸುವಂತೆ ಲೆಕ್ಕತನಿಖೆ ವಿಚಾರಣೆ ಸಂಖ್ಯೆ–108/ 04.01.2018 ರಲ್ಲಿ ಜಾರಿ ಮಾಡಲಾಗಿದ್ದು, ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಯಾವ್ಯಾವ ಅಧಿಕಾರಿಗಳು | ಸರ್ಕಾರದ ಇಲಾಖೆಗಳಲ್ಲಿ ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ, ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳಿಗೆ ಆಡಳಿತ ಹಿತದೃಷ್ಟಿಯಿಂದ ಆರ್ಥಿಕ ಪ್ರತ್ಯಾಧಿಕಾರಗಳನ್ನು ನೀಡಿರುವುದು ಸರಿಯಷ್ಟೆ.<br><br>ಆದರೆ ವಿಶ್ವವಿದ್ಯಾನಿಲಯದಲ್ಲಿ ಈ ರೀತಿ ವಿಂಗಡಣೆಗಳಿರುವುದಿಲ್ಲ. |

| | |
|---|---|
| ತಮ್ಮ ಅಧಿಕಾರದ ಮಿತಿಯಲ್ಲಿ ಅಥವಾ ಅಧಿಕಾರ ಮಿತಿ ಮೀರಿ ವೆಚ್ಚ ಮಾಡಿದ್ದಾರೆ ಎಂಬುದನ್ನು ವರದಿಯಲ್ಲಿ ದಾಖಲಿಸಲು ಸಾಧ್ಯವಾಗಿರುವುದಿಲ್ಲ. | ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆಯಲ್ಲಿನ ನಿಯಮಗಳಿಗನುಸಾರವಾಗಿ ವಿಶ್ವವಿದ್ಯಾನಿಲಯವು ಕಾರ್ಯನಿರ್ವಹಿಸುತ್ತಿದ್ದು ಕುಲಪತಿಗಳು, ಕುಲಸಚಿವರು(ಆಡಳಿತ), ಕುಲಸಚಿವರು(ಪರೀಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಗಳು ಶಾಸನಬದ್ಧ ಅಧಿಕಾರಿಗಳಾಗಿರುತ್ತಾರೆ.<br><br>ಕುಲಸಚಿವರು ಆಡಳಿತ ವ್ಯವಹಾರ, ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದಂತೆ ಕುಲಪತಿಗಳ ಒಪ್ಪಿಗೆ ಪಡೆದು ಮಂಜೂರಾತಿ ಆದೇಶ ನೀಡಿರುತ್ತಾರೆ.ಈ ಮಂಜೂರಾತಿಗಳು ಎಲ್ಲಾ ಅಂಗ ಸಂಸ್ಥೆಗಳಿಗೂ ಸಂಬಂಧಿಸಿರುತ್ತವೆ.ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾನಿಲಯಕ್ಕೆ ಡ್ರಾಯಿಂಗ್ ಅಧಿಕಾರಿಗಳಾಗಿದ್ದು; ಆಯವ್ಯಯ ತಯಾರಿಕೆ; ಹಣಕಾಸು ಡ್ರಾ ಮಾಡುವ ಮತ್ತು ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡುವ ಹಾಗೂ ಇವುಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರ ನಿರ್ವಹಣೆ ಎಲ್ಲವನ್ನೂ ಹಣಕಾಸು ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ ಹಣಕಾಸು ಅಧಿಕಾರಿಗಳನ್ನು ಹೊರತುಪಡಿಸಿ ಇನ್ನಾವುದೇ ಡ್ರಾಯಿಂಗ್ ಅಧಿಕಾರಿಗಳು ಇರುವುದಿಲ್ಲ. ಆಯಾ ವಿಭಾಗ, ಕಾಲೇಜು ಹಾಗೂ ಇತರೇ ಅಂಗ ಸಂಸ್ಥೆಗಳೆಲ್ಲವೂ ಕುಲಸಚಿವರಿಂದ ಆಡಳಿತಾತ್ಮಕ ಮಂಜೂರಾತಿ ಆದೇಶ ಪಡೆದು ಹಣ ಡ್ರಾ ಮಾಡಿ ವೆಚ್ಚ ಭರಿಸಿದ್ದು, ಹಣಕಾಸು ಶಾಖೆಗೆ ವೆಚ್ಚದ ವಿವರಗಳನ್ನು ಸಲ್ಲಿಸಿ ಅಂಗೀಕರಿಸಿಕೊಂಡಿರುತ್ತಾರೆ.<br><br>ಹಾಗಾಗಿ ಸರ್ಕಾರಿ ಇಲಾಖೆಗಳಲ್ಲಿರುವಂತೆ ಆರ್ಥಿಕ ಪ್ರತ್ಯಾಧಿಕಾರಗಳನ್ನು ನೀಡುವ ಕ್ರಮ ವಿಶ್ವವಿದ್ಯಾನಿಲಯದಲ್ಲಿ ಇರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸುತ್ತಾ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **5. <u>ಆಯವ್ಯಯ ಅಂದಾಜುಗಳಲ್ಲಿ 2015–16ನೇ ಸಾಲಿಗೆ ಆರಂಭಿಕ ಶಿಲ್ಕನ್ನು ತಪ್ಪಾಗಿ ತೆಗೆದುಕೊಂಡಿರುವ ಕುರಿತು:–</u>**<br><br>ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ಆಯವ್ಯಯ ಅಂದಾಜುಗಳು ಪರಿಶೀಲಿಸಿದಾಗ 2015–16ನೇ ಸಾಲಿಗೆ ಆರಂಭಿಕ ಶಿಲ್ಕನ್ನು ತಪ್ಪಾಗಿ ತೆಗೆದುಕೊಳ್ಳಲಾಗಿದೆ. 2014–15ರ ಸಾಲಿನ ಅಂತಿಮಶಿಲ್ಕು ಋಣಾತ್ಮಕ ಶಿಲ್ಕು ಆಗಿದ್ದು, 2015–16ನೇ ಸಾಲಿಗೆ ಆರಂಭಿಕ ಶಿಲ್ಕಾಗಿ ತೆಗೆದುಕೊಳ್ಳುವಾಗ ಕಡಿಮೆ **ರೂ. (–) 27,24,80,446/–** ತೆಗೆದುಕೊಳ್ಳಲಾಗಿದೆ. ಈ ರೀತಿ ಕಡಿಮೆ ನಮೂದಿಸಿರುವ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವಂತೆ ವಿಚಾರಣೆ ಸಂಖ್ಯೆ:94/02.01.2018 ರಲ್ಲಿ ಸೂಚಿಸಿದ್ದು, ನೀಡಿರುವ ಉತ್ತರವು ಸಮಂಜಸವಾಗಿರದ ಕಾರಣ ಹಾಗೂ ಸದರಿ ವ್ಯತ್ಯಾಸದ ಮೊತ್ತಕ್ಕೆ ಅನುಮೋದನೆ ಪಡೆದಿರುವ ವಿವರ ಮತ್ತು ಸೂಕ್ತ ಕಾರಣಗಳನ್ನು ಲೆಕ್ಕತನಿಖೆಗೆ ಒದಗಿಸುವಂತೆ ಸೂಚಿಸಿದೆ. ವ್ಯತ್ಯಾಸದ | 2015–16 ನೇ ಸಾಲಿನಲ್ಲಿ ತಪ್ಪಾಗಿ ತೆಗೆದುಕೊಂಡಿರುವ ಆರಂಭಿಕ ಶಿಲ್ಕು ಹಾಗೂ ಇನ್ನಿತರ ನ್ಯೂನತೆಗಳನ್ನು ಸರಿಪಡಿಸಿಕೊಂಡು ಮುಂದಿನ ಸಾಲುಗಳ ಆಯವ್ಯಯವನ್ನು ಕ್ರಮವಾಗಿ ನಿರ್ವಹಿಸಲು ಅಗತ್ಯ ಕ್ರಮ ವಹಿಸಲಾಗಿದೆ. |

ವಿವರ ಕೆಳಗಿನಂತಿದೆ.

**<u>2015–16ನೇ ಸಾಲಿನ ಆಯವ್ಯಯ ಅಂದಾಜಿನ ಪ್ರಕಾರ.</u>**

| ಕ್ರ ಸಂ | ಸ್ವೀಕೃತಿ ವಿವರ | ಮೊತ್ತ |
|---|---|---|
| 1 | 2014–15ರ ಆಯವ್ಯಯ ಅಂದಾಜಿನ ಪ್ರಕಾರ ಅಂತಿಮ ಶಿಲ್ಕು | (–)48,60,40,048 |
| 2. | 2015–16ರ ಆಯವ್ಯಯ ಅಂದಾಜಿನ ಆರಂಭ ಶಿಲ್ಕು | (–)21,35,59,602 |
| 3. | 2015–16ನೇ ಸಾಲಿನಲ್ಲಿ ನಿರೀಕ್ಷಿತ ಸ್ವೀಕೃತಿ | 190,96,40,398 |
| 4. | ವೆಚ್ಚ | 231,54,10,000 |
| 5. | 2015–16ನೇ ಸಾಲಿನ ಅಂತಿಮ ಶಿಲ್ಕು | (–)40,57,69,602 |

| | |
|---|---|
| 2014–15ನೇ ಸಾಲಿನ ಅಂತಿಮಶಿಲ್ಕು | (–) 48,60,40,048 |
| 2015–16ನೇ ಸಾಲಿನ ಆರಂಭ ಶಿಲ್ಕು | (–) 21,35,59,602 |
| **ವ್ಯತ್ಯಾಸ** | **(–)27,24,80,446** |

ವ್ಯತ್ಯಾಸದ ಮೊಬಲಗು ರೂ.**(–)27,24,80,446/–ಗಳ** ಮೊತ್ತವನ್ನು ಆರಂಭಿಕ ಶಿಲ್ಕು ತೆಗೆದುಕೊಳ್ಳುವಾಗ ಕೈಬಿಡಲಾಗಿರುವ ಬಗ್ಗೆ ಸೂಕ್ತ ವಿವರಣೆಯನ್ನು ಒದಗಿಸಲು ಸೂಚಿಸಿದೆ.

ಮೇಲಿನಂತೆ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಲಾಗಿ 2015–16ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ವಾಸ್ತವಿಕ ಸ್ವೀಕೃತಿ ಮತ್ತು ವೆಚ್ಚಗಳನ್ನು ಭರಿಸಿರುವ ಬಗ್ಗೆ ಹಾಗೂ ಋಣಾತ್ಮಕ ಶಿಲ್ಕು **(–)40,57,69,602/–ಗಳಿಗೆ** ದಾಖಲಿಸಿರುವುದಕ್ಕೆ ಅನುಮೋದನೆ ಪಡೆಯದಿರುವುದು ಕಂಡುಬಂದಿದೆ.

ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜನ್ನು ಪರಿಶೀಲಿಸಲಾಗಿ ಆಯವ್ಯಯ ಅಂದಾಜಿನಲ್ಲಿ ಜಿ.ಆರ್.ಎ ಖಾತೆ, ಶುಲ್ಕ ಮತ್ತು ಸಂಭಾವನೆ ಖಾತೆ, ಸಾಲ ಮತ್ತು ಮುಂಗಡ ಖಾತೆಯಿಂದ ಹಿಂಪಡೆತಗಳ ವೆಚ್ಚದ ಅಂದಾಜು ವಿವರಗಳನ್ನು ಮಾತ್ರ ತೆಗೆದುಕೊಳ್ಳಲಾಗಿದ್ದು, ಒಟ್ಟಾರೆ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜಿನ ಮೊತ್ತವನ್ನು ದಾಖಲಿಸಿ ಅನುಮೋದನೆಯನ್ನು ಪಡೆದಿಲ್ಲದಿರುವುದು ಹಾಗೂ ಪರಿಷ್ಕೃತ ಆಯವ್ಯಯ ಅಂದಾಜಿನ ಮೊತ್ತದ ಅನುಮೋದನೆಯನ್ನು ಪಡೆದಿಲ್ಲದಿರುವುದು ಸಹ ಲೆಕ್ಕತಪಾಸಣೆಯಲ್ಲಿ ಗಮನಿಸಿದೆ.

### 6. ಆಯವ್ಯಯ ಅಂದಾಜಿನಲ್ಲಿ ಹಂಚಿಕೆಯ ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚ ಭರಿಸಿರುವುದು:-

2015-16ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯ ಅಂದಾಜು (ಪರಿಷ್ಕೃತ) ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಪರಿಷ್ಕೃತ ಆಯವ್ಯಯ ಅಂದಾಜಿನಲ್ಲಿ ವಿವಿಧ ವಹಿವಾಟು ಸಂಖ್ಯೆಗಳಿಗೆ ಅನುದಾನ ನಿಗದಿಪಡಿಸಲಾಗಿದ್ದು, ಹಂಚಿಕೆ ಮಾಡಲಾದ ಮೊತ್ತಕ್ಕಿಂತ ಹೆಚ್ಚಿಗೆ ವೆಚ್ಚ ಭರಿಸಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಪರಿಷ್ಕೃತ ಆಯವ್ಯಯದಲ್ಲಿ ಕಲ್ಪಿಸಿರುವ ಅವಕಾಶಕ್ಕಿಂತ **ರೂ.15,77,11,982/-**ಗಳ ಅಧಿಕ ವೆಚ್ಚವನ್ನು ಭರಿಸಲಾಗಿದೆ. ಕರ್ನಾಟಕ ಬಜೆಟ್ ಕೈಪಿಡಿ ನಿಯಮ-246 ರಂತೆ ಮಂಜೂರಾದ ಅನುದಾನಕ್ಕೆ ಮೀರದಂತೆ ವೆಚ್ಚವನ್ನು ಭರಿಸಲು ಅಗತ್ಯಕ್ರಮ ಕೈಗೊಳ್ಳಬೇಕೆಂದು ನಿರ್ದೇಶನವಿರುತ್ತದೆ. ಹೆಚ್ಚುವರಿ ವೆಚ್ಚಕ್ಕೆ ಸಂಬಂಧಿಸಿದಂತೆ ಕ.ಆ. ಸಂಹಿತೆ ಅನುಚ್ಛೇದ-308 ರಂತೆ ಸಿಂಡಿಕೇಟ್ ಮತ್ತು ಸರ್ಕಾರದ ಪೂರ್ವಾನುಮೋದನೆ ಮತ್ತು ಹಣಕಾಸು ಸಮಿತಿ ಸಭೆಯ ಅನುಮೋದನಾ ಪ್ರತಿಗಳನ್ನು ಒದಗಿಸುವುದು.

ಪರೀಕ್ಷಾ ಖಾತೆ(02) ಯಡಿ ಲೆಕ್ಕಶೀರ್ಷಿಕೆ-155 ಕ್ಕೆ ಸಂಬಂಧಿಸಿದಂತೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ವೆಚ್ಚ ಭರಿಸಿರುವುದಕ್ಕೆ ಸೂಕ್ತ ಕಾರಣ (ಲೆಕ್ಕ ಶೀರ್ಷಿಕೆ 155-construction of bulidings 12,92,12,851/-) ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ಸೂಚಿಸಿದೆ. ವಿವರ ಕೆಳಗಿನಂತಿದೆ.

| ಸಾಮಾನ್ಯ ರೆವಿನ್ಯೂ ಖಾತೆ (01) | | | | | |
|---|---|---|---|---|---|
| **ಕ್ರ. ಸಂ** | **ವಹಿವಾಟು ಸಂಖ್ಯೆ** | **ಲೆಕ್ಕ ಶೀರ್ಷಿಕೆ** | **ಆಯವ್ಯಯ ಅಂದಾಜು ಪಟ್ಟಿ ಮೊತ್ತ** | **ವಾರ್ಷಿಕ ಲೆಕ್ಕಗಳ ಪ್ರಕಾರ ಪಟ್ಟಿ** | **ಹೆಚ್ಚು/ಕಡಿಮೆ** |
| 1 | 115 | ಕಛೇರಿ ಸಾದಿಲ್ವಾರು | 8200000 | 8659790 | (-) 459790 |

ವಿಶ್ವವಿದ್ಯಾನಿಲಯದಲ್ಲಿ 2015-16 ನೇ ಸಾಲಿನಲ್ಲಿ ಮಂಜೂರಾತಿಯಾದ ಆಯವ್ಯಯ ಅಂದಾಜು ಮೊತ್ತಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಭರಿಸಿರುವ ಸಂಬಂಧ ಆಯಾ ಶೀರ್ಷಿಕೆಯಡಿ ಹೆಚ್ಚುವರಿ ವೆಚ್ಚಗಳಿಗೆ ಮರುಹೊಂದಾಣಿಕೆ ಮಾಡಿಕೊಂಡು ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಲಾಗಿದೆ.

ಮುಂದಿನ ದಿನಗಳಲ್ಲಿ ಆದಷ್ಟು ಜಾಗ್ರತೆ ಅಂದಾಜಿನಲ್ಲಿ ಹಂಚಿಕೆಯಾಗಿರುವ ಮೊತ್ತಗಳಷ್ಟಕ್ಕೇ ಖರ್ಚುಗಳನ್ನು ಭರಿಸಲು ಅಗತ್ಯ ಕ್ರಮವಹಿಸಲಾಗುತ್ತದೆ.

| | | | | | |
|---|---|---|---|---|---|
| 2 | 117 | ಎಟಿಯು/ಸಿಎಯುಗೆ ವಂತಿಗೆ | 200000 | 300000 | (–) 100000 |
| 3 | 148 | ವಿಚಾರಗೋಷ್ಠಿ & ಸಮ್ಮೇಳನ | 1000000 | 1144914 | (–) 144914 |
| 4 | 135 | ಸಣ್ಣ ಕಾಮಗಾರಿಗಳು | 2000000 | 2043854<br>8 | (–) 438548 |
| 5 | 114 | ಪೀಠೋಪಕರಣಗಳು ಮತ್ತು ಸಾಧನ ಸಲಕರಣೆಗಳು | 1000000 | 1077516 | 77516 |
| 6 | 119 | ವಿದ್ಯುತ್ ಖರ್ಚು | 20000000 | 2007931<br>3 | 79313 |
| 7 | 130 | ಈಜುಕೊಳ ನಿರ್ವಹಣೆ | 600000 | 614832 | 14832 |
| 8 | 135 | ಫಲಪುಷ್ಪ ಪ್ರದರ್ಶನ | 30000 | 166753 | 136753 |
| 9 | 263 | ಭದ್ರತಾಸೇವೆ | 15000000 | 1913587<br>2 | 4135872 |
| 10 | 274 | ಶಾಲೆಯ ಹಂತದಲ್ಲಿ ಮೂಲ ವಿಜ್ಞಾನ | 500000 | 2505603 | 2005603 |
| 11 | 289 | ವಿದ್ಯಾರ್ಥಿನಿಲಯ | 3000000 | 6158514 | 5858514 |
| 12 | 182 | ಲೇಖನ ಸಾಮಗ್ರಿ ಅಮಾನತ್ತು ಲೆಕ್ಕ – ಮುದ್ರಣಾಲಯ | 1200000 | 1339549 | 139549 |
| | | | | ಒಟ್ಟು | **13591204** |

**ಪರೀಕ್ಷಾ ಖಾತೆ (02)**

| ಕ್ರ ಸಂ | ವಹಿವಾಟು ಸಂಖ್ಯೆ | ಲೆಕ್ಕಶೀರ್ಷಿಕೆ | ಆಯವ್ಯಯ ಅಂದಾಜು | ವಾರ್ಷಿಕ ಲೆಕ್ಕಗಳ ಪ್ರಕಾರ ವೆಚ್ಚ | ಹೆಚ್ಚುವರಿ ವೆಚ್ಚ |
|---|---|---|---|---|---|

| | | | | | |
|---|---|---|---|---|---|
| 1 | 101 ರಿಂದ 125 | ಅಧ್ಯಾಪಕರ ವೇತನ<br>ಅಧ್ಯಾಪಕೇತರರ ವೇತನ<br>ಆತಿಥ್ಯ ಭತ್ಯೆ<br>ತಾತ್ಕಾಲಿಕ ಅಧ್ಯಾಪಕೇತರರ ವೇತನ | 31583000 | 46490927 | 14907927 |
| 2 | 155 | Construction of Buildings | – | 129212851 | 129212851 |
| | | | | **ಒಟ್ಟು** | **144120778** |

| ಘೋಷ್ವಾರೆ | |
|---|---|
| ಸಾಮಾನ್ಯ ಖಾತೆ (01) | 13591204 |
| ಪರೀಕ್ಷಾ ಖಾತೆ (02) | 144120778 |
| **ಒಟ್ಟು** | **15,77,11,982** |

**ಯುವರಾಜ ಕಾಲೇಜು ಆಯವ್ಯಯ (Budget)**

**8. ಆಯ–ವ್ಯಯ ಅಂದಾಜುಗಳನ್ನು ಯುವರಾಜ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಎರಡೂ ಕಡೆಯಲ್ಲಿ ತಯಾರಿಸುತ್ತಿರುವ ಕುರಿತು :– (ಯುವರಾಜ ಕಾಲೇಜು)**

2015–16ನೇ ಸಾಲಿನ ಯುವರಾಜ ಕಾಲೇಜಿನ ವಿವಿಧ ಬ್ಯಾಂಕ್ ಖಾತೆಗಳು, ಆದಾಯ ಮತ್ತು ವೆಚ್ಚದ ವಿವರಗಳನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ ಖಾಯಂ ನೌಕರರ/ಖಾಯಂ ಬೋಧಕ ವರ್ಗದವರ ವೇತನ ಭತ್ಯೆಗಳನ್ನು, ಕಟ್ಟಡ ನಿರ್ವಹಣೆ, ವೈದ್ಯಕೀಯ ವೆಚ್ಚದ ಹುಂಡಿಗಳು, ನೌಕರರಿಗೆ ಮುಂಗಡ ಹುಂಡಿಗಳನ್ನು ಪಾವತಿಸಲು ಆಯ–ವ್ಯಯ ಅಂದಾಜುಗಳನ್ನು ವಾರ್ಷಿಕ ಲೆಕ್ಕಪತ್ರಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಆಯ–ವ್ಯಯ ಅಂದಾಜಿನಲ್ಲಿ ಅಂದಾಜು ಮಾಡಿ ವೆಚ್ಚ ಭರಿಸಲಾಗಿದೆ. ಯುವರಾಜ ಕಾಲೇಜಿನ ವತಿಯಿಂದ ಪ್ಲಾನ್ ಮತ್ತು ನಾನ್ ಪ್ಲಾನ್ ಎಂದು ಆಯ–ವ್ಯಯವನ್ನು ತಯಾರಿಸಿ ತಾತ್ಕಾಲಿಕ/ಸಂಚಿತ/ಅತಿಥಿ ಉಪನ್ಯಾಸಕರು ಮತ್ತು ಬೋಧಕೇತರ ನೌಕರರುಗಳಿಗೆ ವೇತನ ಭತ್ಯೆಗಳು, ಪ್ರಯೋಗಾಲಯಗಳ ರಾಸಾಯನಿಕ ಪರಿಕರಗಳು, ಪರೀಕ್ಷಾ ವೆಚ್ಚಗಳು ಹಾಗೂ ಕಾಲೇಜಿನ ದಿನನಿತ್ಯದ ವೆಚ್ಚಗಳಿಗೆ ಆಯ–ವ್ಯಯ ಅಂದಾಜನ್ನು ತಯಾರಿಸಿ ವೆಚ್ಚ ಭರಿಸುತ್ತಿರುವುದನ್ನು ಲೆಕ್ಕ ತನಿಖೆಯಲ್ಲಿ

ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಯಲ್ಲಿ ಯುವರಾಜ ಕಾಲೇಜು, ಮೈಸೂರು ಇದು ಸ್ವಾಯತ್ತ ಸಂಸ್ಥೆಯಾಗಿದ್ದು; ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳನ್ನು ಮಾತ್ರ ಕರ್ನಾಟಕ ಸರ್ಕಾರದ ಬ್ಲಾಕ್ ಗ್ರಾಂಟ್‌ನಿಂದಲೆ ಭರಿಸುತ್ತಿರುವುದರಿಂದ ಸದರೀ ವೆಚ್ಚಗಳಿಗೆ ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಅವಕಾಶ ಮಾಡಿಕೊಂಡು ಅಂದಾಜು ತಯಾರಿಸಲಾಗುತ್ತಿದೆ.

ಅಂತೆಯೇ ಉಳಿದೆಲ್ಲಾ ವೆಚ್ಚಗಳು ಅಂದರೆ ತಾತ್ಕಾಲಿಕ ನೌಕರರ ವೇತನ, ಸಾದಿಲ್ವಾರು ವೆಚ್ಚಗಳು, ಪ್ರಯೋಗಾಲಯ ನಿರ್ವಹಣೆ, ವೆಚ್ಚಗಳು ಹಾಗೂ ಇನ್ನಿತರ ವೆಚ್ಚಗಳನ್ನು ಕಾಲೇಜಿನ ಆರ್ಥಿಕ ಸಂಪನ್ಮೂಲದಿಂದಲೇ ಭರಿಸಬೇಕಾಗಿರುವುದರಿಂದ ಈ ವೆಚ್ಚಗಳ ಸಂಬಂಧ ಪ್ರತ್ಯೇಕ

| | |
|---|---|
| ಪರಿಶೀಲಿಸಲಾಗಿ ಒಂದು ಸಂಸ್ಥೆಯ ಆಯ–ವ್ಯಯವು ಪೂರ್ಣವಾಗಿ ಒಂದು ಕಡೆ ಆಯ–ವ್ಯಯ ಅಂದಾಜು ಮಾಡಿ ವೆಚ್ಚ ಭರಿಸಬೇಕಾಗಿರುತ್ತದೆ. ಆದರೆ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಯುವರಾಜ ಕಾಲೇಜುಗಳ ಎರಡರಲ್ಲಿಯೂ ಆಯವ್ಯಯ ಅಂದಾಜು ತಯಾರಿಸಿ ವೆಚ್ಚ ಮಾಡಿ ವಾರ್ಷಿಕ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿರುವ ಬಗ್ಗೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ:15/04.04.2018ರಲ್ಲಿ ಸೂಕ್ತ ವಿವರಣೆ ನೀಡುವಂತೆ ಕೋರಲಾಗಿ ಯಾವುದೇ ವಿವರಣೆಯನ್ನು ಹಾಗೂ ಕಡತಗಳನ್ನು ಹಾಜರುಪಡಿಸಿರುವುದಿಲ್ಲ.<br><br>ಯುವರಾಜ ಕಾಲೇಜಿಗೆ ಯು.ಜಿ.ಸಿ ವತಿಯಿಂದ ಶೈಕ್ಷಣಿಕ ಸ್ವಾಯತ್ತತೆಯನ್ನು ನೀಡಿ ಅಭಿವೃದ್ಧಿ ಕಾರ್ಯಗಳಿಗೆ ಅಭಿವೃದ್ಧಿ ಅನುದಾನವನ್ನು ನೀಡಲಾಗಿದೆ. ಆದರೆ ಆರ್ಥಿಕ ಸ್ವಾಯತ್ತತೆಯನ್ನು ಹಾಗೂ ಆಡಳಿತಾತ್ಮಕ ಸ್ವಾಯತ್ತತೆಯನ್ನು ಯು.ಜಿ.ಸಿ ವತಿಯಿಂದಾಗಲಿ ಸರ್ಕಾರದ ವತಿಯಿಂದಾಗಲೀ ನೀಡಿರುವ ಬಗ್ಗೆ ಯಾವುದೇ ಅಧ್ಯಾದೇಶಗಳು/ಆದೇಶಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಯುವರಾಜ ಕಾಲೇಜಿನಲ್ಲಿ ಶೈಕ್ಷಣಿಕ ಹಾಗೂ ಪರೀಕ್ಷಾ ಕಾರ್ಯಗಳಿಗೆ ಮಾತ್ರ ಸ್ವಾಯತ್ತತೆಯನ್ನು ನೀಡಲಾಗಿರುವುದರಿಂದ ಆರ್ಥಿಕ ಸ್ವಾಯತ್ತತೆ ನೀಡದಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದಲೇ ಅಂಗ ಸಂಸ್ಥೆಗಳಿಗೂ ಆಯ–ವ್ಯಯವನ್ನು ತಯಾರಿಸುವಂತೆ ಯುವರಾಜ ಕಾಲೇಜಿಗೆ ಸಂಬಂಧಿಸಿದ ಆರ್ಥಿಕ ವ್ಯವಹಾರಗಳ ಬಗ್ಗೆ ಆಯ–ವ್ಯಯವನ್ನು ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಆಯ–ವ್ಯಯ ತಯಾರಿಸದಿರುವ ಬಗ್ಗೆ ಸೂಕ್ತ ವಿವರಣೆಯನ್ನು ಲೆಕ್ಕ ತನಿಖೆಗೆ ನೀಡುವಂತೆ ಸೂಚಿಸಿದೆ. | ಅಂದಾಜನ್ನು ಆ ಕಾಲೇಜಿನಿಂದಲೇ ತಯಾರಿಸಿಕೊಳ್ಳಲಾಗುತ್ತಿದೆ.<br><br>ಹೀಗಾಗಿ, ಈ ಎರಡೂ ಕಡೆಯೂ ಆಯವ್ಯಯ ಅಂದಾಜು ತಯಾರಿಸಿ ಮಂಜೂರಾತಿ ಪಡೆದು ನಂತರ ಖರ್ಚುಗಳನ್ನು ಭರಿಸಲಾಗುತ್ತಿದೆ. ಯು.ಜಿ.ಸಿಯವರ ಪತ್ರ ಸಂಖ್ಯೆ ಎಫ್.22–1/2014/(ಎ.ಸಿ) ದಿನಾಂಕ 30–07–2014 ರನ್ವಯ ಸ್ವಾಯತ್ತತೆ ನೀಡಿರುವ ಪತ್ರದ ಪ್ರತಿ ಹಾಗೂ ಕರ್ನಾಟಕ ಸರ್ಕಾರದ ಸ್ಟ್ಯಾಚ್ಯೂಟ್ ಪತ್ರ ಸಂಖ್ಯೆ ಇ.ಡಿ.14 ಯು.ಎಂ.ಎಸ್ 2000 ದಿನಾಂಕ 4–9–2000ರ ಪ್ರತಿಯನ್ನು ಈ ಕೂಡ ಸಲ್ಲಿಸುತ್ತಾ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **<u>ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರ</u>**<br><br>**9. <u>ವಿಶ್ವವಿದ್ಯಾನಿಲಯದ ಹಣಕಾಸು ಸ್ಥಿತಿ:–</u>**<br><br>ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮದ ಪ್ರಕರಣ 29(h), ಪ್ರಕರಣ 32(2), 32(3)ರ ಪ್ರಕಾರ 2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ನಿರ್ವಹಿಸಲಾಗುತ್ತಿರುವ 40 ಲೆಕ್ಕಶೀರ್ಷಿಕೆಗಳ ಖಾತೆಗಳಲ್ಲಿನ ಒಟ್ಟು ಹಣಕಾಸಿನ (ಆರ್ಥಿಕ) ಸ್ಥಿತಿಯ ವಿವರಗಳನ್ನು **<u>ಅನುಬಂಧ–4ರಲ್ಲಿ</u>** ನೀಡಲಾಗಿದೆ. | ಮಾಹಿತಿಗಾಗಿ |

10. **2015–16ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ ಹಾಜರು ಪಡಿಸಲಾದ ಬ್ಯಾಂಕ್ ಸ್ಕ್ರೋಲ್‌ಗಳ ಪ್ರಕಾರ ಆರ್ಥಿಕ ಪರಿಸ್ಥಿತಿ ಘೋಷ್ವಾರೆ :–**

**2015–16ನೇ ಸಾಲಿನ ವಾರ್ಷಿಕ ಲೆಕ್ಕಗಳ ಪ್ರಕಾರ**

| ಕ್ರ.ಸಂ | ಸ್ವೀಕೃತಿ ವಿವರ | ಮೊತ್ತ |
|---|---|---|
| 1 | ಪ್ರಾರಂಭಿಕ ಶಿಲ್ಕು | 195,99,13,565.37 |
| 2 | ವಾರ್ಷಿಕ ಲೆಕ್ಕಗಳ ಪ್ರಕಾರ ಸ್ವೀಕೃತಿ | 484,59,98,576.00 |
| 3 | **ಒಟ್ಟು** | **680,59,12,141.37** |
| 4 | ವೆಚ್ಚ | 415,65,66,782.00 |
| 5 | **ದಿನಾಂಕ: 31.03.2016ರ ಅಂತಿಮ ಶಿಲ್ಕು** | **264,93,45,359.37** |

**2015–16ನೇ ಸಾಲಿನ ಆಯವ್ಯಯ ಅಂದಾಜಿನ ಪ್ರಕಾರ.**

| ಕ್ರ.ಸಂ | ಸ್ವೀಕೃತಿ ವಿವರ | ಮೊತ್ತ |
|---|---|---|
| 1 | 2014–15ರ ಆಯವ್ಯಯ ಅಂದಾಜಿನ ಪ್ರಕಾರ ಅಂತಿಮ ಶಿಲ್ಕು | (–)486040048 |
| 2. | 2015–16ರ ಆಯವ್ಯಯ ಅಂದಾಜಿನ ಆರಂಭ ಶಿಲ್ಕು | (–)213559602 |
| 3. | 2015–16ನೇ ಸಾಲಿನಲ್ಲಿ ನಿರೀಕ್ಷಿತ ಸ್ವೀಕೃತಿ | 1909640398 |
| 4. | ವೆಚ್ಚ | 2315410000 |
| 5. | 2015–16ನೇ ಸಾಲಿನ ಅಂತಿಮ ಶಿಲ್ಕು | (–)40,57,69,602 |

ಮೇಲಿನಂತೆ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಲಾಗಿದೆ. 2015–16ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ವಾಸ್ತವಿಕ ಸ್ವೀಕೃತಿ ಮತ್ತು ವೆಚ್ಚಗಳನ್ನು ಭರಿಸಿರುವ ಬಗ್ಗೆ ಸರ್ಕಾರದಿಂದ ಪರಿಷ್ಕೃತ ಅನುಮೋಧನೆ ಪಡೆಯದಿರುವುದು ಕಂಡುಬಂದಿದೆ. ವಿವರಗಳನ್ನು **ಅನುಬಂಧ–5ರಲ್ಲಿ** ವಿವರಿಸಿದೆ.

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದದ ಹಾಗೂ ವಿಶ್ವವಿದ್ಯಾನಿಲಯದ ಅಧಿನಿಯಮ 47 ರ ಪ್ರಕಾರ ಪ್ರತಿ ಮಾಹೆ ವಿಶ್ವವಿದ್ಯಾನಿಲಯದಲ್ಲಿ ಸ್ವೀಕೃತಿ ಮತ್ತು ವೆಚ್ಚದ ಲೆಕ್ಕಗಳನ್ನು ಮುಂದಿನ ಮಾಹೆಯ 10ನೇ ತಾರೀಕಿನೊಳಗೆ ಲೆಕ್ಕ ಶೀರ್ಷಿಕೆವಾರು ವೆಚ್ಚದ ಪಟ್ಟಿಯೊಂದಿಗೆ ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದ (ಹಣಕಾಸು ಮತ್ತು ಸಂಡಿಕೇಟ್ ಸಭೆಯ) ಅನುಮೋದನೆ ಪಡೆದು ಪ್ರಾಂತೀಯ ಕಛೇರಿಗೆ ಮಾಸಿಕ ಸ್ವೀಕೃತಿ

ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಆಯವ್ಯಯ ಅಂದಾಜು ಮತ್ತು ವಾಸ್ತವಿಕ ಸ್ವೀಕೃತಿ ಮತ್ತು ವೆಚ್ಚಗಳನ್ನು ಭರಿಸುವ ಬಗ್ಗೆ ಅನುಮೋದನೆ ನೀಡುವುದು ಸಿಂಡಿಕೇಟ್ ಸಭೆಯ ವ್ಯಾಪ್ತಿಗೆ ಇರುವುದರಿಂದ ಆಯವ್ಯಯಕ್ಕೆ ಹಾಗೂ ಸ್ವೀಕೃತಿ ಮತ್ತು ವೆಚ್ಚಗಳ ಅಂದಾಜಿಗೆ ಸರ್ಕಾರದ ಅನುಮೋದನೆ ಪಡೆಯಲಾಗುತ್ತಿಲ್ಲ.

ಮಾಹೆವಾರು ಲೆಕ್ಕಗಳನ್ನು ತಯಾರಿಸಿ ತನಿಖಾ ಕಛೇರಿಗೆ ಸಲ್ಲಿಸುವುದರ ಕುರಿತು ಕ್ರಮವಹಿಸಲಾಗುತ್ತದೆ.

ಮತ್ತು ವೆಚ್ಚದ ಲೆಕ್ಕಗಳನ್ನು ಸಲ್ಲಿಸದಿರುವುದನ್ನು ಗಮನಿಸಿದೆ. ಈ ಬಗ್ಗೆ ಲೆಕ್ಕ ತನಿಖಾ ಸಂದರ್ಭದಲ್ಲಿ ಹಾಗೂ ಪತ್ರ ಮುಖೇನ ತಿಳಿಸಿದ್ದಾಗ್ಯೂ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಸ್ವೀಕೃತಿ ಮತ್ತು ವೆಚ್ಚಗಳ ಸಂಕಲನ ಮತ್ತು ಸಮನ್ವಯವನ್ನು ಮಾಡದ ಕಾರಣದಿಂದಾಗಿ ಒಟ್ಟಾರೆ ವಿಶ್ವವಿದ್ಯಾನಿಲಯದ ಆಯವ್ಯಯ ಮತ್ತು ವಾರ್ಷಿಕ ಲೆಕ್ಕಗಳಲ್ಲಿ ಆರಂಭ ಶಿಲ್ಕು, ಸ್ವೀಕೃತಿ, ಒಟ್ಟು ವೆಚ್ಚದ ಹಾಗೂ ಅಂತಿಮ ಶಿಲ್ಕು ತಾಳೆಯಾಗದ ಕಾರಣ ವಾರ್ಷಿಕ ಲೆಕ್ಕವನ್ನು ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವುದು.

**ವಿವಿಧ ಖಾತೆಗಳ ನಗದು ಪುಸ್ತಕ ಕುರಿತು :–**

2015–16ನೇ ಸಾಲಿನ ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳ ನಗದು ಪುಸ್ತಕಗಳನ್ನು ಪರಿಶೀಲಿಸಿದಾಗ ನಗದು ವಹಿವಾಟಿನ ವಿವರ ಕೆಳಗಿನಂತೆ ವಿವರಿಸಿದೆ.

**2015–16ನೇ ಸಾಲಿನ ನಗದು ಪುಸ್ತಕದ ರೀತ್ಯ**

| | |
|---|---|
| ದಿನಾಂಕ:01.04.2015ಕ್ಕೆ ಪ್ರಾರಂಭಿಕ ಶಿಲ್ಕು | 38,61,45,879.72 |
| ಸ್ವೀಕೃತಿ | 951,79,41,317.65 |
| ಒಟ್ಟು | 99,04,87,196.91 |
| ವೆಚ್ಚ | 968,71,46,054.64 |
| ದಿನಾಂಕ:31.03.2016ಕ್ಕೆ ಅಂತಿಮ ಶಿಲ್ಕು | 21,69,41,142.27 |

**2015–16ನೇ ಸಾಲಿನ ಪಾಸ್ ಪುಸ್ತಕದಂತೆ**

| | |
|---|---|
| Closing balance as per passbook | 66,79,96,947.76 |
| Closing balance as per cashbook | 45,50,01,329.31 |
| difference | 21,29,95,618.45 |

2015–16ನೇ ಸಾಲಿನ ನಗದು ಪುಸ್ತಕ ಅಂತಿಮ ಶಿಲ್ಕು ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ಅಂತಿಮ ಶಿಲ್ಕುಗಳನ್ನು ಪರಿಶೀಲಿಸಿದಾಗ ವ್ಯತ್ಯಾಸ ಕಂಡುಬಂದಿದ್ದು, ಈ ಕುರಿತು ಸೂಕ್ತ ವಿವರಣೆ ನೀಡಲು ಸೂಚಿಸಿದೆ. ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳ ಲೆಕ್ಕಗಳನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಕ್ರಮಬದ್ಧವಾಗಿ ಸಮನ್ವಯಗೊಳಿಸಿರುವುದಿಲ್ಲ. ಇದರಿಂದಾಗಿ ವಿವಿಧ ಖಾತೆಗಳ ವಾಸ್ತವ ಆರ್ಥಿಕ ಸ್ಥಿತಿಯನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಕ್ರಮ ಅಗತ್ಯ.

| | |
|---|---|
| **ವಿಶ್ವವಿದ್ಯಾನಿಲಯದ ಹೂಡಿಕೆಗಳು (F.D.R)**<br>**11 ಠೇವಣಿ ಹೂಡಿಕೆಗಳ ಆರ್ಥಿಕ ಪರಿಸ್ಥಿತಿ (ಎಫ್.ಡಿ. ಆರ್):–**<br><br>2015–16ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಗಳ ರೀತ್ಯಾ ಹೂಡಿಕೆ ಮಾಡಿರುವ ಠೇವಣಿಗಳ ಘೋಷ್ವಾರೆ ಕೆಳಕಂಡಂತೆ ಇದ್ದು **ಅನುಬಂಧ–6** ರಲ್ಲಿ ನೀಡಲಾಗಿದೆ.<br><br>ಪ್ರಾರಂಭಿಕ ಶಿಲ್ಕು (as per annual accounts 2014–15): 1,63,90,53,973.56<br>ಠೇವಣಿಗಳ ಹೂಡಿಕೆಗಳು 2015–16: 2,30,57,01,564.00<br>**ಒಟ್ಟು ರೂ.: 3,94,47,55,537.56**<br>ಹಿಂಪಡೆತದ ಮೊತ್ತ: (–) 179,05,90,762.00<br>215,41,64,775.56<br>ನವೀಕರಿಸಿದ ಮೊಬಲಗು: (+) 5,24,24,097.00<br>ದಿನಾಂಕ:31.03.2016ರ ಅಂತಿಮ ಶಿಲ್ಕು: 220,65,88,872.03<br><br>2015–16ನೇ ಸಾಲಿನ ಲೆಕ್ಕ ತನಿಖಾ ಸಂದರ್ಭದಲ್ಲಿ ನಿಶ್ಚಿತ ಠೇವಣಿಗಳ ವಿವರಗಳನ್ನು ಪರಿಶೀಲಿಸಿದಾಗ ಲೆಕ್ಕ ಪರಿಶೋಧನೆಗೆ ರೂ.230,57,01,564/– ಠೇವಣಿಯ ಮೂಲ ರಶೀತಿಗಳನ್ನು ಮತ್ತು ಭಾಗಶಃ ಠೇವಣಿ ವಹಿಯೊಂದಿಗೆ ಹಾಜರುಪಡಿಸಲಾಗಿದೆ. ಆದರೆ, 2015–16ನೇ ಸಾಲಿನ ಹೂಡಿಕೆ ಠೇವಣಿ ಮೊತ್ತ ರೂ.230,57,01,564/–ಗಳಿಗೆ ಠೇವಣಿ ಪತ್ರಗಳನ್ನು ಹೂಡಿಕೆ ಮಾಡಲಾದ ವಿವಿಧ ಬ್ಯಾಂಕ್‌ಗಳಿಂದ ಪ್ರಮಾಣಿಕೃತ ಪತ್ರಗಳನ್ನು (confirmation letter) ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಸೂಚಿಸಿದೆ.<br><br>ವಿಶ್ವವಿದ್ಯಾನಿಲಯದಲ್ಲಿ ಒಟ್ಟು ಹೂಡಿಕೆ ಮಾಡಿರುವ ರೂ.230,57,01,564/– ನಿಶ್ಚಿತ ಠೇವಣಿಗಳ ಪ್ರಮಾಣ ಪತ್ರವನ್ನು ಬ್ಯಾಂಕ್ ಠೇವಣಿಗಳೊಂದಿಗೆ ಸಂಕಲಿಸಿ ಸಂಬಂಧಪಟ್ಟ ಬ್ಯಾಂಕ್‌ಗಳಿಂದ ದೃಢೀಕೃತ ಪ್ರಮಾಣ ಪತ್ರಗಳನ್ನು (confirmation letter) ಪಡೆದು ಲೆಕ್ಕ ಪರಿಶೋಧನೆಗೆ ಒದಗಿಸುವಂತೆ ಸೂಚಿಸಿದೆ. | ವಿವಿಧ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲಾದ ಎಫ್.ಡಿ.ಆರ್.ಗಳಿಗೆ ಸಂಬಂಧಿಸಿದಂತೆ ಆಯಾ ಬ್ಯಾಂಕ್‌ಗಳಿಂದ ಅವಶ್ಯಕ ದೃಢೀಕರಣ ಪತ್ರಗಳನ್ನು ಪಡೆದು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗುತ್ತದೆ. |
| **12. ಠೇವಣಿಗಳ ಮೇಲಿನ ಬಡ್ಡಿ ನಷ್ಟ ಕುರಿತು :–** | |

| | |
|---|---|
| ವಿಶ್ವವಿದ್ಯಾನಿಲಯದ ಠೇವಣಿ ವಿವರಗಳನ್ನು ಪರಿಶೀಲಿಸಿದಾಗ ವಿವಿಧ ಬ್ಯಾಂಕ್‌ಗಳಲ್ಲಿ 2015-16ನೇ ಸಾಲಿಗೆ ಒಟ್ಟು 443 ಸಂಖ್ಯೆ ಠೇವಣಿ ಹೂಡಿಕೆ ಮಾಡಿರುವುದು ಕಂಡು ಬಂದಿದ್ದು, ಠೇವಣಿ ಹೂಡುವಾಗ ಗರಿಷ್ಠ ಬಡ್ಡಿ ಮೊತ್ತ ನೀಡುವ ಬ್ಯಾಂಕಿಗೆ ಠೇವಣಿಯನ್ನು ಹೂಡಿಕೆ ಮಾಡದೆ ಕಡಿಮೆ ದರ ಬಡ್ಡಿ ನೀಡುವ ಬ್ಯಾಂಕಿನಲ್ಲಿ ಹೂಡಿಕೆ ಮಾಡಿರುವುದು ಕಂಡುಬಂದಿದೆ. ಸ್ಪರ್ಧಾತ್ಮಕ ಬಡ್ಡಿದರ ನೀಡುವ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಟೆಂಡರ್ ಕರೆದು ಹೂಡಿಕೆ ಮಾಡಿದ್ದರೆ ವಿಶ್ವ ವಿದ್ಯಾನಿಲಯಕ್ಕೆ ಹೆಚ್ಚಿನ ಹಣ ಜಮೆಯಾಗಿ ಈಗ ಇದರಿಂದ ಆಗಿರುವ ಆರ್ಥಿಕ ನಷ್ಟವನ್ನು ತಪ್ಪಿಸಬಹುದಾಗಿತ್ತು.<br><br>2015-16ನೇ ಸಾಲಿಗೆ ಒಟ್ಟು ರೂ.230,57,01,564/- ಹೂಡಿಕೆ ಮಾಡಲಾಗಿದ್ದು, ಠೇವಣಿ (FDR)ಗಳನ್ನು ಲೆಕ್ಕಪರಿಶೋಧನೆಗೆ ನೀಡಿದ್ದು, ರೂ.84.00 ಕೋಟಿಗಳನ್ನು ವಾರ್ಷಿಕ ಶೇ 6.25%ರ ಬಡ್ಡಿ ದರದಲ್ಲಿ ತೊಡಗಿಸಲಾಗಿದೆ. ಇಷ್ಟು ಮೊತ್ತವನ್ನು ಠೇವಣಿ ಇಡುವಾಗ ಸರ್ಕಾರದ ಆದೇಶಗಳ ಪ್ರಕಾರ ಟೆಂಡರ್ ಕರೆದು ಸ್ಪರ್ಧಾತ್ಮಕ ದರದಲ್ಲಿ ಬಡ್ಡಿ ಪಡೆದಿದ್ದರೆ ಶೇ 9% ಬಡ್ಡಿ ಬರಬಹುದಾಗಿರುತ್ತದೆ. ಟೆಂಡರ್ ಕರೆಯದೆ ಇರುವುದರಿಂದ ಶೇ 2.75 (9.00-6.25) ರಷ್ಟು ದರದಲ್ಲಿ ಬಡ್ಡಿ ನಷ್ಟವಾಗಿರುತ್ತದೆ. ಇದರ ಮೊತ್ತವು ರೂ.2,31,00,000/-ಗಳು ವಿಶ್ವವಿದ್ಯಾನಿಲಯಕ್ಕೆ ಆದಾಯ ತಪ್ಪಿದಂತಾಗಿರುತ್ತದೆ. ಅದೇ ರೀತಿ ರೂ.146.12 ಕೋಟಿಗಳನ್ನು ಶೇ 7.75ರ ಬಡ್ಡಿ ದರದಲ್ಲಿ ತೊಡಗಿಸಲಾಗಿದ್ದು, ಇದನ್ನು ಸಹ ಟೆಂಡರ್ ಕರೆದು ಹೂಡಿಕೆ ಮಾಡಿದರೆ ಶೇ 9% ರ ಬಡ್ಡಿ ದರ ಬರಬಹುದಾಗಿರುತ್ತದೆ. ಆದರೆ ಟೆಂಡರ್ ಕರೆಯದೆ ಶೇ 7.75%ರ ಬಡ್ಡಿ ದರದಲ್ಲಿ ತೊಡಗಿಸಿದ್ದರಿಂದ ಶೇ 1.75% ದರದ ಬಡ್ಡಿ ನಷ್ಟವಾಗಿರುತ್ತದೆ. ಇದರ ಮೊತ್ತವು ರೂ.1,82,65,082/- ಬಡ್ಡಿ ನಷ್ಟವಾಗಿರುತ್ತದೆ.<br><br>ಠೇವಣಿ ಹೂಡಿಕೆಯಿಂದ ಕಡಿಮೆ ಬಡ್ಡಿದರದಲ್ಲಿ ಉಂಟಾದ ಆರ್ಥಿಕ ನಷ್ಟವಾದ ರೂ. 2,31,00,000+1,82,65,082= **4,13,65,082/-ಗಳ** ಬಡ್ಡಿಯನ್ನು ಸಂಬಂಧಿಸಿದ ಅಧಿಕಾರಿಗಳಿಂದ ವಸೂಲಿ ಮಾಡಿಕೊಳ್ಳುವುದು ಹಾಗೂ ಸ್ಪರ್ಧಾತ್ಮಕ ಬಡ್ಡಿ ದರ ಪಡೆಯದೆ ಠೇವಣಿ ಇಡಲು ಕಾರಣರಾದವರ ವಿರುದ್ಧ ಕ್ರಮಕೈಗೊಳ್ಳುವುದು. | 2015-16 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ನಿಧಿಯಿಂದ ಹೂಡಿಕೆ ಮಾಡಲಾದ ಠೇವಣಿಗಳ ಸಂಬಂಧ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳ ಅಧಿಕಾರಿಗಳಿಂದ ಅವರು ನೀಡಬಹುದಾದ ಶೇಖಡವಾರು ಬಡ್ಡಿದರದ ಬಗ್ಗೆ ಮಾಹಿತಿ ಪಡೆದು ಅತೀ ಹೆಚ್ಚಿನ ಶೇಖಡವಾರು ಬಡ್ಡಿದರ ನೀಡಬಹುದಾದ ಬ್ಯಾಂಕ್‌ಗಳಲ್ಲಿ ಹೂಡಿಕೆಗಳನ್ನು ಮಾಡಲಾಗಿದೆ.ಅಂದರೆ ಶೇಖಡವಾರು ಬಡ್ಡಿ 7.75 ದರದಲ್ಲಿ ತೊಡಗಿಸಲಾಗಿದೆ.ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಶೇಖಡವಾರು ಬಡ್ಡಿದರಗಳನ್ನು ಕಡಿಮೆ ಮಾಡುತ್ತಿರುವ ವಿಚಾರಗಳನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.ತನಿಖಾ ವರದಿಯಲ್ಲಿ ತಿಳಿಸಿರುವಂತೆ ಶೇಖಡ 9%ರ ದರದಲ್ಲಿ ಬಡ್ಡಿ ನೀಡಲು ಯಾರೂ ಮುಂದೆ ಬಂದಿರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಇನ್ನು ಮುಂದೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಟೆಂಡರ್ ಕರೆದು ಹೆಚ್ಚಿನ ಬಡ್ಡಿದರ ನೀಡುವ ಬ್ಯಾಂಕ್‌ಗಳಲ್ಲಿ ಹಣ ತೊಡಗಿಸಲಾಗುವುದು.<br><br>ಆದ್ದರಿಂದ ರೂ.4,13,65,082-00ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **13. <u>ವಿಶ್ವವಿದ್ಯಾನಿಲಯದ ನಿಶ್ಚಿತ ಠೇವಣಿಯ ವಹಿಯನ್ನು ಹಾಜರುಪಡಿಸದಿರುವುದು :-</u>**<br><br>ಮೈಸೂರು ವಿಶ್ವವಿದ್ಯಾನಿಲಯದ 2015-16ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಖಾತೆಗಳಲ್ಲಿ ಠೇವಣಿ ಹೂಡಿಕೆ ಮಾಡಿದ್ದು, ಇದಕ್ಕೆ ಸಂಬಂಧಿಸಿದಂತೆ ಠೇವಣಿ ವಹಿಗಳನ್ನು ಹಾಜರುಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:100 ದಿನಾಂಕ:02.01.2018 ರಲ್ಲಿ ಕೋರಲಾಗಿತ್ತು. ಭಾಗಶಃ ನಿರ್ವಹಿಸಿರುವ ಠೇವಣಿ ವಹಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದ್ದು ಕರ್ನಾಟಕ ಆರ್ಥಿಕ | ಈ ಕಂಡಿಕೆಯಲ್ಲಿನ ಸೂಚನೆಯನ್ವಯ ನಿಶ್ಚಿತ ಠೇವಣಿ ವಹಿಯನ್ನು ನಿರ್ವಹಿಸಿ ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗುವುದು. |

<table>
<tr>
<td>

ಸಂಹಿತೆ **ಅನುಚ್ಛೇದ–9** ರ ಪ್ರಕಾರ ಲೆಕ್ಕಶೀರ್ಷಿಕೆಗಳ ಠೇವಣಿ ವಹಿ ನಿರ್ವಹಿಸಬೇಕಾಗಿರುತ್ತದೆ. ಹಿಂದಿನ ಸಾಲಿನ ಠೇವಣಿಯ (ವಾರ್ಷಿಕ ಲೆಕ್ಕಪತ್ರಗಳನ್ವಯ) ಅಂತಿಮ ಶಿಲ್ಕು 2015–16ರ ಪ್ರಾರಂಭಿಕ ಶಿಲ್ಕಿನೊಂದಿಗೆ ಹೊಂದಾಣಿಕೆಯಾಗುತ್ತಿಲ್ಲದಿರುವುದು ಕಂಡು ಬಂದಿದೆ.

| | |
|---|---|
| 2015–16 ರ ವಾರ್ಷಿಕ ಲೆಕ್ಕಪತ್ರಗಳನ್ವಯ ಎಫ್.ಡಿ.ಆರ್ ಗಳ ಪ್ರಾರಂಭಿಕ ಶಿಲ್ಕು | ರೂ. 1,63,90,53,973.56 |
| 2014–15ರ ಸಾಲಿನ ಎಫ್.ಡಿ.ಆರ್‌ಗಳ ಅಂತಿಮ ಶಿಲ್ಕು (ದಿನಾಂಕ:01.04.2015ರ ಆರಂಭಿಕ ಶಿಲ್ಕು) | ರೂ. 1,03,83,65,934.10 |
| **ವ್ಯತ್ಯಾಸ** | **ರೂ.60,06,88,039.46** |

ಮೇಲಿನಂತೆ ಅಂತಿಮ ಶಿಲ್ಕು ಹಾಗೂ ಪ್ರಾರಂಭಿಕ ಶಿಲ್ಕುಗಳ ವಿವರಗಳನ್ನು ಪರಿಶೀಲಿಸಿದಾಗ ರೂ.60,06,88,039.46/–ಗಳ ವ್ಯತ್ಯಾಸ ಕಂಡುಬಂದಿದ್ದು ವ್ಯತ್ಯಾಸದ ವಿವರಣೆಯನ್ನು ಒದಗಿಸುವಂತೆ ಸೂಚಿಸಿದೆ. ವ್ಯತ್ಯಾಸ ಮೊಬಲಗಿಗೆ ನಿಶ್ಚಿತ ಠೇವಣಿ ಮೊತ್ತದ ಲೆಕ್ಕಗಳೊಂದಿಗೆ ಲೆಕ್ಕ ಸಮನ್ವಯಗೊಳಿಸಿ ವ್ಯತ್ಯಾಸವನ್ನು ಸರಿಪಡಿಸುವುದು ಹಾಗೂ ಅನುಪಾಲನಾ ವರದಿ ನೀಡುವುದು.

</td>
<td></td>
</tr>
<tr>
<td>

**ವಾರ್ಷಿಕ ಲೆಕ್ಕಗಳು**

**14. 2015–16ನೇ ವಾರ್ಷಿಕ ಲೆಕ್ಕಗಳಲ್ಲಿನ ನ್ಯೂನತೆಗಳು :–**

1. ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿ ಹೂಡಿಕೆಗಳ ವಿವರಗಳನ್ನು ದಾಖಲಿಸಿರುವುದಿಲ್ಲ.
2. ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಪರಿಶೀಲಿಸಿದಾಗ ವಿವರಗಳು ಅನುಬಂಧ–7 ರಲ್ಲಿ ತಿಳಿಸಿರುವ 14 ಖಾತೆಗಳಲ್ಲಿ 2012 ರಿಂದಲೂ (wrongly credited) ತಪ್ಪು ಜಮೆ ಮತ್ತು ತಪ್ಪು ಖರ್ಚು (wrongly debited) ಕಂಡು ಬಂದಿರುತ್ತದೆ. ಸದರಿ ಲೆಕ್ಕಗಳನ್ನು ಸರಿಪಡಿಸಿ ವಾರ್ಷಿಕ ಲೆಕ್ಕಗಳೊಂದಿಗೆ ತಾಳೆ ಮಾಡಿ ಲೆಕ್ಕಪರಿಶೋಧನೆಗೆ ಒದಗಿಸುವಂತೆ ಸೂಚಿಸಿದೆ.

</td>
<td>

ಈ ಕಂಡಿಕೆಯಲ್ಲಿ ಸೂಚಿಸಿರುವ ನ್ಯೂನತೆಗಳನ್ನು ವಾರ್ಷಿಕ ಲೆಕ್ಕಗಳಲ್ಲಿ ಸರಿಪಡಿಸಿ ವಾರ್ಷಿಕ ಲೆಕ್ಕಗಳಲ್ಲಿ ಸರಿಪಡಿಸಿ ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಅವಶ್ಯಕ ಮಾಹಿತಿ ಒದಗಿಸಲಾಗುತ್ತದೆ.

</td>
</tr>
<tr>
<td>

**16. ವಾರ್ಷಿಕ ಲೆಕ್ಕಗಳಲ್ಲಿ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣ ವರ್ಗಾವಣೆ ಮಾಡಿರುವ ಕುರಿತು:–**

ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಪರಿಶೀಲಿಸಿದಾಗ 34 ಖಾತೆಗಳಲ್ಲಿ ಹಣವನ್ನು ಖಾತೆಯಿಂದ ಖಾತೆಗೆ ಸಾಲ ಮತ್ತು ವರ್ಗಾವಣೆ ಮಾಡಲಾಗಿದೆ.

</td>
<td>

ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಮಾಡಿಕೊಂಡಿರುವ ಅವಕಾಶಗಳ ಅನುಸಾರ ಪೂರ್ಣ ಪ್ರಮಾಣದಲ್ಲಿ ಹಣ ಖರ್ಚಾಗಿದ್ದು; ಅದೇ ಖಾತೆಗೆ ಇನ್ನೂ ಹಣದ ಅವಶ್ಯಕತೆ ಇರುವ ಸಂದರ್ಭಗಳಲ್ಲಿ ಅಥವಾ ಯಾವುದೇ Unforeseen ಖರ್ಚುಗಳು ಸಂಭವಿಸಿದ

</td>
</tr>
</table>

<table>
<tr>
<td>ಅ) ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಸಾಲ – 93,51,30,662.32<br>(Transfer loan from other A/c)<br>ಆ) ಒಂದು ಖಾತೆಯಿಂದ ಇನ್ನೊಂದು ಖಾತೆಗೆ ವರ್ಗಾವಣೆ – 1622620233.53<br>(Transfer loan to other A/c)<br>(ಸದರಿ ವಿವರಗಳನ್ನು <u>**ಅನುಬಂಧ-9ರಲ್ಲಿ**</u> ನೀಡಿದೆ) ಸಾಲ ಮತ್ತು ವರ್ಗಾವಣೆ ವಹಿವಾಟುಗಳಿಗೆ ಸಿಂಡಿಕೇಟ್ ಮತ್ತು ಹಣಕಾಸು ಸಮಿತಿ ಸಭೆಯ ಅನುಮೋದನೆ/ ಕುಲಾಧಿಪತಿಗಳಿಂದ ಅನುಮೋದನೆ ಪಡೆದಿರುವ ಪ್ರತಿಗಳನ್ನು ಮತ್ತು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–308 ರಿಂದ 311ರ ನಿಯಮಗಳನ್ನು ಅಂದರೆ ಆರ್ಥಿಕ ಇಲಾಖೆಯ ಪೂರ್ವ ಮಂಜೂರಾತಿ ಪಡೆಯುವುದು ಹಾಗೂ ನಿರ್ದಿಷ್ಟ ಉದ್ದೇಶಗಳಿಗಾಗಿ ಅನುದಾನಗಳನ್ನು ಇತರ ಉದ್ದೇಶಗಳಿಗೆ ವರ್ಗಾಂತರಿಸತಕ್ಕದ್ದಲ್ಲ ಮುಂತಾದ ನಿಯಮಗಳನ್ನು ಪಾಲಿಸಿರುವ ಬಗ್ಗೆ ಸೂಕ್ತ ವಿವರ ನೀಡುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–18/03.11.2017 ರಲ್ಲಿ ಕೋರಲಾಗಿದ್ದು ಯಾವುದೇ ಮಾಹಿತಿ ನೀಡಿರುವುದಿಲ್ಲ. ಕೂಡಲೇ ಸಮರ್ಪಕವಾದ ವಿವರಣೆಯನ್ನು ಲೆಕ್ಕ ತನಿಖೆಗೆ ನೀಡುವಂತೆ ಸೂಚಿಸಿದೆ.</td>
<td>ಸಂದರ್ಭಗಳಲ್ಲಿ ಮತ್ತೊಂದು ಖಾತೆಯಿಂದ ಅವಶ್ಯಕವಿರುವ ಖಾತೆಗೆ ಹಣ ವರ್ಗಾವಣೆ ಮಾಡಿಕೊಳ್ಳುವುದು ಅನಿವಾರ್ಯದ ವಿಷಯವಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ.<br><br>ಪ್ರತಿ ವರ್ಗಾವಣೆಗೂ ಸಿಂಡಿಕೇಟ್ ಸಭೆ, ಹಣಕಾಸು ಸಮಿತಿ ಹಾಗೂ ಕುಲಾಧಿಪತಿಗಳ ಅನುಮೋದನೆ ಪಡೆಯಲಾಗುತ್ತಿಲ್ಲ. ಬದಲಾಗಿ ಆಯಾ ಹಣಕಾಸು ವರ್ಷದ ವಾರ್ಷಿಕ ಲೆಕ್ಕದಲ್ಲಿ ಎಲ್ಲಾ ವರ್ಗಾವಣೆ, ಸಾಲ ಇತ್ಯಾದಿಗಳನ್ನು ಒಳಗೊಂಡಂತೆ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ.</td>
</tr>
<tr>
<td>**17. <u>ನಗದಾಗದ ಧನಾದೇಶಗಳ ವಿವರ :– (ಹಣಕಾಸು ವಿಭಾಗ)</u>**<br><br>2015–16ನೇ ವರ್ಷಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಒಟ್ಟು 17 ಖಾತೆಗಳಲ್ಲಿ ನಗದಾಗದೆ ಇರುವ ಧನಾದೇಶಗಳ ಮೊತ್ತ ರೂ.21,45,28,765/–ಗಳಿದ್ದು ವಿವರಗಳನ್ನು <u>**ಅನುಬಂಧ–10**</u> ರಲ್ಲಿ ನೀಡಲಾಗಿದೆ. ಅವಧಿ ಮೀರಿದ ಧನಾದೇಶಗಳನ್ನು ರದ್ದುಪಡಿಸಿ ನಗದು ಪುಸ್ತಕದಲ್ಲಿ ಹೊಂದಾಣಿಕೆ ಮಾಡಿ ಲೆಕ್ಕಸಮನ್ವಯಗೊಳಿಸಿ ವಿವರಗಳನ್ನು ಲೆಕ್ಕತನಿಖೆಗೆ ಒದಗಿಸಲು ತಿಳಿಸಿದೆ.</td>
<td>ಅವಧಿ ಮೀರಿದ ಧನಾಧೇಶಗಳನ್ನು ರದ್ದು ಪಡಿಸಿ ಹೊಸದಾಗಿ ಧನಾಧೇಶವನ್ನು ನೀಡಲಾಗಿದೆ ಹಾಗೂ ಲೆಕ್ಕಗಳನ್ನು ಹೊಂದಾಣಿಕೆ ಮಾಡಿ ದಾಖಲಿಸಲಾಗಿದೆ.</td>
</tr>
<tr>
<td>**18. <u>ಶತಮಾನೋತ್ಸವ ಸಂಭ್ರಮದ ಆಚರಣೆಗಾಗಿ ಬಿಡುಗಡೆಯಾದ ಸಹಾಯಾನುದಾನಕ್ಕೆ ಬಳಕೆ ಪ್ರಮಾಣ ಪತ್ರ (ಯು.ಸಿ) ಸಲ್ಲಿಸದಿರುವುದು:–</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಸಂಭ್ರಮದ ಆಚರಣೆಗಾಗಿ ಕೆಳಕಂಡಂತೆ ಕರ್ನಾಟಕ ಸರ್ಕಾರದಿಂದ ಅನುದಾನವನ್ನು 2015–16ನೇ ಸಾಲಿನಲ್ಲಿ ಸಹಾಯಾನುದಾನದಡಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆ ಮಾಡಲಾಗಿದೆ.
<table>
<tr><td>[ಲೆಕ್ಕ ಶೀರ್ಷಿಕೆ 2202–03–102–0–01–101(ಯೋಜನೆ)]</td><td>**ರೂ. ಕೋಟಿಗಳಲ್ಲಿ**</td></tr>
<tr><td>ಸರ್ಕಾರದ ಆದೇಶ ಸಂಖ್ಯೆ:ಇಡಿ100/ಯು.ಎಂ.ವಿ/2014, ದಿನಾಂಕ:</td><td>10.00</td></tr>
</table>
</td>
<td>ವಿಶ್ವವಿದ್ಯಾನಿಲಯದ ಶತಮಾನೋತ್ಸವ ಸಂಭ್ರಮದ ಆಚರಣೆಗಾಗಿ ಕರ್ನಾಟಕ ರಾಜ್ಯ ಸರ್ಕಾರದಿಂದ ಬಿಡುಗಡೆ ಆಗಿದ್ದ ಒಟ್ಟು ಮೊತ್ತ ರೂ.50.00 ಕೋಟಿ ಅನುದಾನದ ಮೊತ್ತವನ್ನು ಸರ್ಕಾರ ವಿಧಿಸಿದ್ದ ನಿಭಂದನೆಗಳಿಗೊಳಪಟ್ಟು ನಿಗದಿಪಡಿಸಿದ್ದ ಉದ್ದೇಶಗಳಿಗೇ ಖರ್ಚುಗಳನ್ನು ಭರಿಸಲಾಗಿದೆ.<br><br>ಹಾಗೂ ಈ ಸಂಬಂಧ ಅವಶ್ಯಕ ಬಳಕೆ ಪ್ರಮಾಣ ಪತ್ರಗಳನ್ನು ವಿಶ್ವವಿದ್ಯಾನಿಲಯದ ಪತ್ರ</td>
</tr>
</table>

| | |
|---|---|
| 07.01.2015 ಮತ್ತು 23.02.2015 2014-15ನೇ ಸಾಲಿನ ಪೂರಕ ಅಂದಾಜುಗಳ ಒಂದನೇ ಕಂತು | |
| ಸರ್ಕಾರದ ಆದೇಶ ಸಂಖ್ಯೆ: ಇಡಿ/47/ಯುಎಂವಿ/2015 ದಿ:01.01.2016 | 25.00 |
| ಸರ್ಕಾರದ ಆದೇಶ ಸಂಖ್ಯೆ: ಇಡಿ/47/ಯುಎಂವಿ/2015 ದಿ:10.03.2016 | 15.00 |
| **ಒಟ್ಟು** | **50.00 ಕೋಟಿ** |

ಸರ್ಕಾರದ ಆದೇಶದಲ್ಲಿ ಈ ಕೆಳಕಂಡ ವಿವರಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

1) ಅನುದಾನವನ್ನು ನಿಗದಿತ ಉದ್ದೇಶಕ್ಕಾಗಿ ಬಳಸಿಕೊಂಡಿರುವ ಬಗ್ಗೆ ದೃಢೀಕರಣ.
2) ಶತಮಾನೋತ್ಸವ ಸಮಾರಂಭದ ಸಂಬಂಧ ವಿವಿಧ ಕಾಮಗಾರಿಗಳ ಪ್ರಸ್ತಾವನೆಗೆ/ ಕ್ರಿಯಾ ಯೋಜನೆಗೆ ಆರ್ಥಿಕ ಇಲಾಖೆಯ ಅನುಮೋದನೆ ಪಡೆದಿರುವ ಆದೇಶ ಪ್ರತಿ ಮತ್ತು ಅನುಮೋದನಾ ಪ್ರತಿ ವಿವರ.
3) ಅನುದಾನವನ್ನು ಬಳಸಿಕೊಂಡಿರುವ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಿರುವ ಮಾಹಿತಿ.
4) ಅನುದಾನ ಸ್ವೀಕೃತಿ, ವೆಚ್ಚ, ಉಳಿಕೆ ವಿವರದ ಪಟ್ಟಿ.
5) ಖರ್ಚಿನ ವಿವರ ಸರ್ಕಾರಕ್ಕೆ ಸಲ್ಲಿಸಿರುವ ಮಾಹಿತಿಗಳು.
6) ಸದರಿ ಅನುದಾನವನ್ನು ಬಳಸಿಕೊಂಡ ಬಗ್ಗೆ ಖಜಾನೆಯೊಂದಿಗೆ ಮರು ಹೊಂದಾಣಿಕೆ ಮಾಡಿಕೊಂಡು ಕಾಲಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸಿರುವ ವರದಿ.
7) ಶತಮಾನೋತ್ಸವ ಆಚರಣೆಗೆ ಬಿಡುಗಡೆ ಮಾಡಲಾದ ಅನುದಾನದ ಮೊತ್ತದ ಓಚರ್ ಸಂಖ್ಯೆ ಇತ್ಯಾದಿ ವಿವರಗಳನ್ನು ಸಂಬಂಧಿಸಿದ ಖಜಾನೆಯಿಂದ ಪಡೆದು ಮಹಾಲೇಖಪಾಲರ ಅಂಕಿಗಳೊಂದಿಗೆ ಮರು ಹೊಂದಾಣಿಕೆ ಮಾಡಿ ಲೆಕ್ಕ ಸಮನ್ವಯ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಿರುವ ವಿವರ.
8) ಶತಮಾನೋತ್ಸವ ಸಮಾರಂಭದ ಆಚರಣಾ ಕಾರ್ಯಕ್ರಮದ ಮಾರ್ಗಸೂಚಿ.

ಮೇಲಿನ ಅಂಶಗಳಿಗೆ ಸೂಕ್ತ ದಾಖಲೆಗಳನ್ನು ಲೆಕ್ಕತನಿಖೆಗೆ ಒದಗಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:107/ದಿ:03.01.2018 ರಲ್ಲಿ ಕೋರಲಾಗಿದ್ದು, ಮಾಹಿತಿಗಳನ್ನು ಒದಗಿಸಿರುವುದಿಲ್ಲ.

ಶತಮಾನೋತ್ಸವ ಆಚರಣೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ 50.00 ಕೋಟಿ

ಸಂಖ್ಯೆ: ಹಶಾ16/87/2015-16 ದಿನಾಂಕ:14.10.2015 ಮತ್ತು ಪತ್ರ ಸಂಖ್ಯೆ: ಹಶಾ16/87/2015-16, ದಿನಾಂಕ:8.2.2016 ಹಾಗೂ ಪತ್ರ ಸಂಖ್ಯೆ ಹಶಾ16/87/2017-18 ದಿನಾಂಕ:7.4.2017ರ ಅನ್ವಯದಂತೆ ಸರ್ಕಾರಕ್ಕೆ ಸಲ್ಲಿಸಲಾಗಿದೆ ಪ್ರತಿಗಳನ್ನು ಲಗತ್ತಿಸಿದೆ.

ಆದ್ದರಿಂದ ರೂ.27,14,49,548/-ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಲಾಗಿದೆ.

ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ 2015–16ನೇ ಸಾಲಿಗೆ ವಾರ್ಷಿಕ ಲೆಕ್ಕಗಳ ಪ್ರಕಾರ ಒಟ್ಟು ರೂ.27,14,49,548/–ಗಳ ವೆಚ್ಚ ಭರಿಸಲಾಗಿರುತ್ತದೆ. ವೆಚ್ಚದ ವಿವರ ಕೆಳಕಂಡಂತಿದೆ.

| ಕ್ರ.ಸಂ | ವಿವರ | ಮೊಬಲಗು |
|---|---|---|
| 1 | TA/Seminor/Printing/Honorarium/Food/ Misc/ Momentos/ other charges | 19,09,64,887 |
| 2 | Construction of Buildings (No of works - 10) | 8,04,84,661 |
| 3 | ಒಟ್ಟು ಭರಿಸಲಾದ ವೆಚ್ಚ | 27,14,49,548 |
| 4 | ಸರ್ಕಾರದಿಂದ ಬಿಡುಗಡೆಯಾದ ಅನುದಾನ | 50,00,00,000 |
| 5 | ಉಳಿಕೆ | 22,85,50,452 |

1. ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಆಚರಣೆಗಾಗಿ ಯೋಜನೆ ಅನುಷ್ಠಾನದ ಕಾರ್ಯಕ್ರಮಗಳು/ವಿವಿಧ ಕಾಮಗಾರಿಗಳ ಕ್ರಿಯಾಯೋಜನೆಯ (Action plan) ಅನುಮೋದಿತ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.
2. ಮೈಸೂರು ವಿಶ್ವವಿದ್ಯಾನಿಲಯದ 103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾರಂಭದ 2015–16ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿ UOM Centenary celebration(59) ಶೀರ್ಷಿಕೆಯ ಖಾತೆಯಡಿ ಪಾವತಿ ಲೆಕ್ಕದಲ್ಲಿ ವಿವಿಧ ಬಾಬ್ತುಗಳಿಗೆ ಒಟ್ಟು ರೂ.27,14,49,548/–ಗಳ ವೆಚ್ಚ ದಾಖಲಿಸಲಾಗಿದೆ. ಆದರೆ ಪಾವತಿ ಪುಸ್ತಕದಲ್ಲಿನ (payment) ವಾಸ್ತಾವಿಕ ವೆಚ್ಚವನ್ನು ಪರಿಶೀಲಿಸಿದಾಗ ರೂ.23,77,15,475/–ಗಳನ್ನು ದಾಖಲಿಸಲಾಗಿದೆ. (ರೂ.27,14,49,548 – ರೂ.23,77,15,475) ವ್ಯತ್ಯಾಸ ರೂ.3,37,34,073/–ಗಳು ದಾಖಲೆಯಾಗದಿರುವುದಕ್ಕೆ ಸೂಕ್ತ ಕಾರಣಗಳು ಮತ್ತು ವ್ಯತ್ಯಾಸದ ಮೊಬಲಿಗಿನ ಪಾವತಿ ಓಚರ್‌ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.
3. ಅನುದಾನವನ್ನು ಬಳಸಿಕೊಂಡಿರುವ ಬಗ್ಗೆ ಹಣಬಳಕೆ ಪ್ರಮಾಣಪತ್ರ ಹಾಗೂ ಕ್ರಿಯಾಯೋಜನೆ ಸಲ್ಲಿಸಿರುವ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲವಾದರಿಂದ **ರೂ.27,14,49,548/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**22. ಒಂದೇ ಚಲನ್‌ಗಳನ್ನು ಎರಡು ಸಲ ನಗದು ಪುಸ್ತಕದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವುದು ಹಾಗೂ ಸಮರ್ಪಕವಾಗಿ ಲೆಕ್ಕ ಸಮನ್ವಯಗೊಳಿಸದಿರುವುದು :– (ಹಣಕಾಸು ವಿಭಾಗ)**

| | |
|---|---|
| ವಿಶ್ವವಿದ್ಯಾನಿಲಯದ 2015–16ನೇ ಸಾಲಿನ F&R ಖಾತೆಯ ನಗದು ಪುಸ್ತಕವನ್ನು ವಿವಿಧ ಪರೀಕ್ಷಾ ಶುಲ್ಕಗಳ ಸ್ವೀಕೃತಿಯ ಚಲನ್‌ಗಳೊಂದಿಗೆ ಪರಿಶೀಲಿಸಲಾಗಿ ಮೇ–2015ರ ಮಾಹೆಯಲ್ಲಿ ಖಾತೆ ಸಂಖ್ಯೆ:54007591200 (ಎಸ್.ಬಿ.ಎಂ)ಗೆ ಜಮಾ ಆಗಿರುವ ಒಂದೇ ಚಲನ್‌ನ್ನು ಎರಡೆರಡು ಸಲ (ರಿಪೀಟ್)ನಗದು ಪುಸ್ತಕಕ್ಕೆ ತೆಗೆದುಕೊಂಡಿರುವುದು ಕಂಡುಬಂದಿದೆ. (ಬೇರೆ ಬೇರೆ ಕ್ರಮಸಂಖ್ಯೆ ನೀಡಿ) ಅದರ ವಿವರಗಳು ಈ ಕೆಳಗಿನಂತಿವೆ.<br><br>(table below)<br><br>**(ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿಗಳ ಶುಲ್ಕಗಳ ಸ್ವೀಕೃತಿ)**<br>ಪುನರಾವರ್ತನೆಯಾಗಿರುವ (ರಿಪೀಟ್) ಚಲನ್‌ಗಳ ಯಾವುದೇ ಮೊತ್ತವು ಬ್ಯಾಂಕ್ ಖಾತೆಗೆ ಜಮಾ ಆಗಿರುವುದಿಲ್ಲ. ಬ್ಯಾಂಕ್ ಪಾಸ್‌ಶೀಟ್ (Bank statement) ನಲ್ಲಿ ಜಮಾ ಆಗಿರುವ ಮೊತ್ತದ ಚಲನ್ ಸಂಖ್ಯೆಯನ್ನು ಹಾಗೂ ಜಮಾದಾರರ ಪೂರ್ಣ ಹೆಸರನ್ನು ದಾಖಲಿಸದಿರುವುದು ಕಂಡುಬಂದಿದೆ. ಕೇವಲ ದಿನಾಂಕ ಹಾಗೂ ಮೊತ್ತವನ್ನು ಮತ್ತು ಅಪೂರ್ಣವಾದ ಹೆಸರಿನೊಂದಿಗೆ ನಮೂದಾಗಿದೆ. ಅದೇ ರೀತಿ ನಗದು ಪುಸ್ತಕದಲ್ಲಿಯೂ ಸಹ ಚಲನ್ ಸಂಖ್ಯೆ ಹಾಗೂ ಸ್ವೀಕೃತಿದಾರರ ಹೆಸರನ್ನು ನಮೂದಿಸದಿರುವುದು ಕಂಡುಬಂದಿದೆ. ಇದರಿಂದ ವಾಸ್ತವವಾಗಿ ಯಾವ ಚಲನ್‌ನ ಮೊತ್ತವು ಕಂಡುಬಂದಿದೆ ಇದರಿಂದ ವಾಸ್ತವವಾಗಿ ಯಾವ ಚಲನ್‌ನ ಮೊತ್ತವು ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಆಗಿದೆ ಎಂದು ತಿಳಿಯಲು ಸಾಧ್ಯವಿಲ್ಲ ಇದರಿಂದ ಚಲನ್‌ಗಳ ಜಮಾ ಬಗ್ಗೆ ನಿಖರವಾಗಿ ತಿಳಿಯಲು ಸಾಧ್ಯವಿಲ್ಲ. ವಿಶ್ವವಿದ್ಯಾನಿಲಯದಿಂದ ನೀಡುವ ವಿವಿಧ ಪ್ರಮಾಣಪತ್ರಗಳಿಗಾಗಿ ಪಡೆದಿರುವ ಶುಲ್ಕಗಳ (ಹೊಂದಾಣಿಕೆ) ಜಮಾ ಬಗ್ಗೆ ನಿಖರವಾಗಿ ತಿಳಿಯಲು ಹಾಗೂ ನೀಡಿರುವ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯನ್ನು ತಿಳಿಯುವುದು ಹೇಗೆ ಎಂದು ಪ್ರಶ್ನಿಸಲಾಗಿದೆ. ವಿಶ್ವವಿದ್ಯಾನಿಲಯದಿಂದ ಲೆಕ್ಕ | ಬ್ಯಾಂಕ್ ಚಲನ್‌ಗಳ ಪ್ರತಿ ಮತ್ತು ಕಛೇರಿ ಚಲನ್ ಪ್ರತಿಗಳ ಆಧಾರದ ಮೇಲೆ ಕೆಲಸದ ಒತ್ತಡದಿಂದಾಗಿ ಒಂದೇ ಚಲನ್‌ಗಳನ್ನು ಎರಡು ಭಾರಿ ನಗದು ಪುಸ್ತಕದಲ್ಲಿ ದಾಖಲಿಸಲಾಗಿತ್ತು. ತದನಂತರ ಅವುಗಳನ್ನು ನಗದು ಪುಸ್ತಕದಲ್ಲಿ ಅವಶ್ಯಕ ತಿದ್ದುಪಡಿಯೊಂದಿಗೆ ಸರಿಪಡಿಸಿಕೊಳ್ಳಲಾಗಿದೆ ಹಾಗೂ ಲೆಕ್ಕಗಳನ್ನು ಸಮನ್ವಯಗೊಳಿಸಲಾಗಿದೆ. |

| ಕ್ರ ಸಂ | ದಿನಾಂಕ | ಚಲನ್ ನಂ | ಮೊತ್ತ | ಪಾವತಿ ದಾರರ ಹೆಸರು | ನೀಡಿರುವ ಕ್ರಮ ಸಂಖ್ಯೆ |
|---|---|---|---|---|---|
| 1 | 26.05.2015 | 31076 | 1195 | ಮಂಜುನಾಥ್ | 4789 |
| 2 | 26.05.2015 | 31076 | 1195 | ಮಂಜುನಾಥ್ | 4795 (ರಿಪೀಟ್) |
| 3 | 26.05.2015 | 31016 | 215 | ಗೋವಿಂದರಾಜು | 4790 |
| 4 | 26.05.2015 | 31016 | 215 | ಗೋವಿಂದರಾಜು | 4793 (ರಿಪೀಟ್) |
| 5 | 26.05.2015 | 31015 | 215 | ಸಂತೋಷ್‌ಕುಮಾರ್ | 4791 |
| 6 | 26.05.2015 | 31015 | 215 | ಸಂತೋಷ್‌ಕುಮಾರ್ | 4792 (ರಿಪೀಟ್) |
| 7 | 26.05.2015 | 19276 | 1195 | ಚೇತನ್.ಎಸ್ | 4786 |
| 8 | 26.05.2015 | 19276 | 1195 | ಚೇತನ್.ಎಸ್ | 4794 (ರಿಪೀಟ್) |

ಸಮನ್ವಯವನ್ನು ಸಮರ್ಪಕವಾಗಿ ಮಾಡದಿರುವುದು ಕಂಡುಬಂದಿದೆ.

ಮುಂದುವರೆದಂತೆ (ಪ್ರಾಯೋಗಿಕವಾಗಿ) ಮೇ–2015ರ ಮಾಹೆಯಲ್ಲಿ ಖಾತೆ ಸಂಖ್ಯೆ:54007591200ಕ್ಕೆ ಜಮಾ ಆಗಿರುವ ಎಲ್ಲಾ ಚಲನ್‌ಗಳನ್ನು ಲೆಕ್ಕಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಲಭ್ಯವಿರುವ ಮಾಹಿತಿಗಳಂತೆ ಎಸ್.ಬಿ.ಎಂ ಯೂನಿವರ್‌ಸಿಟಿ ಕ್ಯಾಂಪಸ್ ಬ್ರಾಂಚ್‌ಗಳ ಚಲನ್‌ಗಳನ್ನು ಮಾತ್ರ (ಅದು ಅಪೂರ್ಣವಾಗಿ) ನೀಡಲಾಗಿದೆ. ವಿಶ್ವವಿದ್ಯಾನಿಲಯ ಅಧೀನದ ಇತರೆ ಶಾಖೆಗಳಲ್ಲಿ ಜಮಾ ಆಗಿರುವ ಚಲನ್‌ಗಳನ್ನು ಹಾಜರುಪಡಿಸಿರುವುದಿಲ್ಲ. (ಅವುಗಳ ಮೊತ್ತ ರೂ.80,89,891/–ಗಳ ಬೃಹತ್ ಮೊತ್ತವಾಗಿದೆ) ಸದರಿ ಮಾಹಿತಿಗಳನ್ನು ನೀಡಲು ಹಾಗೂ ಸಮರ್ಪಕವಾಗಿ ಲೆಕ್ಕಸಮನ್ವಯಗೊಳಿಸಿ ಮಾಹಿತಿ ನೀಡಲು ಆಡಿಟ್ ವಿಚಾರಣೆ ಪತ್ರ ಸಂಖ್ಯೆ:114/2017–18/ದಿನಾಂಕ:04.01.2018ರಲ್ಲಿ ಕೋರಲಾಗಿತ್ತು. ಆದರೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಪೂರ್ಣ ಮಾಹಿತಿಯನ್ನು ಸೂಕ್ತ ವಿವರಣೆಗಳೊಂದಿಗೆ ನೀಡಲು ಸೂಚಿಸಿದೆ ಲೆಕ್ಕ ತಪಾಸಣೆಗೆ ಹಾಜರುಪಡಿಸದ ಚಲನ್‌ಗಳ ಮೊತ್ತ **ರೂ.80,89,891/–ಗಳನ್ನು ವಸೂಲಿಸಿ ವಿವರಗಳನ್ನು ಲೆಕ್ಕ ತಪಾಸಣೆಗೆ ಒದಗಿಸಲು ಸೂಚಿಸಿದೆ.** ವಿವರಗಳನ್ನು ಅನುಬಂಧ–11ರಲ್ಲಿ ನೀಡಲಾಗಿದೆ.

**24. ವಿವಿಧ ವೆಚ್ಚಗಳಿಗಾಗಿ ಜಿ.ಆರ್.ಎ ಖಾತೆಯಲ್ಲಿ ನಗದಿಕರಿಸಲಾಗಿರುವ ಮೊಬಲಗುಗಳ ವೆಚ್ಚ ಭರಿಸಿ ಉಳಿಯಲಾದ ಮೊತ್ತಗಳನ್ನು ಜಿ.ಆರ್.ಎ ಖಾತೆಗೆ ಪುನಃ ಜಮಾ ಮಾಡದೆ ಇರುವುದು :– (ಯುವರಾಜ ಕಾಲೇಜು)**

2015–16ನೇ ಸಾಲಿನ ಯುವರಾಜ ಕಾಲೇಜು (ಸ್ವಾಯತ್ತತೆ) ಇಲ್ಲಿನ ಲೆಕ್ಕ ತಪಾಸಣೆಯಲ್ಲಿ ವೆಚ್ಚದ ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ ಕೆಲವು ವೆಚ್ಚಗಳಿಗೆ ಧನಾದೇಶಗಳ ಮೂಲಕ ಹಣವನ್ನು ಸೆಳೆದು ವೆಚ್ಚಗಳನ್ನು ಭರಿಸಿದ ನಂತರ ಉಳಿಯುವ ಮೊತ್ತಗಳನ್ನು ಪುನಃ ಜಿ.ಆರ್.ಎ ಖಾತೆಗೆ ಜಮ ಮಾಡದೆ ಇರುವ ವಿವರಗಳನ್ನು ಅನುಬಂಧ–12ರಲ್ಲಿ ವಿವರಿಸಲಾಗಿದ್ದು, ವಿವರಗಳಂತೆ ಸೆಳೆಯಲಾಗಿರುವ ಹಣದಲ್ಲಿ ಬಾಕಿ ಉಳಿದಿರುವ ಮೊತ್ತಕ್ಕೆ ಯಾವುದೇ ಪ್ರಕಾರದ ವೆಚ್ಚದ ವಿವರಗಳನ್ನು ತಪಾಸಣೆಗೆ ಹಾಜರುಪಡಿಸದಿರುವುದರಿಂದ ಮತ್ತು ಜಿ.ಆರ್.ಎ ಉಳಿದ ಮೊತ್ತವನ್ನು ಜಮೆ ಮಾಡಿ ಮಾಹಿತಿಗಳನ್ನು ತಪಾಸಣೆಗೆ ಹಾಜರುಪಡಿಸದೆ ಇರುವ ಹಿನ್ನೆಲೆಯಲ್ಲಿ ಅನುಬಂಧದ ಕಾಲಂ (7)ರಲ್ಲಿ ಸೂಚಿಸಲಾಗಿ ಒಟ್ಟು ಮೊತ್ತ **ರೂ.51,504/–ಗಳನ್ನು ವಸೂಲಿ** ಮಾಡಿ ಜಿ.ಆರ್.ಎ ಖಾತೆಗೆ ಜಮಾ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

2015–16ನೇ ಸಾಲಿನಲ್ಲಿ ಧನಾದೇಶಗಳ ಮೂಲಕ ಹಣವನ್ನು ಸೆಳೆದು ವೆಚ್ಚ ಭರಿಸಿ ಉಳಿದ ಮೊತ್ತ ರೂ.83,821.00ಗಳನ್ನು ಪುನಃ ಜಿ.ಆರ್.ಎ ಖಾತೆ ಸಂಖ್ಯೆ:64078604199ಕ್ಕೆ ದಿನಾಂಕ:3.3.2016 ರಂದು ಜಮಾ ಮಾಡಲಾಗಿದೆ. ಈ ಮೊತ್ತದಲ್ಲಿ ರೂ.51,504.00ಗಳು ಸೇರಿರುತ್ತದೆ. ವಿವರ ಕೆಳಗಿನಂತಿರುತ್ತದೆ.

| ಕ್ರ.ಸಂ | ಧನಾದೇಶ ಸಂಖ್ಯೆ/ದಿನಾಂಕ | ಮೊತ್ತ (ರೂಗಳಲ್ಲಿ) |
|---|---|---|
| 1 | 465052/11.6.2015 | 1,280/– |
| 2 | 774486/25.6.2015 | 2,684/– |
| 3 | 774516/30.7.2015 | 1,000/– |
| 4 | 774519/31.7.2015 | 130/– |
| 5 | 139037/13.11.2015 | 217/– |
| 6 | 139043/11.11.2015 | 1,000/– |

| 7 | 139068/14.12.2015<br>139071/18.12.2015 | 3,416/– |
|---|---|---|
| 8 | 139085/2.12.2015<br>139081/31.12.2015 | 12,640/– |
| 9 | 139160/2.3.2016<br>139195/4.3.2016 | 10,000/– |
| 10 | 139071/18.12.2015<br>139073/18.12.2015<br>139075/18.12.2015<br>139081/31.12.2015<br>139082/31.12.2015 | 19,137/– |
| | **ಒಟ್ಟು ಮೊತ್ತ** | **51,504/–** |
| 11 | 465014/6.4.2015 | 3,295/– |
| 12 | 139181/19.03.2016 | 25,000/– |
| 13 | 774524/3.8.2015 | 4,000/– |
| 14 | ನಗದು | 22 |
| | **ಒಟ್ಟು ಮೊತ್ತ** | **83,821/–** |

ರೂ.83,821/–ಗಳನ್ನು ಜಮಾ ಮಾಡಿರುವ ಬ್ಯಾಂಕ್ ಚಲನ್‌ನ ಪ್ರತಿಯನ್ನು ಲಗತ್ತಿಸಿದೆ. ಬ್ಯಾಂಕ್ ಸ್ಟ್ರೋಲ್‌ನ ಪ್ರತಿಯನ್ನು ಅಡಕಗೊಳಿಸಿದೆ. ರೂ.51,504/–ಗಳ ವಸೂಲಾತಿ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ.

## ವಿವಿಧ ಯೋಜನೆಗಳು

**25. ವಿವಿಧ ಯೋಜನೆಗಳು ಬ್ಯಾಂಕ್ ಖಾತಾ ವಿವರ:–**

2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಗಳು, ವಿವಿಧ ಖಾತೆಗಳಿಗೆ ಸಂಬಂಧಿಸಿದ ನಗದು ಪುಸ್ತಕಗಳನ್ನು ಪರಿಶೀಲಿಸಿದಾಗ ವಿವಿಧ ಯೋಜನೆಗಳಿಗೆ ಬ್ಯಾಂಕ್ ಖಾತೆಗಳನ್ನು ತೆರೆದು ವ್ಯವಹರಿಸಲಾಗುತ್ತಿದೆ. ಹೆಚ್ಚುವರಿ ಖಾತೆಗಳನ್ನು ಹೊಂದಿರುವುದರಿಂದ ನಿರ್ವಹಣೆ ಮತ್ತು ಲೆಕ್ಕ ಸಮನ್ವಯಗೊಳಿಸುವುದು ಕಷ್ಟ ಸಾಧ್ಯವಾಗುತ್ತದೆ. ಆದುದರಿಂದ ಒಂದು ಯೋಜನೆಗೆ ಒಂದೇ ಬ್ಯಾಂಕ್

2015–16 ನೇ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಲೆಕ್ಕ ಶೀರ್ಷಿಕೆಗಳಿಗೆ ಒಟ್ಟು 34 ಖಾತೆಗಳನ್ನು ಹೊಂದಿದ್ದು, ವಿವಿಧ ಬ್ಯಾಂಕ್‌ಗಳಲ್ಲಿ ವ್ಯವಹಾರಗಳನ್ನು ನಡೆಸಲಾಗುತ್ತಿದೆ.

ಸುವರ್ಣ ಮಹೋತ್ಸವ ಖಾತೆಗೆ ಸಂಬಂಧಿಸಿದಂತೆ ಎಸ್.ಬಿ.ಎಂ ಖಾತೆ ಸಂಖ್ಯೆ 54007591313 ರಡಿ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ವರದಿಯಲ್ಲಿ ನಮೂದಿಸಿರುವ

ಖಾತೆಯನ್ನು ನಿರ್ವಹಿಸಿ ಪ್ರತಿ ಮಾಹೆ ಲೆಕ್ಕಸಮನ್ವಯಗೊಳಿಸಲು ಸೂಚಿಸಿದೆ. ಹಾಗೂ ನಿಷ್ಕ್ರಿಯವಾಗಿರುವ ಖಾತೆಗಳನ್ನು ಮುಕ್ತಾಯಗೊಳಿಸಲು ಹಣಕಾಸು ಸಮಿತಿ ಸಭೆಯ ಅನುಮೋದನೆ ಪಡೆದು ಖಾತೆಗಳನ್ನು ರದ್ದುಪಡಿಸಲು ಸೂಚಿಸಿದೆ. ಹಾಗೂ ಚಾಲ್ತಿಯಲ್ಲಿರುವ ಯೋಜನೆಗೆ ಒಂದೇ ಖಾತೆಯನ್ನು ನಿರ್ವಹಿಸಲು ಸೂಚಿಸಿದೆ. ವಿವಿಧ ಯೋಜನೆಗಳ ಬ್ಯಾಂಕ್ ಖಾತಾ ವಿವರ ಕೆಳಕಂಡಂತಿದೆ.

| | |
|---|---|
| ಸಾಮಾನ್ಯ ರೆವಿನ್ಯೂ ಖಾತೆ | SBM 54007591471 |
| ಪರೀಕ್ಷಾ ಖಾತೆ | (1) SBM 54007591200<br>(2) SBM 64081562786<br>(3) Fee and Colle. 64166671735<br>(4) PGE 033895809198 |
| ಪ್ರಾಯೋಜಿತ ಕಾರ್ಯಕ್ರಮ/ ಯೋಜನೆಗಳು | (1) Vijaya bank A/c 141903681000048<br>(2) Kaveri grameena bank 85004340021<br>(3) SBM 54007591437<br>(4) Canara bank 1) 15121320000<br>2) 36648<br>(5) FDR |
| NSS/TOC | SBM 64046625446 |
| Sports development fund | SBM 54007591448 |
| ಅಮಾನತ್ತು ಖಾತೆ | SBM 54007592511 |
| ಪಿಂಚಣಿ ನಿಧಿ | 54007591379 |
| ಗುಂಪುವಿಮೆ ಉಳಿತಾಯ | 54007591302 |
| HBA Loan and Advances | 54007591368 |
| ಸುವರ್ಣ ಮಹೋತ್ಸವ | 54007591313 Main A/c<br>(1) 64116864828<br>64116864851<br>64116864680 |

64116864828 ರಿಂದ 64077945936ರವರೆಗೆ ಒಟ್ಟು 13 ಸಂಖ್ಯೆಗಳೂ ಎಫ್.ಡಿ.ಆರ್ ಸಂಖ್ಯೆಗಳ ಖಾತೆಗಳಾಗಿರುತ್ತದೆ. ಬ್ಯಾಂಕ್ ಖಾತೆಗಳಾಗಿರುವುದಿಲ್ಲ.

ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಖಾತೆ ಸಂಖ್ಯೆ 54007591324 ರಡಿ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ವರದಿಯಲ್ಲಿ ನಮೂದಿಸಿರುವ 64100393829 ರಿಂದ 64126543585 ರವರೆಗೆ ಒಟ್ಟು 10 ಸಂಖ್ಯೆಗಳೂ ಎಫ್.ಡಿ.ಆರ್ ಸಂಖ್ಯೆಗಳ ಖಾತೆಗಳಾಗಿರುತ್ತದೆ. ಬ್ಯಾಂಕ್ ಖಾತೆಗಳಾಗಿರುವುದಿಲ್ಲ.

ಪ್ರಸಾರಾಂಗ ಆವರ್ತನಾ ನಿಧಿ ಖಾತೆ ಸಂಖ್ಯೆ 54007591426 ರಡಿ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ವರದಿಯಲ್ಲಿ ನಮೂದಿಸಿರುವ 64038842891 ರಿಂದ 64050239623 ರವರೆಗೆ ಒಟ್ಟು 7 ಸಂಖ್ಯೆಗಳೂ ಎಫ್.ಡಿ.ಆರ್ ಸಂಖ್ಯೆಗಳ ಖಾತೆಗಳಾಗಿರುತ್ತದೆ. ಬ್ಯಾಂಕ್ ಖಾತೆಗಳಾಗಿರುವುದಿಲ್ಲ.

ಶ್ರೀ ತತ್ವ ನಿಧಿ ಖಾತೆ ಸಂಖ್ಯೆ 54007591404 ರಡಿ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ವರದಿಯಲ್ಲಿ ನಮೂದಿಸಿರುವ 64039280678 ರಿಂದ 64039280714 ರವರೆಗೆ ಒಟ್ಟು 8 ಸಂಖ್ಯೆಗಳೂ ಎಫ್.ಡಿ.ಆರ್ ಸಂಖ್ಯೆಗಳ ಖಾತೆಗಳಾಗಿರುತ್ತದೆ. ಬ್ಯಾಂಕ್ ಖಾತೆಗಳಾಗಿರುವುದಿಲ್ಲ.

ಇಂಗ್ಲಿಷ್ ಕನ್ನಡ ನಿಘಂಟು ಖಾತೆ ಸಂಖ್ಯೆ 54007591357 ರಡಿ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ವರದಿಯಲ್ಲಿ ನಮೂದಿಸಿರುವ 64080382793 ರಿಂದ 64080382873ರವರೆಗೆಒಟ್ಟು 4 ಸಂಖ್ಯೆಗಳೂ ಎಫ್.ಡಿ.ಆರ್ ಸಂಖ್ಯೆಗಳ ಖಾತೆಗಳಾಗಿರುತ್ತದೆ. ಬ್ಯಾಂಕ್ ಖಾತೆಗಳಾಗಿರುವುದಿಲ್ಲ.

University with Potential for Excellence ಖಾತೆ ಸಂಖ್ಯೆ 64095498688 ರಡಿ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ವರದಿಯಲ್ಲಿ ನಮೂದಿಸಿರುವ 64095969818 ರಿಂದ 64095970302 ರವರೆಗೆ ಒಟ್ಟು 22 ಎಫ್.ಡಿ.ಆರ್ ಸಂಖ್ಯೆಗಳ ಖಾತೆಗಳಾಗಿರುತ್ತದೆ. ಬ್ಯಾಂಕ್ ಖಾತೆಗಳಾಗಿರುವುದಿಲ್ಲ

ತಮ್ಮ ಸೂಚನೆಯಂತೆ ಪರೀಕ್ಷಾ ಖಾತೆ, ಪ್ರಾಯೋಜಿತ ಕಾರ್ಯಕ್ರಮ/ ಯೋಜನೆಗಳು, ವಿದ್ಯಾರ್ಥಿ ಕ್ಷೇಮನಿಧಿ, ಹಾಗೂ ಆನ್‌ಲೈನ್ ಪ್ರೋಗ್ರಾಂ ಖಾತೆಗಳಡಿ 2 ರಿಂದ 3 ಖಾತೆಗಳನ್ನು ಹೊಂದಿದ್ದು ಒಂದೇ ಖಾತೆಯಡಿ ವ್ಯವಹಾರ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರಬಯಸುತ್ತಾ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

| | | | | |
|---|---|---|---|---|
| | | 64116864759<br>64116864793<br>64140659794<br>64140666847<br>64140666858<br>64140666869<br>64140666881<br>64140666892<br>64078171049<br>64077945936 | | |
| | ಅಮೃತ ಮಹೋತ್ಸವ ನಿಧಿ | 54007591380 | | |
| | Endowment fund | 54007591299 | | |
| | ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿ | 54007591324 main A/c<br>(1) 64100393829<br>(2) 64081247302<br>(3) 64081247324<br>(4) 64100404980<br>(5) 64126543472<br>(6) 64126543494<br>(7) 64126543507<br>(8) 64126543541<br>(9) 64126543552<br>(10) 64126543585 | | |
| | ಜೈನಶಾಸ್ತ್ರ | 54007591288 | | |
| | Kannada book printing | 54007591346 | | |
| | ಕನ್ನಡ ವಿಶ್ವರೂಪ | 54007591335 | | |

| | | | | |
|---|---|---|---|---|
| | ಪ್ರಸಾರಾಂಗ ಆವರ್ತನಾ ನಿಧಿ | 54007591426<br>64038842891<br>64035143873<br>64023481545<br>64043905209<br>54007642054<br>54007642496<br>64050239623 | | |
| | ತತ್ವನಿಧಿ | 54007591404 main A/c<br>64039280678<br>64039280714<br>54007642485<br>64006031617<br>6400770574<br>64006031617<br>640039280678<br>64039280714 | | |
| | M.Tech course | 54007591459 | | |
| | ಇಂಗ್ಲೀಷ್ ಕನ್ನಡ ನಿಘಂಟು | 54007591357<br>64080382793<br>64080382748<br>64080382840<br>64080382873 | | |
| | Danida seed | 54007591437 | | |
| | Collaboration course | 54007592690 | | |
| | Information infrastructure development | 54007592714 | | |
| | Student welfare trust | 64115554975<br>54007592736 | | |

| | | | | |
|---|---|---|---|---|
| | Yuvaraja's college | 54007592781 | | |
| | UNICEF | 64131577404 | | |
| | Institute of excellence | 64049535138 | | |
| | NSS Regular | 64079956683 | | |
| | NSS Special camping | 64079956435 | | |
| | University with Potential for Excellence | 64095498688<br>64095969818<br>64128065923<br>64095969896<br>64095969794<br>64095970889<br>64095970878<br>64128067839<br>64128067908<br>64128067942<br>64095969910<br>64095969954<br>64095970006<br>64095970028<br>64095970040<br>64095970674<br>64095970754<br>64095970856<br>64095970062<br>64095970120<br>64095970197<br>64095970255<br>64095970302 | | |

<table>
<tr>
<td>
<table>
<tr><td>School of designs</td><td>64098950735</td></tr>
<tr><td>European project</td><td>64128849873</td></tr>
<tr><td>Centenary celebration fund</td><td>64148299721</td></tr>
<tr><td><u>Online programme</u><br>1) Online programme Escrow account<br>2) Online programme account<br>3) Online programme Reserve account</td><td>HDFC account No.50100062717249<br>HDFC account No.50200007531292<br>HDFC account No.50100062940329</td></tr>
</table>
</td>
<td></td>
</tr>
<tr>
<td>
<u>ಭಾಗ–3</u>
02. <u>ಸಾಮಾನ್ಯ ರಶೀದಿಗಳ ಸ್ವೀಕೃತಿ ಮೊತ್ತವು ವಿಶ್ವವಿದ್ಯಾನಿಲಯದ ಖಾತೆಗೆ ಹೊಂದಾಣಿಕೆ ಯಾಗದಿರುವುದು:– (ಆಡಳಿತ ವಿಭಾಗ)</u>
2015–16ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ವಿಭಾಗದ ಸಾಮಾನ್ಯ ರಶೀದಿ ಪುಸ್ತಕಗಳ ಮೂಲಕ ವಸೂಲಿ ಮಾಡಿರುವ ಮೊತ್ತಗಳನ್ನು ಬ್ಯಾಂಕ್‌ನ ಸಾಮಾನ್ಯ ರೆವೆನ್ಯೂ ಖಾತೆ ಸಂಖ್ಯೆ:54007591471ಗೆ ಜಮೆ ಮಾಡಿರುವ ಬಗ್ಗೆ ಪರಿಶೀಲಿಸಲಾಗಿ, ರೂ.13,000/–ಗಳ ಮೌಲ್ಯದ ಡಿ.ಡಿ (ಸಂಖ್ಯೆ:407536/10.04.2015) ಯನ್ನು ದಿನಾಂಕ:16.07.2015ರಂದು ಬ್ಯಾಂಕ್ ಚಲನ್ ಸಂಖ್ಯೆ:41245ರ ಮೂಲಕ ಮಹಾರಾಜ ಕಾಲೇಜು ಮೈದಾನದ ಒಳಾಂಗಣ ನಿರ್ವಹಣಾ ಶುಲ್ಕದ ಬಾಬ್ತು ಎಂದು ಜಮಾ ಮಾಡಿದೆ. ಇದು ಅವಧಿ ಮುಗಿದ ಡಿ.ಡಿ. ಯಾಗಿದ್ದು, ಈ ಸಂಬಂಧ ಹೊಸ ಡಿ.ಡಿ ಪಡೆಯದೆ, ಹಳೆಯ ಡಿ.ಡಿ.ಯನ್ನು ಬ್ಯಾಂಕ್‌ಗೆ ಜಮಾ ಮಾಡಲಾಗಿದೆ. ಇದು ನಗದಾಗಿಲ್ಲ, ಆದಕಾರಣ ಈ ಪ್ರಕರಣದ ಬಾಬ್ತು ರೂ.13,000/– ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡುವಂತೆ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:21/2017–18, ದಿನಾಂಕ:12.03.2018ರಂದು ತಿಳಿಸಲಾಗಿತ್ತಾದರೂ ಈ ಸಂಬಂಧ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಜಮಾ ಆಗದೆ ಇರುವ ಮೊತ್ತ ರೂ.13,000/ಗಳನ್ನು ಶೇ.14ರ ಬಡ್ಡಿಯೊಂದಿಗೆ ಸಂಬಂಧಪಟ್ಟವರಿಂದ ಶೀಘ್ರ ವಸೂಲಿ ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದೆ.
</td>
<td>
2015–16ನೇ ಸಾಲಿನಲ್ಲಿ ಸಾಮಾನ್ಯ ರಶೀತಿಗಳ ಮೂಲಕ ವಸೂಲಿಸಿರುವ ಮೊತ್ತ ರೂ.13,000/–ಗಳು ಡಿ.ಡಿ (ಸಂಖ್ಯೆ:407536 ದಿನಾಂಕ:10.04.2015) ರೂಪದಲ್ಲಿದ್ದು ಸದರಿ ಡಿ.ಡಿಯು ಸಮಯ ಮೀರಿದ್ದಾಗಿದ್ದರಿಂದ ಅದನ್ನು ನವೀಕರಿಸಿಕೊಡುವಂತೆ ಅಥವಾ ನಗದು ರೂಪದಲ್ಲಿ ಹಣ ಪಾವತಿಸುವಂತೆ ಸಂಬಂಧಿಸಿದ ಸಂಸ್ಥೆಯವರಿಗೆ ಸೂಚಿಸಲಾಗಿದೆ.
ಸದರಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿಸಿ ಅಗತ್ಯ ದಾಖಲೆ ಒದಗಿಸಲಾಗುತ್ತದೆ.
</td>
</tr>
</table>

**09. ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶೈಕ್ಷಣಿಕ ಕೋರ್ಸುಗಳಿಗೆ 2015–16ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಬರಬೇಕಾದ ಬಾಕಿ ಶುಲ್ಕ ವಸೂಲಾಗಬೇಕಾಗಿರುವುದು. :– (ಆಡಳಿತಾಧಿಕಾರಿಗಳ ಕಛೇರಿ)**

ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿಗಳ ಕಛೇರಿಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೋರ್ಸುಗಳು/ಡಿಪ್ಲೊಮ ಸರ್ಟಿಫಿಕೇಟ್ ಕೋರ್ಸುಗಳು ವಿಷಯದ 2015–16ನೇ ಸಾಲಿನಲ್ಲಿ ಸಂಬಂಧಿಸಿದ ಕೋರ್ಸುಗಳಿಗೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡು ವಿಭಾಗವಾರು ಪ್ರವೇಶಾತಿ ಅನುಮೋದನೆಯಾದ ನಂತರ ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರವರ್ಗವಾರು ವಿದ್ಯಾರ್ಥಿಗಳಿಂದ ಬರಬೇಕಾದ ಶುಲ್ಕದ ಬೇಡಿಕೆ/ವಸೂಲಾತಿ/ಬಾಕಿ (D.C.B) ವಿವರಗಳನ್ನು ವಿಭಾಗವಾರು ಆಡಳಿತಾಧಿಕಾರಿಗಳು, ಮಾನಸ ಗಂಗೋತ್ರಿ ಶಾಖೆಯಲ್ಲಿ ಸಮನ್ವಯ ಮಾಡಿದ ನಂತರ ಹಣಕಾಸು ವಿಭಾಗದಲ್ಲಿ ತಾಳೆ ಮಾಡಬೇಕಾಗಿರುತ್ತದೆ. ಆದರೆ ತಾಳೆ ಮಾಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಶುಲ್ಕ, ಮರುಭರಿಕೆ ಶುಲ್ಕದ ನಿಖರತೆ ಇಲ್ಲದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗುವ ಸಂಭವವಿರುತ್ತದೆ. ಈ ವಿಷಯವನ್ನು ಆದ್ಯತೆ ಮೇರೆಗೆ ಪರಿಗಣಿಸಿ ಸರ್ಕಾರಕ್ಕೆ ಪತ್ರ ವ್ಯವಹರಿಸಿ ಮರುಭರಿಕೆಗೆ ಕ್ರಮವಹಿಸಲು ಸೂಚಿಸಿದೆ.

ವಿದ್ಯಾರ್ಥಿಗಳಿಂದ ಪಡೆದ ಬೋಧನಾ ಶುಲ್ಕದ ವಿವರಗಳನ್ನು ಡಿ.ಸಿ.ಬಿ/ಬ್ಯಾಂಕ್ ಚಲನ್‌ಗಳು ಮುಂತಾದ ವಿವರಗಳನ್ನು ಶುಲ್ಕದ ಮಾಹಿತಿಯೊಂದಿಗೆ ಪರಿಶೀಲಿಸಿದಾಗ ಹಿಂದಿನ ಸಾಲಿನ ಬಾಕಿ ಶುಲ್ಕದ ವಿವರ 2015–16ನೇ ಸಾಲಿನ ಬೋಧನಾ ಶುಲ್ಕಗಳ ವಸೂಲಾತಿ ಮತ್ತು ಉಳಿಕೆ ವಿವರಗಳನ್ನು **ಅನುಬಂಧ–19ರಲ್ಲಿ** ನೀಡಿದೆ. ವಿವರಿಸಿರುವಂತೆ ವಿದ್ಯಾರ್ಥಿಗಳಿಂದ ಬರಬೇಕಾದ ಶುಲ್ಕದ ಮೊತ್ತ **ರೂ.2,10,72,876/–ಗಳಿಗೆ ಮರುಭರಿಕೆ ವಿವರಗಳನ್ನು ಒದಗಿಸುವುದು, ಮುಂದಿನ ಲೆಕ್ಕ ತಪಾಸಣೆಗೆ ಹಾಜರುಪಡಿಸುವುದು ಹಾಗೂ ವಸೂಲಾತಿಗೆ ಕ್ರಮಕೈಗೊಳ್ಳುವುದು**

| **ಪ್ರವೇಶಾತಿ ಶುಲ್ಕದ ಡಿ.ಸಿ.ಬಿ ವಿವರ** | |
|---|---|
| ಆರಂಭ ಶಿಲ್ಕು | 91,53,764 |
| ಬೇಡಿಕೆ (Demand) | 7,95,90,604 |
| **ಒಟ್ಟು** | **8,87,44,368** |
| ವಸೂಲಾತಿ (Collection) | 6,76,71,492 |
| ಬಾಕಿ (Balance) | 2,10,72,876 |

ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿಗಳ ಕಛೇರಿಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೋರ್ಸುಗಳು/ಡಿಪ್ಲೋಮ ಸರ್ಟಿಫಿಕೇಟ್ ಕೋರ್ಸುಗಳಲ್ಲಿ 2015–16ನೇ ಸಾಲಿನಲ್ಲಿ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡು ಪ್ರವರ್ಗವಾರು ವಿದ್ಯಾರ್ಥಿಗಳಿಂದ ಬರಬೇಕಾದ ಶುಲ್ಕದ ಆರಂಭ ಶಿಲ್ಕು ಮತ್ತು ಬೇಡಿಕೆ/ವಸೂಲಾತಿ ಹಾಗೂ ಬಾಕಿ ವಿವರಗಳ ಬಗ್ಗೆ **ಕಂಡಿಕೆಯ ಅನುಬಂಧ–19ರಲ್ಲಿ ವಿವರಿಸಿರುವ** ಬಾಕಿ ಮೊತ್ತ ರೂ.**2,10,72,876/–**ಗಳ ಬಗ್ಗೆ ಈ ಕೆಳಗಿನಂತೆ ವಿವರಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

| **ಕ್ರ.ಸಂ** | **ವಿವರ** | **ಬಾಕಿ ಬರಬೇಕಾದ ಶುಲ್ಕ** | **ವಸೂಲಾತಿ** | **ಬಾಕಿ ಶುಲ್ಕ** | **ಷರಾ** |
|---|---|---|---|---|---|
| 1 | ಆರಂಭ ಶಿಲ್ಕು | 91,53,764 | 73,68,286 | 17,85,478 | 2014–15ನೇ ಸಾಲಿನ ಅನುಪಾಲನಾ ವರದಿ ಕಂಡಿಕೆ 2(ಎ)ರಲ್ಲಿ ಜಮಾ ವಿವರ ಸಲ್ಲಿಸಿದೆ. |
| 2 | 2015–16ನೇ ಸಾಲಿನ ಬಾಕಿ | 1,19,19,112 | 1,07,00,236 | 12,18,876 | 2016–17ನೇ ಸಾಲಿನ ವಿದ್ಯಾರ್ಥಿ ವೇತನದಿಂದ ಕಡಿತ ಜಮಾ ವಿವರದ ಪ್ರತಿ ಲಗತ್ತಿಸದೆ. |
| ಒಟ್ಟು | | 2,10,72,876 | 1,80,68,522 | 30,04,354 | |

ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಆರಂಭ ಶಿಲ್ಕು ರೂ.91,53,754/–ಗಳ ಬಾಬ್ತು 2014–15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಭಾಗ–3ರ ಕಂಡಿಕೆ ಸಂಖ್ಯೆ:2(ಎ)ಗೆ ಸಂಬಂಧಿಸಿದಂತೆ 2015–16ನೇ ಸಾಲಿನ ವಿದ್ಯಾರ್ಥಿ ವೇತನದಿಂದ ರೂ.73,68,286/–ಗಳನ್ನು ಜಿ.ಆರ್.ಎ ಖಾತೆಗೆ

ಜಮಾ ಮಾಡಿ ಚಲನ್ ಪ್ರತಿ ಲಗತ್ತಿಸಿ ಅನುಪಾಲನಾ ವರದಿ ಸಲ್ಲಿಸಿದೆ. ಹಾಗೂ 2015–16ನೇ ಸಾಲಿನಲ್ಲಿ ಬಾಕಿ ಉಳಿದಿರುವ ಮೊತ್ತ ರೂ.1,19,19,112/–ಗಳ ಪೈಕಿ 2016–17ನೇ ಸಾಲಿನ ವಿದ್ಯಾರ್ಥಿ ವೇತನದಿಂದ ಕಡಿತಗೊಳಿಸಿ ಜಿ.ಆರ್.ಎ ಖಾತೆಗೆ ಜಮಾ ಮಾಡಿರುವ ಮೊತ್ತ ರೂ.1,07,00,236/–ಗಳು. ಜಮಾ ವಿವರದ ಚಲನ್ ಪ್ರತಿ ಲಗತ್ತಿಸಿದೆ.2015–16ನೇ ಸಾಲಿನ ಆರಂಭ ಶಿಲ್ಕಿನ ಉಳಿಕೆ ಮೊತ್ತ ರೂ.17,85,478/– ಮತ್ತು 2015–16ನೇ ಸಾಲಿನ ಬೇಡಿಕೆಯ ಬಾಕಿ ಮೊತ್ತ ರೂ.12,18,876/–ಗಳು ಸೇರಿದಂತೆ ಒಟ್ಟು ಮೊತ್ತ ರೂ.30,04,354/–ಗಳನ್ನು ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿ ಜಿ.ಆರ್.ಎ ಖಾತೆಗೆ ಪಾವತಿಸಿ, ಪಾವತಿಸಿದ ಚಲನ್ ಪ್ರತಿಯನ್ನು ಮುಂದಿನ ಲೆಕ್ಕ ತಪಾಸಣೆಯ ವೇಳೆಯಲ್ಲಿ ಹಾಜರುಪಡಿಸಲಾಗುವುದು. ಹಾಗೂ ವಿದ್ಯಾರ್ಥಿಗಳಿಂದ ವಸೂಲಾಗಬೇಕಾದ ಬಾಕಿ ಮೊತ್ತದ ವಸೂಲಾತಿ ಬಗ್ಗೆ ಅಗತ್ಯ ಕ್ರಮ ವಹಿಸಿರುತ್ತದೆ.

**10. <u>2015–16ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಪೂರ್ಣವಾಗಿ ಬಟವಾಡೆಯಾಗದೆ ಇರುವ ಕುರಿತು :– (ಆಡಳಿತಾಧಿಕಾರಿಗಳ ಕಛೇರಿ)</u>**

2015–16ನೇ ಸಾಲಿನ ಆಡಳಿತಾಧಿಕಾರಿಗಳ ಕಛೇರಿಯ ಲೆಕ್ಕ ತನಿಖಾ ವೇಳೆಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನದ ಕಡತ ಹಾಗೂ ವಿತರಣಾ ವಹಿಯನ್ನು ಪರಿಶೀಲಿಸಿದಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಮೈಸೂರು ಕಛೇರಿಯಿಂದ 2015–16ನೇ ಸಾಲಿಗೆ ಒಟ್ಟು ರೂ.3,50,71,972/–ಗಳ ವಿದ್ಯಾರ್ಥಿವೇತನ ಮಂಜೂರಾಗಿರುತ್ತದೆ. ವಿವರ **<u>ಅನುಬಂಧ – 20ರಲ್ಲಿ ನೀಡಿದೆ.</u>**

ವಿದ್ಯಾರ್ಥಿವೇತನದ ಕಡತ ಪರಿಶೀಲಿಸಿದಾಗ 2015–16ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ವಿವಿಧ ಶೈಕ್ಷಣಿಕ ವಿಭಾಗಗಳಿಗೆ ನೋಂದಣಿಯಾಗಿರುವುದು ಕಂಡುಬಂದಿದೆ. ನೋಂದಣಿಗೆ ಸಂಬಂಧಿಸಿದಂತೆ ವಿದ್ಯಾರ್ಥಿವೇತನವನ್ನು ಕ್ಲೈಮು ಮಾಡಿದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಮೊಬಲಗು (ಬೇಡಿಕೆ) ಬೇಡಿಕೆ ಪಟ್ಟಿಯಲ್ಲಿ ಅನರ್ಹಗೊಂಡ ವಿದ್ಯಾರ್ಥಿವೇತನದ ವಿವರ ಹಾಗೂ ಮಂಜೂರಾತಿಯಾಗದೆ ಬಾಕಿ ಉಳಿದ ವಿದ್ಯಾರ್ಥಿವೇತನದ ಮೊತ್ತದ ಮಾಹಿತಿಯು ಕಡತದಿಂದ ಲಭ್ಯವಿರುವುದಿಲ್ಲ. ಇದರಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆಯಾಗಬೇಕಾದ ವಿದ್ಯಾರ್ಥಿಗಳ (Hostel Mess) ವಿದ್ಯಾರ್ಥಿನಿಲಯದ ಮೆಸ್‌ಬಿಲ್ ವೆಚ್ಚ ಮತ್ತು ಬೋಧನಾ ಶುಲ್ಕಗಳ ಮರುಭರಿಕೆ ವಿವರವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಬೇಡಿಕೆ, ಮಂಜೂರಾದ ಮೊತ್ತ ಹಾಗೂ ವಿತರಣೆ

ಸದರಿ ಕಂಡಿಕೆಯ ಅನುಬಂಧ–20 ರಲ್ಲಿ ಪ್ರಸ್ತಾಪಿಸಿರುವಂತೆ 2014–15 ನೇ ಸಾಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವು 2015–16 ನೇ ಸಾಲಿನಲ್ಲಿ ಒಟ್ಟು ಮಂಜೂರಾದ ಮೊತ್ತ ರೂ3,55,30,820/–ಗಳು. ಆದರೆ ವಾಸ್ತವವಾಗಿ ಖಾತೆಗೆ ಜಮಾ ಆಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನದ ಒಟ್ಟು ಮೊತ್ತ ರೂ1,95,38,926/–ಗಳು. ವ್ಯತ್ಯಾಸದ ಒಟ್ಟು ಮೊತ್ತ ರೂ1,59,91,894/–ಗಳಿಗೆ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಅನುಬಂಧ20 ರ ಕ್ರಸಂ | ಮೊತ್ತ | ವಿವರ |
|---|---|---|---|
| 1 | 2 | 2,41,208 | 2015–16 ನೇ ಸಾಲಿನ ವಿದ್ಯಾರ್ಥಿವೇತನ(23–08–2016) |
| 2 | 10 | 1,10,19,256 | ಕ್ರಮಸಂಖ್ಯೆ (9)ರಲ್ಲಿದ್ದು ( ರದ್ದುಪಡಿಸಿದೆ) |
| 3 | 11 | 47,31,430 | ವಿದ್ಯಾರ್ಥಿವೇತನ ಖಾತೆಗೆ ಜಮಾ ಆಗಿರುವುದಿಲ್ಲ. ( ರದ್ದುಪಡಿಸಿದೆ). |
| ವ್ಯತ್ಯಾಸದ ಒಟ್ಟು ಮೊತ್ತ | | 1,59,91,894 | |

ಮಾಹಿತಿಯನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಸಮಾಜ ಕಲ್ಯಾಣ ಇಲಾಖೆಗೆ ಪ್ರತಿ ವರ್ಷ ಸಲ್ಲಿಸಿ ಮರುಭರಿಕೆಗೆ ಸೂಕ್ತ ಕ್ರಮಕೈಗೊಳ್ಳುವುದು ಮತ್ತು ಬೇಡಿಕೆ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸುವುದು.

2015–16ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಮಂಜೂರಾದ ನಿಲಯದ ನಿರ್ವಹಣಾ ಭತ್ಯೆ/ವಿಶ್ವವಿದ್ಯಾನಿಲಯದ ಬೋಧನಾ ಶುಲ್ಕದ ವಿದ್ಯಾರ್ಥಿವೇತನ ರೂ.3,50,71,972/–ಗಳನ್ನು RTGS ಮೂಲಕ ಶೈಕ್ಷಣಿಕ ವಿಭಾಗಗಳಿಂದ ವಿದ್ಯಾರ್ಥಿಗಳ ಹಾಜರಾತಿ ಮತ್ತು ನಿಲಯದ (Hostel) ವಿದ್ಯಾರ್ಥಿಗಳ ಹಾಜರಾತಿಯನ್ನು ಪರಿಗಣಿಸಿ ಮಂಜೂರಾದ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯ ಆದೇಶದ ಪ್ರಕಾರ ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ಅಥವಾ ವಿದ್ಯಾರ್ಥಿಗಳ ಪ್ರವೇಶಾತಿ ಸಮಯದಲ್ಲಿ ಬ್ಯಾಂಕ್ ಖಾತೆ ಸಂಖ್ಯೆ/IFSC Code No. ಮುಂತಾದ ವಿವರಗಳನ್ನು ಪಡೆದು ವಿದ್ಯಾರ್ಥಿವೇತನ ಮಂಜೂರಾದ 15 ದಿನಗಳ ಒಳಗೆ ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಸಂದಾಯ ಮಾಡಬೇಕಾಗಿರುತ್ತದೆ ಹಾಗೂ ಶುಲ್ಕ ಬಾಬ್ತು ಹೊಂದಾಣಿಕೆ ಮಾಡಿಕೊಂಡ ಬಗ್ಗೆ ಮಂಜೂರಾದ ವಿದ್ಯಾರ್ಥಿವೇತನದ ಪೂರ್ಣಮೊತ್ತಕ್ಕೆ ವಿದ್ಯಾರ್ಥಿಗಳಿಂದ ದ್ವಿಪ್ರತಿಯಲ್ಲಿ ಬಟವಾಡೆ ತಃಖ್ತೆಗೆ ಸಹಿ ಪಡೆಯಬೇಕಾಗಿರುತ್ತದೆ.

ಪ್ರಸ್ತುತ ಲೆಕ್ಕ ತನಿಖಾ ಸಂದರ್ಭದಲ್ಲಿ ವಿದ್ಯಾರ್ಥಿವೇತನದ ಬಟವಾಡೆ ವಹಿಯನ್ನು ಪರಿಶೀಲಿಸಿದಾಗ ಸರ್ಕಾರದಿಂದ ಮಂಜೂರಾದ ಒಟ್ಟು ಮೊತ್ತ ರೂ. 3,50,71,972/–

| | |
|---|---|
| ಒಟ್ಟು ಮಂಜೂರಾದ ಮೊತ್ತ | 3,50,71,972 |
| ವಿತರಿಸಲಾದ ಮೊತ್ತ | 1,01,80,166 |
| ವಿತರಿಸದೆ ಬಾಕಿ ಉಳಿದ ಮೊತ್ತ | ರೂ.2,48,91,736 |

ಪ್ರಸಕ್ತ ಸಾಲಿನವರೆಗೂ ವಿದ್ಯಾರ್ಥಿವೇತನ ವಿತರಿಸದೆ ಬಾಕಿ ಉಳಿದಿರುವುದು ಕಂಡುಬಂದಿದ್ದು, ಈ ಕ್ರಮವು ನಿಯಮಬಾಹಿರವಾಗಿರುವುದರಿಂದ ಕೂಡಲೇ ಬಡ್ಡಿ ಸಮೇತ ಮಂಜೂರಾದ ಹಣವನ್ನು ಸಂಬಂಧಿತ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಸೂಚಿಸಿದೆ. ಹಾಗೂ ಬ್ಯಾಂಕ್ ತಃಖ್ತೆಯೊಂದಿಗೆ ಉಳಿಕೆ ಲಭ್ಯವಿರುವ ಶಿಲ್ಕನ್ನು ಸಮನ್ವಯಗೊಳಿಸಿ ಅಂತಿಮ ಶಿಲ್ಕಿನ ವರದಿ ನೀಡುವಂತೆ ಸೂಚಿಸಿದೆ.

ವಿದ್ಯಾರ್ಥಿನಿಲಯಗಳಲ್ಲಿ Bio-Metric ಪದ್ಧತಿ ಅಳವಡಿಸಿರುವ ಕ್ರಮದ ಬಗ್ಗೆ ಮಾಹಿತಿಯನ್ನು ಲೆಕ್ಕ ಪರಿಶೋಧನೆಗೆ ಒದಗಿಸುವುದು. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:2/6/09.04.2018 ಮತ್ತು

2015–16ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಖಾತೆಗೆ ಸ್ವೀಕೃತವಾದ ಒಟ್ಟು ಮೊತ್ತ ರೂ.1,95,38,926/–ಗಳಲ್ಲಿ ಈ ವರೆಗೂ ವಿದ್ಯಾರ್ಥಿಗಳಿಗೆ ವಿತರಿಸಲಾದ ಮೊತ್ತ ರೂ.1,06,18,700+ರೂ.77,72,075=1,83,90,775/–ಗಳು. ಉಳಿಕೆ ಮೊತ್ತ ರೂ.11,48,151/–ಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿ ವೇತನದ ಖಾತೆಯಲ್ಲಿ 2015–16ನೇ ಸಾಲಿಗೆ ಬಾಕಿ ಉಳಿದಿರುತ್ತದೆ. ಸದರಿ ಮೊತ್ತ ರೂ. 11,48,151/–ಗಳನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿದ್ದು, ವಿಶ್ವವಿದ್ಯಾನಿಲಯದ ಪ್ರವೇಶಾತಿ ಶುಲ್ಕ, ಪರೀಕ್ಷಾ ಶುಲ್ಕ ಮತ್ತು ಮೆಸ್‌ನ ಮೊತ್ತವು ಸೇರಿರುತ್ತದೆ. ವಿದ್ಯಾರ್ಥಿಗಳು ಬಟವಾಡೆ ಫಾರಂಗಳನ್ನು ಸಲ್ಲಿಸಿದ ತಕ್ಷಣವೇ ವಿಶ್ವವಿದ್ಯಾನಿಲಯಕ್ಕೆ ಪಾವತಿಸಿ ಉಳಿದ ಮೊತ್ತವನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗುವುದು. ಈ ಬಗ್ಗೆ ವಿತರಣೆಯಾಗದೆ ಉಳಿದಿರುವ ವಿದ್ಯಾರ್ಥಿ ವೇತನದ ಬಗ್ಗೆ ವಿದ್ಯಾರ್ಥಿಗಳಿಗೆ ಪತ್ರ ವ್ಯವಹರಿಸಿ ವಿತರಣೆ ಬಗ್ಗೆ ಕ್ರಮವಹಿಸುವುದಾಗಿ ಅಥವಾ ವಿದ್ಯಾರ್ಥಿಗಳು

11.04.2018ರಲ್ಲಿ ಮಾಹಿತಿ ಕೋರಲಾಗಿದ್ದು, ಯಾವುದೇ ಉತ್ತರ ನೀಡಿರುವುದಿಲ್ಲ. ಶೀಘ್ರ ಕ್ರಮಕೈಗೊಳ್ಳುವಂತೆ ಸೂಚಿಸಿದೆ. ಮತ್ತು ಹಿಂದಿನ ಸಾಲುಗಳಲ್ಲಿ ಬಟವಾಡೆಯಾಗದೆ ಉಳಿದ ಮೊತ್ತ **ರೂ.2,48,91,736/–ಗಳನ್ನು** ಸಹ ಹಿಂದಿರುಗಿಸಲು ಕ್ರಮಕೈಗೊಳ್ಳಲು ಸೂಚಿಸಿದೆ.

**11. 2015–16ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾದ ವಿದ್ಯಾರ್ಥಿವೇತನ ಪೂರ್ಣವಾಗಿ ಬಟವಾಡೆಯಾಗದಿರುವ ಕುರಿತು :– (ಆಡಳಿತಾಧಿಕಾರಿಗಳ ಕಛೇರಿ)**

2015–16ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಶುಲ್ಕ, ವಿನಾಯಿತಿ ಬೇಡಿಕೆ ಮೊತ್ತವನ್ನು ಹಾಗೂ ಮಂಜೂರಾತಿಯಾದ ಬಾಕಿಯ ವಿವರಗಳನ್ನು ಬಟವಾಡೆ ವಹಿಯೊಂದಿಗೆ ಪರಿಶೀಲಿಸಿದಾಗ 2015–16ನೇ ಸಾಲಿನಲ್ಲಿ ವಿಭಾಗಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಂಬಂಧಿತ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮೊತ್ತ ರೂ.1,33,11,937/–ಗಳು ಮಾತ್ರ ಮಂಜೂರಾಗಿರುತ್ತದೆ. ಮಂಜೂರಾಗಬೇಕಾಗಿರುವ ವಿವರ ಕೆಳಗಿನಂತಿದೆ.

| | | |
|---|---|---|
| 1 | 2014–15ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬರಬೇಕಾದ ಶುಲ್ಕ ವಿನಾಯಿತಿ ಮೊತ್ತ | 1,80,06,131 |
| 2 | 2015–16ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಲ್ಲಿಸಿರುವ ಶುಲ್ಕ ವಿನಾಯಿತಿ ಮೊತ್ತ | 1,45,88,964 |
| 3 | 2015–16ನೇ ಸಾಲಿಗೆ ಒಟ್ಟು ಬೇಡಿಕೆ ಮೊತ್ತ | 3,25,95,095 |
| 4 | 2015–16ನೇ ಸಾಲಿಗೆ ಇಲಾಖೆಯಿಂದ ಮಂಜೂರಾದ ಮೊತ್ತ | 1,33,11,937 |
| 5 | 2015–16ನೇ ಸಾಲಿಗೆ ಹಿಂದುಳಿದ ವರ್ಗಗಳ ಇಲಾಖೆಯಿಂದ ಶುಲ್ಕ ವಿನಾಯಿತಿಯು ಮಂಜೂರಾತಿಯಾಗದೆ ಇರುವ ಬಾಕಿ ಮೊತ್ತ | 1,92,83,158 |

ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಬಟವಾಡೆ ವಹಿಯನ್ನು ಪರಿಶೀಲಿಸಿದಾಗ ರೂ.1,29,07,629/–ಗಳು ಮಾತ್ರ ಬಟವಾಡೆಯಾಗಿದ್ದು, ರೂ.4,04,164/–ಗಳು ಬಟವಾಡೆಯಾಗದೆ ಉಳಿಕೆ ಇರುತ್ತದೆ. ಪ್ರಸಕ್ತ ಸಾಲಿನವರೆಗೂ ವಿತರಿಸದೆ ಬಾಕಿ ಉಳಿದಿರುವುದು ನಿಯಮ ಬಾಹಿರ ಕ್ರಮವಾಗಿರುವುದರಿಂದ ಶೀಘ್ರವಾಗಿ **ರೂ.4,04,164/–ಗಳನ್ನು ಬಡ್ಡಿ ಸಮೇತ ವಸೂಲಿಸಿ** ಸಂಬಂಧಿತ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಸಾಲುಗಳಲ್ಲಿ ಬಟವಾಡೆಯಾಗದೆ ಉಳಿದ ಮೊತ್ತವನ್ನು ಸಹ ಹಿಂದಿರುಗಿಸಲು ಕ್ರಮಕೈಗೊಳ್ಳುವುದು ಹಾಗೂ ಬ್ಯಾಂಕ್ ತಃಖ್ತೆಯೊಂದಿಗೆ ಉಳಿಕೆ ಶಿಲ್ಕನ್ನು ಸಮನ್ವಯಗೊಳಿಸಿ ವರದಿ ನೀಡುವಂತೆ ಸೂಚಿಸಿದೆ. ಮತ್ತು ಇಲಾಖೆಯಿಂದ ಮರುಭರಿಕೆಯಾಗಬೇಕಾಗಿರುವ ಶುಲ್ಕ ವಿನಾಯಿತಿ ಮೊತ್ತ ರೂ.1,92,83,158/–ಗಳಿಗೆ ಸೂಕ್ತ ಕ್ರಮಕೈಗೊಂಡು

2015–16 ರ ಸಾಲಿಗೆ ಮಂಜೂರಾಗದೇ ಬಾಕಿ ಇದ್ದ ಮೊತ್ತ ರೂ.1,92,83,158–00ಗಳು. ಈ ಪೈಕಿ 2016–17 ನೇ ಸಾಲಿನಲ್ಲಿ ರೂ.1,46,50,299–00ಗಳು ಮಂಜೂರಾತಿ ಆಗಿರುತ್ತದೆ. ಈ ಮೊತ್ತದ ಪೈಕಿ ಯಾವ ಯಾವ ವಿದ್ಯಾರ್ಥಿಗಳಿಂದ ಶುಲ್ಕ ವಿನಾಯಿತಿ ಮೊತ್ತ ಬಾಕಿ ಇರುತ್ತದೆಂಬುದನ್ನು ಲೆಕ್ಕ ಹಾಕಿ ವಿದ್ಯಾರ್ಥಿಗಳಿಂದ ಬಟವಾಡೆ ನಮೂನೆಯನ್ನು ಸಹಿಯೊಂದಿಗೆ ಸಲ್ಲಿಸಿದ ಕೂಡಲೇ ಪೂರ್ಣ ಪ್ರಮಾಣದಲ್ಲಿ ಬಟವಾಡೆ ಮಾಡಿ ವಿವರ ಒದಗಿಸಲಾಗುವುದು.

ವಿಶ್ವವಿದ್ಯಾನಿಲಯದ ನಿಧಿಗೆ ಮರುಭರಿಕೆ ಮಾಡಿಕೊಳ್ಳುವಂತೆ ಕ್ರಮವಹಿಸಲು ಸೂಚಿಸಿದೆ. (ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ: 20/24.04.2018)

**12. ಜಯಲಕ್ಷ್ಮೀ ವಿಲಾಸ ಅರಮನೆ ವಸ್ತು ಸಂಗ್ರಹಾಲಯಕ್ಕೆ ಆಗಮಿಸಿದ ವೀಕ್ಷಕರಿಂದ/ಸಂದರ್ಶಕರಿಂದ ವೀಕ್ಷಣಾ ಶುಲ್ಕ ವಸೂಲಿಸದಿರುವುದು:– (ಜಯಲಕ್ಷ್ಮೀ ವಿಲಾಸ ವಸ್ತು ಸಂಗ್ರಹಾಲಯ)**

ಮೈಸೂರು ವಿಶ್ವವಿದ್ಯಾನಿಲಯ, ವಸ್ತು ಸಂಗ್ರಹಾಲಯ ಸಂಕೀರ್ಣ, ಜಯಲಕ್ಷ್ಮೀ ವಿಲಾಸ ಅರಮನೆ ವೀಕ್ಷಣೆಗಾಗಿ ಆಗಮಿಸಿದ ವೀಕ್ಷಕರು ಮತ್ತು ಸಂದರ್ಶಕರ ವಿವರಗಳ ಪಟ್ಟಿ ಈ ಕೆಳಕಂಡಂತಿದೆ.

| ಸಾಲು/ವರ್ಷ | ವೀಕ್ಷಣೆಗೆ ಭೇಟಿ ನೀಡಿದ ಸಂದರ್ಶಕರ/ವೀಕ್ಷಕರ ಒಟ್ಟು ಸಂಖ್ಯೆ |
|---|---|
| 2012–13 | 150 |
| 2013–14 | 573 |
| 2014–15 | 4048 |
| 2015–16 | 4100 |
| **ಒಟ್ಟು** | **8,871** |

ಜಯಲಕ್ಷ್ಮೀ ವಿಲಾಸ ಅರಮನೆಯ ವಸ್ತು ಸಂಗ್ರಹಾಲಯಕ್ಕೆ ಪ್ರತೀ ನಿತ್ಯ ವೀಕ್ಷಕರು ಮತ್ತು ಸಂದರ್ಶಕರು ವೀಕ್ಷಣೆಗೆ ಆಗಮಿಸುತ್ತಿರುವುದು ಕಂಡು ಬಂದಿದ್ದು. ಈ ಸಂಬಂಧ 2012–13ನೇ ಸಾಲಿನಿಂದ 2015–16ನೇ ಸಾಲಿನವರೆಗೆ ವೀಕ್ಷಕರಿಂದ ಮತ್ತು ಸಂದರ್ಶಕರಿಂದ ಸಂಗ್ರಹಿಸಲಾದ ವೀಕ್ಷಣಾ ಶುಲ್ಕಕ್ಕೆ ಸಂಬಂಧಿಸಿದಂತೆ, ರಶೀದಿ ಪುಸ್ತಕಗಳು, ದಿನವಹಿ ಪುಸ್ತಕ, ಬ್ಯಾಂಕ್ ಖಾತೆಗೆ ಜಮಾ ಮಾಡಿದ ವಿವರಗಳು, ನಿಗದಿಪಡಿಸಿದ ಶುಲ್ಕ, ಪ್ರತಿ ನಿತ್ಯ ಆಗಮಿಸಿ ವೀಕ್ಷಿಸಿದ ಸಂದರ್ಶಕರ ಒಟ್ಟು ಸಂಖ್ಯೆ ಮತ್ತು ಶುಲ್ಕ ನಿಗದಿಪಡಿಸಿದ ಆದೇಶದ ಪ್ರತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:14/2018–19 ನ್ನು ದಿನಾಂಕ:26.04.2018ರಂದು ನೀಡಿದರೂ ಸಹ ಹಾಜರುಪಡಿಸದೇ ಕೇವಲ ಮೇಲ್ಕಂಡ ಸಾಲುಗಳಲ್ಲಿ ಸಂದರ್ಶಿಸಿದವರ/ವೀಕ್ಷಿಸಿದವರ ಸಂಖ್ಯೆ ವಿವರಗಳನ್ನು ಮಾತ್ರ ನೀಡಿದ್ದು ಮೇಲ್ಕಂಡ ಸಾಲುಗಳಲ್ಲಿ ಒಟ್ಟು 8871 ವೀಕ್ಷಕರು/ಸಂದರ್ಶಕರು ಈ ವಸ್ತು ಸಂಗ್ರಹಾಲಯವನ್ನು ವೀಕ್ಷಿಸಿರುತ್ತಾರೆ.

ಹಾಜರುಪಡಿಸಿದ ರಶೀದಿ ಪುಸ್ತಕಗಳನ್ನು ಪರಿಶೀಲಿಸಲಾಗಿ, ವಸ್ತು ಸಂಗ್ರಹಾಲಯದ ವೀಕ್ಷಣಾ ಶುಲ್ಕ ಸಂಗ್ರಹಣೆಗಾಗಿಯೇ ಪ್ರವೇಶ ಶುಲ್ಕಕ್ಕಾಗಿ ಮಕ್ಕಳಿಗಾಗಿ ರೂ.2/– ರಂತೆ ವಸೂಲಿಸಲು ರಶೀದಿ ಪುಸ್ತಕ ಸಂಖ್ಯೆ:001 ರಿಂದ 030 ರವರೆಗೆ ಒಟ್ಟು 30 ಪುಸ್ತಕಗಳು, ವಯಸ್ಕರಿಗಾಗಿ ಪ್ರವೇಶ ಶುಲ್ಕ ರೂ.5/– ರಂತೆ ವಸೂಲಿಸಲು ರಶೀದಿ ಪುಸ್ತಕ ಸಂಖ್ಯೆ:001 ರಿಂದ 030 ರವರೆಗೆ ಒಟ್ಟು 30 ಪುಸ್ತಕಗಳು ಹಾಗೂ ವಿದೇಶಿಯರಿಗಾಗಿ ಪ್ರವೇಶ ಶುಲ್ಕ ರೂ.5/–ರಂತೆ ವಸೂಲಿಸಲು ರಶೀದಿ ಪುಸ್ತಕ ಸಂಖ್ಯೆ:001 ರಿಂದ 020

ಮೈಸೂರು ವಿಶ್ವವಿದ್ಯಾನಿಲಯ ವಸ್ತು ಸಂಗ್ರಹಾಲಯ ಸಂಕೀರ್ಣ ಜಯಲಕ್ಷ್ಮಿ ವಿಲಾಸ ಅರಮನೆ ವೀಕ್ಷಣೆಗಾಗಿ 2012–13 ನೇ ಸಾಲಿನಿಂದ 2015–16ನೇ ಸಾಲಿನವರೆಗೆ ಆಗಮಿಸಿದ ವೀಕ್ಷಕರು ಮತ್ತು ಸಂದರ್ಶಕರು, ಸಂದರ್ಶನ ಪುಸ್ತಕದಲ್ಲಿ ಸಹಿ ಮಾಡಿರುವ ಹಿನ್ನೆಲೆಯಲ್ಲಿ ಆಗಮಿಸುವ ವೀಕ್ಷಕರಿಗೆ ಹಿಂದಿನಿಂದ ಹಾಗೂ ಈವರೆಗೂ ಉಚಿತ ಪ್ರವೇಶವೇ ಹೊರತು ಯಾವುದೇ ರೀತಿಯ ಶುಲ್ಕವನ್ನು ವಸೂಲಿ ಮಾಡುತ್ತಿರುವುದಿಲ್ಲ. ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ನಿರ್ದೇಶಕರು ಸಂಗ್ರಹಾಲಯದ ಅಭಿವೃದ್ಧಿ ಕಾರ್ಯಗಳಿಗೆ ಎಂದು ತಮ್ಮ ಸ್ವಇಚ್ಛೆಯಿಂದ ಪ್ರವೇಶ ಶುಲ್ಕ ಚೀಟಿಗಳನ್ನು ಮುದ್ರಣ ಮಾಡಿಸಿ ಇಟ್ಟುಕೊಂಡಿರುತ್ತಾರೆ. ಆದರೆ ಇವುಗಳನ್ನು ಉಪಯೋಗಿಸಿರುವುದಿಲ್ಲ. ಲೆಕ್ಕ ಪರಿಶೋಧನಾ ಸಮಯದಲ್ಲಿ ಲೆಕ್ಕ ಪರಿಶೋಧನಾಧಿಕಾರಿಗಳ ಸೂಚನೆಯಂತೆ ಮುದ್ರಿತವಾದ ಹಾಗೂ ಉಪಯೋಗಿಸದೆ ಇರುವ ಎಲ್ಲಾ ರಶೀದಿ ಪುಸ್ತಕಗಳನ್ನು ನಿರ್ದೇಶಕರು, ಜಯಲಕ್ಷ್ಮಿ ವಿಲಾಸ ಅರಮನೆ ವಸ್ತು ಸಂಗ್ರಹಾಲಯ, ಮಾನಸಗಂಗೋತ್ರಿ ರವರು ಪತ್ರ ಸಂಖ್ಯೆ 68/2018–19 ದಿನಾಂಕ 7.11.2018 ರಂದು ಮಾನ್ಯ ಕುಲಸಚಿವರ ಕಛೇರಿಗೆ ಹಿಂದಿರುಗಿಸಿ ಅವರಿಂದ ಸ್ವೀಕೃತಿ ಪತ್ರ ಪಡೆದಿರುವ ಬಗ್ಗೆ ಪತ್ರದ ಪ್ರತಿ ಲಗತ್ತಿಸಿ ಸಲ್ಲಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಜಯಲಕ್ಷ್ಮೀ ವಿಲಾಸ ಅರಮನೆಯ ವಸ್ತು ಸಂಗ್ರಹಾಲಯಕ್ಕೆ ವೀಕ್ಷಣೆಗೆ ಆಗಮಿಸುವ ವೀಕ್ಷಕರಿಗೆ/ಪ್ರವಾಸಿಗಳಿಗೆ ಹಿಂದಿನಿಂದಲೂ ಹಾಗೂ ಈವರೆಗೂ ಉಚಿತ ಪ್ರವೇಶವೇ ಹೊರತು ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಬಯಸುತ್ತಾ ರೂ.44,355/–ಗಳ ಆಕ್ಷೇಪಣೆ ತೀರುವಳಿಗೊಳಿಸಲು ಕೋರಿದೆ.

| | |
|---|---|
| ರವರೆಗೆ ಒಟ್ಟು 20 ಪುಸ್ತಕಗಳು ಭೌತಿಕವಾಗಿ ಇರುತ್ತದೆ.<br><br>ಪ್ರವೇಶ ಶುಲ್ಕ ಸಂಗ್ರಹಣೆಗಾಗಿಯೇ ರಶೀದಿ ಪುಸ್ತಕಗಳಿದ್ದು, ಅವುಗಳನ್ನು ಉಪಯೋಗಿಸಿ, ಶುಲ್ಕ ವಸೂಲಿಸದೇ ಆರ್ಥಿಕ ನಷ್ಟ ಉಂಟು ಮಾಡಿರುವುದರಿಂದ ಮೇಲ್ಕಂಡ ಸಾಲುಗಳಲ್ಲಿ ಒಟ್ಟು 8871 ವೀಕ್ಷಕರು ವೀಕ್ಷಿಸಿರುವುದರಿಂದ ವಯಸ್ಕರ ಪ್ರವೇಶ ಶುಲ್ಕ ರೂ.5/-ರಂತೆ ಪರಿಗಣಿಸಿ ಒಟ್ಟು **ರೂ.44,355/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.** | |
| **13. <u>ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬೇಡಿಕೆ ವಸೂಲಿ ಹಾಗೂ ಬಾಕಿ ವಿವರಗಳ ಪರಿಶೀಲನೆ :- (ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)</u>**<br><br>204-15ನೇ ಮತ್ತು 2015-16ನೇ ಸಾಲಿನ ಇ.ಎಂ.ಆರ್.ಸಿ ಕಾಲೇಜಿನ M.sc electronic media ವಿಷಯಕ್ಕೆ ಪ್ರವೇಶಾತಿ ಪಡೆಯಲಾಗಿರುವ ವಿವಿಧ ಪಂಗಡವಾರು ವಿದ್ಯಾರ್ಥಿಗಳ ವಿವರಗಳನ್ನು ಹಾಗೂ ವಸೂಲಿ ಮಾಡಲಾಗಿರುವ ಪ್ರವೇಶಾತಿ ಶುಲ್ಕಗಳ ವಿವರಗಳನ್ನು ಪರಿಶೀಲಿಸಲಾಗಿ ವಿವರಗಳನ್ನು **<u>ಅನುಬಂಧ-21ರಲ್ಲಿ</u>** ವಿವರಿಸಲಾಗಿದೆ. ಪ್ರವೇಶಾತಿ ಪಡೆದ 2014-15 ಮತ್ತು 2015-16ನೇ ಸಾಲುಗಳಲ್ಲಿ ತರಗತಿವಾರು ಒಟ್ಟಾರೆ ವಸೂಲಾತಿ ಮಾಡಿರುವ ಶುಲ್ಕ **ರೂ.13,29,620/- ಗಳಾಗಿದ್ದು**, ಕಡಿಮೆ ವಸೂಲಿ ಮಾಡಿರುವ ಮೊತ್ತವನ್ನು ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವಾಗ ಶುಲ್ಕ ವಿನಾಯಿತಿ ಪಡೆದಿರುವ ಮೊತ್ತವನ್ನು ಸರ್ಕಾರದಿಂದ ಇದುವರೆಗೂ ಮರುಭರಿಕೆಯಾಗದಿರುವುದರಿಂದ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ **ರೂ.15,35,193/-ಗಳನ್ನು ವಸೂಲಾತಿ** ಮಾಡಿ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡುವಂತೆ ಸೂಚಿಸಿದೆ. | 2014-15, 2015-16ನೇ ಸಾಲಿನಲ್ಲಿ M.sc electronic media ಕೋರ್ಸಿಗೆ ಉಚಿತವಾಗಿ ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಶುಲ್ಕ ಮರುಭರಿಕೆಯಾಗಿದೆ. ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕ, ಸರ್ಕಾರದಿಂದ ಬಂದ ಮರುಭರಿಕೆ ಶುಲ್ಕಗಳನ್ನು ಹೊಂದಾಣಿಕೆ ಮಾಡಿ ಈ ಕೇಂದ್ರದ ವಿದ್ಯಾರ್ಥಿ ವೇತನ ವಹಿಯಲ್ಲಿ ದಾಖಲಿಸಲಾಗಿದೆ. ಈ ಬಾಬ್ತು ಹೊಂದಾಣಿಕೆಯಾಗಿದ್ದು, ಈ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಾಗಿದ್ದು, ಸರ್ಕಾರಿ ಆದೇಶದಂತೆ ಉಚಿತ ಪ್ರವೇಶ ಪಡೆದುಕೊಂಡಿದ್ದು, ಪ್ರವೇಶಾತಿ ಬೋಧನ ಶುಲ್ಕಗಳು ಸರ್ಕಾರದಿಂದ ಮರುಭರಿಕೆಯಾಗಿವೆ. ಈ ಬಾಬ್ತು ತಃಖ್ತೆಯನ್ನು ತಯಾರಿಸಿದ್ದು, ಧನಾದೇಶದ ಮೂಲಕ ವಿದ್ಯಾರ್ಥಿಗಳಿಗೆ ಪಾವತಿಸಲಾಗಿದೆ. ಈ ವಿವರಗಳು ವಿದ್ಯಾರ್ಥಿ ವೇತನ ವಿತರಣ ವಹಿಯ ಪುಟ ಸಂಖ್ಯೆ: 05 ಮತ್ತು 06ರಲ್ಲಿ ದಾಖಲಿಸಲಾಗಿದೆ.<br>ಸರ್ಕಾರದಿಂದ ಮರುಭರಿಕೆಯಾಗದಿರುವ ಮೊತ್ತವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ವಿದ್ಯಾರ್ಥಿಗಳಿಗೆ ಬೇಬಾಕಿ ಪತ್ರಗಳನ್ನು ನೀಡಿ ಪದವಿ ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳನ್ನು ಪಡೆದುಕೊಂಡಿರುತ್ತಾರೆ ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತಂದು ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.15,35,193/-ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |

| | |
|---|---|
| 14. **<u>ಪ್ರೊ॥ ಸುಚೇತನ ಸ್ವರೂಪ್‌ರವರನ್ನು ಇ.ಎಂ.ಎಂ.ಆರ್.ಸಿ ಮಾರ್ಗಸೂಚಿಯ ನಿಯಮಾವಳಿಗಳನ್ನು ಉಲ್ಲಂಘಿಸಿ ನಿರ್ದೇಶಕರಾಗಿ ನಿಯೋಜನೆಗೊಳಿಸಿರುವುದು :– (ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)</u>**<br><br>2014–15ನೇ ಮತ್ತು 2015–16ನೇ ಸಾಲಿನಲ್ಲಿ ಲೆಕ್ಕತಪಾಸಣೆಯಲ್ಲಿ ಇ.ಎಂ.ಎಂ.ಆರ್.ಸಿ ನಿರ್ದೇಶಕರಾಗಿ ಪ್ರೊ॥ ಸುಚೇತನ ಸ್ವರೂಪ್ ಸಿದ್ಧಾರ್ಥ ಕಾಲೇಜು, ತುಮಕೂರು ರವರನ್ನು ನಿಯೋಜನೆ ಮಾಡಿಕೊಂಡು ವೇತನ ಪಾವತಿಸಿರುವುದನ್ನು ಲೆಕ್ಕತಪಾಸಣೆಯಲ್ಲಿ ಪರಿಶೀಲಿಸಲಾಗಿದ್ದು, ಯು.ಜಿ.ಸಿ ಗೈಡ್‌ಲೈನ್ಸ್ for media centre ಮಾರ್ಗಸೂಚಿ ಅನ್ವಯ guidelines of staffing pattern and procedure for recruitment & Assessment of the personnel of UGC media centre Feb 1996 ಮಾರ್ಗಸೂಚಿಯನ್ವಯ ಪೂರ್ಣಕಾಲಿಕ ನಿರ್ದೇಶಕರು ನೇಮಕವಾಗದಿದ್ದರೆ ಅಥವಾ ಧೀರ್ಘ ಕಾಲದ ರಜೆ ಮೇಲೆ ತೆರಳಿದ್ದರೆ ವಿಶ್ವವಿದ್ಯಾನಿಲಯದ ಸೇವಾ ಹಿರಿತನವುಳ್ಳ ಪ್ರಾಧ್ಯಾಪಕರನ್ನು ನಿಯೋಜಿಸಬೇಕಾಗಿರುತ್ತದೆ. ಆದರೆ ಪ್ರೊ॥ ಸುಚೇನತ ಸ್ವರೂಪ್ ಸಿದ್ಧಾರ್ಥ ಕಾಲೇಜು, ತುಮಕೂರುರವರನ್ನು ನಿಯೋಜನೆಗೊಳಿಸಿರುವ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಮೌಖಿಕವಾಗಿ ಕೋರಲಾಗಿ ಕೋರಿರುವ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದರಿಂದ ಪ್ರೊ॥ಸುಚೇತನ ಸ್ವರೂಪ್ ಸಿದ್ಧಾರ್ಥ ಕಾಲೇಜು, ತುಮಕೂರು ರವರಿಗೆ ಪಾವತಿಸಿರುವ ವೇತನ **ರೂ.3,15,052/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಈ ಬಗ್ಗೆ ಸೂಕ್ತ ಕ್ರಮವಹಿಸಿ ಕಛೇರಿ ಮುಖ್ಯಸ್ಥರು ಸಂಬಂಧಪಟ್ಟ ದಾಖಲಾತಿಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ದಿನಾಂಕ: 28.03.2013 ರಂದು ನಡೆದ ಸಿಂಡಿಕೇಟ್ ಸಭೆಯ ಅನುಮೋದನೆಯ ಅನ್ವಯ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಡಿ.ವಿ.3/11/2010–11, ದಿನಾಂಕ: 03.06.2013 ರಂದು ಒಂದು ವರ್ಷದ ಅವಧಿಗೆ ಮಾತ್ರ ಎಂದು ನಿಯೋಜನೆ ಮೇರೆಗೆ ನೇಮಕ ಮಾಡಿರುತ್ತಾರೆ. ಅದರನ್ವಯ ಸದರಿಯವರು ದಿನಾಂಕ:3.06.2013 ರಿಂದ 2.06.2014 ರವರೆಗೆ ಮಾತ್ರ ನಿರ್ದೇಶಕರ ಹುದ್ದೆಯಲ್ಲಿರುತ್ತಾರೆ ಕಾರ್ಯ ನಿರ್ವಹಿಸಿದ ಅವಧಿಗೆ ವೇತನ ಪಾವತಿಸಿರುತ್ತಾರೆ. ಆದೇಶದ ಪ್ರತಿ ಲಗತ್ತಿಸಿದೆ.<br><br>ಈ ಅವಧಿಯಲ್ಲಿ ಇ.ಎಂ.ಎಂ.ಆರ್.ಸಿ ಕೇಂದ್ರದಲ್ಲಿ ನಿರೀಕ್ಷೆಗೂ ಮೀರಿದ ಸಾಧನೆಯಾಗಿದ್ದು ಉದ್ದೇಶಿತ ಗುರಿಯನ್ನು ಸಾಧಿಸಲಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.<br><br>ಆದ್ದರಿಂದ ಆಕ್ಷೇಪಣೆ ಮೊತ್ತ ರೂ.3,15,052/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ. |
| 18. **<u>ಸಂಯೋಜನಾ ಶುಲ್ಕಗಳ ಬ್ಯಾಂಕ್ ಜಮಾ ವಿವರಗಳ ಪರಿಶೀಲನೆಗೆ ಬ್ಯಾಂಕ್ ಸ್ಟೇಟ್ಮೆಂಟ್ (Bank Statement) ಹಾಜರುಪಡಿಸದಿರುವುದು:– (ಕಾಲೇಜು ಅಭಿವೃದ್ಧಿ ಮಂಡಳಿ)</u>**<br><br>2014–15 ಹಾಗೂ 2015–16ನೇ ಸಾಲುಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ವಿವಿಧ ಖಾಸಗಿ ಅನುದಾನಿತ ವಿದ್ಯಾಸಂಸ್ಥೆಗಳು, ಅನುದಾನ ರಹಿತ ಖಾಸಗಿ ವಿದ್ಯಾ ಸಂಸ್ಥೆಗಳು ಹಾಗೂ ಇತರೆ ವಿದ್ಯಾಸಂಸ್ಥೆಗಳಿಂದ ಕಾಲೇಜುಗಳನ್ನು ನಡೆಸಲು ಸಂಯೋಜನೆ ಮುಂದುವರೆಸಲು/ಹೊಸ ಕೋರ್ಸ್‌ಗಳನ್ನು ತೆರೆಯಲು/ಹೊಸ ವಿಷಯಗಳನ್ನು ಸೇರ್ಪಡೆ ಮಾಡಿಕೊಳ್ಳಲು/ಹಾಲಿ ಇರುವ ಕಾಲೇಜುಗಳಿಗೆ ಶಾಶ್ವತ ಸಂಯೋಜನೆ ನೀಡಲು/ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು/ಸ್ನಾತಕೋತ್ತರ ಕಾಲೇಜುಗಳನ್ನು ತೆರೆಯಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59(17) ಹಾಗೂ N.C.T.E New Regulations 2014 ರನ್ವಯ ಮತ್ತು ಯು.ಜಿ.ಸಿ ನಿಯಮಾವಳಿಗಳಂತೆ, ವಿ.ವಿ. ನಿಗದಿಪಡಿಸಿರುವ ಶುಲ್ಕಗಳನ್ನು ಪಡೆಯಬೇಕಾಗಿದ್ದು, ಹಲವು ಪ್ರಕರಣಗಳಲ್ಲಿ | 2014–15 ಹಾಗೂ 2015–16ನೇ ಸಾಲುಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ವಿವಿಧ ಖಾಸಗಿ ಅನುದಾನಿತ ವಿದ್ಯಾಸಂಸ್ಥೆಗಳು, ಅನುದಾನ ರಹಿತ ಖಾಸಗಿ ವಿದ್ಯಾ ಸಂಸ್ಥೆಗಳು ಹಾಗೂ ಇತರೆ ವಿದ್ಯಾಸಂಸ್ಥೆಗಳಿಂದ ಕಾಲೇಜುಗಳನ್ನು ನಡೆಸಲು ಸಂಯೋಜನೆ ಮುಂದುವರೆಸಲು/ಹೊಸ ಕೋರ್ಸ್‌ಗಳನ್ನು ತೆರೆಯಲು/ಹೊಸ ವಿಷಯಗಳನ್ನು ಸೇರ್ಪಡೆ ಮಾಡಿಕೊಳ್ಳಲು/ಹಾಲಿ ಇರುವ ಕಾಲೇಜುಗಳಿಗೆ ಶಾಶ್ವತ ಸಂಯೋಜನೆ ನೀಡಲು/ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು/ಸ್ನಾತಕೋತ್ತರ ಕಾಲೇಜುಗಳನ್ನು ತೆರೆಯಲು ಸಂಯೋಜನಾ ಶುಲ್ಕಗಳನ್ನು ಡಿ.ಡಿ ಮುಖಾಂತರ ಸ್ವೀಕರಿಸಿದ್ದು, ಜಿ.ಆರ್.ಎ. ಖಾತೆಗೆ ಜಮಾ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಬ್ಯಾಂಕ್ ಸ್ಟೇಟ್ಮೆಂಟ್‌ನ ಪ್ರತಿ ಹಾಗೂ ಜಮಾ |

ನಿಗದಿತ ಶುಲ್ಕ ಪಡೆದಿರುವುದಿಲ್ಲ, ಪಡೆಯಲಾಗಿರುವ ಶುಲ್ಕಗಳನ್ನು ಡಿ.ಡಿ. ರೂಪಗಳಲ್ಲಿ ಪಡೆಯಲಾಗಿದ್ದು, ಅವುಗಳಿಗೆ ರಶೀತಿಯನ್ನು ನೀಡಲಾಗಿದೆ. ಹಾಗೂ ವಿ.ವಿ.ಯ ಸಾಮಾನ್ಯ ರೆವಿನ್ಯೂ ಖಾತೆ (ಜಿ.ಆರ್.ಎ) ಗೆ ಜಮಾ ಮಾಡಿರುವ ಚಲನ್‌ಗಳನ್ನು ಹಾಜರುಪಡಿಸಲಾಗಿದೆ. ಆದರೆ ಜಿ.ಆರ್.ಎ ಖಾತೆಗೆ ಹೊಂದಾಣಿಕೆಯಾಗಿರುವುದನ್ನು ಖಾತರಿಪಡಿಸಿಕೊಳ್ಳಲು ಸದರಿ ಬ್ಯಾಂಕ್‌ನ ಬ್ಯಾಂಕ್ ಸ್ಟೇಟ್ಮೆಂಟ್ (Bank Statement)ನ್ನು ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:05/2017-18, ದಿನಾಂಕ:24.03.2018ರಲ್ಲಿ ತಿಳಿಸಲಾಗಿತ್ತು. ಆದರೆ ಸದರಿ ಸಂಸ್ಥೆಯವರು ಮಾಹಿತಿಯನ್ನು ಲಿಖಿತವಾಗಿ Bank Statement ನೊಂದಿಗೆ ಹಾಜರುಪಡಿಸಿಲ್ಲ. ಇದರಿಂದ ಜಮಾ ಮಾಡಿರುವ ಮೊತ್ತವು ವಿ.ವಿ. ನಿಧಿಗೆ ಹೊಂದಾಣಿಕೆಯಾಗಿರುವುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಪೂರ್ಣ ಮಾಹಿತಿಯನ್ನು ನೀಡುವವರೆಗೆ ಜಮಾ ಮಾಡಿರುವುದಾಗಿ ತಿಳಿಸಿರುವ ಎರಡು ವರ್ಷಗಳ ಒಟ್ಟು ಮೊತ್ತ **ರೂ.6,70,25,766/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**ಮಾಹೆವಾರು ಸ್ವೀಕೃತಿಯಾಗಿರುವ ವಿವರಗಳು ಇಂತಿವೆ**

| **2014-15ನೇ ಸಾಲು** | | | **2015-16ನೇ ಸಾಲು** | | |
|---|---|---|---|---|---|
| ಕ್ರ.ಸಂ | ಮಾಹೆ | ಸ್ವೀಕೃತಿಯಾಗಿರುವ ಮೊತ್ತ ರೂ. | ಕ್ರ.ಸಂ | ಮಾಹೆ | ಸ್ವೀಕೃತಿಯಾಗಿರುವ ಮೊತ್ತ ರೂ. |
| 1 | 4/2014 | - | 1 | 4/2015 | 51840 |
| 2 | 5/2014 | 25920 | 2 | 5/2015 | 83850 |
| 3 | 6/2014 | 394925 | 3 | 6/2015 | 249900 |
| 4 | 7/2014 | 16750 | 4 | 7/2015 | 102275 |
| 5 | 8/2014 | 442000 | 5 | 8/2015 | 729635 |
| 6 | 9/2014 | 29388486 | 6 | 9/2015 | 29092217 |
| 7 | 10/2014 | 15610 | 7 | 10/2015 | 30300 |
| 8 | 11/2014 | 64043 | 8 | 11/2015 | 1453050 |
| 9 | 12/2014 | 108570 | 9 | 12/2015 | 722500 |
| 10 | 01/2015 | 96200 | 10 | 01/2016 | 3084070 |
| 11 | 02/2015 | 34376 | 11 | 02/2016 | 454364 |

ವಹಿಯ ಪುಟಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿದೆ. 2014-15ನೇ ಸಾಲಿನ 11/2014ರ ಮಾಹೆಯ ಮೊತ್ತ ರೂ.64,043/-ಗಳಲ್ಲಿ ಜಮಾ ವಹಿಯ ಪುಟ 146ರಲ್ಲಿ ರೂ.4458/-ಗಳು ಶ್ರೀ ಎಸ್.ಟಿ.ರಾಜು. ಟಿ.ಸಿ.ಸಿ ಇವರ ಜೀವನಾಂಶ ಭತ್ಯೆಯ ಮೊತ್ತವಾಗಿರುತ್ತದೆ ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರಲಾಗಿದೆ. ಉಳಿದ ಮೊತ್ತ ರೂ.59,585/-ಗಳು ಸಂಯೋಜನಾ ಶುಲ್ಕದ ಮೊತ್ತವಾಗಿರುತ್ತದೆ.

2014-15ನೇ ಸಾಲಿಗೆ ರೂ.305,87,215/- ಹಾಗೂ 2015-16ನೇ ಸಾಲಿಗೆ ರೂ.364,38,551/- ಒಟ್ಟು ರೂ.670,25,766/-ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

<table>
<tr>
<td>

| | | | | | |
|---|---|---|---|---|---|
| 12 | 03/2015 | 335 | 12 | 03/2016 | 384550 |
| | ರೂ. | **3,05,87,215** | | ರೂ. | **3,64,38,551** |

**(ಒಟ್ಟು ರೂ.3,05,87,215 + 3,64,38,551 = 6,70,25,766)**

</td>
<td></td>
</tr>
<tr>
<td>

**19. ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲನ್ನು ಎರಡು ಬಾರಿ ಪಾವತಿಸಿರುವುದು:– (ಆಡಳಿತ ವಿಭಾಗ)**

ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ಲೆಕ್ಕತಪಾಸಣೆಯನ್ನು ಕೈಗೊಂಡಿದ್ದು, ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲಿಗೆ ಸಂಬಂಧಿಸಿದಂತೆ ಬಿಲ್ಲುಗಳನ್ನು ಪರಿಶೀಲಿಸಲಾಗಿ ಬಿ.ಆರ್.ಸಂಖ್ಯೆ:584/2015–16, ದಿನಾಂಕ:15.04.2015ರಲ್ಲಿ ಒಟ್ಟು 15 ನೌಕರರಿಗೆ ರೂ.50,120/– ಗಳ ಮರುಪಾವತಿ ಬಿಲ್ಲುಗಳನ್ನು ಸಲ್ಲಿಸಿದೆ. ನಂತರ ಇದೇ ನೌಕರರಿಗೆ ಬಿ.ಆರ್.ಸಂಖ್ಯೆ:57/2015–16, ದಿನಾಂಕ:16.05.2015ರಲ್ಲಿ ರೂ.50,120/– ಗಳ ಬಿಲ್ಲನ್ನು ಎರಡನೇ ಬಾರಿ ಪಾವತಿಗಾಗಿ ಸಲ್ಲಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸೂಕ್ತ ವಿವರಣೆಯನ್ನು ನೀಡಲು ವಿಚಾರಣಾ ಸಂಖ್ಯೆ:10/2017–18, ದಿನಾಂಕ:05.03.2018ರಲ್ಲಿ ಕೋರಲಾಗಿತ್ತು. ಹೀಗೆ ಒಂದೇ ಮೊತ್ತವನ್ನು ಎರಡು ಬಾರಿ ಪಾವತಿಗಾಗಿ ಬಿಲ್ಲುಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಹಾಗಾಗಿ ರೂ.50,120/– ಗಳನ್ನು ಹೆಚ್ಚುವರಿಯಾಗಿ 2ನೇ ಬಾರಿ ಪಾವತಿಯಾಗಿದೆ ಎಂದು ಪರಿಗಣಿಸಿದೆ ಹಾಗೂ ಸದರಿ ಮೊತ್ತ **ರೂ.50,120/– ನ್ನು ಸಂಬಂಧಿಸಿದ ನೌಕರರಿಂದ ವಸೂಲಾತಿ** ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಲು ಸೂಚಿಸಿದೆ.

</td>
<td>

ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲಿನ ಬಿ.ಆರ್.ಸಂಖ್ಯೆ 584/2015–16, ದಿನಾಂಕ:15.4.2015 ರಲ್ಲ ಒಟ್ಟು 15 ಮಂದಿ ನೌಕರರುಗಳ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲಿನ ಒಟ್ಟು ಮೊತ್ತ ರೂ.50,120/–ಗಳು ಬಿ.ಆರ್ ವಹಿಯ ಪುಟ ಸಂಖ್ಯೆ:105 ರಲ್ಲಿ ನಮೂದಿಸಿದ್ದು ವೈದ್ಯಕೀಯ ವೆಚ್ಚದ ಮರುಪಾವತಿ ಬಟವಾಡೆ ವಹಿಯ ಪುಟ ಸಂಖ್ಯೆ:128 ಮತ್ತು 129ರಲ್ಲಿ 15 ಮಂದಿ ನೌಕರರುಗಳ ವಿವರಗಳನ್ನು ದಾಖಲಿಸಿರುತ್ತದೆ. ಆದರೆ ಇದು 2014–15ನೇ ಸಾಲಿನಲ್ಲಿ ಮುಂದುವರಿದ ಬಿ.ಆರ್.ನಂ ಆಗಿದ್ದು ಇದೇ 15 ಮಂದಿ ನೌಕರರುಗಳ ವೈದ್ಯಕೀಯ ವೆಚ್ಚದ ಮರುಪಾವತಿ ಹುಂಡಿಯು 2015–16ನೇ ಸಾಲಿನ ಬಿ.ಆರ್.ಸಂಖ್ಯೆ:57/2015–16 ದಿನಾಂಕ:16.5.2015ರಲ್ಲಿ ರೂ.50,120/–ಗಳು ಬಿ.ಆರ್ ವಹಿಯ ಪುಟ ಸಂಖ್ಯೆ:111ರಲ್ಲಿ ನಮೂದಿಸಿದ್ದು ವೈದ್ಯಕೀಯ ವೆಚ್ಚದ ಮರುಪಾವತಿ ಬಟವಾಡೆ ವಹಿಯ ಪುಟ ಸಂಖ್ಯೆ:130 ಮತ್ತು 131ರಲ್ಲಿ 15 ಮಂದಿ ನೌಕರರುಗಳ ವಿವರದ ಮೊತ್ತ ದಾಖಲಿಸಿ ಪಾವತಿಗಾಗಿ ಸಲ್ಲಿಸಿದ್ದು ಇದು ಪುನಾರಾವರ್ತನೆಯಾಗಿರುತ್ತದೆ. ಹಣಕಾಸು ಶಾಖೆಯಲ್ಲಿ ಬಿ.ಆರ್.ಸಂಖ್ಯೆ:57/2015–16 ದಿನಾಂಕ 16.05.2015ರಲ್ಲಿ ರೂ.50,120/–ಗಳ ವೈದ್ಯಕೀಯ ವೆಚ್ಚದ ಮರುವಾವತಿ ಹುಂಡಿಯನ್ನು ಪರಿಶೀಲಿಸಿ ಧನಾದೇಶ ಸಂಖ್ಯೆ:511274 ದಿನಾಂಕ:11.6.2015ರಲ್ಲಿ ರೂ.48,142/–ಗಳಿಗೆ ಅನುಮೋದನೆಗೊಂಡು ಆಯಾಯ ನೌಕರರ ಖಾತೆಗೆ ಜಮಾ ಮಾಡಿರುತ್ತಾರೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಬಯಸುತ್ತಾ ಕಣ್‌ತಪ್ಪಿನಿಂದಾಗಿ 2 ಬಾರಿ ಬಿ.ಆರ್.ನಂ ಮತ್ತು ಬಟವಾಡೆಯಲ್ಲಿ ದಾಖಲಾಗಿರುತ್ತದೆ. ಬಿ.ಆರ್.ನಂ.584/2015–16, ದಿನಾಂಕ: 15.4.2015 ಮತ್ತು ವೈದ್ಯಕೀಯ ವೆಚ್ಚದ ಮರುಪಾವತಿ ಬಟವಾಡೆ ವಹಿಯ ಪುಟ ಸಂಖ್ಯೆ 128 ಮತ್ತು 129 ವಿವರಗಳನ್ನು ರದ್ದುಪಡಿಸಲಾಗಿರುತ್ತದೆ. ರದ್ದುಪಡಿಸಿರುವ ಬಿ.ಆರ್.ನಂ.584/15.4.2015 ಮತ್ತು ವೈದ್ಯಕೀಯ ವೆಚ್ಚದ ಮರುಪಾವತಿ

</td>
</tr>
</table>

| | |
|---|---|
| | ಬಟವಾಡೆ ವಹಿಯ ಪುಟಗಳನ್ನು ಹಾಗೂ ಅನುಮೋದನೆಯಾಗಿರುವ ಬಿ.ಆರ್.ನಂ.57/ದಿನಾಂಕ:16.5.2015 ಮತ್ತು ವೆಚ್ಚದ ಮರುಪಾವತಿ ಬಟವಾಡೆ ವಹಿ ಪುಟಗಳನ್ನು ದೃಡೀಕರಿಸಿ ಸಲ್ಲಿಸಿದೆ. ಆದ್ದರಿಂದ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.50,120/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **20. <u>ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ನಿಯಮಬಾಹಿರವಾಗಿ ಪದೋನ್ನತಿ ನೀಡಿರುವುದು :– (ಆಡಳಿತ ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 10 ಜನ ಗ್ರಂಥಾಲಯ ಸಹಾಯಕರುಗಳಿಗೆ 2011 ರಿಂದ 2017ರವರೆಗೆ "ಸಹಾಯಕ ಗ್ರಂಥಪಾಲಕರುಗಳ ಹುದ್ದೆಗೆ ಪದೋನ್ನತಿಯನ್ನು ನೀಡಿರುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿದ್ದು, ಗ್ರಂಥಾಲಯ ಸಹಾಯಕರ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ಪಡೆಯಲು ಈ ಕೆಳಕಂಡ ಮಾನದಂಡಗಳು ಬೇಕಾಗಿರುತ್ತದೆ.<br>1. 1999ರ ಯು.ಜಿ.ಸಿ ಅಧಿನಿಯಮದಲ್ಲಿ ಸಹಾಯಕ ಗ್ರಂಥಪಾಲಕರ ಹುದ್ದೆಯ ವಿದ್ಯಾರ್ಹತೆ MLISC with minimum 55% & UGC ನಡೆಸುವ NET ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕಾಗಿರುತ್ತದೆ.<br>2. ಯು.ಜಿ.ಸಿಯ 6ನೇ ಪರಿಷ್ಕೃತ ವೇತನ ಶ್ರೇಣಿಯ ದಿನಾಂಕ:30.06.2010ರಲ್ಲಿ ಹೊರಡಿಸಿರುವ ನಿಯಮದನ್ವಯ ಸಹಾಯಕ ಗ್ರಂಥಪಾಲಕರ ಹುದ್ದೆಗೆ ವಿದ್ಯಾರ್ಹತೆಯನ್ನು ಕೆಳಕಂಡಂತೆ ನಿಗದಿಪಡಿಸಿದೆ.<br>a) A Master's Degree in Library Science/Information Science/Documentation Science or an Equivalent Professional Degree with atleast 55% marks (or an equivalent grade in a point scale where ever grading system is followed) and a consistently good academic record with knowledge of computerization of library.<br>b) Qualifying in the National level test conducted for the purpose by the UGC or any other agency approved by the UGC.<br>c) However, candidates who are or have been awarded Ph.D degree in accordance with the UGC (minimum standards and procedure for award of | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ನಿಯಮಬಾಹಿರವಾಗಿ ಪದೋನ್ನತಿ ನೀಡಿರುವ ಬಗ್ಗೆ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಗಂಭೀರವಾಗಿ ಪರಿಗಣಿಸಿದ್ದು, ಸದರಿ ವಿಷಯವನ್ನು ದಿನಾಂಕ 05.03.2018 ರಂದು ನಡೆದ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿ ಸಭೆಯು ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ತೀರ್ಮಾನಿಸಿತ್ತು.<br><br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ) ಬೆಂಗಳೂರು ರವರು ಪತ್ರ ಸಂಖ್ಯೆ ಇಡಿ 106/ಯು.ಎಂ.ವಿ/2017 ದಿನಾಂಕ 19.12.2017ರಲ್ಲಿ ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಿರುವುದು ಸಿಂಧು ಹಾಗೂ ಅವುಗಳನ್ನು ಕೂಡಲೇ ಹಿಂಪಡೆದು ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ನೀಡುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಸಹಾಯಕ ಗ್ರಂಥಪಾಲಕರಿಗೆ ನೀಡಲಾಗಿರುವ ಪದೋನ್ನತಿಯನ್ನು ಹಿಂಪಡೆದು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಿಂಡಿಕೇಟ್ ಅನುಮೋದಿಸಿತ್ತು. ಸಿಂಡಿಕೇಟ್ ಸಭೆಯ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಹಾಯಕ ಗ್ರಂಥಪಾಲಕರುಗಳಿಗೆ ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಿರುವುದನ್ನು ತಕ್ಷಣದಿಂದ ಜಾರಿಗೆ ಬಂದಂತೆ ಅಸಿಂಧುಗೊಳಿಸಿ ಸದರಿ ಉದ್ಯೋಗಿಗಳಿಗೆ ಗ್ರಂಥಾಲಯ ಸಹಾಯಕ ಹುದ್ದೆಯಲ್ಲಿ ಮುಂದುವರೆಸಿ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಇಟಿ4(2)54/2008–09 ದಿನಾಂಕ |

| | |
|---|---|
| Ph.D Degree) Regulation 2009, shall be exempted from the requirement of the minimum eligibility condition of NET/SLET/SET for recruitment and appointment of university Assistant Librarian.<br>3. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 53(1)ರ ಪ್ರಕಾರ There shall be a Board of appointment for selection of persons for appointment as Teachers & Librarians in the University. ಈ ಮೇಲೆ ತಿಳಿಸಿರುವಂತೆ ಗ್ರಂಥಾಲಯ ಸಿಬ್ಬಂದಿಗಳನ್ನು ನೇರ ನೇಮಕಾತಿ ಮೂಲಕ ಮಾತ್ರ ತುಂಬಲು ಅವಕಾಶವಿರುತ್ತದೆ.<br>4. ವಿಶ್ವವಿದ್ಯಾನಿಲಯದ ಅಧಿನಿಯಮ 17 (3) ರನ್ವಯ adaptation of Government orders relating to the service benefits in the absence of rules regarding the service condition of the university applicable to University Employees the provisions of Karnataka Civil Service Rules and Government order, amendments & clarification issued from time to time shall ordinarily be applicable till specific statutes are framed provided in case of doubt of difficulty in any matters of following the Karnataka Civil Service Rules the Vice-Chancellor may adopt the Rules to such an extent as may be necessary depending upon the merits of the case and where, in the opinion of the Vice-Chancellor, reference to the Syndicate is found necessary, Syndicate may decide the matter suitably & provided further in all cases where financial implications are involved so as to necessitate provision of additional funds, no such benefit or concession will be extended to the University employees without obtaining prior consent of Government ಎಂಬ ನಿಯಮವಿರುತ್ತದೆ.<br>5. ಮಂಗಳೂರು ವಿಶ್ವವಿದ್ಯಾನಿಲಯವು ಯು.ಜಿ.ಸಿ ಧನ ಸಹಾಯ ಆಯೋಗಕ್ಕೆ ಪತ್ರ ಬರೆದು ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಲು ಸ್ಪಷ್ಟೀಕರಣ ಕೋರಿರುವುದನ್ನು ಅಧೀನ ಕಾರ್ಯದರ್ಶಿ/ಯು.ಜಿ.ಸಿ/ನವದೆಹಲಿ ಪತ್ರ ಸಂಖ್ಯೆ: ಎಫ್2–16/2002(ಪಿ.ಎಸ್)ಪಿ.ಟಿ ಎಫ್1–11 ಏಪ್ರಿಲ್–2017ರಲ್ಲಿ "There is no promotional avenue from Library Assistant to Assistant Librarian under UGC Regulations, on minimum qualifications for appointment of Teachers and other academic | 28.04.2018ರಂದು ಆದೇಶ ಹೊರಡಿಸಲಾಗಿದೆ.(ಪ್ರತಿ ಲಗತ್ತಿಸಿದೆ). ಹಾಗೂ ಈ ವಿಷಯನ್ನು ಸರ್ಕಾರದ ಅವಗಾಹನೆಗೆ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ ದಿನಾಂಕ 19–05–2018 ರಲ್ಲಿ ಪತ್ರ ಬರೆಯಲಾಗಿದೆ.ಆದರೆ ಸದರಿ ಉದ್ಯೋಗಿಗಳು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. (ಪ್ರತಿಗಳನ್ನು ಲಗತ್ತಿಸಿದೆ.) ಸದರಿ ವಿಷಯವನ್ನು ಸಹ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬೆಂಗಳೂರು ರವರಿಗೆ ವಿಶ್ವವಿದ್ಯಾನಿಲಯದ ಪತ್ರ ಸಂಕ್ಯೆ ಇಟಿ4/530/2009–10 ದಿನಾಂಕ 05.06.2018ರಲ್ಲಿ ವರದಿ ಮಾಡಲಾಗಿದೆ. ಆದರೆ ಈ ಬಗ್ಗೆ ಸರ್ಕಾರದಿಂದ ಯಾವುದೇ ರೀತಿಯ ಆದೇಶ ಬಂದಿರುವುದಿಲ್ಲವಾಗಿ ತಿಳಿಸುತ್ತಾ ಸದರಿ ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ನ್ಯಾಯಾಲಯದಿಂದ ಅಂತಿಮ ಆದೇಶ ಜಾರಿಗೊಳಿಸಿದ ನಂತರ ಅದರಂತೆ ಕ್ರಮವಹಿಸಿ ಮಾಹಿತಿ ವಿವರಗಳನ್ನು ಒದಗಿಸುವುದಾಗಿ ನಿವೇದಿಸಿದೆ. |

| | |
|---|---|
| staff in Universities and colleges and measures for the maintenance of standards in Higher Education 2010, In case a candidate passes all the eligibility criteria meant for the post of Assistant Librarian his/her candidature can be considered for Assistant Librarian through direct recruitment process only ಎಂದು ಸ್ಪಷ್ಟ ಪಡಿಸಿರುತ್ತಾರೆ.<br>6. ಸರ್ಕಾರದ ಪ್ರಧಾನ ಕಾರ್ಯದರ್ಶಿ ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು ಇವರ ಪತ್ರ ಸಂಖ್ಯೆ ಇಡಿ 106/ಯು.ಎಂ.ಎ/2017/19.12.2017ರ ಪತ್ರದಲ್ಲಿ ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಿರುವುದನ್ನು ಅಸಿಂಧುಗೊಳಿಸುವಂತೆ ಆದೇಶಿಸಿದೆ.<br><br>ಈ ಮೇಲೆ ತಿಳಿಸಿರುವ ಯು.ಜಿ.ಸಿ ಯ 5ನೇ ಮತ್ತು 6ನೇ ವೇತನ ಪರಿಷ್ಕರಣೆ ನಿಯಮಗಳಲ್ಲಿ ಸರ್ಕಾರದ ಆದೇಶಗಳು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 53(1)ರ ಮತ್ತು ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 17(3)ರ ನಿಯಮಗಳನ್ನು ಉಲ್ಲಂಘಿಸಿ ಗ್ರಂಥಾಲಯ ಸಹಾಯಕರಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಿರುವುದನ್ನು ಅಸಿಂಧುಗೊಳಿಸಿ ಮತ್ತು ಪಾವತಿಸಿರುವ ವೇತನ ಭತ್ಯೆಗಳನ್ನು ರಾಜ್ಯ ವೇತನ ಶ್ರೇಣಿಗೆ ಪರಿಷ್ಕರಿಸಿರುವ ವಿವರಗಳನ್ನು **ಅನುಬಂಧ–23ರಲ್ಲಿ** ವಿವರಿಸಿರುವಂತೆ ಯು.ಜಿ.ಸಿ ವೇತನ ಶ್ರೇಣಿಯಲ್ಲಿ ನೀಡಿರುವ ವೇತನ ಭತ್ಯೆಗಳನ್ನು ಹಿಂಪಡೆದು ರಾಜ್ಯ ವೇತನ ಶ್ರೇಣಿಯಲ್ಲಿ ವೇತನವನ್ನು ನಿಗದಿಪಡಿಸಿ ಹೆಚ್ಚುವರಿ ಪಾವತಿಸಿರುವ ವೇತನಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ಜಮೆ ಮಾಡಲಾದ ವಿವರಗಳನ್ನು ಲೆಕ್ಕ ತಪಾಸಣೆಗೆ ಒದಗಿಸಲು ಸೂಚಿಸಿದೆ. | |
| **21. ಎನ್.ಪಿ.ಎಸ್. ಯೋಜನೆಯಡಿ ನೌಕರರುಗಳಿಂದ ಕಟಾಯಿಸಿದ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುವುದು :– (ಹಣಕಾಸು ವಿಭಾಗ)**<br><br>2015–16ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ಎನ್.ಪಿ.ಎಸ್ ಯೋಜನೆಗೆ ಒಳಪಡುವ ನೌಕರರುಗಳಿಂದ ಪ್ರತಿ ಮಾಹೆ ವೇತನದಲ್ಲಿ ಕಟಾಯಿಸಿದ ಮೊತ್ತ ಒಟ್ಟು ರೂ.2,10,28,762/–ಗಳನ್ನು 2015–16ನೇ ಸಾಲಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುವುದು ಕಂಡುಬಂದಿರುತ್ತದೆ. ಈ ರೀತಿ ಠೇವಣಿ ಮಾಡಿರುವುದಕ್ಕೆ ಹಾಗೂ ನೂತನ ಪಿಂಚಣಿ ಯೋಜನೆ ಲೆಕ್ಕಶೀರ್ಷಿಕೆಗೆ ಜಮೆ ಮಾಡದೆ ನೇರವಾಗಿ ಠೇವಣಿ ತೊಡಗಿಸಿರುವ ವಿಚಾರದಲ್ಲಿ ಸಿಂಡಿಕೇಟ್ ಹಾಗೂ ಹಣಕಾಸು ಸಮಿತಿ ಸಭೆಯ ನಿರ್ಣಯಗಳನ್ನು | ವಿಶ್ವವಿದ್ಯಾನಿಲಯದಲ್ಲಿ ಎನ್.ಪಿ.ಎಸ್ ಯೋಜನೆಗೆ ಒಳಪಡುವ ನೌಕರರುಗಳಿಂದ ಪ್ರತಿ ಮಾಹೆ ವೇತನದಲ್ಲಿ ಕಟಾಯಿಸಲಾದ ಮೊತ್ತವನ್ನು 2015–16ನೇ ಸಾಲಿನಲ್ಲಿ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಕಾರಣವೆಂದರೆ ಇವರುಗಳಿಗೆ ಪ್ಯಾನ್ ನಂಬರ್ ಪಡೆಯುವಲ್ಲಿ ವಿಳಂಬವಾದ ಕಾರಣದಿಂದ ಸದರಿ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ತೊಡಗಿಸಲಾಗಿತ್ತು. ಲೆಕ್ಕ ತಪಾಸಣ ವರದಿಯ ಪುನರ್‌ಪರಿಶೀಲನೆ ಸಮಯದಲ್ಲಿ ದಿನಾಂಕ 01.04.2016ರಿಂದ |

| | |
|---|---|
| ಒದಗಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:141 /ದಿ:11.01.2018ರಲ್ಲಿ ಕೋರಲಾಗಿತ್ತು, ಆದರೆ ಈ ಸಂಬಂಧ ಯಾವುದೇ ಮಾಹಿತಿಯನ್ನು ಲೆಕ್ಕ ತಪಾಸಣೆಗೆ ಒದಗಿಸಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ:ಆಇ3 ಸೇನಿಸೇ 2010 ದಿನಾಂಕ:12.10.2010ರಲ್ಲಿ ನೂತನ ಪಿಂಚಣಿ ಕಾಯ್ದೆಗೆ ಒಳಪಡುವ ನೌಕರರ ವಂತಿಕೆಯನ್ನು PRAN ಖಾತೆ ತೆರೆದು ಜಮೆಗೊಳಿಸಬೇಕಾಗಿರುತ್ತದೆ. ಆದರೆ ಇಲ್ಲಿ ಈ ರೀತಿ ಮಾಡಿರುವುದಿಲ್ಲ ಸರ್ಕಾರದಿಂದ ವಸೂಲಿ ಮಾಡಿದ ಹಣವನ್ನು ಠೇವಣಿಯಲ್ಲಿ ತೊಡಗಿಸಲಾಗಿದೆ. ಈ ಬಗ್ಗೆ ಕರಡು ಲೆಕ್ಕತಪಾಸಣಾ ವರದಿಯ ಪುನರ್ ಪರಿಶೀಲನೆ ಸಮಯದಲ್ಲಿ ಪ್ರಸ್ತಾಪಿಸಿದಾಗ ಈ ಹಣವನ್ನು ಈಗ ಎನ್.ಪಿ.ಎಸ್. ಖಾತೆಗೆ ಜಮಾ ಮಾಡಿರುವುದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ದಿನಾಂಕ:31.03.2017 ರಂದು ಎನ್.ಪಿ.ಎಸ್ ಖಾತೆಗೆ ದಿನಾಂಕ:01.04.2006 ರಿಂದ 31.07.2016ರವರೆಗಿನ ಎನ್.ಪಿ.ಎಸ್ ಮೊತ್ತಕ್ಕೆ ಸಂಬಂಧಿಸಿದ್ದೆಂದು ರೂ.13,64,60,768/– ಗಳನ್ನು ಜಮಾ ಮಾಡಲಾಗಿರುತ್ತದೆ. ದಿನಾಂಕ:01.04.2006 ರಿಂದ 31.03.2017ರವರೆಗೆ ಎನ್.ಪಿ.ಎಸ್ ಕಂತಿನ ವಾರ್ಷಿಕ ಹಣದ ಮೊತ್ತಕ್ಕೆ ವಾರ್ಷಿಕ ಶೇ 8% ರಂತೆ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಸಂಬಂಧಪಟ್ಟ ನೌಕರರ ಎನ್.ಪಿ.ಎಸ್ ಖಾತೆಗೆ ಅಂಶದಾಯಿಕವಾಗಿ ಜಮಾ ಮಾಡಬೇಕೆಂದು ಸೂಚಿಸಿದೆ. ವಿವರಗಳನ್ನು **ಅನುಬಂಧ–24** ರಲ್ಲಿ ನೀಡಲಾಗಿದೆ. | 31.07.2016ರ ವರೆಗೆ ವಾರ್ಷಿಕ ಶೇ.8% ಬಡ್ಡಿ ಸೇರಿಸಿ ಒಟ್ಟು ಮೊತ್ತ.13,64,60,768/–ಗಳನ್ನು ಆರ್.ಟಿ.ಜಿ.ಎಸ್. ಮೂಲಕ ದಿನಾಂಕ 31.03.2017ರಂದು ಜಮಮಾಡಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತಾ, ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ತಮ್ಮ ಸಲಹೆ ಮತ್ತು ಸೂಚನೆಯ ಮೇರೆಗೆ ಎನ್.ಪಿ.ಎಸ್ ಕಂತಿನ ವಾರ್ಷಿಕ ಹಣದ ಮೊತ್ತಕ್ಕೆ ವಾರ್ಷಿಕ ಶೇ.8%ರಂತೆ ಬಡ್ಡಿಯನ್ನು ಎಂಪ್ಲಾಯಿ ಮತ್ತು ಎಂಪ್ಲಾಯರ್ ಕಾಂಟ್ರಿಬ್ಯೂಷನ್‌ಗಳ ಬಡ್ಡಿ ವಿವರವನ್ನು ಪ್ರತ್ಯೇಕವಾಗಿ ವಿವರಿಸಿ ಒಟ್ಟು ಮೊತ್ತವನ್ನು ಆಯಾಯ ನೌಕರರ ಎನ್.ಪಿ.ಎಸ್ ಖಾತೆಗೆ ಅಂಶದಾಯಿಕವಾಗಿ ಜಮಾ ಮಾಡಲಾಗಿದೆ ಎಂದು ತಿಳಿಸುತ್ತಾ ವಿವರಣ ಪಟ್ಟಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸಲಾಗಿದೆ. |
| **22. ವಿಶ್ವವಿದ್ಯಾನಿಲಯದ ನೌಕರರುಗಳ ಗೃಹ ನಿರ್ಮಾಣ ಮುಂಗಡ ವಹಿ ಹಾಗೂ ವಿವರಗಳನ್ನು ಒದಗಿಸದಿರುವುದು (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ನೌಕರರುಗಳಿಗೆ ಗೃಹ ನಿರ್ಮಾಣ ಮುಂಗಡ ಸಾಲ ಮಂಜೂರು ಮಾಡಲಾಗಿದ್ದು, ಸಾಲ ಮರುಪಾವತಿಯ ವಿವರವನ್ನು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 209 ರಿಂದ 216 ರವರೆಗೆ ನಿಯಮಾನುಸಾರ ಮುಂಗಡ ವಹಿಯನ್ನು ನಿರ್ವಹಿಸಿ ಮಂಜೂರಾದ ಮುಂಗಡ (ಅಸಲು ಮೊತ್ತ) ಸಾಲ ಮರುಸಂದಾಯ (ಅಸಲು ಮತ್ತು ಬಡ್ಡಿ ವಿವರ) ಹಾಗೂ ಉಳಿಕೆ ವಿವರಗಳನ್ನು ದಾಖಲಿಸಬೇಕಾಗಿರುತ್ತದೆ. ವಿಭಾಗದಲ್ಲಿ ಲೆಕ್ಕ ತಪಾಸಣೆ ಸಂದರ್ಭದಲ್ಲಿ ದಾಖಲಿಸದಿರುವುದು ಕಂಡುಬಂದಿರುತ್ತದೆ. ಹಾಗೂ ಮುಂಗಡ ಮಂಜೂರು ಮಾಡುವಾಗ ಕ್ರಮವಹಿಸಬೇಕಾದ ಅಡಮಾನ ಪತ್ರಗಳನ್ನು ಪಡೆದಿರುವುದು ಕಂಡುಬಂದಿರುವುದಿಲ್ಲ ಮತ್ತು ಕಟ್ಟಡದ ಮುಂಗಡ ಸಾಲವು ಪೂರ್ಣಗೊಂಡನಂತರ ಅಡಮಾನ ಪತ್ರಗಳನ್ನು ಹಿಂದಿರುಗಿಸಿರುವ ಬಗ್ಗೆ ವಿವರಗಳನ್ನು ವಹಿಯಲ್ಲಿ ದಾಖಲಿಸಿ ಲೆಕ್ಕ ತಪಾಸಣೆಗೆ ಒದಗಿಸಲು ಸೂಚಿಸಿದೆ. | ವಿಶ್ವವಿದ್ಯಾನಿಲಯದ ನೌಕರರುಗಳಿಗೆ ಸುಮಾರು 20–25 ವರ್ಷಗಳಿಂದಲೂ ಯಾವುದೇ ಗೃಹ ನಿರ್ಮಾಣ ಮುಂಗಡ ಮಂಜೂರು ಮಾಡಲಾಗುತ್ತಿಲ್ಲ. ಯಾಕೆಂದರೆ ನೌಕರರು ಬ್ಯಾಂಕ್‌ಗಳಿಂದಲೇ ನೇರವಾಗಿ ಗೃಹ ಖರೀದಿ/ನಿರ್ಮಾಣಗಳ ಸಾಲ ಸೌಲಭ್ಯ ಪಡೆಯುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಮುಂಗಡ ಮಂಜೂರಾತಿ ಕೋರಿ ಅರ್ಜಿಗಳು ಬರುತ್ತಿಲ್ಲ. ಹಾಗಾಗಿ ಇದುವರೆಗೂ ಗೃಹ ನಿರ್ಮಾಣ ಮುಂಗಡ ವಹಿ ನಿರ್ವಹಿಸಲಾಗಿರುವುದಿಲ್ಲ.<br><br>ಆದಾಗ್ಯೂ; ತಮ್ಮ ಸಲಹೆಯಂತೆ ಒಂದು ವಹಿಯನ್ನು ನಿರ್ವಹಿಸಿ ವ್ಯವಹಾರ ಇಲ್ಲದಿರುವ ಬಗ್ಗೆ ಮಾಹಿತಿ ನಮೂದಿಸಿ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗುವುದು. |

| | |
|---|---|
| **23. <u>'ಸಿ' ದರ್ಜೆಯ ನಗರದಲ್ಲಿ (ಚಾಮರಾಜನಗರ ಸ್ನಾತಕೋತ್ತರ ಕೇಂದ್ರ) ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಹೆಚ್ಚುವರಿ ಮನೆ ಬಾಡಿಗೆ ಭತ್ಯೆ ಪಾವತಿಸಿರುವ ಕುರಿತು :– (ಹಣಕಾಸು ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಚಾಮರಾಜನಗರ ಸ್ನಾತಕೋತ್ತರ ಕೇಂದ್ರ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಶೇ 20% ರಂತೆ ಮನೆ ಬಾಡಿಗೆ ಭತ್ಯೆ ಒಟ್ಟು ರೂ.62,981/– ಪಾವತಿಸಲಾಗಿರುವುದು ಕಂಡುಬಂದಿರುತ್ತದೆ. (ವಿವರ <u>**ಅನುಬಂಧ–25ರಲ್ಲಿ**</u> ನೀಡಿದೆ) ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ET8/07/2011–12 ದಿನಾಂಕ: 08.07.2015 ರನ್ವಯ ಶ್ರೀಯುತ ಶಿವಬಸವಯ್ಯ, ಚಾಮರಾಜನಗರ ಇವರಿಗೆ ದಿನಾಂಕ:01.02.2012 ರಿಂದ ಜಾರಿಗೆ ಬಂದಂತೆ ಮೈಸೂರು ನಗರದ ದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ದಿನಾಂಕ: 01.02.2012 ರಿಂದ ದಿನಾಂಕ:30.06.2015 ರವರೆಗೆ ಒಟ್ಟು ರೂ.1,98,469/–ಗಳನ್ನು ಧನಾದೇಶ ಸಂಖ್ಯೆ:512109/27.07.2015ರಲ್ಲಿ ಪಾವತಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ14/ಎಸ್‌ಆರ್‌ಪಿ/2013 ದಿನಾಂಕ:02.09.2013ರಂತೆ 'ಸಿ' ದರ್ಜೆಯ ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಶೇ 10% ರಂತೆ ಮನೆ ಬಾಡಿಗೆ ಭತ್ಯೆ ಪಾವತಿಸಲು ಅವಕಾಶವಿರುತ್ತದೆ. ಮೇಲ್ಕಂಡಂತೆ ಹೆಚ್ಚುವರಿ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಿರುವ ಕುರಿತು ವಿಚಾರಣೆ ಸಂಖ್ಯೆ:28/ದಿನಾಂಕ:14.11.2017ರಲ್ಲಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಕೋರಲಾಗಿತ್ತು. ಇದುವರೆವಿಗೂ ಯಾವುದೇ ವಿವರಗಳನ್ನು ಲೆಕ್ಕತನಿಖೆಗೆ ಒದಗಿಸಿರುವುದಿಲ್ಲ. ಸದರಿ ನೌಕರರುಗಳಿಗೆ ಪಾವತಿಸಲಾಗಿರುವ ಹೆಚ್ಚುವರಿ ಮನೆ ಬಾಡಿಗೆ ಭತ್ಯೆ ಒಟ್ಟು **ರೂ.2,61,450/–ಗಳನ್ನು ವಸೂಲಿಗೆ** ಸೂಚಿಸಿದೆ. | ಡಾ॥ ಶಿವಬಸವಯ್ಯ, ನಿರ್ದೇಶಕರು, ಸ್ನಾತಕೋತ್ತರ ಸ್ಯಾಟಿಲೈಟ್ ಕೇಂದ್ರ, ಚಾಮರಾಜನಗರ ಇವರನ್ನು ದಿನಾಂಕ 21.02.2012ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಮೂರು ವರ್ಷಗಳ ಅವಧಿಗೆ ಸಂಯೋಜನಾಧಿಕಾರಿಯಾಗಿ ನಿಯೋಜಿಸಲಾಗಿತ್ತು. ತದನಂತರ ಸಂಯೋಜನಾಧಿಕಾರಿ ಹುದ್ದೆಯು ನಿರ್ದೇಶಕರ ಹುದ್ದೆ ಎಂಬುದಾಗಿ ಮರು ಪದನಾಮಗೊಂಡಿರುತ್ತದೆ.<br>ಹೀಗಾಗಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಇಟಿ8/07/2011–12 ದಿನಾಂಕ 08–07–2015ರನ್ವಯದಂತೆ ಡಾ॥ ಶಿವಬಸವಯ್ಯ, ನಿರ್ದೇಶಕರು, ಇವರನ್ನು ಸ್ನಾತಕೋತ್ತರ ಸ್ಯಾಟಿಲೈಟ್ ಕೇಂದ್ರ, ಚಾಮರಾಜನಗರ ಇವರಿಗೆ ದಿನಾಂಕ 01–02–2012ರಿಂದ ಜಾರಿಗೆ ಬಂದಂತೆ ನಿಯೋಜನೆಗೊಳಿಸಿರುವುದರಿಂದ ಮೈಸೂರು ನಗರದ ದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಲು ಮಂಜೂರಾತಿ ನೀಡಲಾಗಿರುತ್ತದೆ.<br>ವಿಶ್ವವಿದ್ಯಾನಿಲಯದ ದಿನಾಂಕ 08–07–2015ರ ಆದೇಶದ ಪ್ರತಿಯನ್ನು ಲಗತ್ತಿಸುತ್ತಾ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **24. <u>ಸಂಚಿತ/ತಾತ್ಕಾಲಿಕ ಬೋಧಕ/ಬೋಧಕೇತರ ಹುದ್ದೆಗಳ ನೇಮಕಾತಿ ಕುರಿತು :– (ಹಣಕಾಸು ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ಹುದ್ದೆಗಳಲ್ಲಿ ಬೋಧಕ/ಬೋಧಕೇತರ ವರ್ಗದವರ (ಪತ್ರಾಂಕಿತ ಮತ್ತು ಪತ್ರಾಂಕಿತರಲ್ಲದ) ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಒಟ್ಟು ಸಂಖ್ಯೆ, ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆ, ಖಾಲಿ ಇರುವ ಹುದ್ದೆಗಳ ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ವಿಚಾರಣೆ ಸಂಖ್ಯೆ:1/20.02.2018, 11/05.03.2018, 16/07.03.2018 ಮತ್ತು 22/13.03.2018 ರಲ್ಲಿ ಕೋರಲಾಗಿದ್ದು, ಯಾವುದೇ ಮಾಹಿತಿ ನೀಡಿರುವುದಿಲ್ಲ. (ಆಡಳಿತ ವಿಭಾಗ)<br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಸಂಚಿತ/ತಾತ್ಕಾಲಿಕ ಬೋಧಕೇತರ ನೌಕರರ ವೇತನ ವಿವರಗಳನ್ನು ಪರಿಶೀಲಿಸಿದ್ದು, 2015–16ನೇ ಸಾಲಿಗೆ ಒಟ್ಟು ತಾತ್ಕಾಲಿಕ/ಅತಿಥಿ/ಅರೆಕಾಲಿಕ ಉಪನ್ಯಾಸಕರು ಹಾಗೂ ತಾತ್ಕಾಲಿಕ ಅಧ್ಯಾಪಕೇತರ ನೌಕರರುಗಳಿಗೆ ಒಟ್ಟು ರೂ.13,65,93,603/–ಗಳ ವೇತನವನ್ನು ಪಾವತಿಸಲಾಗಿರುತ್ತದೆ. (ವಿವರವನ್ನು <u>**ಅನುಬಂಧ–26ರಲ್ಲಿ**</u> <u>ನೀ</u>ಡಿದೆ). ವಿಭಾಗಕ್ಕೆ ಸಂಬಂಧಿಸಿದಂತೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಈಗ ಕೆಲಸ | ವಿಶ್ವವಿದ್ಯಾನಿಲಯದಲ್ಲಿ ವಿವಿಧ ಹುದ್ದೆಗಳಲ್ಲಿ ಅಂದರೆ ಬೋಧಕ ಮತ್ತು ಬೋಧಕೇತರ ವರ್ಗದವರ ಹುದ್ದೆಗಳಲ್ಲಿ ಮಂಜೂರಾದ ಹುದ್ದೆಗಳು; ಇದಕ್ಕೆದುರಾಗಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ; ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಇದರೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.<br>ಇದರನ್ವಯ ಮಂಜೂರಾಗಿರುವ ಬೋಧಕೇತರ ಹುದ್ದೆಗಳ ಒಟ್ಟು ಸಂಖ್ಯೆ 1369. ಮತ್ತು ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ 676 ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ 670. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮವಹಿಸಲಾಗುತ್ತದೆ.. ಈ ಮಧ್ಯೆ ವಿಶ್ವವಿದ್ಯಾನಿಲಯವು ಶೈಕ್ಷಣಿಕವಾಗಿ ದಿನೇ ದನೇ ಅಭಿವೃದ್ಧಿ ಹೊಂದುತ್ತಿದ್ದು; ಹೊಸ ಹೊಸ ಕೋರ್ಸ್‌ಗಳು; ಇದಕ್ಕನುಗುಸಾರವಾಗಿ ಹೊಸ ಹೊಸ ಕಟ್ಟಡಗಳನ್ನು ತೆರೆಯಬೇಕಾಗುತ್ತದೆ. |

ನಿರ್ವಹಿಸುತ್ತಿರುವ ನೌಕರರನ್ನು ಮಂಜೂರಾಗಿರುವ ಹುದ್ದೆಗೆ ಎದುರಾಗಿ ನೇಮಕ ಮಾಡಕೊಳ್ಳಲಾಗಿದೆಯೇ ಎಂಬುದರ ಬಗ್ಗೆ ವಿವರಗಳನ್ನು ನೀಡುವಂತೆ ವಿಚಾರಣೆ ಸಂಖ್ಯೆ:42/22.11.2017ರಲ್ಲಿ ಕೋರಲಾಗಿತ್ತು. ಹಣಕಾಸು ಶಾಖೆಯಿಂದ ಆಡಿಟ್ ಆಕ್ಷೇಪಣೆಗೆ ನೀಡಲಾಗಿರುವ ಉತ್ತರ ಸಮರ್ಪಕವಾಗಿಲ್ಲದಿರುವುದರಿಂದ ಲೆಕ್ಕತನಿಖೆಗೆ ಕೋರಿರುವ ಮಾಹಿತಿ ಒದಗಿಸುವವರೆಗೆ ವೇತನ ಪಾವತಿ ಮೊತ್ತ ಒಟ್ಟು **ರೂ.13,65,93,603/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**ಬೋಧಕ ವರ್ಗದವರ ವಿವರ**

| ಕ್ರ.ಸಂ | ಹುದ್ದೆ | ಮಂಜೂರಾದ ಹುದ್ದೆ (2013–14ನೇ ಸಾಲಿನ ಲೆಕ್ಕತನಿಖಾ ವರದಿಯಂತೆ ವಿವರ) |
|---|---|---|
| 1 | ಪ್ರಾಧ್ಯಾಪಕರು | 79 |
| 2 | ಸಹ ಪ್ರಾಧ್ಯಾಪಕರು | 124 |
| 3 | ಸಹಾಯಕ ಪ್ರಾಧ್ಯಾಪಕರು (ಪಿಜಿ) | 252 |
| 4 | ಸಹಾಯಕ ಪ್ರಾಧ್ಯಾಪಕರು (ಯುಜಿ) | 211 |
| | | **666** |

**ಬೋಧಕೇತರ ವರ್ಗದವರ ವಿವರ**

| ಕ್ರ.ಸಂ | ಹುದ್ದೆ | ಮಂಜೂರಾದ ಹುದ್ದೆ |
|---|---|---|
| 1 | ಉಪಕುಲಸಚಿವರು | 8 |
| 2 | ಸಹಾಯಕ ಕುಲಸಚಿವರು | 10 |
| 3 | ಅಧೀಕ್ಷಕರು | 44 |
| 4 | ಹಿರಿಯ ಸಹಾಯಕರು | 40 |
| 5 | ಶೀಘ್ರಲಿಪಿಗಾರರು | 32 |
| 6 | ಪ್ರಥಮದರ್ಜೆ ಗುಮಾಸ್ತರು | 83 |
| 7 | ದ್ವಿತೀಯ ದರ್ಜೆ ಗುಮಾಸ್ತರು | 155 |

ಮತ್ತು ಪ್ರತೀ ವರ್ಷವೂ ನೌಕರರು ವಯೋನಿವೃತ್ತಿ ಹೊಂದುತ್ತಿದ್ದು, ಇರುವಷ್ಟೆ ನೌಕರರಿಂದ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಕಷ್ಟ ಸಾಧ್ಯವಾಗಿರುತ್ತದೆ.

ಹೀಗಾಗಿ ಸಂಚಿತ ವೇತನದಡಿ ವಿವಿಧ ದರ್ಜೆಯ ನೌಕರರನ್ನು ನೇಮಕ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಅಂತೆಯೇ ಬೋಧಕ ವರ್ಗದಲ್ಲೂ ಸಹ ಇರುವಷ್ಟೆ ಬೋಧಕರಿಂದ ಪಾಠ ಪ್ರವಚನಗಳನ್ನು ಸಮರ್ಪಕವಾಗಿ ನಿರ್ವಹಿಸುವುದು ಕಷ್ಟ ಸಾಧ್ಯವಾದ ಪ್ರಯುಕ್ತ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳುವುದ ಅನಿವಾರ್ಯವಾಗಿರುತ್ತದೆ.

| | | |
|---|---|---|
| 8 | ಬೆರಳಚ್ಚುಗಾರರು/ಗುಮಾಸ್ತರು | 90 |
| 9 | ಪರಿಚಾರಕರು | 125 |
| 10 | ನಾಲ್ಕನೇ ದರ್ಜೆ ನೌಕರರು | 373 |
| 11 | ತಾಂತ್ರಿಕ ಹುದ್ದೆಗಳು | 409 |
| | | **1369** |

2014–15ನೇ ಸಾಲಿನಿಂದ ಇಲ್ಲಿಯವರೆವಿಗೆ ಬೋಧಕ/ಬೋಧಕೇತರ ವರ್ಗದವರು ಮತ್ತು ಅತಿಥಿ ಉಪನ್ಯಾಸಕರ ನೇಮಕಾತಿ ವಿವರ ಹಾಗೂ ಹೊಸ ನೇಮಕಾತಿ/ಹೊರಗುತ್ತಿಗೆ ಆಧಾರದ ನೇಮಕಾತಿ ಕಡತಗಳನ್ನು ಲೆಕ್ಕ ತಪಾಸಣೆಗೆ ಒದಗಿಸದ ಕಾರಣ ಈ ನೇಮಕಾತಿ ಪ್ರಕ್ರಿಯೆಯು ನಿಯಮಾನುಸಾರ ಕೈಗೊಳ್ಳಲಾಗಿರುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ನೇಮಕಾತಿ ಪ್ರಕ್ರಿಯೆಯಲ್ಲಿ ಲೋಪವಾಗಿದ್ದಲ್ಲಿ ಸಂಬಂಧಿಸಿದ ಆಡಳಿತ ವರ್ಗವೆ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.

ವಿವರಗಳನ್ನು ಪರಿಶೀಲಿಸಿದಾಗ ಬೋಧಕ ವರ್ಗದಲ್ಲಿ ಸರಾಸರಿ 490 ಸಂಖ್ಯೆ ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಲಾಗಿದೆ. ಮಂಜೂರಾದ ಹುದ್ದೆಗಳಿಲ್ಲದಿದ್ದರೂ ಹೆಚ್ಚುವರಿ ಹುದ್ದೆಗಳನ್ನು ನೇಮಕ ಮಾಡಿರುವುದು ನಿಯಮಬಾಹಿರ ವಿಶ್ವವಿದ್ಯಾನಿಲಯದ ಅಧಿನಿಯಮ–56(2)ರ ಪ್ರಕಾರ ಸ್ಟ್ಯಾಚ್ಯೂಟ್‌ನಲ್ಲಿ ತಿಳಿಸಿರುವಂತೆ ಮಂಜೂರಾದ ಹುದ್ದೆಗೆ ಎದುರಾಗಿ ಮಾತ್ರ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ.

ಬೋಧಕೇತರ ವರ್ಗದ ಹುದ್ದೆಗಳ ವಿವರಗಳನ್ನು ಪರಿಶೀಲಿಸಿದಾಗ ಸಂಚಿತ ವೇತನ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕೇತರ ನೌಕರರುಗಳ ಸಂಖ್ಯೆ–574 ಎಂದು ತೋರಿಸಿದ್ದು, ಹುದ್ದೆವಾರು ವಿವರ ಒದಗಿಸಿರುವುದಿಲ್ಲ. ವಿಶ್ವವಿದ್ಯಾನಿಲಯದ ಅಧಿನಿಯಮ–56(2)ರ ಪ್ರಕಾರ ಮತ್ತು ಸ್ಟ್ಯಾಚ್ಯೂಟ್‌ನಲ್ಲಿ ತಿಳಿಸಿರುವಂತೆ ಮಂಜೂರಾದ ಹುದ್ದೆಗೆ ಎದುರಾಗಿ ಮಾತ್ರ ತಾತ್ಕಾಲಿಕ ನೇಮಕಗೊಳಿಸಬಹುದಾಗಿರುತ್ತದೆ. ನಿಯಮಬಾಹಿರವಾಗಿ ನೇಮಕ ಮಾಡಲಾದ ಹೆಚ್ಚುವರಿ ತಾತ್ಕಾಲಿಕ ಹುದ್ದೆಗಳ ಬಗ್ಗೆ ಮಾಹಿತಿ ಒದಗಿಸುವಂತೆ ಸೂಚಿಸಿದೆ. ಹಾಗೂ ವಿಚಾರಣೆಯಲ್ಲಿ ಬೋಧಕ ವರ್ಗದವರಿಗೆ ನಿಗದಿತ ಕಾರ್ಯಭಾರವಿರುವ ಬಗ್ಗೆ ಮತ್ತು ಅವರಿಗೆ ಹಂಚಿಕೆಯಾದ ಕಾರ್ಯಭಾರ ಹೊರತುಪಡಿಸಿ ಉಳಿದ ಕಾರ್ಯಭಾರ ಅವಧಿಗೆ ಎಷ್ಟು ಜನ ಅತಿಥಿ ಉಪನ್ಯಾಸಕರನ್ನು ನೇಮಕಮಾಡಿಕೊಳ್ಳಲಾಗಿದೆ ಎಂಬ ವಿವರ ಒದಗಿಸಲು ಕೋರಲಾಗಿ ಯಾವುದೇ ಮಾಹಿತಿ ಬಂದಿಲ್ಲದ ಕಾರಣ ಕೂಡಲೇ ತಪಾಸಣೆಗೆ ವಿವರ ಒದಗಿಸಲು ಸೂಚಿಸಿದೆ.

**25. ಮಂಜೂರಾದ ಹುದ್ದೆಯ ಜೊತೆಗೆ ಹೆಚ್ಚುವರಿ ತಾತ್ಕಾಲಿಕ ನೇಮಕಾತಿಗಳನ್ನು ಮಾಡಿಕೊಂಡಿರುವ ಕುರಿತು :– (ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆ)**

ಮಾನಸಗಂಗೋತ್ರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಮೈಸೂರು ಇಲ್ಲಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ) ಆಯುಕ್ತಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು ರವರಿಂದ 7 ಶಿಕ್ಷಕ ವರ್ಗದವರ ಅನುದಾನ ಸಹಿತವಾಗಿ ಬೆಂಗಳೂರುರವರಿಂದ 7 ಶಿಕ್ಷಕ ವರ್ಗದವರ ಅನುದಾನ ಸಹಿತವಾಗಿ ಶಿಕ್ಷಕರ ನೇಮಕಾತಿಯನ್ನು ಅನುಮೋದಿಸಲಾಗಿದೆ (ಸರ್ಕಾರದ ಆದೇಶ ಪ್ರತಿಯನ್ನು ಲಗತ್ತಿಸಿದೆ) ಪ್ರಸ್ತುತ ಲೆಕ್ಕ ತನಿಖಾ ಸಂದರ್ಭದಲ್ಲಿ ಶಾಲೆಯ ಹಾಜರಾತಿ ವಹಿಯನ್ನು ಪರಿಶೀಲಿಸಿದಾಗ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಮಂಜೂರಾದ ಹುದ್ದೆಗಳಲ್ಲದೆ ತಾತ್ಕಾಲಿಕವಾಗಿ ಹೆಚ್ಚುವರಿ ಶಿಕ್ಷಕ ವರ್ಗದವರು ಕಾರ್ಯನಿರ್ವಹಿಸುತ್ತಿರುತ್ತಾರೆ. ವರ್ಷವಾರು ವಿವರವನ್ನು ಕೆಳಕಂಡಂತೆ ನೀಡಲಾಗಿದೆ.

| ವರ್ಷ | ಮಂಜೂರಾದ ಹುದ್ದೆ/ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ವರ್ಗ (ಸ.ಶಿ) | ಕಾರ್ಯನಿರ್ವಹಿಸುತ್ತಿರುವ ಶಿಕ್ಷಕವರ್ಗದವರ ಸಂಖ್ಯೆ (ತಾತ್ಕಾಲಿಕ) | |
|---|---|---|---|
| | | ಶಿಶುವಿಹಾರ | ಪ್ರಾಥಮಿಕ ಶಾಲೆ |
| 2013–14 | 8 | 1 | 3 |
| 2014–15 | 8 | 1 | 4 |
| 2015–16 | 8 | 1 | 6 |

**ಶಿಕ್ಷಕೇತರ ವರ್ಗ**

| ವರ್ಷ | ಮಂಜೂರಾದ ಹುದ್ದೆ/ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ವರ್ಗ (ಸ.ಶಿ) | ಕಾರ್ಯನಿರ್ವಹಿಸುತ್ತಿರುವ ಶಿಕ್ಷಕವರ್ಗದವರ ಸಂಖ್ಯೆ (ತಾತ್ಕಾಲಿಕ) | |
|---|---|---|---|
| | | ಶಿಶುವಿಹಾರ | ಪ್ರಾಥಮಿಕ ಶಾಲೆ |
| 2013–14 | ಗುಮಾಸ್ತರು–1<br>ಸೇವಕರು–1<br>ಆಯಾ | ಆಯಾ–2 | – |
| 2014–15 | ಗುಮಾಸ್ತರು–1<br>ಸೇವಕರು–1 | ಆಯಾ–2 | – |

ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯು ರಾಜ್ಯ ಸರ್ಕಾರದ ಅನುದಾನಕ್ಕೆ ಒಳಪಟ್ಟಿದ್ದು; ಬೋಧಕ ಮತ್ತು ಬೋಧಕೇತರ ಹುದ್ದೆಗಳೂ ಸೇರಿದಂತೆ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ 12, ಈ ಪೈಕಿ ಒಂದು ಹುದ್ದೆಯು ಹಿಂದಿ ಭಾಷಾ ಶಿಕ್ಷಕರ ಹುದ್ದೆಯಾಗಿದ್ದು, ಅರೆಕಾಲಿಕ ಹುದ್ದೆಯಾಗಿರುತ್ತದೆ. ಈ ಪೈಕಿ ಕಾರ್ಯ ನಿರ್ವಹಿಸುತ್ತಿದ್ದವರ ಸಂಖ್ಯೆ 8, ಖಾಲಿ ಇದ್ದ ಹುದ್ದೆಗಳಿಗೆ ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆದು ಭರ್ತಿಮಾಡಿ ಸರ್ಕಾರದಿಂದ ವೇತನಕ್ಕೆ ಅನುದಾನ ಪಡೆಯುವ ಅವಕಾಶವಿದ್ದರೂ ಸಹ ಇದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆಯಾದ್ದರಿಂದ, ಈ ಶಿಕ್ಷಣ ಸಂಸ್ಥೆಯಲ್ಲಿ ಎಲ್ಲಾ ಆರ್ಥಿಕವಾಗಿ ಹಿಂದುಳಿದ ಪೋಷಕ ವರ್ಗದವರ ಮಕ್ಕಳೇ ವ್ಯಾಸಂಗ ಮಾಡುತ್ತಿದ್ದು,ಇವರ ವಿದ್ಯಾಭ್ಯಾಸಕ್ಕೆ ತೊಂದರೆ ಆಗಬಾರದೆಂಬ ದೃಷ್ಟಿಯಿಂದ ಮತ್ತು ಈ ಶಾಲೆಯ ಟ್ರಸ್ಟ್‌ಗೆ ಮಾನ್ಯ ಕುಲಪತಿಗಳು ಅಧ್ಯಕ್ಷರಾಗಿದ್ದು, ಅವರ ಮೌಖಿಕ ಆದೇಶದ ಮೇರೆಗೆ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಯದರ್ಶಿಗಳು ಈ ಖಾಲಿ ಹುದ್ದೆಗಳಿಗೆದುರಾಗಿ ನೌಕರರನ್ನು ತಾತ್ಕಾಲಿಕವಾಗಿ 6 ತಿಂಗಳ ಅವಧಿಗೆ ನೇಮಕ ಮಾಡಿಕೊಂಡು ಮತ್ತೆ ಮುಂದುವರೆಸುತ್ತಾ ಬಂದಿರುತ್ತಾರೆ. ಹಾಗಾಗಿ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿರುವುದಿಲ್ಲ. ಈ ನೌಕರರ ವೇತನವನ್ನು ಸರ್ಕಾರದ ಅನುದಾನದಿಂದ ಭರಿಸಲಾಗುತ್ತಿದ್ದುದರಿಂದ ಹಾಗೂ ವಿಶ್ವವಿದ್ಯಾನಿಲಯದಿಂದ ಬರೇ ಸಹಾಯಾನುದಾನ ನೀಡುತ್ತಿದ್ದುದರಿಂದ ಈ ತಾತ್ಕಾಲಿಕ ನೌಕರರ ವೇತನಕ್ಕೆ ಇದುವರೆಗೆ ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳಲಾಗುತ್ತಿರಲಿಲ್ಲ. ಆದರೆ 2018–19ರ ಸಾಲಿನ ಆಯವ್ಯಯದಲ್ಲಿ ಈ ತಾತ್ಕಾಲಿಕ ನೌಕರರ ವೇತನಕ್ಕಾಗಿ ಅವಕಾಶ ಮಾಡಿಕೊಳ್ಳಲಾಗಿದೆ.

ಆದ್ದರಿಂದ ರೂ17,01,366.00ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ.

| | | | |
|---|---|---|---|
| | ಆಯಾ | | |
| 2015–16 | ಗುಮಾಸ್ತರು–1<br>ಸೇವಕರು–1<br>ಆಯಾ | ಆಯಾ–2 | – |

**ಪ್ರೌಢ ಶಿಕ್ಷಣ – ಶಿಕ್ಷಕ/ಶಿಕ್ಷೇಕತರ ವರ್ಗ**

| ವರ್ಷ | ಮಂಜೂರಾದ ಹುದ್ದೆ/ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ವರ್ಗ (ಸ.ಶಿ) | ಕಾರ್ಯನಿರ್ವಹಿಸುತ್ತಿರುವ ಶಿಕ್ಷವರ್ಗದವರ ಸಂಖ್ಯೆ (ತಾತ್ಕಾಲಿ) | |
|---|---|---|---|
| | | ಪ್ರೌಡಶಾಲೆ | |
| 2013–14 | ಮುಖ್ಯೋಪಾಧ್ಯಾಯರು–1<br>ಸಹಶಿಕ್ಷಕರು–5<br>ದೈಹಿಕ ಶಿಕ್ಷಕರು–1<br>ಡಿ–ದರ್ಜೆ ನೌಕರರು–2 | 4 | – |
| 2014–15 | ಮುಖ್ಯೋಪಾಧ್ಯಾಯರು–1<br>ಸಹಶಿಕ್ಷಕರು–5<br>ದೈಹಿಕ ಶಿಕ್ಷಕರು–1<br>ಡಿ–ದರ್ಜೆ ನೌಕರರು–2 | 4 | – |
| 2015–16 | ಮುಖ್ಯೋಪಾಧ್ಯಾಯರು–1<br>ಸಹಶಿಕ್ಷಕರು–5<br>ದೈಹಿಕ ಶಿಕ್ಷಕರು–1<br>ಡಿ–ದರ್ಜೆ ನೌಕರರು–2 | 4 | – |

ಮೇಲಿನಂತೆ ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢಶಿಕ್ಷಣ ಶಾಲೆಗಳಿಗೆ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚುವರಿಯಾಗಿ ಶಿಕ್ಷಕೇತರ ವರ್ಗದವರು ತಾತ್ಕಾಲಿಕವಾಗಿ ಒಟ್ಟು 12 ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ (ವಿವರ ಮೇಲಿನ ಅನುಬಂಧದಲ್ಲಿರುವಂತೆ) ಈ ತಾತ್ಕಾಲಿಕ ನೇಮಕಾತಿಗಳನ್ನು ಪತ್ರಿಕೆಗಳಲ್ಲಿ ಜಾಹೀರಾತು ಪ್ರಚುರಪಡಿಸದೆ ರೋಸ್ಟರ್ ನಿಯಮ ಪಾಲಿಸದೆ ಸಂಸ್ಥೆಯ ಗೌರವ ಕಾರ್ಯದರ್ಶಿಗಳು 6 ತಿಂಗಳ ಅವಧಿಗೆ ನೇಮಕಾತಿ ಮಾಡಿಕೊಂಡಿರುತ್ತಾರೆ.

ತಾತ್ಕಾಲಿಕ ನೇಮಕಾತಿಗಳು ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ 2000 ನಿಯಮ 55(4)(7)ರಲ್ಲಿ ತಿಳಿಸಿರುವಂತೆ ಮಾನ್ಯ ಕುಲಪತಿಗಳಿಗೆ ತಾತ್ಕಾಲಿಕ ನೇಮಕಾತಿಗಳನ್ನು 1 ವರ್ಷದ ಅವಧಿಗೆ

| | |
|---|---|
| ನೇಮಕಗೊಳಿಸುವ ಅಧಿಕಾರ ಹೊಂದಿರುತ್ತಾರೆ. ಸದರಿ ಪ್ರಕರಣಗಳಲ್ಲಿ ಕಾರ್ಯದರ್ಶಿಯವರು ನೇರವಾಗಿ ತಾತ್ಕಾಲಿಕ ನೌಕರರನ್ನು ನೇಮಕಗೊಳಿಸಿರುವುದು ಕಂಡುಬಂದಿದ್ದು, ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಹಾಗೂ ಈ ನೇಮಕಾತಿ ವರ್ಗದವರಿಗೆ ವಿಶ್ವವಿದ್ಯಾನಿಲಯದ ವತಿಯಿಂದ ವೇತನವನ್ನು ಭರಿಸಲಾಗುತ್ತಿದ್ದು, ಆಯವ್ಯಯ ಅಂದಾಜಿನಲ್ಲಿ ಅವಕಾಶವಿಲ್ಲದಿದ್ದರೂಸಹ ಅನುಮೋದನೆ ಪಡೆಯದೆ ವೇತನ ಪಾವತಿಸಲಾಗುತ್ತಿರುವುದು ನಿಯಮಬಾಹಿರವಾಗಿರುವುದರಿಂದ ತಾತ್ಕಾಲಿಕ ನೌಕರರಿಗೆ ಪಾವತಿಸಲಾಗಿರುವ ವೇತನ ಒಟ್ಟು 3 ವರ್ಷಗಳ ಅವಧಿಗೆ 2013–14ನೇ ಸಾಲು 1,24,086 + 2014–15ನೇ ಸಾಲು 547987 + 2015–16ನೇ ಸಾಲು 10,29,293 **ಒಟ್ಟು ರೂ.17,01,366/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. (ವಿವರ ಅನುಬಂಧ–27ಲ್ಲಿ ನೀಡಿದೆ)**<br><br>ತಾತ್ಕಾಲಿಕ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ನೌಕರರ ವಿದ್ಯಾರ್ಹತೆ/ವಯೋಮಿತಿ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ.<br><br>ಮೈಸೂರು ವಿಶ್ವವಿದ್ಯಾನಿಲಯವು ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆಗೆ ಅನುದಾನರಹಿತ ಖಾಯಂ ನೌಕರರು, ತಾತ್ಕಾಲಿಕ ನೌಕರರು ಮತ್ತು ನಿವೃತ್ತ ನೌಕರರಿಗೆ ವೇತನ ಪಾವತಿಸಲು ಹಣಬಿಡುಗಡೆ ಮಾಡುತ್ತಿರುವುದು ಪರಿಶೋಧನೆಯಲ್ಲಿ ಗಮನಿಸಲಾಗಿದೆ. (ಲೆಕ್ಕತನಿಖಾ ವಿಚಾರಣೆ ಸಂಖ್ಯೆ:3 ದಿನಾಂಕ:15.02.2018) | |
| **26. ನಿವೃತ್ತಿ ನಂತರ ಮರು ನೇಮಕಗೊಳಿಸಿರುವುದು :– (ಹಣಕಾಸು ವಿಭಾಗ)**<br><br>ಸಾಮಾನ್ಯ ರೆವಿನ್ಯೂ ಖಾತೆಯ ಪಾವತಿ ಓಚರುಗಳನ್ನು ಪರಿಶೀಲಿಸಿದಾಗ<br>1) ಪ್ರೊ॥ ಬಿ.ಕೆ. ಜಗದೀಶ್ – Private Secretary to vicechancellor<br>2) ಶ್ರೀ.ಪಿ.ಬಿ. ಪ್ರಭು – Special officer - Administrative Branch<br>3) ಡಾ॥ ಡಿ. ಚನ್ನೆಗೌಡ, ರಸಾಯನಶಾಸ್ತ್ರ ವಿಭಾಗ<br>4) ಪ್ರೊ॥ ಎಂ. ಚಂದ್ರಕುಮಾರ್, ಸಂದರ್ಶಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ<br>5) ಡಾ॥ ಆರ್.ಸೋಮಶೇಖರ್, ನಿವೃತ್ತ ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ವಿಭಾಗ,<br>6) ಡಾ॥ ಪದ್ಮಶೇಖರ್, ಜೈನಶಾಸ್ತ್ರ ವಿಭಾಗ<br><br>ಸದರಿ ಅಧಿಕಾರಿಗಳನ್ನು ಅವರ ನಿವೃತ್ತಿಯ ನಂತರ 2015–16ನೇ ಸಾಲಿನಲ್ಲಿ ಮರು | ಈ ಕಂಡಿಕೆಯಲ್ಲಿನ ತಿಳಿಸಿರುವ ಅಧ್ಯಾಪಕ/ಅಧ್ಯಾಪಕೇತರ ನೌಕರರನ್ನು ಸರ್ಕಾರದ ಪತ್ರ ಸಂಖ್ಯೆ:ಇಡಿ4/ಯು.ಎಂ.ಎಸ್/2014, ದಿನಾಂಕ:11.05.2015ರ ಅನ್ವಯದಂತೆ ನಿವೃತ್ತಿ ನಂತರ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಆಯಾ ಚಾತುರ್ಮಾಸದ ಅಂತ್ಯದ ವರೆಗೆ ಮರು ನೇಮಕಾತಿ ಮಾಡಿಕೊಳ್ಳಲಾಗಿತ್ತು ಮತ್ತು ಅವಧಿ ಮುಗಿದ ಕೂಡಲೇ ಅವರುಗಳನ್ನು ಸೇವೆಯಿಂದ ವಿಮುಕ್ತಿಗೊಳಿಸಲಾಗಿದೆ. ಹಾಗೂ ಸರ್ಕಾರದ ಸೂಚನೆಗಳನ್ವಯ ಅವರ ಆರ್ಥಿಕ ವೆಚ್ಚಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದಲೇ ಭರಿಸಲಾಗಿದೆ.<br><br>ಸರ್ಕಾರದ ಪತ್ರ ಸಂಖ್ಯೆ:ಇಡಿ4/ಯು.ಎಂ.ಎಸ್/2014, ದಿನಾಂಕ:11.05.2015ರ ಪ್ರತಿಯನ್ನು ಈ ಕೂಡ ಲಗತ್ತಿಸುತ್ತಾ ಈ ಸಂಬಂಧದ ಆಕ್ಷೇಪಣೆ ಮೊತ್ತ ರೂ.13,00,000/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |

| | |
|---|---|
| ನೇಮಕಮಾಡಿಕೊಳ್ಳಲಾಗಿದೆ. ಅಧಿಕಾರಿಗಳಿಗೆ ಮಾಹೆಯಾನ ಸಂಭಾವನೆ ಪಾವತಿಸಿರುವ ವಿವರ ಕೆಳಕಂಡಂತಿದೆ.<br><br>ಮಾಸಿಕ ಸಂಭಾವನೆ<br>1. ಪ್ರೊ॥ ಬಿ.ಕೆ.ಜಗದೀಶ್ 30000 x 10 = 300000<br>2. ಶ್ರೀ.ಪಿ.ಬಿ. ಪ್ರಭು 25000 x 10 = 250000<br>3. ಡಾ॥ ಅರ್. ಸೋಮಶೇಖರ್ 25000 x 6 = 150000<br>4. ಡಾ॥ ಡಿ. ಚನ್ನೇಗೌಡ 25000 x 6 = 150000<br>5. ಪ್ರೊ॥ ಎಂ. ಚಂದ್ರಕುಮಾರ್ 25000 x 12 = 300000<br>6. ಡಾ॥ ಪದ್ಮಶೇಖರ್ 25000 x 6 = 150000<br>**ಒಟ್ಟು ರೂ. 1300000**<br><br>ವಿಶ್ವವಿದ್ಯಾನಿಲಯದಲ್ಲಿ ಬೋಧಕೇತರ ನೌಕರ ವರ್ಗದವರ ಮಂಜೂರಾದ ಹುದ್ದೆಗಳು – 1369 ಇದ್ದು ಆ ವರ್ಗದಲ್ಲಿ ಹುದ್ದೆಯ ಕರ್ತವ್ಯ ನಿರ್ವಹಿಸಬಹುದಾಗಿದ್ದು, ಸದರಿ ಅಧಿಕಾರಿಗಳನ್ನು ನೇಮಕಮಾಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಿದೆ. ಹಾಗೂ ವೇತನ ಪಾವತಿಸಿರುವುದು ವಿಶ್ವವಿದ್ಯಾಲಯದ ಕಾಯ್ದೆಗೆ ವಿರುದ್ಧವಾಗಿರುವುದರಿಂದ ಹಾಗೂ ಯಾರೇ ನೌಕರರನ್ನು ನೇಮಕ ಮಾಡಿಕೊಳ್ಳುವ ಮುಂಚೆ ಸೆನೆಟ್/ಸಿಂಡಿಕೇಟ್‌ನಲ್ಲಿ ಒಪ್ಪಿಗೆ ಪಡೆದು ರಾಜ್ಯಪಾಲರ ಅನುಮೋದನೆ ಪಡೆಯಬೇಕಾಗಿರುತ್ತದೆ. ಇಲ್ಲಿ ಈ ಕ್ರಮಗಳನ್ನು ಪಾಲಿಸದೆ ಇರುವುದರಿಂದ 2015–16ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ **ರೂ.13,00,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಹಾಗೂ ಕ.ನಾ.ಸೇ.ನಿ. ನಿಯಮ–313ರಂತೆ ಮಾಹೆಯಾನ ವೇತನ ನಿಗಧಿಪಡಿಸಿಲ್ಲದಿರುವುದನ್ನು ಗಮನಿಸಿದರೆ 2015–16ನೇ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ಮತ್ತು ಅಧ್ಯಾಪಕೇತರ ವೃಂದದ ಹುದ್ದೆಗಳಿಗೆ ನಿವೃತ್ತಿ ನಂತರ ಮರು ನೇಮಕ ಮಾಡಿಕೊಳ್ಳಲಾದ ವಿವರ, ಪಾವತಿಸಲಾದ ಮಾಹೆಯಾನ ಸಂಭಾವನೆ ವಿವರಗಳನ್ನು ಒದಗಿಸುವಂತೆ ಲೆಕ್ಕತನಿಖಾ ವಿಚಾರಣೆ ಸಂಖ್ಯೆ:45/29.11.2017ರಲ್ಲಿ ಕೋರಲಾಗಿದ್ದು, ಯಾವುದೇ ಮಾಹಿತಿಯನ್ನು ಲೆಕ್ಕತನಿಖೆಗೆ ಒದಗಿಸಿರುವುದಿಲ್ಲ. | |
| **27. ಪ್ರೊ॥ ಹೆಚ್.ಆರ್ ಉಮಾ ಪ್ರಾಧ್ಯಾಪಕರು ಸರ್ಕಾರಿ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡದಿರುವುದು :– (ಹಣಕಾಸು ವಿಭಾಗ)**<br><br>2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಡಾ॥ ಹೆಚ್.ಆರ್.ಉಮಾ, ಪ್ರಾಧ್ಯಾಪಕರುರವರ ಸೇವಾವಹಿಯನ್ನು ಪರಿಶೀಲಿಸಲಾಗಿ ಇವರು ದಿನಾಂಕ:28.06.1996 ರಿಂದ 29.06.1999ರ ವರೆಗೆ ಸರ್ಕಾರಿ | ಪ್ರೊ॥ ಹೆಚ್.ಆರ್ ಉಮಾ, ಪ್ರಾದ್ಯಾಪಕರು ರವರ ಕಡತಗಳನ್ನು ಪರಿಶೀಲಿಸಲಾಗುತ್ತಿದೆ. ಇವರು ಸರ್ಕಾರಿ ಸೇವೆಯಲ್ಲಿ ಕಾರ್ಯನಿರ್ವಹಿಸಿದ ಅವಧಿಗೆ ಅಂಶದಾನವನ್ನು ಲೆಕ್ಕ ಹಾಕಿ |

| | |
|---|---|
| ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ ಇಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ:30.06.1999ರಲ್ಲಿ ಉಪನ್ಯಾಸಕರಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಯ್ಕೆಯಾಗಿ ವರದಿ ಮಾಡಿಕೊಂಡಿರುವುದನ್ನು ಲೆಕ್ಕತನಿಖೆಯಲ್ಲಿ ಗಮನಿಸಲಾಗಿದ್ದು, ಸದರಿಯವರ ಹಿಂದಿನ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಹಿಂದಿನ ಸೇವಾವಹಿಯನ್ನು ಅಡಕಗೊಳಿಸಿ ಮೈಸೂರು ವಿಶ್ವವಿದ್ಯಾನಿಲಯದ ಸೇವೆಯನ್ನು ನಮೂದಿಸಿರುವುದಕ್ಕೆ ಸಂಬಂಧಿಸಿದಂತೆ ಇವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆಯ ಸಕ್ಷಮ ಪ್ರಾಧಿಕಾರದ ಸಮುಚಿತ ಮಾರ್ಗದ ಮೂಲಕ ಅರ್ಜಿಯನ್ನು ಸಲ್ಲಿಸಿದ್ದು, ಉಪನ್ಯಾಸಕರ ಹುದ್ದೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಯ್ಕೆಯಾದ ನಂತರ ಕೆ.ಸಿ.ಎಸ್.ಆರ್ ನಿಯಮ 252 (ಬಿ)ರನ್ವಯ ಇವರಿಗೆ ಸೇವಾಭದ್ರತೆಯನ್ನು ನೀಡಿರುವ ಮಾಹಿತಿಯನ್ನು ಸೇವಾವಹಿಯಲ್ಲಿ ನಮೂದಿಸಿರುವುದಿಲ್ಲ. ಆದರೆ ಇವರ ಹಳೆಯ ಸೇವಾವಹಿಯನ್ನು ಅಡಕಗೊಳಿಸಿ ಮೈಸೂರು ವಿಶ್ವವಿದ್ಯಾನಿಲಯ ಸೇವೆಯ ವಿವರಗಳನ್ನು ಮುಂದುವರೆಸಿರುವುದರಿಂದ ಇವರಿಗೆ ಹಿಂದಿನ ಸೇವಾ ಅವಧಿಯ ಸೇವಾ ಭದ್ರತೆಯನ್ನು ನೀಡಿದ್ದಲ್ಲಿ ದಿನಾಂಕ:28.06.1996 ರಿಂದ 29.06.1999ರವರೆಗೆ ಕೆ.ಸಿ.ಎಸ್.ಆರ್ ನಿಯಮ 430ರನ್ವಯ ರಜಾವಂತಿಕೆ ಮತ್ತು ಪಿಂಚಣಿವಂತಿಕೆಯನ್ನು ಬಡ್ಡಿ ಸಮೇತ ಲೆಕ್ಕಾಚಾರ ಮಾಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆ.ಆರ್.ಪೇಟೆ ಅಥವಾ ಡಾ॥ ಉಮಾ.ಹೆಚ್.ಆರ್ ಪ್ರಾಧ್ಯಾಪಕರುರವರಿಂದ ವಸೂಲಿಸಿ ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಇವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಅಗತ್ಯ ಕ್ರಮವಹಿಸಲಾಗಿದೆ.<br><br>ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಈ ಸಂಬಂಧದ ವಿವರಗಳನ್ನು ಹಾಜರುಪಡಿಸಲಾಗುತ್ತದೆ. |
| **28. <u>ಡಾ॥ ಎಂ.ಎಸ್.ಶೇಖರ್, ಪ್ರಾಧ್ಯಾಪಕರು, ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡದಿರುವುದು :– (ಹಣಕಾಸು ವಿಭಾಗ)</u>**<br><br>2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಪ್ರೊ॥ ಶೇಖರ್.ಎಂ.ಎಸ್ ರವರ ಸೇವಾವಹಿಯನ್ನು ಪರಿಶೀಲಿಸಲಾಗಿ ದಿನಾಂಕ:19.07.2013 ರಿಂದ 18.07.2016ರವರೆಗೆ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಮೈಸೂರು ಇಲ್ಲಿ ಕುಲಸಚಿವರಾಗಿ (ಪರೀಕ್ಷಾಂಗ) ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಅವಧಿಗೆ ಕೆ.ಸಿ.ಎಸ್.ಆರ್ ನಿಯಮ 430ರನ್ವಯ ರಜಾವೇತನ ಮತ್ತು ನಿವೃತ್ತ ವೇತನ ವಂತಿಕೆಯನ್ನು ಅನ್ಯ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸಿದ ವಿಶ್ವವಿದ್ಯಾನಿಲಯದಿಂದ ಅಥವಾ ಪ್ರಾಧ್ಯಾಪಕರಿಂದ ಆರ್ಥಿಕ ವರ್ಷದ ಕೊನೆಯ 15 ದಿನಗಳೊಳಗಾಗಿ ಮಾತೃ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿರುತ್ತದೆ. ಆದರೆ ಇವರ ಸೇವಾವಹಿಯಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮ 430 ರನ್ವಯ ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ (19.07.2013 ರಿಂದ 18.07.2016 ರವರೆಗೆ) ಅಂಶದಾನವನ್ನು ಬಡ್ಡಿ ಸಮೇತ ಲೆಕ್ಕಾಚಾರ ಮಾಡಿ ಅನ್ಯ ಸೇವೆಯಲ್ಲಿನ ವಿಶ್ವವಿದ್ಯಾನಿಲಯದಿಂದ ಪಡೆದು ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಿ ವಿವರವನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. | **ಡಾ॥ ಎಂ.ಎಸ್.ಶೇಖರ್,** ಪ್ರಾಧ್ಯಾಪಕರು ರವರ ಕಡತಗಳನ್ನು ಪರಿಶೀಲಿಸಲಾಗುತ್ತದೆ. ಇವರು ಅನ್ಯಸೇವೆಯಲ್ಲಿ ಕಾರ್ಯನಿರ್ವಹಿದ ಅವಧಿಗೆ ಅಂಶದಾನವನ್ನು ಲೆಕ್ಕ ಹಾಕಿ ಇವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಅಗತ್ಯ ಕ್ರಮವಹಿಸಲಾಗಿದೆ.<br><br>ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಈ ಸಂಬಂಧದ ವಿವರ ಒದಗಿಸಲಾಗುತ್ತದೆ. |

| | |
|---|---|
| **29. ಪ್ರೊ॥ ಸಿ. ಬಸವರಾಜು ಪ್ರಾಧ್ಯಾಪಕರವರು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡದಿರುವುದು :– (ಹಣಕಾಸು ವಿಭಾಗ)**<br><br>2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಪ್ರೊ॥ಸಿ. ಬಸವರಾಜು ರವರ ಸೇವಾವಹಿಯನ್ನು ಪರಿಶೀಲಿಸಲಾಗಿ ಪ್ರೊ॥ ಸಿ. ಬಸವರಾಜು ರವರು ದಿನಾಂಕ:20.06.2011 ರಿಂದ 17.02.2012ರವರೆಗೆ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರು (ಪರೀಕ್ಷಾಂಗ) ಆಗಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ED61/URC/2011/18.06.2011ರ ಆದೇಶದನ್ವಯ ಕರ್ತವ್ಯ ನಿರ್ವಹಿಸಿದ್ದು, ನಂತರ 17.02.2012ರಲ್ಲಿ ಅನ್ಯ ಸೇವೆಯಿಂದ ಬಿಡುಗಡೆಹೊಂದಿ ಮಾತೃ ವಿಭಾಗದಲ್ಲಿ ವರದಿ ಮಾಡಿಕೊಂಡಿರುತ್ತಾರೆ. ಆದರೆ ದಿನಾಂಕ:20.06.2011 ರಿಂದ 17.02.2012ರವರೆಗೆ ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಕೆ.ಸಿ.ಎಸ್.ಆರ್ ನಿಯಮ 430ರನ್ವಯ ರಜಾ ವೇತನ ಮತ್ತು ನಿವೃತ್ತಿ ವೇತನವನ್ನು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ವಿಶ್ವವಿದ್ಯಾನಿಲಯ ಅಥವಾ ನೌಕರರು ಆರ್ಥಿಕ ವರ್ಷದ ಕೊನೆಯ 15 ದಿನಗಳೊಳಗಾಗಿ ಮಾತೃ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿರುತ್ತದೆ. ಆದರೆ ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ಪಾವತಿಸಿರುವ ಬಗ್ಗೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:192/30.01.2018ರಲ್ಲಿ ಕೋರಲಾಗಿ ಕೋರಿರುವ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದರಿಂದ ಕೆ.ಸಿ.ಎಸ್.ಅರ್ ನಿಯಮ 430ರನ್ವಯ ಅನ್ಯಸೇವೆಯ ಅವಧಿಗೆ ರಜಾ ವೇತನ ಮತ್ತು ನಿವೃತ್ತಿ ವೇತನವನ್ನು ಹಾಗೂ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಅನ್ಯ ಸೇವೆಯಲ್ಲಿದ್ದ ಅವಧಿಗೆ ವಿಶ್ವವಿದ್ಯಾನಿಲಯದಿಂದ ವಸೂಲ್ಮಾಡಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಪ್ರೊ.ಸಿ.ಬಸವರಾಜು, ಪ್ರಾದ್ಯಾಪಕರು ರವರ ಕಡತಗಳನ್ನು ಪರಿಶೀಲಿಸಲಾಗುತ್ತದೆ. ಇವರು ಅನ್ಯಸೇವೆಯಲ್ಲಿ ಕಾರ್ಯನಿರ್ವಹಿದ ಅವಧಿಗೆ ಅಂಶದಾನವನ್ನು ಲೆಕ್ಕ ಹಾಕಿ ಇವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಅಗತ್ಯ ಕ್ರಮವಹಿಸಲಾಗಿದೆ.<br><br>ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಈ ಸಂಬಂಧದ ಅವಶ್ಯಕ ವಿವರ ಹಾಜರುಪಡಿಸಲಾಗುವುದು. |
| **30. 2006ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಬೋಧಕವರ್ಗದವರಿಗೆ ಯು.ಜಿ.ಸಿ ಹಿಂಬಾಕಿಯಲ್ಲಿ ಪಡೆದಿರುವ ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಾವತಿಸಿರುವುದು :– (ಹಣಕಾಸು ವಿಭಾಗ)**<br><br>2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬೋಧಕ ವೃಂದದವರಿಗೆ 2006ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:24.12.2009 ರಿಂದ ಇತರೆ ಎಲ್ಲಾ ಸೌಲಭ್ಯ ಮತ್ತು ಭತ್ಯೆಗಳನ್ನು ಭವಿಷ್ಯಾವರ್ತಿಯಾಗಿ ವಿಸ್ತರಿಸುವಂತೆ<br><br>1. ಸರ್ಕಾರಿ ಆದೇಶ ಸಂಖ್ಯೆ:ಇಡಿ/37/ಯುಎನ್ಇ/2009/ದಿನಾಂಕ:24.12.2009<br>2. ಸರ್ಕಾರದ ಪತ್ರ ಸಂಖ್ಯೆ:ಇಡಿ/37/ಯುಎನ್ಇ/2009/ದಿನಾಂಕ:08.04.2010 | ಬೋಧಕ ವರ್ಗದವರ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಲಾಗುತ್ತಿದೆ. ಈ ಸಂಬಂಧ ಅಗತ್ಯ ಕ್ರಮವಹಿಸಿ ಲೆಕ್ಕ ತನಿಖೆಗೆ ಅವಶ್ಯಕ ಮಾಹಿತಿ ಒದಗಿಸಲಾಗುತ್ತದೆ. |

| | |
|---|---|
| ಈ ಮೇಲಿನ ಆದೇಶಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ:ಕಾಶಿಇ/65/ಸುತ್ತೋಲೆ/ಆಯವ್ಯಯ/2017-18/ದಿನಾಂಕ:12.09.2017ರ ಆದೇಶದಲ್ಲಿಯೂ ಸಹ 2006ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಗಳನ್ನು ದಿನಾಂಕ:01.01.2006ರಿಂದ ಜಾರಿಗೊಳಿಸಿ ದಿನಾಂಕ: 24.12.2009 ರಿಂದ ಇತರೆ ಎಲ್ಲಾ ಸೌಲಭ್ಯಗಳು ಮತ್ತು ಭತ್ಯೆಗಳನ್ನು ಭವಿಷ್ಯಾವರ್ತಿಯಾಗಿ ವಿಸ್ತರಿಸುವಂತೆ ತಿಳಿಸಲಾಗಿದ್ದರೂ ವಿಶ್ವವಿದ್ಯಾನಿಲಯದ ವೇತನ ಭತ್ಯೆ ಬಿಲ್ಲುಗಳನ್ನು ಪರಿಶೀಲಿಸಲಾಗಿ ಅನುಬಂಧ-28ರಲ್ಲಿ ರೂ.4,90,72,897/-ಗಳನ್ನು ಪಾವತಿಸಿರುವುದಕ್ಕೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:54 ದಿನಾಂಕ: 06.12.2017ರಲ್ಲಿ ಕೋರಲಾಗಿತ್ತು. ಸರ್ಕಾರಿ ಆದೇಶವನ್ನು ಉಲ್ಲಂಘಿಸಿ 2006ರ ಪರಿಷ್ಕೃತ ಯು.ಜಿಸಿ ವೇತನ ಶ್ರೇಣಿಯಲ್ಲಿ 2015-16ನೇ ಸಾಲಿಗೆ ಯು.ಜಿ.ಸಿ ಬಾಕಿ ಮೊತ್ತ ರೂ.5,62,11,000/- ಸ್ವೀಕೃತವಾಗಿರುತ್ತದೆ. ದಿನಾಂಕ: 01.01.2006 ರಿಂದ 23.12.2009ರವರೆಗೆ ಯು.ಜಿ.ಸಿ ಹಿಂಬಾಕಿ ಮೊತ್ತವನ್ನು ಪಾವತಿಸುವಾಗ ತುಟ್ಟಿ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಒಳಗೊಂಡಂತೆ ಹಿಂಬಾಕಿ ಮೊತ್ತವನ್ನು ಪಾವತಿಸಿರುವ ಮೊತ್ತವನ್ನು ಬೋಧಕ ವರ್ಗದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. | |
| **31. ಪ್ರೊ॥ ಸಿದ್ದೇಗೌಡ.ವೈ.ಎಸ್ ಪ್ರಾಧ್ಯಾಪಕರು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡದಿರುವುದು :- (ಹಣಕಾಸು ವಿಭಾಗ)**<br><br>2015-16ನೇ ಸಾಲಿನ ಲೆಕ್ಕತನಿಖೆಯಲ್ಲಿ ಪ್ರೊ॥ ಸಿದ್ದೇಗೌಡ.ವೈ.ಎಸ್, ಪ್ರಾಧ್ಯಾಪಕರುರವರ ಸೇವಾವಹಿಯನ್ನು ಪರಿಶೀಲಿಸಲಾಗಿ ದಿನಾಂಕ:02.02.2012 ರಿಂದ 04.10.2013ರವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಸಚಿವರು (ಆಡಳಿತ) ಆಗಿ ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಮತ್ತೆ ದಿನಾಂಕ:05.03.2014 ರಿಂದ 09.12.2016ರವರೆಗೆ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯಗಳಲ್ಲಿ ಕುಲಸಚಿವರಾಗಿ ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ತದನಂತರ ಅನ್ಯ ಸೇವೆಯಿಂದ ಬಿಡುಗಡೆಹೊಂದಿ ಮಾತೃ ಇಲಾಖೆಯಾದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಲೆಕ್ಕತನಿಖೆಯಲ್ಲಿ ಪರಿಶೀಲಿಸಲಾಗಿದ್ದು, ಕೆ.ಸಿ.ಎಸ್.ಆರ್ ನಿಯಮ 430ರನ್ವಯ ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ರಜಾ ವೇತನ ಮತ್ತು ನಿವೃತ್ತಿ ವೇತನವನ್ನು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ವಿಶ್ವವಿದ್ಯಾನಿಲಯಗಳಿಂದ ಅಥವಾ ಪ್ರಾಧ್ಯಾಪಕರಿಂದ ಆರ್ಥಿಕ ವರ್ಷದ ಕೊನೆಯ 15 ದಿನಗಳ ಒಳಗಾಗಿ ಮಾತೃ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿರುತ್ತದೆ. ಆದರೆ ಇವರ ಸೇವಾವಹಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಅಂಶದಾನವನ್ನು ಪಾವತಿಸಿರುವ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ ಅನ್ಯ ಸೇವೆಯಲ್ಲಿ ಕರ್ತವ್ಯ | ಪ್ರೊ.ವೈ.ಎಸ್.ಸಿದ್ದೇಗೌಡ ಪ್ರಾಧ್ಯಾಪಕರು ರವರ ಕಡತಗಳನ್ನು ಪರಿಶೀಲಿಸಲಾಗುತ್ತದೆ. ಇವರು ಅನ್ಯಸೇವೆಯಲ್ಲಿ ಕಾರ್ಯನಿರ್ವಹಿದ ಅವಧಿಗೆ ಅಂಶದಾನವನ್ನು ಲೆಕ್ಕ ಹಾಕಿ ಇವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಅಗತ್ಯ ಕ್ರಮವಹಿಸಲಾಗಿದೆ.<br><br>ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಈ ಸಂಬಂಧದ ವಿವರ ಒದಗಿಸಲಾಗುತ್ತದೆ. |

| | |
|---|---|
| ನಿರ್ವಹಿಸಿದ ಅವಧಿಗೆ ರಜಾ ವೇತನ ಮತ್ತು ನಿವೃತ್ತಿ ವೇತನವನ್ನು ಲೆಕ್ಕಾಚಾರ ಮಾಡಿ ವಿಳಂಬಕ್ಕೆ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. | |
| **32. <u>ಪ್ರೊ॥ ಯಶವಂತ ಡೊಂಗ್ರೆ ಪ್ರಾಧ್ಯಾಪಕರು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ವಿಶ್ವವಿದ್ಯಾಲಯ ಖಾತೆಗೆ ಜಮೆ ಮಾಡದಿರುವುದು :– (ಹಣಕಾಸು ವಿಭಾಗ)</u>**<br>2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಶ್ರೀ ಯಶವಂತ್ ಡೊಂಗ್ರೆ ಪ್ರಾಧ್ಯಾಪಕರು ರವರ ಸೇವಾವಹಿಯನ್ನು ಪರಿಶೀಲಿಸಲಾಗಿ ದಿನಾಂಕ:23.11.2010 ರಿಂದ 16.10.2012ರವೆಗೆ ಕರ್ನಾಟಕ ರಾಜ್ಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಅನ್ಯ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸಿದ ವಿವರವನ್ನು ಸೇವಾವಹಿಯ ಪರಿಶೀಲನೆಯಲ್ಲಿ ಗಮನಿಸಲಾಗಿದ್ದು, ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಕೆ.ಸಿ.ಎಸ್.ಆರ್ ನಿಯಮ 430ರನ್ವಯ ರಜಾ ವೇತನ ಮತ್ತು ನಿವೃತ್ತಿ ವೇತನವನ್ನು ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ವಿಶ್ವವಿದ್ಯಾನಿಲಯದಿಂದ ಅಥವಾ ನೌಕರರಿಂದ ಆರ್ಥಿಕ ವರ್ಷದ ಕೊನೆಯ 15 ದಿನಗಳೊಳಗಾಗಿ ಮಾತ್ರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿರುತ್ತದೆ. ಆದರೆ ಅನ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಅಂಶದಾನವನ್ನು ಪಾವತಿಸಿರುವ ಬಗ್ಗೆ ಸೇವಾವಹಿಯಲ್ಲಿ ನಮೂದಿಸಿರುವುದಿಲ್ಲ ಹಾಗೂ ಅಂಶದಾನವನ್ನು ಪಾವತಿಸಿರುವ ಬಗ್ಗೆ ಲೆಕ್ಕತನಿಖೆಗೆ ಹಾಜರುಪಡಿಸದಿರುವುದರಿಂದ ಕೆ.ಸಿ.ಎಸ್.ಆರ್ ನಿಯಮ 430ರನ್ವಯ ಅನ್ಯ ಸೇವೆಯ ಅವಧಿಗೆ ರಜಾವೇತನ ಮತ್ತು ನಿವೃತ್ತಿ ವೇತನವನ್ನು ಬಡ್ಡಿ ಸಮೇತ ಲೆಕ್ಕಾಚಾರ ಮಾಡಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಪ್ರೊ॥ ಯಶವಂತ ಡೊಂಗ್ರೆ, ಪ್ರಾದ್ಯಾಪಕರು ರವರ ಕಡತಗಳನ್ನು ಪರಿಶೀಲಿಸಲಾಗುತ್ತದೆ. ಇವರು ಅನ್ಯಸೇವೆಯಲ್ಲಿ ಕಾರ್ಯನಿರ್ವಹಿಸಿದ ಅವಧಿಗೆ ಅಂಶದಾನವನ್ನು ಲೆಕ್ಕ ಹಾಕಿ ಇವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಅಗತ್ಯ ಕ್ರಮವಹಿಸಲಾಗಿದೆ.<br><br>ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಈ ಸಂಬಂಧದ ವಿವರಗಳನ್ನು ಹಾಜರುಪಡಿಸಲಾಗುತ್ತದೆ.. |
| **33. <u>ದೈಹಿಕ ಶಿಕ್ಷಣ ವಿಭಾಗದ ಖಾಯಂ ಸಿಬ್ಬಂದಿಗಳಿಗೆ ಬೇಸಿಗೆ ತರಬೇತಿ ಶಿಬಿರದಲ್ಲಿ ಕಾರ್ಯನಿರ್ವಹಿಸಿದ್ದಕ್ಕೆ ನಿಯಮ ಬಾಹಿರವಾಗಿ ಸಂಭಾವನೆ ನೀಡಿರುವುದು:– (ಹಣಕಾಸು ವಿಭಾಗ)</u>**<br><br>2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ದಿನಾಂಕ:06.05.2015 ರಿಂದ 26.06.2015ರವರೆಗೆ ಬೇಸಿಗೆ ಈಜು ತರಬೇತಿ ಶಿಬಿರವನ್ನು ಏರ್ಪಡಿಸಿದ್ದು, ಶಿಬಿರದಲ್ಲಿ ಪಾಲ್ಗೊಂಡ ಖಾಯಂ ದೈಹಿಕ ಶಿಕ್ಷಣ ಸಂಸ್ಥೆಯು ಈಜು ತರಬೇತಿ ಸಿಬ್ಬಂದಿಗಳಿಗೆ ರೂ.1,73,812/–ಗಳನ್ನು ಧನಾದೇಶ ಸಂಖ್ಯೆ:512430/14.08.2015 ರಲ್ಲಿ ಪಾವತಿಸಲಾಗಿದ್ದು, ಕೆ.ಸಿ.ಎಸ್.ಆರ್. ನಿಯಮ 28(ಬಿ) (ಸಿ) (ಇ) ಗಳನ್ವಯ ಖಾಯಂ ನೌಕರರಿಗೆ ವಿಶೇಷ ಕಾಲಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಸರ್ಕಾರಿ ಕೆಲಸದ ವೇಳೆಯಾಚೆಗೆ ಹೆಚ್ಚು ಹೊತ್ತು ಕೆಲಸ ಮಾಡುವುದು ಸರ್ಕಾರಿ ನೌಕರರ ಹೊಣೆಯಾಗಿರುತ್ತದೆ. ಆದ್ದರಿಂದ ದೈಹಿಕ ಶಿಕ್ಷಣ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಬೇಸಿಗೆ ಈಜು ತರಬೇತಿ ಶಿಬಿರದಲ್ಲಿ ಕರ್ತವ್ಯ ನಿರ್ವಹಿಸಿರುವ ಖಾಯಂ ನೌಕರರ ಈಜು ತರಬೇತಿ ಸಿಬ್ಬಂದಿ ವರ್ಗದವರ ಕರ್ತವ್ಯವಾಗಿರುವುದರಿಂದ | ದಿನಾಂಕ: 06.05.2015 ರಿಂದ 26.06.2015 ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ಹೊಸದಾಗಿ ಈಜು ಕಲಿಯುವವರಿಗೆ ಈಜು ತರಬೇತಿ ಶಿಬಿರವನ್ನು ಹಮ್ಮಿಕೊಳಲಾಗಿತ್ತು. ಈ ಸಂಬಂಧ 210 ಮಂದಿ ಭಾಗವಹಿಸಿದ್ದು ಅದರಲ್ಲಿ ಸಾರ್ವಾಜನಿಕರು 195 ಒಬ್ಬರಿಗೆ 2,500/– ಹಾಗೂ 15 ಮಂದಿ ವಿಶ್ವವಿದ್ಯಾನಿಲಯದ ನೌಕರರ ಮಕ್ಕಳು ಒಬ್ಬರಿಗೆ 1,250/– ರೂಗಳಂತೆ ಒಟ್ಟು 5,06,250/–ರೂಗಳು ಸಂದಾಯವಾಗಿರುತ್ತದೆ.<br><br>ಅಡ್ವಾನ್ಸ್ ಬ್ಯಾಚ್‌ನಲ್ಲಿ 52 ಮಂದಿ ಭಾಗವಹಿಸಿದ್ದು ಅದರಲ್ಲಿ 48 ಸಾರ್ವಜನಿಕರು ಒಬ್ಬರಿಗೆ 3,500/– ರೂಪಾಯಿಗಳು ಮತ್ತು 04 ವಿಶ್ವವಿದ್ಯಾನಿಲಯ ನೌಕರರ ಮಕ್ಕಳು ಒಬ್ಬರಿಗೆ 1,750/– |

| | |
|---|---|
| ನಿಯಮಾನುಸಾರ ಯಾವುದೇ ಹೆಚ್ಚುವರಿ ಸಂಭಾವನೆ ನೀಡಲು ಕೆ.ಸಿ.ಎಸ್.ಆರ್. ನಿಯಮ 28 (ಬಿ) (ಸಿ) (ಇ) ಗಳಲ್ಲಿ ಅವಕಾಶವಿಲ್ಲದಿರುವುದರಿಂದ **ರೂ.1,73,812/–ಗಳಿಗೆ** ಸಂಬಂಧಿಸಿದ ನೌಕರರಿಂದ ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ. | ರಂತೆ ಒಟ್ಟು ರೂ.1,89,000/– ರೂಪಾಯಿಗಳು ಎರಡು ಮೊತ್ತಗಳು ಸೇರಿ ಒಟ್ಟು ರೂ.6,95,850/– ರೂಪಾಯಿಗಳು ಹಣ ವಿಶ್ವವಿದ್ಯಾನಿಲಯಕ್ಕೆ ಸಂದಾಯಮಾಡಲಾಗಿದೆ.<br><br>ಈಜು ಕೊಳದಲ್ಲಿ ಕಾರ್ಯನಿರ್ವಹಿಸುವ ನೌಕರರು ಬೆಳಿಗ್ಗೆ 5.45 ರಿಂದ 1.00 ಘಂಟೆಯವರಿಗೆ ಹಾಗೂ ಮಧ್ಯಾಹ್ನ 2.00 ಘಂಟೆಯಿಂದ ಸಂಜೆ 6.00 ರವರೆಗೆ ಕಾರ್ಯವನ್ನು ನಿರ್ವಹಿಸಬೇಕಾಗಿರುತ್ತದೆ.<br><br>ಸದರಿ ಶಿಬಿರವು ದೈನಂದಿನ ಕೆಲಸದ ವೇಳೆಯನ್ನು ಹೊರತುಪಡಿಸಿ ಅಂದರೆ ಬೆಳಿಗ್ಗೆ 10.00 ರಿಂದ 12.00 ಸಂಜೆ 6.00 ರಿಂದ 8.00 ರರೆಗೆ ಬಿಡುವಿನ ವೇಳೆಯಲ್ಲಿ ಸಾರ್ವಜನಿಕರಿಗೆ, ಮಕ್ಕಳಿಗೆ ಹಾಗೂ ಕ್ರೀಡಾ ಸ್ವರ್ಧಾಳುಗಳಿಗೆ ಅನುಕೂಲವಾಗಲೆಂದು ಹೆಚ್ಚುವರಿಯಾಗಿ ಈಜು ಶಿಬಿರವನ್ನು ನಡೆಸಲಾಗುವುದು ಇದರಿಂದ ವಿಶ್ವವಿದ್ಯಾನಿಲಯಕ್ಕೆ ರೂ.6,95,250/–ಗಳ ಆದಾಯ ಬಂದಿರುತ್ತದೆ.<br><br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ.ಎಲ್3/614/92–93 ದಿನಾಂಕ: 30.03.2009 ರ ಅನುಗುಣವಾಗಿ ಶೇಕಡ 25% ರಂತೆ ಒಟ್ಟು ಆದಾಯದಲ್ಲಿ ರೂ.1,73,812/–ಗಳ ಈ ಸಂಭಾವನೆಯನ್ನು ಈಜು ತರಬೇತಿ ಶಿಬಿರದಲ್ಲಿ ಕೆಲಸ ನಿರ್ವಹಿಸಿದ ನೌಕರರಿಗೆ ಸಂದಾಯಮಾಡಲಾಗಿದೆ.<br><br>ಮೇಲ್ಕಂಡ ವಿಷಯವನ್ನು ತಮ್ಮ ಅವಗಾಹನೆಗಾಗಿ ತರುತ್ತಾ ಈಜು ತರಬೇತಿ ಶಿಬಿರ ನಡೆಸುವ ಅವಧಿಯಲ್ಲಿ ನೌಕರರುಗಳು ಹೆಚ್ಚು ಹೊತ್ತು ನಿರಂತರವಾಗಿ ಕೆಲಸ ನಿರ್ವಹಿಸುವುದು ಮತ್ತು ಅಧಿಕೃತ ರಜಾ ದಿನಗಳಲ್ಲಿ ಈಜು ತರಬೇತಿ ನೀಡುವುದು ಹೆಚ್ಚಿನ ತ್ರಾಸದಾಯಕವಾಗಿದ್ದು ಹಾಗೂ ಜಾಗರೂಕತೆಯಿಂದ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಈ ಈಜು ತರಬೇತಿ ಶಿಬಿರಕ್ಕೆ ಬರುವ ಶಿಬಿರಾರ್ಥಿಗಳಿಗೆ ಹೆಚ್ಚಿನ ಶ್ರಮವಹಿಸಿ ತರಬೇತಿ ನೀಡುವುದರಿಂದ ಈಜು ತರಬೇತಿ ಶಿಬಿರ ಸುಗಮವಾಗಿ ನಡೆಯಲು ಹಾಗೂ ನೌಕರರನ್ನು ಪ್ರೋತ್ಸಾಹಿಸಲು ಸಂಭಾವನೆಯನ್ನು ನೀಡಲಾಗಿರುತ್ತದೆ.<br><br>ಆದುದರಿಂದ ಸದರಿ ಈಜು ತರಬೇತಿ ಶಿಬಿರಕ್ಕೆ ನೀಡಿರುವ ಸಂಭಾವನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಈಜುಕೊಳದ ನೌಕರರಿಗೆ ನೀಡಿರುವ ರೂ.1,73,812/– ರೂಗಳ ಸಂಭಾವನೆಯ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |

| | |
|---|---|
| **34. <u>ಯು.ಜಿ.ಸಿ ವೇತನ ಪಡೆಯುವ ಬೋಧಕ ವೃಂದದವರಿಗೆ ವಿಶ್ವವಿದ್ಯಾನಿಲಯದಲ್ಲಿ ಸಭೆ ಸಮಾರಂಭಗಳು & ಸಮಿತಿ ಸದಸ್ಯರಾಗಿ ಹಾಜರಾದ ದಿನಗಳಿಗೆ ಸಭಾ ಭತ್ಯೆ ಪಾವತಿಸಿರುವುದು :– (ಹಣಕಾಸು ವಿಭಾಗ)</u>**<br><br>2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ 95ನೇ ಘಟಿಕೋತ್ಸವ ಪ್ರಯುಕ್ತ ವಿವಿಧ ಸಭೆಗಳಿಗೆ ಹಾಜರಾದ ಪ್ರಾಧ್ಯಾಪಕರುಗಳಿಗೆ ಎ.ಸಿ ಬಿಲ್ ಸಂಖ್ಯೆ:200/15.04.2015 ಧನಾದೇಶ ಸಂಖ್ಯೆ:510640/15.04.2015ರಲ್ಲಿ 1,50,000/–ಗಳನ್ನು ನೀಡಲಾಗಿರುವುದನ್ನು ಪರಿಶೀಲಿಸಲಾಗಿ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವೃಂದದವರಿಗೆ 95ನೇ ಘಟಿಕೋತ್ಸವ ಪ್ರಯುಕ್ತ ನಡೆಸಲಾದ ವಿವಿಧ ಸಭೆ ಮತ್ತು ಸಮಾರಂಭಗಳಿಗೆ ಹಾಜರಾಗಿರುವುದಕ್ಕೆ ರೂ.500, ರೂ.200, ರೂ.300 ಗಳಂತೆ ಪಾವತಿಸಲಾಗಿದೆ.<br><br>ಕೆ.ಸಿ.ಎಸ್.ಆರ್ ನಿಯಮ 28ರನ್ವಯ ಖಾಯಂ ನೌಕರರಿಗೆ ಕಛೇರಿಯ ಸಮಯದಲ್ಲಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಯಾವುದೇ ಗೌರವ ಧನ ಅಥವಾ ಸಭಾ ಭತ್ಯೆಗಳನ್ನು ನೀಡಲು ಅವಕಾಶವಿರುವುದಿಲ್ಲ ಹಾಗೂ ಕೆ.ಸಿ.ಎಸ್.ಆರ್ ನಿಯಮ 513ರನ್ವಯ ಸರ್ಕಾರಿ ನೌಕರನು ಕೇಂದ್ರ ಕಾರ್ಯಸ್ಥಳದಲ್ಲೇ ಕರ್ತವ್ಯ ನಿರ್ವಹಿಸಿದ್ದರೆ ಯಾವುದೇ ಪ್ರಯಾಣ ಭತ್ಯಕ್ಕೂ ಅಥವ ಇನ್ನಿತರೇ ಭತ್ಯೆಗಳಿಗೂ ಯಾವುದೇ ಅವಕಾಶವಿರುವುದಿಲ್ಲ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ನಿಯಮ 41(4), 41(5), 41(6), 41(7) ರನ್ವಯ ವಿಶ್ವವಿದ್ಯಾನಿಲಯ ಮಾಡಿಕೊಂಡ ಯಾವುದೇ ಆದೇಶಗಳು, ಅದ್ಯಾದೇಶಗಳು ಸರ್ಕಾರದಿಂದ / ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯಾಗದ ಹೊರತು ಯಾವುದೇ ಆದೇಶಗಳು ಜಾರಿಗೆ ಬರುವುದಿಲ್ಲ. ಆದುದರಿಂದ ಕೆ.ಸಿ.ಎಸ್.ಆರ್ ನಿಯಮ 28, 513 ಕನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41(4), 41(5), 41(6), 41(7) ರ ನಿಯಮಗಳನ್ನು ಉಲ್ಲಂಘಿಸಿ ಕಛೇರಿಯ/ಬೋಧನೆಯ ಸಮಯದಲ್ಲಿ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕರು ಸಭೆ/ಸಮಿತಿಗಳಿಗೆ ಹಾಜರಾಗಿರುವುದಕ್ಕೆ ಸಭಾ ಭತ್ಯೆ ಅಥವಾ ಗೌರವ ಧನಗಳನ್ನು ಪಡೆಯಲು ಅರ್ಹರಲ್ಲದಿದ್ದರೂ ಒಟ್ಟು **ರೂ.45,000/–ಗಳನ್ನು ನಿಯಮ** ಉಲ್ಲಂಘಿಸಿ ಪಾವತಿಸಿರುವುದನ್ನು ವಸೂಲಾತಿಗೆ ಸೂಚಿಸಿದೆ. ವಿವರಗಳನ್ನು **<u>ಅನುಬಂಧ–29ರಲ್ಲಿ</u>** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ಕರ್ನಾಟಕ ವಿಶ್ವವಿದ್ಯಾನಿಯದ ಕಾಯ್ದೆ 2000 ರಲ್ಲಿನ ನಿಯಮಗಳಂತೆ ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಸಮಿತಿ, ಸಿಂಡಿಕೇಟ್ ಸಭೆ, ಶೈಕ್ಷಣಿಕ ಸಭೆ, ಪರೀಕ್ಷಾ ಮಂಡಳಿ, ನೇಮಕಾತಿ ಮಂಡಳಿ ಹೀಗೆ ಅನೇಕ ರೀತಿಯ ಸಭೆ ಸಮಿತಿಗಳಿಗೆ ಆಯಾ ವಿಷಯಗಳಲ್ಲಿ ಪರಿಣಿತಿಹೊಂದಿದ ನುರಿತ ತಜ್ಞರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಈ ಸಮಿತಿ ಸದಸ್ಯರುಗಳು ಆಯಾ ಸಭೆಗಳಿಗೆ ಹಾಜರಾಗಿ ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಅವಶ್ಯಕ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ಈ ಬೋಧಕ ವರ್ಗದವರಿಗೆ ಯು.ಜಿ.ಸಿ ವೇತನ ಪಡೆಯುತ್ತಿದ್ದರೂ ಸಹ ಅವರು ವಿವಿಧ ಸಮಿತಿಗಳಿಗೆ ಸದಸ್ಯರಾಗಿ ನೇಮಕವಾಗಿರುವುದರಿಂದ ಇತರೆ ಸದಸ್ಯರಿಗೆ ನೀಡುವಂತೆ ಇವರಿಗೂ ಸಹ ಸಭಾ ಭತ್ಯೆಗಳನ್ನು ವಿಶ್ವವಿದ್ಯಾನಿಲಯ ನಿಗದಿಪಡಿಸಿದ ದರದಲ್ಲಿ ಪಾವತಿಸಲಾಗಿದ.<br><br>ಆದಾಗ್ಯೂ; ಈ ಕಂಡಿಕೆಯಲ್ಲಿ ತಮ್ಮ ಸಲಹೆ ಸೂಚನೆಗಳನ್ವಯ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ಮಾರ್ಗದರ್ಶನ ಕೋರಲಾಗುತ್ತದೆ. |
| **37. <u>ಡಾ॥ ಬಿ.ಸಣ್ಣಪ್ಪ, ಸಹಾಯಕ ಪ್ರಾಧ್ಯಾಪಕರು, ರೇಷ್ಮೆ ಕೃಷಿ ವಿಜ್ಞಾನ ಮತ್ತು ಡಾ॥ ಜಿ.ವಿ.ವೆಂಕಟರಮಣ, ಸಹಾಯಕ ಪ್ರಾಧ್ಯಾಪಕರು, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಇವರುಗಳಿಗೆ ಹಳೆಯ ಪಿಂಚಣಿ ಯೋಜನೆಯಡಿಯಲ್ಲಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ :– (ಆಡಳಿತಾಧಿಕಾರಿಗಳ ಕಛೇರಿ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ರೇಷ್ಮೆ ಕೃಷಿ ವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ | ಮೈಸೂರು ವಿಶ್ವವಿದ್ಯಾನಿಲಯದ ಪರಿಸರ ಅಧ್ಯಯನ ವಿಭಾಗದಲ್ಲಿ ಸಹಾಯಕ |

ಕಾರ್ಯನಿರ್ವಹಿಸುತ್ತಿರುವ ಡಾ॥ ಬಿ. ಸಣ್ಣಪ್ಪ ಮತ್ತು ಪರಿಸರ ಅಧ್ಯನ ವಿಭಾಗದಲ್ಲಿ ಪ್ರಾಧ್ಯಾಪಕರಾರಿ ಕಾರ್ಯನಿರ್ವಹಿಸುತ್ತಿರುವ ಡಾ॥ ಜಿ.ವಿ. ವೆಂಕರಮಣ ಇವರುಗಳು 2004ರಲ್ಲಿ ಜಾರಿಗೆ ಬಂದಂತಹ ಯು.ಜಿ.ಸಿ 10ನೇ ಯೋಜನೆಯಡಿಯಲ್ಲಿ ಪ್ರಾಧ್ಯಾಪಕರಾಗಿ ನೇರ ನೇಮಕಾತಿ ಹೊಂದಿದ್ದರು. ಇವರುಗಳ ವೇತನವನ್ನು ಯು.ಜಿ.ಸಿ ಅನುದಾನದಿಂದ ಭರಿಸಲಾಗುತ್ತಿತ್ತು. ಈ ಯೋಜನೆಯು ದಿನಾಂಕ:31.03.2007ರಂದು ಮುಕ್ತಾಯಗೊಂಡಿದ್ದು, ಇವರುಗಳ ಸೇವೆಯನ್ನು ಮೈಸೂರು ವಿಶ್ವವಿದ್ಯಾನಿಲಯವು ದಿನಾಂಕ:28.07.2009ರಂದು ಖಾಯಂಗೊಳಿಸಿತು. ಸದರಿ ಪ್ರಾಧ್ಯಾಪಕರುಗಳಿಗೆ ಅವರು ಸೇವೆಗೆ ಸೇರಿದ ದಿನಾಂಕದಿಂದ ಅಂದರೆ 2004ರಿಂದಲೇ ಜಾರಿಗೆ ಬಂದಂತೆ ಅಂದರೆ ದಿನಾಂಕ:01.04.2006ಕ್ಕೆ ಮೊದಲು ಜಾರಿಯಲ್ಲಿದ್ದ ಹಳೆಯ ಪಿಂಚಣಿ ಯೋಜನೆ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಈ ಹಳೆಯ ಪಿಂಚಣಿ ಯೋಜನೆ ಸೌಲಭ್ಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಲಾಗಿದೆ.

1. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ರವರಿಂದ ಪಡೆದಿರುವ ಮಂಜೂರಾತಿ ಆದೇಶ ಪತ್ರ.
2. ವಿದ್ಯಾರ್ಹತೆಗೆ ಸಂಬಂಧಿಸಿದಂತೆ – NET/SLET Examination award details, Phd award details ಮತ್ತು Work Experinence Certificate details.

ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ॥ ಜಿ.ವಿ.ವೆಂಕಟರಮಣ ಮತ್ತು ರೇಷ್ಮೆ ಕೃಷಿ ವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ॥ ಬಿ. ಸಣ್ಣಪ್ಪ ಇವರಿಗೆ ಹಳೆಯ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಿರುವ ಸಂಬಂಧವಾಗಿ ಸಿಂಡಿಕೇಟ್ ಉಪಸಮಿತಿಯು ಸಲ್ಲಿಸಿದ ವರದಿಯನ್ನು ದಿನಂಕ 04–09–2014 ರಂದು ನಡೆದ ಸಿಂಡಿಕೇಟ್ ಸಭೆಯು ಅನುಮೋದಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ; ಇಟಿ8/371/2003–04 ದಿನಾಂಕ 02–12–2014 ರಲ್ಲಿ 2004 ರಲ್ಲಿ ವಿವಿಧ ಅಧ್ಯಯನ ವಿಭಾಗದಲ್ಲಿ ನೇಮಕಗೊಂಡು ನಂತರ ಅಧಿನಿಯಮದನುಸಾರ ದಿನಾಂಕ 28–07–2009ರಂದು ಖಾಯಂಗೊಂಡು ಕಾರ್ಯನಿರ್ವಹಿಸುತ್ತಿರುವ 7 ಸಹಾಯಕ ಪ್ರಾಧ್ಯಾಪಕರುಗಳಿಗೆ ಅವರು ಸೇವೆಗೆ ಸೇರಿದ ದಿನಾಂಕದಿಂದಲೇ ಜಾರಿಯಲ್ಲಿದ್ದ ಹಳೇ ಪಿಂಚಣಿ ಸೌಲರ್ಭಯವನ್ನು ವಿಸ್ತರಿಸಲಾಗಿದೆ.

ಸದರಿ ಸಹಾಯಕ ಪ್ರಾಧ್ಯಾಪಕರುಗಳ ವಿದ್ಯಾರ್ಹತೆಗೆ ಸಂಬಂಧಿಸಿದಂತೆ NET/SLET Examination award details, Phd award details ಮತ್ತು Work Experinence Certificate details.ಲಗತ್ತಿಸಿ ಸಲ್ಲಿಸಿದೆ.

**41. <u>ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವಾಗ ಮೂಲ ವೇತನವನ್ನು ತಪ್ಪಾಗಿ ನಿಗದಿಪಡಿಸಿ, ಹೆಚ್ಚುವರಿ ವೇತನ ಪಾವತಿಸಿರುವುದು :– (ಆರೋಗ್ಯ ಕೇಂದ್ರ, ಮಹಾರಾಜ, ಯುವರಾಜ ಕಾಲೇಜು ಆವರಣ)</u>**

ಶ್ರೀ ಎಂ.ಶಿವಪ್ಪ, ಪರಿಚಾರಕರು, ಶ್ರೀ ಶಿವಣ್ಣ, ಪರಿಚಾರಕರು ಮತ್ತು ಶ್ರೀಮತಿ ಚೌಡಮ್ಮ, ಪರಿಚಾರಕರು ಇವರುಗಳ ಸೇವಾ ಪುಸ್ತಕಗಳು ಹಾಗೂ 2015–16ನೇ ಸಾಲಿನ ವೇತನ ಪತ್ರಗಳನ್ನು ಪರಿಶೀಲಿಸಲಾಗಿ, ಈ ಮೂರು ಸಿಬ್ಬಂದಿಯವರುಗಳಿಗೆ ವೇತನ ಶ್ರೇಣಿ 11,000–19,000ರಲ್ಲಿ ಗರಿಷ್ಠ ಹಂತ ತಲುಪಿದ ನಂತರ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವಾಗ ಮೂಲ ವೇತನವನ್ನು ತಪ್ಪಾಗಿ ನಿಗದಿಪಡಿಸಿದೆ.

**<u>ವಿವರಗಳು ಈ ಕೆಳಕಂಡಂತಿದೆ.</u>**

| ಕ್ರ. | ಹೆಸರು | ವೇತನ | ವಾರ್ಷಿಕ | ನಿಗದಿಪಡಿಸಿದ | ನಿಗದಿಪಡಿಸ | ಹೆಚ್ಚುವರಿ |
|---|---|---|---|---|---|---|
| | | | | | | |

2015–16ನೇ ಸಾಲಿನಲ್ಲಿ ಆರೋಗ್ಯ ಕೇಂದ್ರ, ಮಹಾರಾಜ, ಯುವರಾಜ ಕಾಲೇಜು ಆವರಣದ ಪರಿಚಾರಕರುಗಳಾದ ಶ್ರೀ ಎಂ.ಶಿವಪ್ಪ, ಶ್ರೀ ಶಿವಣ್ಣ, ಮತ್ತು ಶ್ರೀಮತಿ ಚೌಡಮ್ಮ ಇವರುಗಳಿಗೆ ಸ್ಥಗಿತ ವೇತನ ಬಡ್ತಿಯ ಮೂಲ ವೇತನದಲ್ಲಿ ವ್ಯತ್ಯಾಸದ ಮೊತ್ತವನ್ನು ಕಂಡಿಕೆಯ ಅನುಬಂಧ–32(ಎ),(ಬಿ) ಮತ್ತು (ಸಿ)ಯಲ್ಲಿ ಪ್ರಸ್ತಾಪಿಸಿರುವಂತೆ ಸದರಿ ನೌಕರರುಗಳಿಂದ ಮೊತ್ತಗಳನ್ನು ವಸೂಲಿಸಿ ಜಿ.ಆರ್.ಎ ಖಾತೆಗೆ ಜಮೆ ಮಾಡಲಾಗಿದೆ.

ವಿವರ ಕೆಳಗಿನಂತಿದೆ.

**1. ಶ್ರೀ.ಎಂ.ಶಿವಪ್ಪ, ರೂ.2981.00 ಚಲನ್ ನಂ.7488/16.8.2018 (ಅನುಬಂಧ–32(ಎ)**

| ಸಂ | ಹುದ್ದೆ | ಶ್ರೇಣಿ | ವೇತನ ಬಡ್ತಿ ದಿನಾಂಕ | ಮೂಲವೇತನ | ಬೇಕಾದ ಮೂಲ ವೇತನ | |
|---|---|---|---|---|---|---|
| 1 | ಶ್ರೀ ಎಂ.ಶಿವಪ್ಪ, ಪರಿಚಾರಕರು | 11000–19000 | 1.3.2013 | 19000+500 (1ನೇ ಸ್ಥ.ವೇ.ಬ) | 19000+450 (1ನೇ ಸ್ಥ.ವೇ.ಬ) | 50 |
| | | | 1.3.2014 | 19000+500 +500 (2ನೇ ಸ್ಥ.ವೇ.ಬ) | 19000+450 +450 (2ನೇ ಸ್ಥ.ವೇ.ಬ) | 100 |
| | | | 1.3.2015 | 19000+500 +500+500 (3ನೇ ಸ್ಥ.ವೇ.ಬ) | 19000+450 +450+450 (2ನೇ ಸ್ಥ.ವೇ.ಬ) | 150 |
| 2 | ಶ್ರೀ ಶಿವಣ್ಣ, ಪರಿಚಾರಕರು | 11000–19000 | 1.7.2014 | 19000+500 (1ನೇ ಸ್ಥ.ವೇ.ಬ) | 19000+450 (1ನೇ ಸ್ಥ.ವೇ.ಬ) | 50 |
| | | | 1.7.2015 | 19000+500 +500 (2ನೇ ಸ್ಥ.ವೇ.ಬ) | 19000+450 +450 (2ನೇ ಸ್ಥ.ವೇ.ಬ) | 100 |
| 3 | ಶ್ರೀಮತಿ ಚೌಡಮ್ಮ, ಪರಿಚಾರಕರು | 11000–19000 | 1.6.2015 | 19000+500 (1ನೇ ಸ್ಥ.ವೇ.ಬ) | 19000+450 (1ನೇ ಸ್ಥ.ವೇ.ಬ) | 50 |

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, ನಿಯಮ 51(4) ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 52/ಎಸ್.ಆರ್.ಪಿ/79, ದಿನಾಂಕ:31.10.1979ರಲ್ಲಿ ಆದೇಶಿಸಿರುವಂತೆ ಸ್ಥಗಿತ ವೇತನ ಬಡ್ತಿಯನ್ನು ಅನುಮತಿಸುವ ಕ್ರಮದನ್ವಯ ಸರ್ಕಾರಿ ಉದ್ಯೋಗಿಯು ತಾನು ಧಾರಣ ಮಾಡಿದ ಹುದ್ದೆಯ

**2. ಶ್ರೀ ಶಿವಣ್ಣ. ರೂ.1666.00 ಚಲನ್ ನಂ.7489/16.8.2018 (ಅನುಬಂಧ–32(ಬಿ)**
**3.ಶ್ರೀಮತಿ ಚೌಡಮ್ಮ ರೂ.766.00 ಚಲನ್ ನಂ.7490/16.8.2018 (ಅನುಬಂಧ–32(ಸಿ)**
**ಒಟ್ಟು ರೂ.5413.00**

ಒಟ್ಟು ರೂ5,413.00ಗಳಿಗೆ ಸಂಬಂಧಿಸಿದಂತೆ ಜಿ.ಆರ್.ಎ ಖಾತೆಗೆ ಜಮಾ ಮಾಡಿರುವ ಚಲನ್ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ರೂ.5413.00ಗಳ ವಸೂಲಾತಿಯನ್ನು ತೀರುವಳಿಗೊಳಿಸಲು ಕೋರಿದೆ.

ವೇತನ ಶ್ರೇಣಿಯ ಗರಿಷ್ಠ ಹಂತವನ್ನು ತಲುಪಿದ ನಂತರ ಉದ್ಯೋಗಿಗೆ ವೇತನ ಶ್ರೇಣಿಯ ಗರಿಷ್ಠ ಹಂತದ ಹಿಂದಿನ ವೇತನ ಬಡ್ತಿಯ ದರದಲ್ಲಿ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡಬೇಕಾಗಿದ್ದು, ಈ ಮೇಲೆ ತಿಳಿಸಲಾದ ಸಿಬ್ಬಂದಿಯವರುಗಳಿಗೆ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವಾಗ ಸ್ಥಗಿತ ವೇತನ ಬಡ್ತಿಯ ದರವನ್ನು ತಪ್ಪಾಗಿ ನೀಡಿ ಮೂಲವೇತನವನ್ನು ತಪ್ಪಾಗಿ ನಿಗದಿಪಡಿಸಿ ಪಾವತಿಸಿರುವುದರಿಂದ ಅಧಿಕ ಪಾವತಿಸಿದಂತಾಗಿದೆ. ಆದ್ದರಿಂದ ಅಧಿಕವಾಗಿ ಪಾವತಿಸಿರುವ ಸ್ಥಗಿತ ವೇತನ ಬಡ್ತಿಯನ್ನು ಹಾಗೂ ಮನೆಬಾಡಿಗೆ ಭತ್ಯೆಯನ್ನು ಹೆಚ್ಚುವರಿಯಾಗಿ ಪಾವತಿಸಿದಂತಾಗಿದೆ.

2015–16ನೇ ಸಾಲಿನಲ್ಲಿ ಮಾರ್ಚ್–2015 ರಿಂದ ಫೆಬ್ರವರಿ–2016ರವರೆಗಿನ ವೇತನ ಪತ್ರಗಳನ್ನು ಮಾತ್ರ (ಹಾಜರುಪಡಿಸಿರುವಂತೆ) ಪರಿಶೋಧಿಸಿ ಈ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವುದನ್ನು **ಅನುಬಂಧ–32ರಲ್ಲಿ** ತೋರಿಸಲಾಗಿದ್ದು, ಶ್ರೀ ಎಂ.ಶಿವಪ್ಪ, ಪರಿಚಾರಕರು ರವರಿಗೆ ದಿನಾಂಕ:01.03.2013 ರಿಂದ ಹಾಗೂ ಶ್ರೀ ಶಿವಣ್ಣ ಪರಿಚಾರಕರು ರವರಿಗೆ ದಿನಾಂಕ:01.07.2014 ರಿಂದ ಹೆಚ್ಚುವರಿಯಾಗಿ ಪಾವತಿಸಿರುವ ವೇತನವನ್ನು ಲೆಕ್ಕಾಚಾರ ಹಾಕಿ ಕಟಾಯಿಸಲು ಹಾಗೂ 2015–16ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ **ಒಟ್ಟು ರೂ.5,413/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ**/ವೇತನದಲ್ಲಿ ಕಟಾಯಿಸಿ, ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವಿವರಗಳನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ತಿಳಿಸಿದೆ. (ವಿಚಾರಣಾ ಪತ್ರ ಸಂಖ್ಯೆ:07/2018–19 ದಿನಾಂಕ:05.06.2018)

**42. ಶ್ರೀ ಟಿ. ಸದಾಶಿವಯ್ಯ, ಸಹ ಪ್ರಾಧ್ಯಾಪಕರು, ಇವರಿಗೆ ಗಳಿಕೆ ರಜೆ ನಗದೀಕರಣವನ್ನು ಅವರ ಹಕ್ಕಿನಲ್ಲಿ ರಜೆ ಇಲ್ಲದಿದ್ದರು ನೀಡಿರುವುದು :– (ಯುವರಾಜ ಕಾಲೇಜು)**

2015–16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಶ್ರೀ ಸದಾಶಿವಯ್ಯ, ಸಹ ಪ್ರಾಧ್ಯಾಪಕರು, ಇವರ ಸೇವಾವಹಿಯನ್ನು ಪರಿಶೀಲಿಸಲಾಗಿದ್ದು, ಕೆ.ಸಿ.ಎಸ್.ಆರ್ ನಿಯಮ–118ರನ್ವಯ ಸರ್ಕಾರಿ ನೌಕರನು ಪ್ರತಿ ಕ್ಯಾಲೆಂಡರ್ ವರ್ಷದ ಬ್ಲಾಕ್ ಅವಧಿಗೆ 15 ದಿನಗಳ ಗಳಿಕೆ ರಜೆಯನ್ನು ಅಧ್ಯರ್ಪಿಸಲು ಅಭಿಮತ ನೀಡಿ ರಜೆ ಸಂಬಳ ನಗಧೀಕರಣ ಸೌಲಭ್ಯವನ್ನು ಪಡೆಯಬಹುದು. ಅದರಂತೆ ಶ್ರೀ ಸದಾಶಿವಯ್ಯ, ಸಹ ಪ್ರಾಧ್ಯಾಪಕರು, ಇವರು ತಮ್ಮ ಹಕ್ಕಿನಲ್ಲಿ ಅಧ್ಯರ್ಪಿಸಿರುವಷ್ಟು ರಜೆಗಳು ಇಲ್ಲದಿದ್ದರು ರಜೆ ನಗದೀಕರಣವನ್ನು ಮಾಡಿಕೊಂಡಿರುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿದ್ದು, ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ:12, ದಿನಾಂಕ:03.04.2018ರಲ್ಲಿ ಕೋರಲಾಗಿದ್ದು, ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ರಜೆ ನಗದೀಕರಣದ ವಿವರಗಳು ಈ ಕೆಳಗಿನಂತಿದೆ.

| ಕ್ರ.ಸಂ | ನಗಧೀಕರಣದ ಬ್ಲಾಕ್ ಅವಧಿ | ಹಕ್ಕಿನಲ್ಲಿರುವ ರಜೆಗಳ ವಿವರ | ನಗಧೀಕರಣ ಮಾಡಿಕೊಂಡಿರುವ ರಜೆಗಳ ವಿವರ | ಹೆಚ್ಚುವರಿ ನಗಧೀಕರಣ ಮಾಡಿಕೊಂಡಿರುವ | ಹೆಚ್ಚುವರಿ ನಗಧೀಕರಣಕ್ಕೆ ಪಾವತಿಸಿರುವ |
|---|---|---|---|---|---|

ಶ್ರೀ ಟಿ ಸದಾಶಿವಯ್ಯ, ಸಹ ಪ್ರಾಧ್ಯಾಪಕರು ಇವರಿಗೆ ಗಳಿಗೆ ರಜೆ ನಗಧೀಕರಣ ಸಂಬಂಧ ಪಾವತಿ ಮಾಡಲಾಗಿದ್ದ ಹೆಚ್ಚುವರಿ ಮೊತ್ತವನ್ನು ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆಗೆ ಚಲನ್ ಸಂಖ್ಯೆ: 19981, ದಿನಾಂಕ:29–09–2018 ರಂದು ಜಮಾ ಮಾಡಲಾಗಿದೆ. ಇದರೊಂದಿಗೆ ಜಮಾ ಮಾಡಿರುವ ಚಲನ್ ಪ್ರತಿಯನ್ನು ಲಗತ್ತಿಸಲಾಗಿದೆ.

ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

| | | | | ರಜೆಗಳ ವಿವರ | ಮೊತ್ತ |
|---|---|---|---|---|---|
| 1 | 2015ನೇ ಬ್ಲಾಕ್ ಅವಧಿ | 10 ದಿನಗಳು | 15 | 05 | 20,300 |
| 2 | 2016ನೇ ಬ್ಲಾಕ್ ಅವಧಿ | 10 ದಿನಗಳು | 15 | 05 | 22,022 |
| 3 | 2017ನೇ ಬ್ಲಾಕ್ ಅವಧಿ | 10 ದಿನಗಳು | 15 | 05 | 23,700 |
| **ಹೆಚ್ಚುವರಿ ಪಾವತಿಸಿರುವ ಒಟ್ಟು ಮೊತ್ತ** | | | | | **66,022** |

2015ನೇ ಬ್ಲಾಕ್ ಅವಧಿ 2016ನೇ ಬ್ಲಾಕ್ ಅವಧಿ ಮತ್ತು 2017ನೇ ಬ್ಲಾಕ್ ಅವಧಿಯಲ್ಲಿ ಅವರ ಹಕ್ಕಿನಲ್ಲಿ ಒಟ್ಟು 30 ದಿನಗಳ ಗಳಿಕೆ ರಜೆ ನಗದೀಕರಣ ಮಾಡಿಕೊಳ್ಳಲು ಅವಕಾಶವಿರುತ್ತದೆ. ಆದರೆ 2015 ರಿಂದ 2017ರವರೆಗೆ ಒಟ್ಟು 45 ದಿನಗಳ (ಪ್ರತಿ ವರ್ಷದ ಬ್ಲಾಕ್ ಅವಧಿಗೆ 15 ದಿನಗಳಂತೆ) ಗಳಿಕೆ ರಜೆ ನಗದೀಕರಣ ಮಾಡಿಕೊಂಡಿದ್ದು, ಅವರ ಹಕ್ಕಿನಲ್ಲಿ ಒಟ್ಟಾರೆ 15 ದಿನಗಳು ಗಳಿಕೆ ರಜೆಗಳು ಲಭ್ಯವಿಲ್ಲದಿದ್ದರು, ಗಳಿಕೆರಜೆಗಳನ್ನು ನಗದೀಕರಣ ಮಾಡಿಕೊಂಡಿರುವ **ರೂ.66,022/-ಗಳನ್ನು** ಪಡೆದಿರುವ ಮೊತ್ತವನ್ನು ಶ್ರೀ ಟಿ. ಸದಾಶಿವಯ್ಯ, ಸಹ ಪ್ರಾಧ್ಯಾಪಕರು ರವರಿಂದ **ವಸೂಲಿಸಿ** ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಖಾತೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಲಾಗಿದೆ.

**43. ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು :- (ಯುವರಾಜ ಕಾಲೇಜು)**

2015-16ನೇ ಸಾಲಿನಲ್ಲಿ ಯುವರಾಜ ಕಾಲೇಜಿನ ಲೆಕ್ಕ ತನಿಖೆಯಲ್ಲಿ ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರುಗಳನ್ನು ನೇಮಕ ಮಾಡಿಕೊಂಡು ವೇತನ ಭತ್ಯೆಗಳನ್ನು ಪಾವತಿಸಿರುವ ವೇತನ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ 2015-16ನೇ ಸಾಲಿಗೆ ರೂ.36,54,034/-ಗಳನ್ನು ಪಾವತಿಸಲಾಗಿದ್ದು, ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ:22/06.04.2018ರಲ್ಲಿ ಕೋರಲಾಗಿ ಯಾವುದೇ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.

ತಾತ್ಕಾಲಿಕ/ಸಂಚಿತ ವೇತನ ನೌಕರರ ನೇಮಕಾತಿ ಪ್ರಕ್ರಿಯೆಯು ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ನಿಯಮ 56, 57 ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವುದನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಮಂಜೂರಾತಿ ಹುದ್ದೆಗಳಲ್ಲಿ ಖಾಯಂ ನೌಕರರನ್ನು ಒಟ್ಟು ಉಳಿಕೆ, ಖಾಲಿ ಹುದ್ದೆಗಳಿಗೆ ಎದುರಾಗಿ ನಿಯಮಾನುಸಾರ ನೇಮಕ ಪ್ರಕ್ರಿಯೆ ಕೈಗೊಂಡಿರುವುದನ್ನು ಲೆಕ್ಕ ತನಿಖೆಯಲ್ಲಿ

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಲಾಗುತ್ತಿದೆ ಲೆಕ್ಕ ತನಿಖಾ ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಉತ್ತರಗಳನ್ನು ಸಲ್ಲಿಸಲಾಗುವುದು.

| | |
|---|---|
| ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ತಾತ್ಕಾಲಿಕ/ಸಂಚಿತ ವೇತನ ನೌಕರರ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸುವವರೆಗೂ **ರೂ.36,54,034/-ಗಳನ್ನು ಆಕ್ಷೇಪಣೆಗೆ** ಸೂಚಿಸಲಾಗಿದೆ. ವಿವರಗಳನ್ನು **ಅನುಬಂಧ-33ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | |
| **44. ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳ ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು :- (ಯುವರಾಜ ಕಾಲೇಜು)**<br><br>2015-16ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸಂಚಿತ ವೇತನ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡು ವೇತನ ಭತ್ಯೆಗಳನ್ನು ಪಾವತಿಸಿರುವುದನ್ನು ವೇತನ ಬಟವಾಡೆ ವಹಿಯ ಪರಿಶೀಲನೆಯಲ್ಲಿ ಕಂಡುಬಂದಿದ್ದು, ತಾತ್ಕಾಲಿಕ/ಸಂಚಿತವೇತನ/ಅತಿಥಿ ಉಪನ್ಯಾಸಕರುಗಳ ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ:05/19.03.2018ರಲ್ಲಿ ಕೋರಲಾಗಿರುವ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 55, 56ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಯುವರಾಜ ಕಾಲೇಜಿಗೆ ವಿಷಯವಾರು ಮಂಜೂರಾಗಿರುವ ಬೋಧಕ ಹುದ್ದೆಗಳಲ್ಲಿ ಖಾಯಂ ಬೋಧಕ ವರ್ಗದವರ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳನ್ನು ಬಿಟ್ಟು ಉಳಿಕೆ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕ/ಸಂಚಿತ/ಅತಿಥಿ ಉಪನ್ಯಾಸಕರುಗಳನ್ನು ಯು.ಜಿ.ಸಿ ನಿಯಮಾವಳಿಗಳ ಅನುಸಾರ ನೇಮಕ ಮಾಡಿಕೊಂಡಿರುವುದನ್ನು ಲೆಕ್ಕತನಿಖೆಯಲ್ಲಿ ಪರಿಶೀಲಿಸಲು ಸಾಧ್ಯವಾಗದಿರುವುದರಿಂದ **ರೂ.1,42,93,252/-ಗಳನ್ನು ಆಕ್ಷೇಪಣೆಗೆ** ಸೂಚಿಸಿದೆ. ವಿವರಗಳನ್ನು **ಅನುಬಂಧ-34ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಲಾಗುತ್ತಿದೆ ಲೆಕ್ಕ ತನಿಖಾ ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಉತ್ತರಗಳನ್ನು ಸಲ್ಲಿಸಲಾಗುವುದು. |
| **45. EMMRC ನೌಕರರುಗಳ ಗರಿಷ್ಠ 2 ಮಕ್ಕಳಿಗೆ ವಿದ್ಯಾಭ್ಯಾಸ ಭತ್ಯೆಯನ್ನು ಪ್ರತಿವರ್ಷ ಪಾವತಿಸಿರುವುದು :- (ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)**<br>2014-15ನೇ ಮತ್ತು 2015-16ನೇ ಸಾಲಿನಲ್ಲಿ ಲೆಕ್ಕತಪಾಸಣೆಯಲ್ಲಿ ಇ.ಎಂ.ಎಂ.ಆರ್.ಸಿ ನೌಕರರುಗಳ ಗರಿಷ್ಠ 2 ಮಕ್ಕಳಿಗೆ ವರ್ಷವಾರು ರೂ.18,000/-ಗಳು ಅಥವಾ ಒಂದನೇ ತರಗತಿಯಿಂದ 10 + 2 ತರಗತಿಗಳವರೆಗೆ ಕಾಲೇಜಿನ ಬೋಧನಾ ಶುಲ್ಕ ನೋಂದಣಿ ಶುಲ್ಕಗಳನ್ನು ಚ. 18,000/- ಮಿತಿಗೊಳಪಟ್ಟು ಪಾವತಿಸಲು ಕೇಂದ್ರ ಸರ್ಕಾರದ ನೌಕರರುಗಳಿಗೆ ಹೆಚ್.ಆರ್.ಡಿ ಆದೇಶ ಸಂಖ್ಯೆ:ಎ-27012/2014-EST + (Allowance) Block -IV Old JNU campus, New Delhi Dated:28.04.2014ರ ಆದೇಶಗಳಲ್ಲಿ ಅವಕಾಶವಿರುತ್ತದೆ. ಆದರೆ E.M.M.R.C ನೌಕರರುಗಳು | ಇ.ಎಂ.ಎಂ.ಆರ್.ಸಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಈ ಹಿಂದೆ ಅಂದರೆ 2007ರ ಪೂರ್ವದಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, 2007ರ ನಂತರದಲ್ಲಿ ಪ್ರಾಯೋಜಿತವಲ್ಲದ ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ಭಾರತ ಸರ್ಕಾರದ ಆರ್ಥಿಕ ಇಲಾಖೆಯ ವೆಚ್ಚ O.M No1/II/2014-E-11(B) Dated 27-03-2014 ರನ್ವಯ ಈ ಕೇಂದ್ರದ ನೌಕರರುಗಳಿಗೆ "ಮಕ್ಕಳ ಶೈಕ್ಷಣಿಕ ಭತ್ಯೆಯನ್ನು ಪಾವತಿಸಲಾಗಿದೆ.ಇ.ಎಂ.ಎಂ.ಆರ್.ಸಿಕೇಂದ್ರವು ಪ್ರಾಯೋಜಿತ |

| | |
|---|---|
| ಪ್ರಾಯೋಜಿತ ಕಾರ್ಯಕ್ರಮಗಳ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸದರಿ ನೌಕರರುಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯಾಭ್ಯಾಸ ಭತ್ಯೆಯನ್ನು ಪಾವತಿಸಲು ಯು.ಜಿ.ಸಿಯ ಆದೇಶವನ್ನು ಪಡೆದು ಪಾವತಿಸದೆ ಇರುವುದರಿಂದ 2014–15 ಮತ್ತು 2015–16ನೇ ಸಾಲುಗಳಲ್ಲಿ ಇ.ಎಂ.ಎಂ.ಆರ್.ಸಿ ನೌಕರರುಗಳ ಮಕ್ಕಳಿಗೆ ವಿದ್ಯಾಭ್ಯಾಸ ಭತ್ಯೆ ಪಾವತಿಸಿರುವ ಮೊತ್ತ **ರೂ.5,68,520/–ಗಳನ್ನು ಆಕ್ಷೇಪಿಸಿದ್ದು** ಕೋರಿರುವ ಆದೇಶಗಳು/ಅದ್ಯಾದೇಶಗಳನ್ನು ಕಛೇರಿ ಮುಖ್ಯಸ್ಥರು ಸೂಕ್ತಕ್ರಮವಹಿಸಿ ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–35, 35 (ಎ)ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ಕಾರ್ಯಕ್ರಮವಾಗಿರುವುದಿಲ್ಲ. ಇದೊಂದು ಶಾಶ್ವತ ಕೇಂದ್ರ/ವಿಭಾಗವಾಗಿದೆ. ಕೇಂದ್ರ ಸರ್ಕಾರೀ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳ ಶೈಕ್ಷಣಿಕ ಭತ್ಯೆಯನ್ನು ಪಡೆಯಲು ಈ ಕೇಂದ್ರದ ನೌಕರರು ಅರ್ಹರಾಗಿರುತ್ತಾರೆ. ಈ ಬಗ್ಗೆ ಕೇಂದ್ರ ಸರ್ಕಾರಿ ಆದೇಶಗಳನ್ನು ಲಗತ್ತಿಸಿದೆ. ಹಾಗೂ ನಿಯಮಾನುಸಾರವೇ ಶೈಕ್ಷಣಿಕ ಭತ್ಯೆಯನ್ನು ಮಂಜೂರು ಮಾಡಲಾಗಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಬಯಸುತ್ತಾ ಕಂಡಿಕೆಯಲ್ಲಿ ಆಕ್ಷೇಪಿಸಿರುವ ಮೊತ್ತ ರೂ5,68,520/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ. |
| 46. **ಪತ್ರಾಂಕಿತವಲ್ಲದ ನೌಕರರುಗಳಿಗೆ Productivity linked bonus scheme ನಡಿಯಲ್ಲಿ ಬೋನಸ್ ಪಾವತಿಸಿರುವುದು :– (ಶೈಕ್ಷಣಿಕ ಬಹುಮಾದ್ಯಮ ಸಂಶೋಧನಾ ಕೇಂದ್ರ)**<br><br>2014–15 ಮತ್ತು 2015–16ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಇ.ಎಂ.ಎಂ.ಆರ್.ಸಿ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ ಪ್ರತಿ ವರ್ಷ "Productivity linked bonus" ಯೋಜನೆಯಡಿಯಲ್ಲಿ ಪತ್ರಾಂಕಿತರಲ್ಲದ ಎಲ್ಲಾ ನೌಕರರಿಗೂ ಅಂದರೆ ಸಿ & ಡಿ ದರ್ಜೆ ನೌಕರರಿಗೆ bonus ಪಾವತಿಸಿರುವ ವೇತನದ ಕಡತಗಳನ್ನು ಪರಿಶೀಲಿಸಲಾಗಿ ಯು.ಜಿ.ಸಿಯ ಯಾವ ಮಾನದಂಡದಡಿಯಲ್ಲಿ bonus ಪಾವತಿಸಲಾಗಿರುತ್ತದೆ. ಹಾಗೂ ಕೇಂದ್ರ ಸರ್ಕಾರಿ ನೌಕರರಿಗೆ ಪಾವತಿಸಲು ನಿಯಮಾವಳಿಗಳಲ್ಲಿ ಅವಕಾಶವಿದ್ದರು ಯು.ಜಿ.ಸಿಯ ಅಧೀನಕ್ಕೊಳಪಡುವ ಇ.ಎಂ.ಎಂ.ಆರ್.ಸಿ ಕಛೇರಿಯು ಒಂದು ಪ್ರಾಯೋಜಿತ ಯೋಜನೆಯಾಗಿರುವುದರಿಂದ ಪ್ರಾಯೋಜಿತ ಯೋಜನೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ Productivity linked bonus ಯೋಜನೆಯಲ್ಲಿ ಅರ್ಹರಿರುವ ಬಗ್ಗೆ ಯು.ಜಿ.ಸಿಯ ಆದೇಶಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದಿಲ್ಲ.<br><br>ಸಿ ಮತ್ತು ಡಿ ದರ್ಜೆ ನೌಕರರುಗಳಿಗೆ Productivity linked bonus ಅನ್ನು 2014–15 ಮತ್ತು 2015–16ನೇ ಸಾಲುಗಳಲ್ಲಿ **ಅನುಬಂಧ–36, 36(ಎ)ರಲ್ಲಿ** ವಿವರಿಸಿರುವಂತೆ ಪಾವತಿಸಿರುವ ಮೊತ್ತ **ರೂ.1,88,910/– ಗಳನ್ನು** ಯು.ಜಿ.ಸಿಯ ಆದೇಶವನ್ನು ನೀಡುವವರೆಗೆ ಆಕ್ಷೇಪಣೆಗೆ ಸೂಚಿಸಿದೆ. ಈ ಬಗ್ಗೆ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಕೋರಿರುವ ಆದೇಶವನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಇ.ಎಂ.ಎಂ.ಆರ್.ಸಿ ಕೇಂದ್ರವು ಸ್ಥಾಪಿಸಿರುವ ಭಾರತ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ ಈ ಕೇಂದ್ರಕ್ಕೆ 100% ಅನುದಾನವನ್ನು ನೀಡುತ್ತಿದೆ. ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಕೇಂದ್ರ ಸರ್ಕಾರದ ವೇತನ ಶ್ರೇಣಿ ಭತ್ಯೆಗಳಿಗೆ ಗ್ರಾಹ್ಯವಾಗುತ್ತಾರೆ. ಯು.ಜಿ.ಸಿ ಪತ್ರ ಸಂಖ್ಯೆ linked F.No 7-1/2015(IUC/MC) ದಿನಾಂಕ 14–09–2015 ರಲ್ಲಿ 2015–16 ನೇ ಸಾಲಿಗೆ ಯೋಜನೇತರ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಿರುತ್ತದೆ. (ಪ್ರತಿ ಲಗತ್ತಿಸಿದೆ). Productivity linked bonus ಎಂಬ ಭತ್ಯೆಯು ಗ್ರೂಪ್ ಬಿ ಮತ್ತು ಸಿ ದರ್ಜೆಯ ಉದ್ಯೋಗಿಗಳಿಗೆ ನೀಡುವ ಭತ್ಯೆಯಾಗಿದೆ. ಈ ಭತ್ಯೆಗೆ ಇ.ಎಂ.ಎಂ.ಆರ್.ಸಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಬಿ ಮತ್ತು ಸಿ ದರ್ಜೆಯ ಉದ್ಯೋಗಿಗಳು ಅರ್ಹರಾಗಿದ್ದು ನಿಯಮಾನುಸಾರವೇ Productivity linked bonus ಭತ್ಯೆಯನ್ನು ಮಂಜೂರು ಮಾಡಲಾಗಿದೆ. ಈ ಬಗ್ಗೆ ಅಧಿಕೃತ ಸರ್ಕಾರಿ ಆದೇಶಗಳ ಪ್ರತಿ ಲಗತ್ತಿಸಲಾಗಿದೆ. ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಅನುಬಂಧ–36 ರಲ್ಲಿನ Productivity linked bonus ಬಿಲ್ಲಿನ ಬಿ.ಆರ್.ಸಂಖ್ಯೆ 45 ದಿನಾಂಕ 24–02–2016 ರೂ48,356/–ಗಳು 2014–15 ನೇ ಸಾಲಿಗೆ ಸಂಬಂಧಿಸಿದ್ದಾಗಿದ್ದು, ಭಾರತ ಸರ್ಕಾರದ ಆರ್ಥಿಕ ಇಲಾಖಾ ವೆಚ್ಚ ಸಂಖ್ಯೆ 7/24/2007/E-III(A) ದಿನಾಂಕ 16–10–2015ರನ್ವಯ ರೂ3454/–ರಂತೆ 14 ಮಂದಿ ಬಿ ಮತ್ತು ಸಿ ದರ್ಜೆಯ ನೌಕರರಿಗೆ ಧನಾದೇಶ ಸಂಖ್ಯೆ 341322 ದಿನಾಂಕ 29–03–2016ರಲ್ಲಿ ಪಾವತಿಸಿದೆ. ಅನುಬಂಧ–36(ಎ) ರಲ್ಲಿ ಪ್ರಸ್ತಾಪಿಸಿರುವ ಮೊತ್ತ ರೂ1,40,554/–ಗಳಿಗೆ ಸಂಬಂಧಿಸಿದಂತೆ 29–08–2016 ರ ಆದೇಶದಲ್ಲಿ 01–04–2014 ರಿಂದ ಬೋನಸ್ ದರವನ್ನು ರೂ7,000/– |

| | |
|---|---|
| | ಗಳಿಗೆ ಪರಿಷ್ಕೃತಗೊಳಿಸಿರುವುದರಿಂದ 2014–15 ನೇ ಸಾಲಿನ Productivity linked bonus ಬಾಕಿ ಮೊತ್ತ ರೂ49,644/–ಗಳು ಮತ್ತು 2015–16 ನೇ ಸಾಲಿನ ಮೊತ್ತ ರೂ91,000/–ಗಳು ಸೇರಿದಂತೆ ಒಟ್ಟು ಮೊತ್ತ 1,40,644/–ಗಳನ್ನು ಬಿ.ಆರ್ ಸಂಖ್ಯೆ 39 ದಿನಾಂಕ 04–10–2016ರಲ್ಲಿ ಧನಾದೇಶ ಸಂಖ್ಯೆ 822686 ದಿನಾಂಕ 12–01–2017 ರಲ್ಲಿ ಬೋನಸ್ ಪಾವತಿಸಿದೆ. ಇದಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಬೋನಸ್ ಆದೇಶದ ಪ್ರತಿ ಲಗತ್ತಿಸಿದೆ. ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ರೂ1,88,910/–ಗಳ ಆಕ್ಷೇಪಿತ ಮೊತ್ತವನ್ನು ಕೈ ಬಿಡುವಂತೆ ಕೋರಲಾಗಿದೆ. |
| **48.ಗ್ರಂಥಾಲಯ ಯೋಜನಾ ಸಹಾಯಕರು (Project Assistant)ಗಳನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು:– (ಸ್ನಾತಕೋತ್ತರ ಗ್ರಂಥಾಲಯ)**<br><br>2015–16ನೇ ಸಾಲಿನ ಸ್ನಾತಕೋತ್ತರ ಗ್ರಂಥಾಲಯದ ಲೆಕ್ಕತಪಾಸಣೆಯಲ್ಲಿ ಯೋಜನಾ ಸಹಾಯಕರುಗಳನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದನ್ನು ವೇತನ ಬಟವಾಡೆ ವಹಿಯ ಪರಿಶೀಲನೆಯಲ್ಲಿ ಗಮನಿಸಲಾಗಿದ್ದು. ಇದನ್ನು 2014–15ನೇ ಸಾಲಿನ ಲೆಕ್ಕತಪಾಸಣೆ ವರದಿಯ ಕಂಡಿಕೆ–13ರಲ್ಲಿ ಆಕ್ಷೇಪಿಸಲಾಗಿದ್ದರೂ ಸೂಕ್ತ ಕ್ರಮವಹಿಸದೇ ಇರುವುದನ್ನು 2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಗಮನಿಸಿದ್ದು, ಗ್ರಂಥಾಲಯ ಯೋಜನಾ ಸಹಾಯಕರುಗಳನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:01/29.05.2018ರಲ್ಲಿ ಕೋರಲಾಗಿ ಯಾವುದೇ ಕಡತಗಳನ್ನು ಹಾಜರುಪಡಿಸಿರುವುದಿಲ್ಲ, ಲೆಕ್ಕತನಿಖೆಗೆ ಈ ಕೆಳಕಂಡ ಮಾಹಿತಿಗಳನ್ನು ಹಾಜರುಪಡಿಸಿರುವುದಿಲ್ಲ.<br><br>1) ಯೋಜನಾ ಸಹಾಯಕರುಗಳ ಹುದ್ದೆಗಳನ್ನು ಸೃಜಿಸಿರುವ ಬಗ್ಗೆ ವೃಂದ ಮತ್ತು ನೇಮಕಾತಿ ಆದೇಶಗಳು ಮಾನ್ಯ ಕುಲಾಧಿಪತಿಗಳು/ಸರ್ಕಾರದಿಂದ ಅನುಮೋದನೆಯಾಗಿರುವ ಪರಿನಿಯಮಗಳು (STATUTE).<br>2) ಕೇಂದ್ರ/ರಾಜ್ಯ ಸರ್ಕಾರಗಳ ಅಂಗ ಸಂಸ್ಥೆಗಳಿಂದ ಅಥವಾ ಇನ್ನಿತರೆ ಸಹಯೋಗ ಸಂಸ್ಥೆಯ ಯಾವ ಯೋಜನೆಯ ಅನುದಾನದಿಂದ ನೇಮಕಾತಿ ಮಾಡಿಕೊಂಡು ವೇತನ ಪಾವತಿಸಿರುವುದಕ್ಕೆ ಸಹಯೋಗ ಸಂಸ್ಥೆಯ ಮಾರ್ಗ ಸೂಚಿಗಳು.<br>3) ಪ್ರಾಯೋಜಿತ ಯೋಜನಾ ಅವಧಿಯ ಕಾಲಾವಧಿಯ ಯಾವ ಅವಧಿಯವರೆಗೆ ಅನುಮೋದನೆಯಾಗಿರುವ ಕಡತಗಳು.<br>4) ಪ್ರಾಯೋಜಿತ ಸಂಸ್ಥೆಯಿಂದ ಬಿಡುಗಡೆಯಾಗಿರುವ ಅನುದಾನದ ವಿವರಗಳು ಮತ್ತು ಕ್ರಿಯಾ | ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಇ.ಟಿ4/115/2009–10 ದಿನಾಂಕ 07–02–2013ರಲ್ಲಿ ಮಾನ್ಯ ಕುಲಪತಿಗಳಿಗೆ ದತ್ತವಾಗಿರುವ ಅಧಿಕಾರದನ್ವಯ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯ, ಸ್ನಾತಕ ಗ್ರಂಥಾಲಯ, ಲಲಿತ ಕಲಾ ಕಾಲೇಜು, ಪ್ರಾಚ್ಯ ವಿದ್ಯಾ ಸಂಶೋಧನಾಲಯ ಈ ಕಛೇರಿಗೆ ಅವಶ್ಯಕವಿದ್ದ ಲೈಬ್ರರಿ ಪ್ರಾಜೆಕ್ಟ್ ಅಸಿಸ್ಟೆಂಟ್‌ಗಳನ್ನು 6 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗಿದೆ. ಹಾಗೂ 6ತಿಂಗಳ ನಂತರ ಇವರನ್ನು ಬಿಡುಗಡೆಗೊಳಿಸಿ ಮತ್ತೆ ಆರು ತಿಂಗಳಿಗೊಮ್ಮೆ ಮರುನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಗ್ರಂಥಾಲಯಗಳಲ್ಲಿ ಗಣಕೀಕರಣ ಕಾರ್ಯ ಚಟುವಟಿಕೆಗಳನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗಬೇಕಾಗಿರುವ ಹಿನ್ನೆಲೆಯಲ್ಲಿ ಇವರ ಸೇವೆಗಳನ್ನೂ ಸಹ ಮುಂದುವರಿಸಲಾಗುತ್ತಿದೆ. |

ಯೋಜನೆಗಳು.

5) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000ರ ನಿಯಮ 55,56,57ರನ್ವಯ ಯೋಜನಾ ಸಹಾಯಕರುಗಳನ್ನು ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳು.

ಮೇಲೆ ಕೋರಿರುವ ಯೋಜನಾ ಸಹಾಯಕರುಗಳ ನೇಮಕಾತಿ ಪ್ರಕ್ರಿಯೆಯ ಎಲ್ಲಾ ಕಡತಗಳನ್ನು ಹಾಜರುಪಡಿಸುವವರೆಗೆ ಸದರಿ ಸಿಬ್ಬಂದಿಗಳಿಗೆ ಪಾವತಿಸಿದ ವೇತನದ ಮೊತ್ತ **ರೂ.28,25,500/–ಗಳನ್ನು** ವಸೂಲಿಸಿ ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. ವಿವರಗಳನ್ನು **ಅನುಬಂಧ–38ರಲ್ಲಿ** ನೀಡಲಾಗಿದೆ.

**49. 2015–16ನೇ ಸಾಲಿನ ಪ್ರವೇಶಾತಿ ವಿವರಗಳು ಮತ್ತು ಶುಲ್ಕ ವಸೂಲಾತಿಯ ಪರಿಶೀಲನೆ :–**
**(ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)**

2015–16ನೇ ಸಾಲಿನಲ್ಲಿ ಕುವೆಂಪು ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಲ್ಲಿ ಡಿಪ್ಲೋಮಾ ಹಾಗೂ ಸ್ನಾತಕೋತ್ತರ ಪದವಿಗಳಿಗೆ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆದಿರುವ ವಿವರಗಳನ್ನು **ಅನುಬಂಧ–39ರಲ್ಲಿ** ವಿವರಿಸಲಾಗಿದೆ. ಸದರಿ ಸಂಸ್ಥೆಯ ಶುಲ್ಕ ಪಾವತಿ ವಿವರಗಳನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ ಸ್ಕೀಮ್ 'ಎ' ಮತ್ತು ಸ್ಕೀಮ್ 'ಬಿ' ಯೋಜನೆಯಡಿಯಲ್ಲಿ ಎಂ.ಎ ಕೋರ್ಸ್‌ನಲ್ಲಿ ಪ್ರವೇಶಾತಿ ಪಡೆದಿರುವ ಹಾಗೂ ಡಿಪ್ಲೊಮೊ ಕೋರ್ಸ್‌ನಲ್ಲಿ ಒಟ್ಟು ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

| ಕ್ರ.ಸಂ | ಕೋರ್ಸ್‌ಗಳು | ವರ್ಷ | ಪ್ರವೇಶಾತಿ ಸಂಖ್ಯೆ | ವಸೂಲಾತಿ ಮಾಡಬೇಕಾಗಿರುವ ಶುಲ್ಕ | ವಸೂಲಾತಿಯಾಗಿರುವ ಶುಲ್ಕ | ವ್ಯತ್ಯಾಸ ಶುಲ್ಕ ಮೊತ್ತ |
|---|---|---|---|---|---|---|
| 1 | ಎಂ.ಎ ಕನ್ನಡ ('ಎ' ಮತ್ತು 'ಬಿ' ಸ್ಕೀಮ್) | I | 65 | 609259 | 405176 | 204083 |
| | | II | 75 | 738287 | 76920 | 661367 |
| 2 | ಎಂ.ಎ ಜಾನಪದ | I | 25 | 160875 | – | 160875 |
| | | II | 18 | 115830 | 24030 | 91800 |
| 3 | ಎಂ.ಎ ಭಾಷಾ | I | 12 | 327090 | 288480 | 38610 |

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ಎಲ್ಲಾ ಸ್ನಾತಕೋತ್ತರ ವಿಭಾಗಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಬರಬೇಕಾದ ಶುಲ್ಕದ ಮೊತ್ತಗಳನ್ನು ವಸೂಲಿಸಬೇಕಾದ/ ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳುವ ಕಾರ್ಯವನ್ನು ಆಡಳಿತಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿದೆಯೇ ವಿನಹ: ಆಯಾ ವಿಭಾಗಗಳು ಶುಲ್ಕಗಳನ್ನು ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳುವ ಕಾರ್ಯನಿರ್ವಹಿಸುವುದಿಲ್ಲ. ಹಾಗೆಯೇ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯೂ ಸಹ ಈ ಕಾರ್ಯನಿರ್ವಹಿಸುವುದಿಲ್ಲ.

ಈ ಕಂಡಿಕೆಯಲ್ಲಿ ತಿಳಿಸಿರುವಂತೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಬರಬೇಕಾದ ಒಟ್ಟು ಶುಲ್ಕದ ಮೊತ್ತ ರೂ30,20,486/–ಗಳ ಪೈಕಿ ವಸೂಲಾತಿ ಮೊತ್ತ ರೂ9,24,566/–ಗಳು ಹಾಗೂ ಬಾಕಿ ಉಳಿದ ಮೊತ್ತ ರೂ20,95,920/–ಗಳನ್ನು ಮರುಭರಿಕೆ ಮಾಡಿಕೊಳ್ಳುವ ಮತ್ತು ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡುವಕಾರ್ಯವನ್ನು ಆಡಳಿತಾಧಿಕಾರಿಗಳ ಕಛೇರಿಯಲ್ಲಿನಿರ್ವಹಿಸಲಾಗುತ್ತಿದ್ದು; ಅಲ್ಲಿನ ಡಿ.ಸಿ.ಬ್ಲು ವಹಿಯಲ್ಲಿ ಈ ಮೊತ್ತವು ದಾಖಲಾಗಿರುತ್ತದೆ. ಆಡಳಿತಾಧಿಕಾರಿಯವರ ಕಛೇರಿಯಲ್ಲಿ ಈ ಮೊತ್ತವನ್ನು ವಸೂಲಿಸಿ ಸರ್ಕಾರದಿಂದ ಮರುಭರಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಿರುತ್ತಾರೆ. ಆಡಳಿತಾಧಿಕಾರಿಗಳ ಕಛೇರಿಯಲ್ಲಿ ಈ ಮೊತ್ತವು ಪೂರ್ಣಪ್ರಮಾಣದಲ್ಲಿ ಜಮೆ ಆಗದ ಹೊರತು ಯಾವುದೇ ವಿದ್ಯಾರ್ಥಿಗಳಿಗೆ ಮೂಲ ದಾಖಲಾತಿಗಳನ್ನು

| | | | | | | |
|---|---|---|---|---|---|---|
| | ವಿಜ್ಞಾನ | II | 16 | 520385 | 108675 | 412010 |
| 4 | ಎಂ.ಎ ದಕ್ಷಿಣ ಭಾರತ ಭಾಷಾ ಅಧ್ಯಯನ | I | 9 | 44550 | – | 44550 |
| | | II | 16 | 79200 | – | 79200 |
| 5 | ಡಿಪ್ಲೊಮಾ | 10 ತಿಂಗಳು | 66 | 424710 | 21285 | 403425 |
| | | **ಒಟ್ಟು** | **302** | **3020486** | **924566** | **2095920** |

ಕುವೆಂಪು ಕನ್ನಡ ಅಧ್ಯಯನ ಕೇಂದ್ರದಲ್ಲಿ 2015–16ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಒಟ್ಟು 302 ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆದಿದ್ದು, ಒಟ್ಟು **ರೂ.30,20,486/–ಗಳ** ಶುಲ್ಕವನ್ನು ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಬೇಕಾಗಿದ್ದು, ಶುಲ್ಕ ವಿನಾಯಿತಿ ನೀಡಿರುವ ವಿದ್ಯಾರ್ಥಿಗಳಿಗೆ ಮರುಭರಿಕೆಯಾಗಬೇಕಾಗಿರುತ್ತದೆ. ಆದರೆ ಕುವೆಂಪು ಕನ್ನಡ ಅಧ್ಯಯನ ಕೇಂದ್ರದಲ್ಲಿ ಲೆಕ್ಕ ತನಿಖೆಗೆ ಹಾಜರುಪಡಿಸಿರುವ ಕಡತಗಳ ರೀತ್ಯಾ ರೂ.9,24,566/–ಗಳು ವಸೂಲಾತಿಯಾಗಿದ್ದು, ಉಳಿಕೆ ವಸೂಲಾತಿ ಮಾಡಬೇಕಾಗಿರುವ ಮೊತ್ತ **ರೂ.20,95,920/–** ಗಳಾಗಿದ್ದು, ವಸೂಲಾತಿಯಾಗಿರುವ ಬಗ್ಗೆ ಲೆಕ್ಕ ತನಿಖಾ ಪತ್ರ :01/12.06.2018ರಲ್ಲಿ ಕೋರಲಾಗಿ ಕಡಿಮೆ ಶುಲ್ಕ ವಸೂಲಾತಿ ಮಾಡಿರುವುದಕ್ಕೆ ಸೂಕ್ತ ವಿವರಣೆಯನ್ನು ನೀಡುವಂತೆ ಕೋರಲಾಗಿ ಯಾವುದೇ ಕಡತಗಳನ್ನಾಗಲಿ ಸೂಕ್ತ ವಿವರಣೆಯನ್ನಾಗಲಿ ನೀಡದಿರುವುದರಿಂದ **ರೂ.20,95,920/–ಗಳನ್ನು** ಶುಲ್ಕ ವಿನಾಯಿತಿ ಪಡೆದಿರುವ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಮರುಭರಿಕೆಯಾಗದಿದ್ದಲ್ಲಿ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ಜಮೆ ಮಾಡಲಾದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಕೋರಿದೆ.

ನೀಡಲಾಗುವುದಿಲ್ಲ.

ಆದ್ದರಿಂದ, ಈ ವಿಭಾಗಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ವಸೂಲಿಸಬೇಕಾದ/ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳಬೇಕಾದ ಮೊತ್ತ ರೂ20,95,920/–ಗಳ ಆಕ್ಷೇಪಣೆಯನ್ನು ಈ ವಿಭಾಗದ ವರದಿಯಿಂದ ಕೈಬಿಡುವಂತೆ ತಮ್ಮಲ್ಲಿ ಕೋರಲಾಗಿದೆ.

**51. <u>ವಿಶ್ವವಿದ್ಯಾನಿಲಯ ಧನ ಸಹಾಯಗಳ ಆಯೋಗದಿಂದ (ಯು.ಜಿ.ಸಿ) ವೇತನಕ್ಕಾಗಿ ಬಿಡುಗಡೆಯಾದ ಅನುದಾನಕ್ಕಿಂತ ಹೆಚ್ಚುವರಿ ವೇತನ ಪಾವತಿಸಿರುವುದು:– (ಮಹಾರಾಜ ಕಾಲೇಜು)</u>**

ಅಧೀನ ಕಾರ್ಯದರ್ಶಿಗಳು, ವಿಶ್ವವಿದ್ಯಾನಿಲಯ ಧನಸಹಾಯಗಳ ಆಯೋಗ (Selection & Awards Bureau) ಹೊಸದೆಹಲಿ, ಇವರ ಕಛೇರಿ ಪತ್ರ ಸಂಖ್ಯೆ:ಎಫ್.30–42/2012 (SA-II) ದಿನಾಂಕ:31.03.2015ರಲ್ಲಿ ಮಹಾರಾಜ ಕಾಲೇಜಿನ ವಿಶ್ವವಿದ್ಯಾನಿಲಯ ಧನ ಸಹಾಯಗಳ ಆಯೋಗದ ಬ್ಯಾಂಕ್ ಖಾತೆ ಸಂಖ್ಯೆ:54007592497ಕ್ಕೆ "Dr.H.R. Chethana, Research Awards,

ಡಾ॥ ಹೆಚ್.ಆರ್.ಚೇತನಾ, ಸಹಾಯಕ ಅಧ್ಯಾಪಕರು, ಜಾನಪದ ವಿಭಾಗ,ಮಹಾರಾಜ ಕಾಲೇಜು, ಇವರಿಗೆ ಯು.ಜಿ.ಸಿ– ಎಸ್.ಡಬ್ಲ್ಯೂ.ಆರ್.ಒ, ನವದೆಹಲಿ ಇವರಿಂದ ಸಂಶೋಧನೆಗೆ ಸಂಬಂಧಪಟ್ಟಂತೆ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ವೇತನ ಮತ್ತು ಸಂಶೋಧನಾ ಅನುದಾನವನ್ನು ಸೇರಿಸಲಾಗಿದೆ.

| | |
|---|---|
| Department of Folklore towards salary & research grant" ಗಾಗಿ 2015–16ನೇ ಸಾಲಿನಲ್ಲಿ ಒಟ್ಟು ರೂ.8,21,164/–ಗಳ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಡಾ॥ ಹೆಚ್.ಆರ್. ಚೇತನಾ ರವರ ವೇತನಕ್ಕಾಗಿ ರೂ.7,36,164/–ಗಳನ್ನು ನಿಗದಿಪಡಿಸಲಾಗಿರುತ್ತದೆ.<br><br>ಈ ಸಂಬಂಧ ಹಾಜರುಪಡಿಸಿದ ವೇತನ ಪಟ್ಟಿಗಳನ್ನು ಪರಿಶೀಲಿಸಲಾಗಿ, ಜನವರಿ–2015 ರಿಂದ ಡಿಸೆಂಬರ್–2015ರ ಮಾಹೆಯವರೆಗೆ ಒಟ್ಟು 12 ಮಾಹೆಗಳ ವೇತನ ಹಾಗೂ ಎರಡು ಅವಧಿಗಳ ತುಟ್ಟಿಭತ್ಯೆ ಬಾಕಿ ಒಟ್ಟು ರೂ.7,67,002/–ಗಳನ್ನು ಪಾವತಿಸಲಾಗಿದೆ. (ವಿವರಗಳನ್ನು **ಅನುಬಂಧ–40ರಲ್ಲಿ** ವಿವರಿಸಲಾಗಿದೆ).<br><br>ಬಿಡುಗಡೆಯಾದ ಹಾಗೂ ನಿಗದಿಪಡಿಸಿದ ವೇತನ ಅನುದಾನ ಒಟ್ಟು ರೂ.7,36,164/– ಗಳಿಗೆ ಎದುರಾಗಿ **ಅನುಬಂಧ–40ರಲ್ಲಿ** ವಿವರಿಸಿರುವಂತೆ ಒಟ್ಟು ರೂ.7,67,002/–ಗಳನ್ನು ಪಾವತಿಸಿರುವುದರಿಂದ (ಧನಾದೇಶ ಸಂಖ್ಯೆ:296603/ದಿನಾಂಕ:29.09.2015ರಲ್ಲಿ ರೂ.7,57,144/–ಗಳನ್ನು ಪಾವತಿಸಿದ್ದು, ಬಾಕಿ ರೂ.9,858/–ಗಳನ್ನು ಯಾವ ಖಾತೆಗಳಿಂದ ಮತ್ತು ಧನಾದೇಶಗಳಿಂದ ಪಾವತಿಸಲಾಗಿದೆ ಎಂಬುದರ ಬಗ್ಗೆ ಮಾಹಿತಿ/ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ) ರೂ.30,838/–ಗಳನ್ನು ಹೆಚ್ಚುವರಿಯಾಗಿ ಪಾವತಿಸಿದಂತಾಗಿರುತ್ತದೆ.<br><br>ಈ ಹೆಚ್ಚುವರಿ ವೇತನವನ್ನು ಪಾವತಿಸಿರುವ ಸಂಬಂಧ, ವಿಶ್ವವಿದ್ಯಾನಿಲಯ ಧನಸಹಾಯಗಳ ಆಯೋಗದಿಂದ ಮರು ಅನುದಾನ ಬಿಡುಗಡೆಯಾಗಿದ್ದರೆ ಅದರ ಮೂಲ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:34/2018–19ನ್ನು ದಿನಾಂಕ:14.05.2018 ರಂದು ನೀಡಿದರೂ ಸಹ ಹಾಜರುಪಡಿಸದ ಕಾರಣ ಹೆಚ್ಚುವರಿ ವೇತನ ಪಾವತಿ ಮೊತ್ತ **ರೂ.30,838/–ಗಳನ್ನು ವಸೂಲಾತಿಗೆ** ಸೂಚಿಸಿದೆ. | ಈ ಅನುದಾನ ಬಿಡುಗಡೆಯಾಗುವ ಸಮಯದಲ್ಲಿ ಸದರಿಯವರಿಗೆ ಆ ಸಮಯದಲ್ಲಿ ಬರುತ್ತಿದ್ದ ವೇತನವನ್ನು ಲೆಕ್ಕಹಾಕಿ ವೇತನ ಅನುದಾನ ಬಿಡುಗಡೆ ಮಾಡಿರುತ್ತಾರೆ. ಆದರೆ ಇವರಿಗೆ ನಿಯಮಾನುಸಾರ ಬರುವ ವಾರ್ಷಿಕ ಮುಂಬಡ್ತಿ ಮತ್ತು ತುಟ್ಟಿಭತ್ಯೆಗಳನ್ನು ಲೆಕ್ಕಾಚಾರ ಹಾಕಿ ವೇತನ ಪಾವತಿಸಲಾಗಿರುತ್ತದೆ.<br>ಸದರಿ ಯೋಜನೆಯು ಪೂರ್ಣಗೊಂಡಿದ್ದರಿಂದ ಹೆಚ್ಚುವರಿ ಮೊತ್ತವನ್ನು ವಿಶ್ವವಿದ್ಯಾನಿಲಯದ ಅನುದಾನದಿಂದ ನೀಡಲಾಗಿರುತ್ತದೆಯೇ ಹೊರತು ಹೆಚ್ಚುವರಿಯಾಗಿ ವೇತನ ಪಾವತಿ ಮಾಡಿರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ವಸೂಲಾತಿ ಮೊತ್ತ ರೂ30,838/–ಗಳನ್ನು ಕೈ ಬಿಡುವಂತೆ ಕೋರಲಾಗಿದೆ. |
| **53. ಶ್ರೀ ಕುನ್ನೇಗೌಡ, ನಿವೃತ್ತ ಕಾವಲುಗಾರ ಇವರಿಗೆ 4ನೇ ಪರಿಷ್ಕೃತ ವೇತನ ಶ್ರೇಣಿ–1998ರ ವಾರ್ಷಿಕ ಬಡ್ತಿಯಲ್ಲಿನ ವ್ಯತ್ಯಾಸದ ಮೊತ್ತವನ್ನು ಪಾವತಿಸಿರುವುದಕ್ಕೆ ಕಡತವನ್ನು ಹಾಜರುಪಡಿಸದಿರುವುದು:– (ತೋಟಗಾರಿಕೆ ವಿಭಾಗ)**<br><br>2015–16ನೇ ಸಾಲಿನ ತೋಟಗಾರಿಕಾ ವಿಭಾಗದ ಲೆಕ್ಕತಪಾಸಣೆಯಲ್ಲಿ ಶ್ರೀ ಕುನ್ನೇಗೌಡ, ನಿವೃತ್ತ ಕಾವಲುಗಾರ, ಇವರಿಗೆ ಬಿ.ಆರ್.ಸಂಖ್ಯೆ:11/2014–15ರಲ್ಲಿ ರೂ.1,13,938/–ಗಳನ್ನು ಪಾವತಿಸಿರುವುದನ್ನು, ವೇತನ ಬಟವಾಡೆ ವಹಿಯ ಪರಿಶೀಲನೆಯಲ್ಲಿ ಗಮನಿಸಲಾಗಿದ್ದು, ಶ್ರೀ ಕುನ್ನೇಗೌಡ, ನಿವೃತ್ತ ಕಾವಲುಗಾರ, ಇವರಿಗೆ 1998ರ 4ನೇ ವೇತನ ಪರಿಷ್ಕರಣೆಯಲ್ಲಿನ ವಾರ್ಷಿಕ ವೇತನ ಬಡ್ತಿಯಲ್ಲಿನ ವ್ಯತ್ಯಾಸದ ಮೊತ್ತ ರೂ.1,13,938/–ಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. ಆದರೆ, ಸದರಿ ನಿವೃತ್ತ ನೌಕರರುಗಳಿಗೆ | ಶ್ರೀ ಕುನ್ನೇಗೌಡ, ನಿವೃತ್ತ ಕಾವಲುಗಾರ ಇವರಿಗೆ 4ನೇ ಪರಿಷ್ಕೃತ ವೇತನ ಶ್ರೇಣಿ–1998ರ ವಾರ್ಷಿಕ ಬಡ್ತಿಯಲ್ಲಿನ ವ್ಯತ್ಯಾಸದ ಮೊತ್ತಕ್ಕೆ ಸಂಬಂಧಿಸಿದಂತೆ ಕಡತಗಳನ್ನು ಮತ್ತೊಮ್ಮೆ ಪರಿಶೀಲಿಸಿ ಅಗತ್ಯ ದಾಖಲೆ ಪತ್ರಗಳೊಂದಿಗೆ ವರದಿ ಸಲ್ಲಿಸಲಾಗುತ್ತದೆ. |

| | |
|---|---|
| 1998ರ 4ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವಾರ್ಷಿಕ ಬಡ್ತಿಯಲ್ಲಿನ ದೋಷದ ವಿವರಗಳನ್ನು ಪರಿಶೀಲಿಸಲು ಸೇವಾ ವಹಿ, ಸರ್ಕಾರ/ ಸಿಂಡಿಕೇಟ್‌ನ ಅನುಮೋದನೆ ಹಾಗೂ due drawn statement ಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದರಿಂದ **ರೂ.1,13,938/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.** | |
| **54. <u>ಉಪನ್ಯಾಸ ಮಾಲೆಯನ್ನು ಮಾಡುವುದಕ್ಕೆ ಬರುವ ಸಂಪನ್ಮೂಲ ವ್ಯಕ್ತಿಗಳಿಗೆ ಹೆಚ್ಚುವರಿ ರಸ್ತೆದರ ಪಾವತಿಸಿರುವುದು:- (ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ (UGC) ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ (HRDC) ಮೈಸೂರು ಇಲ್ಲಿನ 2015-16 ನೇ ಸಾಲಿನ ಲೆಕ್ಕತಪಾಸಣೆಯನ್ನು ಕೈಗೊಳ್ಳಲಾಗಿ, ಉಪನ್ಯಾಸ ಮಾಲೆಯನ್ನು ಮಾಡುವುದಕ್ಕಾಗಿ ವಿವಿಧ ಸ್ಥಳಗಳಿಂದ ಆಗಮಿಸುವ ಸಂಪನ್ಮೂಲ ವ್ಯಕ್ತಿಗಳಿಗೆ HRDC ಮಾರ್ಗ ಸೂಚಿಯ ಅನುಬಂಧ-10 ರ ಕಂಡಿಕೆ ಸಂಖ್ಯೆ:07 ರಲ್ಲಿ ವಿವರಿಸಿರುವಂತೆ ಸಂಪನ್ಮೂಲ ವ್ಯಕ್ತಿಗಳು ಟ್ಯಾಕ್ಸಿಗಳಲ್ಲಿ ಪ್ರಯಾಣ ಮಾಡಿದ ವೆಚ್ಚದ ಬಿಲ್ಲುಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳು ಆಗಮಿಸುವ ಸ್ಥಳಗಳ ಉನ್ನತ ಶ್ರೇಣಿಗೆ ಲಭ್ಯವಿರುವ ರೈಲುದರಕ್ಕೆ ಸೀಮಿತಗೊಳಿಸಿ ಪ್ರಯಾಣದ ವೆಚ್ಚವನ್ನು ನೀಡಬೇಕೆಂದು ಸೂಚಿಸಲಾಗಿದೆ.<br><br>ಆದರೆ **<u>ಅನುಬಂಧ-42</u>** ರಲ್ಲಿ ವಿವರಿಸಲಾಗಿರುವ ಪ್ರಕರಣಗಳಲ್ಲಿ HRDC ಮಾರ್ಗ ಸೂಚಿಯಂತೆ ವೆಚ್ಚವನ್ನು ನೀಡದೆ ಹೆಚ್ಚುವರಿಯಾಗಿ ಪಾವತಿಸಲಾಗಿರುವುದು ಕಂಡು ಬಂದಿರುವುದರಿಂದ ವಿವರಗಳನ್ವಯ ಒಟ್ಟು **ರೂ.32,590 ಗಳ ವಸೂಲಾತಿಗೆ** ಸೂಚಿಸಲಾಗಿದೆ. | ಈ ಕಂಡಿಕೆಯ ಆಕ್ಷೇಪಣೆಗೆ ಸಂಬಂಧಿಸಿದಂತೆ ಯುಜಿಸಿ-ಹೆಚ್‌ಆರ್‌ಡಿಸಿ ಮಾರ್ಗಸೂಚಿಯ ಪುಟ ಸಂಖ್ಯೆ 34, ಕ್ರಮ ಸಂಖ್ಯೆ 7 ರಲ್ಲಿನ ಈ ಕೆಳಕಾಣಿಸಿದ ನಿಯಮಗಳನ್ವಯ ಎರಡು ಸ್ಥಳಗಳಿಗೆ ರೈಲು ಸಂಪರ್ಕ ಇರುವ ಕಡೆ ಸ್ವಂತ ಕಾರು/ಟ್ಯಾಕ್ಸಿಯಲ್ಲಿ ಪ್ರಯಾಣಿಸಿದ ಸಂಪನ್ಮೂಲ ವ್ಯಕ್ತಿಗಳಿಗೆ ಕಿ.ಮೀ ಒಂದಕ್ಕೆ ರೂ.16.00ಗಳಂತೆ ಪಾವತಿಸಬಹುದಾಗಿರುತ್ತದೆ.<br>***"However, irrespective of the fact that two stations are connected by rail, travel by own car/taxi may be allowed at the rate as prescribed for Central Government employees or other statutory bodies whichever is higher. This concession may be allowed if the journey is not more than 400 Kms".***<br>ಈ ಕೇಂದ್ರವು ಕೇಂದ್ರ ಸರ್ಕಾರದ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ನವ ದೆಹಲಿಯ ನಿಯಮಾವಳಿಗಳಿಗನುಸಾರವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಹಾಗೂ ಈ ಎಲ್ಲಾ ಪ್ರಕರಣಗಳಲ್ಲಿಯೂ ಪ್ರಯಾಣದ ದೂರವು 400 ಕಿ.ಮೀ ಒಳಗಡೆ ಇರುವುದರಿಂದ ಕೇಂದ್ರ ಸರ್ಕಾರದ ಈ ಅವಕಾಶಗಳಡಿ ರಸ್ತೆ ದರಗಳ ಮೊತ್ತವನ್ನು ಪಾವತಿ ಮಾಡಲಾಗಿದೆ (ಮಾರ್ಗಸೂಚಿ ಪ್ರತಿ ಲಗತ್ತಿಸಲಾಗಿದೆ). |
| **55. <u>2015-16ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರವೇಶಾತಿ ಪಡೆಯಲಾಗಿರುವ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಬೇಡಿಕೆ, ವಸೂಲಿ ಹಾಗೂ ಬಾಕಿ ವಿವರಗಳ ಪರಿಶೀಲನೆ:- (ಲಲಿತ ಕಲೆಗಳ ಕಾಲೇಜು)</u>**<br><br>2015-16ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ Ist year BPA, IInd year BPA ಮತ್ತು IIIrd year BPA ಹಾಗೂ ಡಿಪ್ಲೊಮೊ M.Dance, M.Music ಮುಂತಾದ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲಾಗಿರುವ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಗಳ ಬೇಡಿಕೆ, ವಸೂಲಿ ಹಾಗೂ ಬಾಕಿ ವಿವರಗಳನ್ನು | 2015-16ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ $1^{st}$ year BPA $2^{nd}$ year BPA ಮತ್ತು $3^{rd}$ year BPA ಹಾಗೂ ಡಿಪ್ಲೋಮೊ M.Dance, M.Music ಮುಂತಾದ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲಾಗಿರುವ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಗಳ ಬೇಡಿಕೆ |

ಪರಿಶೀಲಿಸಲಾಗಿ ವಿವರಗಳನ್ನು **ಅನುಬಂಧ–43ರಲ್ಲಿ** ವಿವರಿಸಲಾಗಿದೆ.

ಮೇಲೆ ವಿವರಿಸಲಾಗಿರುವಂತೆ ಎಲ್ಲಾ ಕೋರ್ಸ್‌ಗಳಿಂದ ಬೇಡಿಕೆ ಮೊತ್ತ ವಸೂಲಿ ಹಾಗೂ ಬಾಕಿ ವಿವರಗಳು ಈ ಕೆಳಗಿನ ಘೋಷ್ವಾರೆಯಂತೆ ಮೊಬಲಗುಗಳು ಆಗಿರುತ್ತದೆ.

| | |
|---|---|
| ಬೇಡಿಕೆ | 3,06,836–00 |
| ವಸೂಲಿ | 2,38,360–00 |
| ಬಾಕಿ | 68,476–00 |

ಬಾಕಿ ಉಳಿಕೆಯಾಗಿರುವ ಮೊತ್ತ **ರೂ.68,476/–ಗಳನ್ನು ವಸೂಲಿ** ಮಾಡಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

ರೂ.68,476.00ಗಳಾಗಿದ್ದು, ಅದರಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿವೇತನದಿಂದ ರೂ.57,483.00ಗಳು ಮರುಭರಿಕೆಯಾಗಿದ್ದು, ಅದರಲ್ಲಿ ಪ್ರಾಂಶುಪಾಲರ ಖಾತೆಗೆ ಜಮಾ ಮಾಡಬೇಕಾಗಿದ್ದ ಮೊತ್ತ ರೂ.7,235.00ಗಳನ್ನು ಜಮಾ ಮಾಡಿ ಉಳಿದ ರೂ.50,248.00ಗಳನ್ನು ವಿಶ್ವವಿದ್ಯಾನಿಲದ ಜಿ.ಆರ್.ಎ ಖಾತೆಗೆ ಜಮಾ ಮಾಡಲಾಗಿದೆ. (ಚಲನ್ ಪ್ರತಿ ಲಗತ್ತಿಸಲಾಗಿದೆ.)

ಉಳಿದ ವಿದ್ಯಾರ್ಥಿಗಳಿಗೆ ವಿದಾರ್ಥಿವೇತನ ಮಂಜೂರಾಗದ ಕಾರಣ ರೂ.10,993.00ಗಳು ವಿದ್ಯಾರ್ಥಿಗಳಿಂದ ಮರುಭರಿಕೆಯಾಗಬೇಕಾಗಿರುತ್ತದೆ. ಸದರಿ ವಿದ್ಯಾರ್ಥಿಗಳುಅವರ ಮೂಲಅಂಕಪಟ್ಟಿಗಳನ್ನು ಇನ್ನೂ ಹಿಂಪಡೆಯದೇ ಇರುವುದರಿಂದ, ಅವುಗಳನ್ನು ಹಿಂಪಡೆಯು ಸಂಧರ್ಭದಲ್ಲಿ ಸದರಿ ಶುಲ್ಕವನ್ನು ವಸೂಲಿ ಮಾಡಿ ವಿಶ್ವವಿದ್ಯಾನಿಲಯದ ಖಾತೆ ಜಮಾ ಮಾಡಲಾಗುವುದು.

**56. ಹೆಚ್ಚುವರಿ ಕೆಲಸ ನಿರ್ವಹಿಸಿದುದಕ್ಕಾಗಿ ಮುದ್ರಣಾಲಯ ಉದ್ಯೋಗಿಗಳಿಗೆ ಕಾಫಿ, ತಿಂಡಿ, ಊಟಕ್ಕಾಗಿ ನಿಯಮ ಮೀರಿ ಹಣ ಪಾವತಿಸಿರುವುದು :– (ಮುದ್ರಣಾಲಯ)**

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ ಉದ್ಯೋಗಿಗಳು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಿದ ದಿನಗಳಲ್ಲಿ ಅವರಿಗೆ ಶ್ರೀ ಸಾಯಿ ಕ್ಯಾಟರಿಂಗ್ ರವರಿಂದ ಕಾಫಿ, ತಿಂಡಿ, ಊಟ ವಿತರಿಸಿರುವುದು ಮತ್ತು ಅದಕ್ಕೆ ಸಂಬಂಧಪಟ್ಟ ಖರ್ಚಿನ ಬಾಬ್ತನ್ನು ಸದರಿ ಕ್ಯಾಟರಿಂಗ್ ಸಂಸ್ಥೆಗೆ ಪಾವತಿಸಿರುವುದು ಕಂಡುಬಂದಿರುತ್ತದೆ. ಹೆಚ್ಚಿಗೆಯ ಅವಧಿ/ಹೆಚ್ಚುವರಿ ದಿನಗಳು ಎಂದು ಪ್ರತ್ಯೇಕಿಸಲು ನಿಯಮಗಳಲ್ಲಿ ಅವಕಾಶವಿಲ್ಲ ಕೆ.ಸಿ.ಎಸ್.ಆರ್ ನಿಯಮ 8 (14)ರಂತೆ ದಿನ ಎಂದರೆ ದಿನದ 24 ಗಂಟೆಗಳಾಗಿರುತ್ತವೆ. ಸರ್ಕಾರಿ ನೌಕರರು ದಿನದ 24 ಗಂಟೆಯು ನೌಕರರಾಗಿರುತ್ತಾರೆ.ಈ ಹಿನ್ನೆಲೆಯಲ್ಲಿ ಮೇಲಿನ ಪಾವತಿಗಳಿಗೆ ಅವಕಾಶವಿರುವುದಿಲ್ಲ. ಈ ಸಂಬಂಧ ಸೂಕ್ತ ಸ್ಪಷ್ಟೀಕರಣ ನೀಡುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:10/05.05.2018ರಲ್ಲಿ ಕೋರಲಾಗಿತ್ತಾದರೂ ಲೆಕ್ಕಪರಿಶೀಲನೆಯ ಅಂತ್ಯದವರೆವಿಗೂ ಯಾವುದೇ ಲಿಖಿತ ಉತ್ತರ ನೀಡದಿರುವುದರಿಂದ **ಅನುಬಂಧ–44ರಲ್ಲಿ** ವಿವರಿಸಲಾಗಿರುವ ಒಟ್ಟು ಮೊತ್ತ **ರೂ.22,740/–ಗಳನ್ನು ವಸೂಲಾತಿಗೆ** ಸೂಚಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ಉದ್ಯೋಗಿಗಳನ್ನು ಹಲವಾರು ಸಂದರ್ಭಗಳಲ್ಲಿ ಮುಖ್ಯವಾಗಿ ಘಟಿಕೋತ್ಸವ ಕಾರ್ಯವಿವರಣಾ ಪುಸ್ತಕ ಕಾರ್ಯ; ಪತ್ಯ ಪುಸ್ತಕಗಳ ಮುದ್ರಣ ಕಾರ್ಯ ಇತ್ಯಾದಿ ಸಂದರ್ಭಗಳಲ್ಲಿ ಕಛೇರಿ ಕೆಲಸದ ಅವಧಿ ಮೀರಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲು ಸೂಚಿಸಲಾಗುತ್ತದೆ. ಇಂತಹ ಸಂರ್ಭಗಳಲ್ಲಿ ಎಲ್ಲಾ ಕಾರ್ಯಗಳನ್ನು ತುರ್ತಾಗಿ ನಿರ್ವಹಿಸಿ ಮುದ್ರಣಾ ಸಾಮಗ್ರಿಗಳನ್ನು ಸರಬರಾಜು ಮಾಡಬೇಕಾಗಿರುತ್ತದೆ. ಉದ್ಯೋಗಿಗಳ ಕಾರ್ಯದಕ್ಷತೆ ಇಂತಹ ಸಂದರ್ಭ ಕುಂಠಿತವಾಗಬಾರದೆಂಬ ಉದ್ದೇಶದಿಂದ ಇವರಿಗೆ ಲಘು ಉಪಹಾರ ಮತ್ತು ಊಟದ ವ್ಯವಸ್ಥೆ ಮಾಡಲಾಗಿದೆ. ಕರ್ನಾಟಕ ಸೇವಾ ನಿಯಮಗಳಿಗನುಸಾರವಾಗಿ ಸರ್ಕಾರಿ ನೌಕರರು ದಿನದ 24 ಗಂಟೆಯಲ್ಲೂ ನೌಕರರೇ ಆಗಿದ್ದು, ಯಾವ ಸಂದರ್ಭದಲ್ಲಾದರೂ ಇವರು ನಿರ್ವಹಿಸಬೇಕಾದ ಕೆಲಸ ಕಾರ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕಾಗಿರುವುದು ಇವರ ಆದ್ಯ ಕರ್ತವ್ಯವಾಗಿರುತ್ತದೆ.

ಆದರೆ, ಈ ನೌಕರರು ಕಛೇರಿ ಅವಧಿ ಮೀರಿ ಕೆಲಸ ನಿರ್ವಹಿಸಿ ನಿಯಮಾನುಸಾರ

| | |
|---|---|
| | ಸರಬರಾಜು ಮಾಡಬೇಕಾದ ಮುದ್ರಣ ಸಾಮಗ್ರಿಗಳ ತಯಾರಿಕೆಯಲ್ಲಿ ಪಾಲ್ಗೊಂಡ ನೌಕಕರಿಗೆ ಮಾನವೀಯತೆ ದೃಷ್ಟಿಯಿಂದ ಉಪಹಾರ ಮತ್ತು ಊಟದ ವ್ಯವಸ್ಥೆ ಮಾಡಲಾಗಿತ್ತು. ಮಾಮೂಲಿ ಸಂದರ್ಭಗಳಲ್ಲಿ ಯಾವ ನೌಕರರಿಗೂ ಸಂಬಳದ ಜೊತೆ ಊಟ, ತಿಂಡಿ ಇತ್ಯಾದಿಗಳ ವ್ಯವಸ್ಥೆ ಮಾಡಲಾಗುತ್ತಿಲ್ಲ.<br>ಆದ್ದರಿಂದ, ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **57. <u>ಮುದ್ರಣದ ಬಾಬ್ತು ಹುಂಡಿಗಳನ್ನು ವಸೂಲಿಸದಿರುವುದು:– (ಮುದ್ರಣಾಲಯ)</u>**<br>2015–16ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಅಂಗ ಸಂಸ್ಥೆಗಳಿಗೆ ವಿವಿಧ ನಮೂನೆ ಮತ್ತು ಪ್ರಮಾಣಗಳಲ್ಲಿ ಬೇಡಿಕೆಗಳನ್ವಯ ಮುದ್ರಣ ಮಾಡಿ ನೀಡಲಾಗಿರುತ್ತದೆ. ಈ ಕುರಿತು ಮುದ್ರಣ ವೆಚ್ಚದ, ಬೇಡಿಕೆ, ವಸೂಲಿ ಮತ್ತು ವಸೂಲಿ ಆಗಬೇಕಾಗಿರುವ ವಿವರಗಳನ್ನು ಪರಿಶೀಲಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.<br><br>2015–16ನೇ ಸಾಲಿನ ವೆಚ್ಚದ ಒಟ್ಟು ಹುಂಡಿಗಳ ಮೊತ್ತ ರೂ. — 57,61,563<br>ಈಗಾಗಲೇ ವಸೂಲಿಸಿದ ಒಟ್ಟು ಮೊತ್ತ ರೂ. — 52,05,391<br>ಬಾಕಿ ವಸೂಲಿ ಮಾಡಬೇಕಾದ ಮೊತ್ತ — 5,56,172<br><br>ಮೇಲಿನ ವಿವರಗಳಂತೆ ಬಾಕಿ ವಸೂಲಿ ಮಾಡಬೇಕಾಗಿರುವ ಮುದ್ರಣ ಹುಂಡಿಗಳ ಒಟ್ಟು ಮೊತ್ತ **ರೂ.5,56,172/– ವಿವರಗಳನ್ನು <u>ಅನುಬಂಧ–45</u>**ರಲ್ಲಿ ವಿವರಿಸಲಾಗಿದ್ದು, ಈ ಬಾಕಿ ಉಳಿದಿರುವ ಮೊತ್ತವನ್ನು ಸಂಬಂಧಪಟ್ಟ ಶಾಖೆಗಳಿಂದ ವಸೂಲಿ ಮಾಡಿ ಮೈಸೂರು ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ಜಮಾ ಮಾಡಿ ವರದಿ ಸಲ್ಲಿಸುವುದು. | 2015-16ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಗಳಿಗೆ ವಿವಿಧ ನಮೂನೆಗಳನ್ನು ಮುದ್ರಿಸಿ ಸರಬರಾಜು ಮಾಡಿದ ಬಾಬ್ತು; ಬಾಕಿ ಇರುವ ಮೊತ್ತ ರೂ.5,56,172.00ಗಳ ಪೈಕಿ; ರೂ.8,998.00ಗಳ ವಸೂಲಾತಿಯಾಗಿದ್ದು ಸಂಬಂಧಿಸಿದ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.<br>ಬಾಕಿ ಉಳಿದ ಮೊತ್ತವನ್ನು ಆಯಾ ಕಛೇರಿಗಳಿಂದ ವಸೂಲಾತಿ ಮಾಡಿ ಆದಷ್ಟು ಜಾಗ್ರತೆ ಜಮಾ ಮಾಡಲಾಗುವುದು. |
| **58. <u>ಶ್ರೀ ಈರಯ್ಯ ಪ್ರೋಸೆಸ್ ಆಪರೇಟರ್ ಇವರಿಗೆ 25/30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಯನ್ನು ನೀಡಿರುವ ಕಡತ ಹಾಗೂ ಸೇವಾವಹಿಯನ್ನು ಹಾಜರುಪಡಿಸದಿರುವುದು :– (ಮುದ್ರಣಾಲಯ)</u>**<br>ವಿಷಯಕ್ಕೆ ಸಂಬಂಧಿಸಿದಂತೆ ಬಿ.ಆರ್.ನಂ.174/15–16 ದಿನಾಂಕ:02.03.2016ರಂತೆ | ಶ್ರೀ ಈರಯ್ಯ ಇವರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಎ4.329/81.82 ದಿನಾಂಕ |

| | |
|---|---|
| ರೂ.67,182/–ಗಳನ್ನು ಬಟವಾಡೆ ವಹಿಯ ವಾಲ್ಯೂಮ್–43 ಪುಟ ಸಂಖ್ಯೆ 27ರಲ್ಲಿನಂತೆ, ಶ್ರೀ ಈರಯ್ಯ ಪ್ರೋಸೆಸ್ ಆಪರೇಟರ್ ಇವರಿಗೆ ದಿನಾಂಕ:01.04.2012 ರಿಂದ 30.01.2016ರ ವರೆಗಿನ ಅವಧಿಯ 25/30 ವರ್ಷಗಳು ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿದ ಹೆಚ್ಚುವರಿ ವೇತನ ಬಡ್ತಿಯ ವ್ಯತ್ಯಾಸದ ಮೊತ್ತವನ್ನು ಪಾವತಿಸಲಾಗಿದೆ. ಈ ಸಂಬಂಧ ಸದರಿ ನೌಕರರು ಯಾವ ಹುದ್ದೆಗೆ ನೇಮಕಗೊಂಡರು, ಯಾವಾಗ ನೇಮಕಗೊಂಡರು, ನೇಮಕಾತಿ ಆದೇಶ ಇತ್ಯಾದಿ ವಿವರಗಳ ಪೂರ್ಣ ವಿವರಗಳನ್ನು ಇವರ ಸೇವಾವಹಿಯೊಂದಿಗೆ (ವೈಯಕ್ತಿಕ ಕಡತದೊಂದಿಗೆ) ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:12/2018–19 ದಿನಾಂಕ:07.05.2018ರಲ್ಲಿ ಕೋರಲಾಗಿತ್ತು. ಆದರೆ ಯಾವುದೇ ಮಾಹಿತಿಯನ್ನು ಲಿಖಿತವಾಗಿ ನೀಡಿರುವುದಿಲ್ಲ. ಸೇವಾವಹಿ ಹಾಗೂ ಇತರೆ ಮಾಹಿತಿಗಳಿಲ್ಲದೆ ಇವರಿಗೆ ಪಾವತಿಸಿರುವ 25/30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳ ನಿಖರತೆ/ಸತ್ಯಾಸತ್ಯತೆಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಇವುಗಳ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವವರೆಗೆ ಇವರಿಗೆ ನೀಡಿರುವ ಹೆಚ್ಚುವರಿ ವೇತನ ಬಡ್ತಿಯ **ಮೊತ್ತ ರೂ.67,182/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | 25.9.1981ರ ಅನ್ವಯ ಕಂಪೋಸಿಟರ್ ಗ್ರೇಡ್ II ಹುದ್ದೆಗೆ ನೇಮಕಗೊಂಡು ದಿನಾಂಕ 5.10.1981 ರಂದು ಕೆಲಸಕ್ಕೆ ವರದಿ ಮಾಡಿಕೊಂಡಿರುತ್ತಾರೆ.<br><br>ತದನಂತರ ಇವರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಎ4/932/84.85 ದಿನಾಂಕ 29.4.1985ರ ಅನ್ವಯ ಪ್ರೋಸೆಸ್ ಆಪರೇಟರ್ ಆಗಿ ನೇಮಕಗೊಂಡು ದಿನಾಂಕ 3.5.1985 ರಂದು ಕಛೇರಿ ಕೆಲಸಕ್ಕೆ ವರದಿ ಮಾಡಿಕೊಂಡಿರುತ್ತಾರೆ.<br><br>ಈ ದಿನಾಂಕದಿಂದ ಇವರು 10 ವರ್ಷಗಳ ಸೇವೆಯನ್ನು ಮತ್ತು 15 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದುದರಿಂದ ದಿನಾಂಕ 3.5.1995 ಕ್ಕೆ ಮತ್ತು ದಿನಾಂಕ 3.5.2000 ಕ್ಕೆ ಸ್ವಯಂಚಾಲಿತ ವೇತನ ಬಡ್ತಿಗಳನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಇಟಿ4/564/2001–02 ದಿನಾಂಕ.22.8.2003ರ ಅನ್ವಯ ಮಂಜೂರು ಮಾಡಲಾಗಿದೆ. ಮತ್ತು ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ ಇಟಿ4/133/2003–04 ದಿನಾಂಕ 3.11.2005 ರಂತೆ ಇವರು ದಿನಾಂಕ 3.5.2005 ಕ್ಕೆ 20 ವರ್ಷಗಳನ್ನು ಪೂರ್ಣಗೊಳಿಸಿದ ಸಂಬಂಧ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿದೆ ಹಾಗೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಇಟಿ4/596/2012–13 ದಿನಾಂಕ 2.2.2016 ರಂತೆ ದಿನಾಂಕ 4.5.2015 ಕ್ಕೆ 25 ವರ್ಷ ಸೇವೆಯನ್ನು ಪೂರ್ಣಗೊಳಿಸಿದ ಪ್ರಯುಕ್ತ 2ನೇ ಹೆಚ್ಚುವರಿ ವೇತನ ಬಡ್ತಿ ಹಾಗೂ ದಿನಾಂಕ 4.5.2010 ಕ್ಕೆ 30 ವರ್ಷ ಸೇವೆಯನ್ನು ಪೂರ್ಣಗೊಳಿಸಿದುದಕ್ಕಾಗಿ 3ನೇ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದೆ.<br><br>ವಿಶ್ವವಿದ್ಯಾನಿಲಯದ ಮೇಲಿನ ಎಲ್ಲಾ ಆದೇಶದ ಪ್ರತಿಗಳು ಹಾಗೂ ಶ್ರೀ ಈರಯ್ಯ ಇವರ ಸೇವಾ ವಹಿಯ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ; ರೂ 67182.00ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ತಮ್ಮಲ್ಲಿ ಕೋರಲಾಗಿದೆ. |
| **ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕ ಕಾಯ್ದೆ (K.T.P.P) ಉಲ್ಲಂಘಿಸಿರುವ ಪ್ರಕರಣಗಳು**<br>**60. ಟೆಂಡರ್ ಕರೆಯದೆ ಮೆ॥ ನವನೀತ್ ಕೇಟರರ್ಸ್ ರವರಿಗೆ ಊಟ, ತಿಂಡಿ ಸರಬರಾಜು ಮಾಡಿರುವುದಕ್ಕೆ ಮೊಬಲಗನ್ನು ಪಾವತಿಸಿರುವುದು:– (ಆಡಳಿತ ವಿಭಾಗ)**<br><br>2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಲ್ಲಿ, ವಿವಿಧ ಡಿ.ಸಿ. ಬಿಲ್ಲುಗಳ ಮೂಲಕ ಮೆ॥ ನವನೀತ್ ಕೇಟರರ್ಸ್ ಮೈಸೂರು ಇವರಿಗೆ ಒಟ್ಟು ರೂ. 14,22,698/–ಗಳನ್ನು | 2015-16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು ಮತ್ತು ಅಧ್ಯಯನ ವಿಭಾಗಗಳಲ್ಲಿ ನಡೆಯುವ ವಿವಿಧ ಸಭೆ ಸಮಾರಂಭಗಳಿಗೆ ವಿವಿಧ ದಿನಾಂಕಗಳಂದು |

<table>
<tr>
<td>ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಿಂದ ನಡೆಸಿರುವ ಸಭೆ ಸಮಾರಂಭಗಳಿಗೆ, ಊಟ/ತಿಂಡಿ/ಕಾಫೀ/ಟೀ ಇತ್ಯಾದಿಗಳನ್ನು ಸರಬರಾಜು ಮಾಡಿದ ಬಾಬ್ತು ಪಾವತಿಸಲಾಗಿದೆ. ಈ ಸಂಬಂಧ ಸಭೆಗಳ ನಡಾವಳಿಗಳು, ಸಭೆಗೆ ಹಾಜರಾಗಿರುವ ಸದಸ್ಯರ ವಿವರ, ಅದರ ತೀರ್ಮಾನ, ಹಾಜರಾತಿ ವಿವರಗಳು ಹಾಗೂ ಟೆಂಡರ್ ಕರೆಯದೆ ಒಂದೇ ಸಂಸ್ಥೆಗೆ ಭಾಗಗಳಾಗಿ ಮಾಡಿ ಹಣವನ್ನು ಪಾವತಿಸಿರುವುದರ (ಕೆ.ಟಿ.ಪಿ.ಪಿ. ನಿಯಮಗಳು 2000ಕ್ಕೆ ವಿರುದ್ಧವಾಗಿ) ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವಂತೆ ಆಡಿಟ್ ವಿಚಾರಣಾ ಪತ್ರದ ಸಂಖ್ಯೆ:17/2017–18/08.03.2018ರಲ್ಲಿ ಕೋರಲಾಗಿತ್ತು. [ಸರ್ಕಾರಿ ಆದೇಶ ಸಂಖ್ಯೆ:ಆಇ2ಟಿಸಿಇ2012, ದಿನಾಂಕ:15.12.2012ರ ನಡಾವಳಿಗಳಿಗೆ ವಿರುದ್ಧವಾಗಿರುತ್ತದೆ.]<br><br>ಈ ಸಂಬಂಧ ವಿಶ್ವವಿದ್ಯಾನಿಲಯವಾರು ಯಾವುದೇ ರೀತಿಯ ಮಾಹಿತಿಯನ್ನು ಲಿಖಿತವಾಗಿ ನೀಡಿರುವುದಿಲ್ಲ. ಇದರಿಂದ ನಡೆದಿರುವ ಸಭೆ/ಸಮಾರಂಭಗಳಿಗೆ ಹಾಜರಾಗಿರುವ ಸದಸ್ಯರ ಸಂಖ್ಯೆ ಹಾಗೂ ಸರಬರಾಜು ಮಾಡಿರುವ ಊಟ/ತಿಂಡಿ/ಕಾಫೀ/ಟೀ ಹಾಗೂ ಇತರೆ ಪದಾರ್ಥಗಳ ನಿಖರತೆಯನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಹಾಗೂ ಟೆಂಡರ್ ಕರೆಯದೆ ಭಾಗಗಳಾಗಿ ಮಾಡಿ ಹಣ ಪಾವತಿಸಿರುವುದು ಕೆ.ಟಿ.ಪಿ.ಪಿ ನಿಯಮಗಳು 2000ಕ್ಕೆ ವಿರುದ್ಧವಾಗಿರುತ್ತದೆ. ಈ ಸಂಬಂಧ ಪೂರ್ಣ ಮಾಹಿತಿಯನ್ನು ನೀಡುವವರೆಗೆ ಪಾವತಿಸಿರುವ ಅನುಬಂಧ–47ರಲ್ಲಿ ತಿಳಿಸಿರುವಂತೆ ಒಟ್ಟು ಮೊತ್ತ ರೂ.14,22,698/–ಗಳನ್ನು ಆಕ್ಷೇಪಿಸಲಾಗಿದೆ.</td>
<td>ಅತ್ಯಂತ ತುರ್ತು ಸಂದರ್ಭಗಳಲ್ಲಿ ಕಾಫಿ/ಟೀ/ಊಟ/ತಿಂಡಿ/ಲಘು ಉಪಹಾರವನ್ನು ಸರಬರಾಜು ಮಾಡಲು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಮೆ॥ನವನೀತ್ ಕೇಟರರ್ಸ್, ಮೈಸೂರು ಇವರಿಗೆ ಆದೇಶ ನೀಡಲಾಗಿತ್ತು. ಕಾಲಾವಕಾಶವಿದ್ದಲ್ಲಿ ಕೊಟೇಷನ್ ಕರೆದು ಅತಿ ಕಡಿಮೆ ದರ ನಮೂದಿಸಿರುವ ಸರಬರಾಜುದಾರರಿಗೆ ಆದೇಶವನ್ನು ನೀಡಲಾಗುತ್ತಿತ್ತು. ಇನ್ನು ಮುಂದೆ ಕೆ.ಟಿ.ಪಿ.ಪಿ ನಿಯಮವನ್ನು ಪಾಲಿಸಲಾಗುವುದು ಎಂದು ತಿಳಿಸುತ್ತಾ ಆದೇಶದ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಿದೆ. ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.14,22,698/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.</td>
</tr>
<tr>
<td>61. <u>I.E.M (ಐಇಎಂ) ಸಂಸ್ಥೆಯವರಿಗೆ ಪರೀಕ್ಷಾ ಚಟುವಟಿಕೆ ಕಾರ್ಯಗಳಿಗಾಗಿ ಟೆಂಡರ್ ನಿಯಮ ಪಾಲಿಸದೆ ಪಾವತಿಸಿರುವುದು:– (ಹಣಕಾಸು ವಿಭಾಗ)</u><br>ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಕಾರ್ಯಗಳಿಗಾಗಿ ಅಂಕಪಟ್ಟಿ ಪರೀಕ್ಷಾ ಫಲಿತಾಂಶ ನೀಡಿಕೆ ಕುರಿತಂತೆ ತಂತ್ರಾಶ ಅಭಿವೃದ್ಧಿಪಡಿಸಲು ಏಪ್ರಿಲ್/ಮೇ–2014ರ ಪರೀಕ್ಷೆಗಳಿಂದ ಏಪ್ರಿಲ್/ಮೇ–2017ರವರೆಗೆ ಏಳು ಸೆಮಿಸ್ಟರ್ ಪರೀಕ್ಷೆಗಳ ಪರೀಕ್ಷಾ ಚಟುವಟಿಕೆಗಳನ್ನು ನಿರ್ವಹಿಸಲು M/S Institution of Engineering & Management, Thane, Maharastra (IEM) ಸಂಸ್ಥೆಯೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಒಡಂಬಡಿಕೆ (MOU) ಮಾಡಿಕೊಳ್ಳಲಾಗಿದೆ. 2015–16ನೇ ಸಾಲಿಗೆ ಮೇ/ಜೂನ್–2015 ರ ಪರೀಕ್ಷಾ ಚಟುವಟಿಕೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಿಸಿದ ಹುಂಡಿಯ ಮೊತ್ತ ರೂ.1,73,53,304/–ಗಳನ್ನು ಐಇಎಂ ಸಂಸ್ಥೆಯವರಿಗೆ ಪಾವತಿಸಲಾಗಿದೆ. ಕಡತವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳಿಗೆ ಸೂಕ್ತ ವಿವರಣೆಯನ್ನು ನೀಡಲು ಸೂಚಿಸಿದೆ. ಅಲ್ಲಿಯವರೆಗೆ ಸಂಸ್ಥೆಗೆ ಪಾವತಿಸಲಾದ ರೂ.1,73,53,304/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಹಾಗೂ,</td>
<td>ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಪವಿ/ಮಾವಿ/10/2013–14, ದಿನಾಂಕ:20.02.2014ರ ಅನ್ವಯದಂತೆ ಏಪ್ರಿಲ್/ಮೇ 2014ರ ಪರೀಕ್ಷೆ ಕಾರ್ಯ ಜಾರಿಗೆ ಬಂದಂತೆ ಏಪ್ರಿಲ್/ಮೇ 2017ರವರೆಗೆ 7 ಸೆಮಿಸ್ಟರ್ ಪರೀಕ್ಷಾ ಕಾರ್ಯ ಚಟಿವಟಿಕೆಗಳನ್ನು ಮೆ॥ Institution of Engineering & Management, ರವರು ಟೆಂಡರ್ ಷರತ್ತುಗಳು ಮತ್ತು ವಿಶ್ವವಿದ್ಯಾನಿಲಯದೊಡನೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರವಾಗಿ ಹೊರ ಗುತ್ತಿಗೆ ಕಾರ್ಯ ನಿರ್ವಹಿಸಲು ಕಾರ್ಯಾದೇಶ ನೀಡಲಾಗಿದೆ ಮತ್ತು ವಿಶ್ವವಿದ್ಯಾನಿಲಯವು ಮೆ॥ Institution of Engineering & Management, ಇವರೊಂದಿಗೆ ದಿನಾಂಕ:15.02.2014 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.<br><br>ಇವರಿಗೆ 4ಜಿ ವಿನಾಹಿತಿ ಇರುವುದಿಲ್ಲ. ಇವರು ಸಲ್ಲಿಸಿರುವ ಬಿಲ್ಲಿನಲ್ಲಿ ವ್ಯಾಟ್ ಸಂಖ್ಯೆ:27855244513–V ಅನ್ನು ನಮೂದಿಸಿದ್ದು ಸಂಸ್ಥೆಯವರೇ ಮಾರಾಟ ತೆರಿಗೆಯನ್ನು</td>
</tr>
</table>

| | |
|---|---|
| 1) ಕೆ.ಟಿ.ಪಿ.ಪಿ ನಿಯಮ–2000 KG-Section-4P–19 KG-4ರ ರೀತ್ಯಾ ಟೆಂಡರ್ ಕರಾರು ಆಗದೆ ಇರುವುದು ನಿಯಮಬಾಹಿರವಾಗಿದ್ದು, ಬದಲಾಗಿ MOU ಮಾಡಿಕೊಂಡಿರುವ ಬಗ್ಗೆ ಸ್ಪಷ್ಟೀಕರಣ ಕೋರಿದೆ. ಮತ್ತು ಸರ್ಕಾರದ ಚಾಲ್ತಿ ವರ್ಷದ 4 (ಜಿ) ವಿನಾಯಿತಿ ಪತ್ರದ ಆದೇಶದ ಪ್ರತಿಯನ್ನು ಒದಗಿಸುವಂತೆ ಕೋರಿದೆ.<br><br>**2)** ಟೆಂಡರ್ ಅಂದಾಜು ಮೊತ್ತ ರೂ.1.8ಕೋಟಿ ಪ್ರಕಟಣೆಗೊಂಡಿದ್ದು, ಪ್ರಕಟಣೆಯಲ್ಲಿ 7 ಸೆಮಿಸ್ಟರ್ ಅವಧಿಯನ್ನು ಹಾಗೂ ಪ್ರತ್ಯೇಕವಾಗಿ ಸೆಮಿಸ್ಟರ್‌ವಾರು ಎಷ್ಟು ಅಂದಾಜು ಮೊತ್ತ ಆಗುತ್ತೆಯೆಂದು ಕೆ.ಟಿ.ಪಿ.ಪಿ ನಿಯಮ–2000 ಟೆಂಡರ್ ನಿಯಮದ ಪ್ರಕಾರ ದಾಖಲಾಗಿರುವುದಿಲ್ಲ. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ–ಪವಿ/ಮಾವಿ/10/2013–14 ದಿನಾಂಕ:23.02.2014ರ ಪ್ರಕಾರ ರೂ.50.00 ಲಕ್ಷ Mobilization Fund ಪಾವತಿಸಲು ಮಂಜೂರಾತಿ ನೀಡಿದೆ. ಈ ಪಾವತಿಯು ಮುಂಗಡ ಪಾವತಿ ರೂ.50,00,000/–ಗಳಿಗೆ ರೂ.41,95,932/–ಗಳನ್ನು ಮಾತ್ರ ಬಿಲ್ಲುಗಳಲ್ಲಿ ಕಟಾಯಿಸಲಾಗಿದ್ದು, ಉಳಿಕೆ ರೂ.8,04,068/–ಗಳು ಬಾಕಿ ಇರುತ್ತದೆ. ನಿಯಮಾನುಸಾರ ಮುಂಗಡ ಪಾವತಿಯನ್ನು ಮುಂದಿನ ಬಿಲ್ಲುಗಳಲ್ಲಿ ತಕ್ಷಣವೇ ಕಟಾಯಿಸಬೇಕಾಗಿದ್ದು, ವಿಳಂಬವಾಗಿ ಕಡಿತಗೊಳಿಸುತ್ತಿರುವ ಬಗ್ಗೆ ವಿವರಣೆ ನೀಡಲು ಸೂಚಿಸಿದೆ. ಹಾಗೂ ಬಾಕಿ ಇರುವ ಮುಂಗಡದ ಮೊತ್ತ ರೂ.**8,04,068/–ಗಳನ್ನು ವಸೂಲಾತಿಗೆ ಸೂಚಿಸಿದೆ,** ಮತ್ತು ವಿಳಂಬದ ಅವಧಿಗೆ ಬಡ್ಡಿ ವಸೂಲಿಸುವಂತೆ ತಿಳಿಸಲಾಗಿದೆ. | ಪಾವತಿಸುತ್ತಾರೆ.<br><br>ಏಳು ಸೆಮಿಸ್ಟರ್‌ಗಳಿಗೂ ಒಟ್ಟಾರೆಯಾಗಿ ರೂ.1.80 ಕೋಟಿ ರೂಪಾಯಿಗಳನ್ನು ನಿಗದಿ ಪಡಿಸಲಾಗಿದೆ. ಒಂದು ವಿದ್ಯಾರ್ಥಿಗೆ ಹೊಸದಾಗಿ ಪರೀಕ್ಷೆ ತೆಗೆದುಕೊಳ್ಳುವವರಿಗೆ ಹಾಗೂ ರಿಪೀಟರ್ಸ್‌ಗೆ ಪ್ರತ್ಯೇಕವಾಗಿ ದರಗಳನ್ನು ನಿಗದಿ ಪಡಿಸಲಾಗಿದೆ, ಇದರಲ್ಲಿ ಸೆಮಿಸ್ಟರ್‌ಗೆ, ವಾರು ಮೊತ್ತ ನಿಗದಿ ಪಡಿಸಲು ಸಾಧ್ಯವಾಗಿರುವುದಿಲ್ಲ ಏಕೆಂದರೆ ಒಂದು ಸೆಮಿಸ್ಟರ್‌ಗೆ ಎಷ್ಟು ಜನ ರಿಪೀಟರ್ಸ್ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳುತ್ತಾರೆ ಎಂಬುದನ್ನು ಮುಂದಾಗಿಯೇ ತಿಳಿಯಲು ಸಾಧ್ಯವಾಗಿರುವುದಿಲ್ಲ.<br><br>ಸಂಸ್ಥೆಯವರಿಗೆ ಒಟ್ಟಾರೆ ನೀಡಲಾಗಿದ್ದ ಮೊಬಲೈಸೇಷನ್ ಮುಂಗಡದ ಮೊತ್ತ ರೂ.50,00,000/–ಗಳ ಪೈಕಿ; ಇದುವರೆಗೆ ರೂ.40,00,000/–ಗಳನ್ನು ಇವರ ಬಿಲ್ಲುಗಳಲ್ಲಿ ಕಡಿತಗೊಳಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿಕೊಳ್ಳಲಾಗಿದೆ. ಬಾಕಿ ಉಳಿದ ಮೊತ್ತ ರೂ.10,00,000/–ಗಳನ್ನು ಮುಂದಿನ ಬಿಲ್ಲು ಬಂದ ತಕ್ಷಣ ವಸೂಲಿಸಿ ಜಮೆ ಮಾಡಿಕೊಳ್ಳಲಾಗುವುದು.<br><br>ಸಂಸ್ಥೆಯೊಡನೆ ಮಾಡಿಕೊಂಡಿರುವ ಒಪ್ಪಂದದ ಪ್ರತಿ; ಬಿಲ್ಲು ಪ್ರತಿಗಳನ್ನು ಹಾಗೂ ರೂ.40,00,000/–ಗಳ ಮುಂಗಡ ಮೊತ್ತ ವಸೂಲಿಸಿ ಜಮೆ ಮಾಡಿಕೊಂಡಿರುವ ಚೆಲನ್ ಪ್ರತಿಗಳನ್ನು ಈ ಕೋಡ ಲಗತ್ತಿಸಿ ಸಲ್ಲಿಸುತ್ತಾ ರೂ.1,73,53,304/–ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **62. ಭದ್ರತಾ ಸಿಬ್ಬಂದಿಯ ನೇಮಕಾತಿ ಕುರಿತು ಟೆಂಡರ್ ಕಡತ ಪರಿಶೀಲನೆಯಲ್ಲಿ ಕಂಡು ಬಂದಿರುವ ನ್ಯೂನತೆಗಳು:– (ಹಣಕಾಸು ವಿಭಾಗ)**<br><br>2015–16ನೇ ಸಾಲಿನ ಅವಧಿಗೆ ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಅಧೀನ ಕಛೇರಿಗಳಿಗೆ ನೇಮಕ ಮಾಡಿಕೊಳ್ಳಲಾಗಿರುವ ಭದ್ರತಾ ಸಿಬ್ಬಂದಿ ನೇಮಕಾತಿಗೆ ಸಂಬಂಧಪಟ್ಟಂತೆ ಕರೆಯಲಾಗಿರುವ ಟೆಂಡರ್ ಪ್ರಕ್ರಿಯೆಯ ಕಡತವನ್ನು ಪರಿಶೀಲಿಸಲಾಗಿದ್ದು ಈ ಕೆಳಕಂಡ ಕೆಲವು ನ್ಯೂನತೆಗಳು ಕಂಡು ಬಂದಿರುತ್ತವೆ.<br>1. ದಿನಾಂಕ: 01.07.2014 ರಿಂದ 31.12.2014 ರವರೆಗಿನ ಅವಧಿಗೆ 150 ಜನ ಭದ್ರತಾ ಸಿಬ್ಬಂದಿಯವರನ್ನು ಟೆಂಡರ್ ಕರಾರಿನ ಕರಾರು ಕ್ರಮ ಸಂಖ್ಯೆ:23 ರನ್ವಯ ಭದ್ರತಾ ಸಿಬ್ಬಂದಿಯ ವೇತನ ದರ ರೂ.7,737.24ರ ದರದಂತೆ M/S Ranganatha Enterprises ಮೈಸೂರು | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ: 23.6.2014 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಮೆ॥ ಶ್ರೀ ರಂಗನಾಥ ಎಂಟರ್‌ಪ್ರೈಸಸ್ ಮೈಸುರು ರವರಿಗೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾಗಾರ್ಡ್‌ಗಳನ್ನು ಒದಗಿಸುವ ಸಂಬಂಧ ಹಾಗೂ ಪ್ರತಿ ಗಾರ್ಡ್‌ಗೆ ಸೇವಾ ತೆರಿಗೆ ಸೇರಿದಂತೆ ಮಾಹೆವಾರು ರೂ.7,737.24 ರಂತೆ ಪಾವತಿಸಲು ಕರಾರು ಒಪ್ಪಂದ ಮಾಡಿಕೊಂಡಿದ್ದು, ಕಾಲಕಾಲಕ್ಕೆ ಸರ್ಕಾರದ ಆರ್ಥಿಕ ಇಲಾಖೆ ಆದೇಶದಂತೆ ವೇತನ ಪರಿಷ್ಕರಣೆ ಅನ್ವಯ ಭದ್ರತಾ ಸಿಬ್ಬಂದಿಗೆ ವೇತನ ಪಾವತಿಸಲಾಗುತ್ತಿದೆ.<br>ಮೆ॥ ರಂಗನಾಥ ಎಂಟರ್‌ಪ್ರೈಸಸ್ ಮೈಸೂರು ಇವರಿಗೆ ಒಪ್ಪಂದದ ಪ್ರಕಾರ ಪ್ರತಿ |

ಇವರೊಂದಿಗೆ ಕರಾರು ಮಾಡಿಕೊಂಡಿರುತ್ತಾರೆ. ಆದರೆ ಸಿಬ್ಬಂದಿಯವರ ಮಾಹೆವಾರು ವೇತನದ ಧನಾದೇಶವನ್ನು ಸಂಸ್ಥೆಯವರಿಗೆ ನೀಡುವ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿಯವರ ನೌಕರರವಾರು EPF, ESI ಮುಂತಾದ ಸೌಲಭ್ಯಗಳನ್ನು ಜಮ ಮಾಡಿದ ಕುರಿತು ಸಂಬಂಧಿಸಿದ ಇಲಾಖೆಗಳಿಂದ ಪಡೆಯಲಾದ ವಿವರಣಾ ತಃಖ್ತೆಯನ್ನು ಚಲನ್‌ಗಳನ್ನು ಹಾಜರುಪಡಿಸಿರುವುದಿಲ್ಲ.

2. ಇದೇ ಸರಬರಾಜುದಾರರಾದ M/S Ranganatha Enterprises ಇವರಿಂದ 14–15ನೇ ಟೆಂಡರ್ ಅವಧಿ ಮುಗಿದ ನಂತರ ಪುನಃ ಇದೇ ಸಂಸ್ಥೆಯವರಿಂದ ದಿನಾಂಕ: 01.01.2015 ರಿಂದ 30.06.2015 ರವರೆಗೆ ಹೊಸ ಟೆಂಡರ್ ಕರೆಯದೇ ಇವರನ್ನೇ ಮುಂದುವರೆಸಿರುತ್ತಾರೆ. ಈ ರೀತಿ ಮುಂದುವರೆಸುವ ಸಂದರ್ಭದಲ್ಲಿ ಈ ಹಿಂದಿನ ಟೆಂಡರ್ ದರದಲ್ಲೇ ಸಿಬ್ಬಂದಿಯವರನ್ನು ಸರಬರಾಜು ಮಾಡುತ್ತೇವೆ ಎಂದು ಸಂಸ್ಥೆಯವರಿಂದ ಲಿಖಿತವಾಗಿ ಪಡೆದು ಸಿಬ್ಬಂದಿಯವರನ್ನು ಮುಂದುವರೆಸಬಹುದಾಗಿದೆ. ಇಲ್ಲದಿದ್ದ ಪಕ್ಷದಲ್ಲಿ ಹೊಸ ಟೆಂಡರ್ ಕರೆದು ಸಿಬ್ಬಂದಿಯವರನ್ನು ನೇಮಿಸಿಕೊಳ್ಳಬೇಕಾಗಿದೆ. ಆದರೆ ಹೊಸ ಟೆಂಡರ್ ಕರೆಯದೆ ಸಿಬ್ಬಂದಿಯವರನ್ನು 01.01.2015 ರಿಂದ 30.06.2015 ರವರೆಗೆ ರೂ.8862.32+250 W.A ಸೇರಿ 9112.32ರ ದರದಲ್ಲಿ 150 ಜನ ಭದ್ರತಾ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ಪ್ರಕ್ರಿಯೆಯು ನಿಯಮಬಾಹಿರವಾಗಿದೆ.

3. ಕಾರ್ಮಿಕ ಇಲಾಖೆಯಿಂದ ಪ್ರಕಟವಾಗುವ DA ಮತ್ತು ಇತರೆ ಭತ್ಯೆಗಳನ್ನು ಪರಿಷ್ಕೃತಗೊಳಿಸಿದ್ದಲ್ಲಿ ಕರಾರುವಿನ ಸಂದರ್ಭದಲ್ಲಿ ಸರಬರಾಜು ಸಂಸ್ಥೆಯವರು ಆಯಾ ಕಾಲಕ್ಕನುಸಾರವಾಗಿ ಕಾರ್ಮಿಕ ಇಲಾಖೆಯಿಂದ ಪ್ರಕಟವಾಗುವ ಪರಿಷ್ಕೃತ ದರಗಳನ್ನು ಪಾವತಿಸಬೇಕಾಗುತ್ತದೆ ಎಂದು ಕರಾರು ಪತ್ರದಲ್ಲಿ ನಮೂದಿಸಬೇಕು.ಆದರೆ ಕರಾರುವಿನಲ್ಲಿ ಈ ನಿಬಂಧನೆಯನ್ನು ನಮೂದಿಸಿರುವುದಿಲ್ಲ.

4. ಯಾವುದೇ ಪ್ರಕಾರದ ಪರಿಷ್ಕೃತ ದರಗಳನ್ನು ಪಾವತಿಸುವ ಪೂರ್ವಾನ್ವಯವಾಗಿ ಸಿಂಡಿಕೇಟ್ ಅನುಮೋದನೆಯನ್ನು ಪಡೆದು ಪಾವತಿಸಬೇಕಾಗಿರುತ್ತದೆ. ಸಿಂಡಿಕೇಟ್ ಒಪ್ಪಿಗೆಯ ತೀರ್ಮಾನವನ್ನು ಸರ್ಕಾರದ ಗಮನಕ್ಕೆ ತಂದು ಅನುಮೋದನೆ ಪಡೆಯಬೇಕಾಗಿರುತ್ತದೆ. ಆದರೆ ಈ ಕ್ರಮವನ್ನು ಸಹ ಅನುಸರಿಸದೆ ಇರುವುದು ಕಂಡುಬಂದಿದೆ.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ತಾತ್ಕಾಲಿಕವಾಗಿ ಭದ್ರತಾಸೇವೆಯನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಜಿಎಲ್7/32/2015–16 ದಿ: 13.07.2015 ರಲ್ಲಿ ಹಾಲಿ ಭದ್ರತಾ ಸೇವೆಯನ್ನು ಒದಗಿಸುತ್ತಿರುವ ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ದಿನಾಂಕ:01.07.2015 ರಿಂದ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ಮುಂದುವರೆಸಲು ಅನುಮತಿಯನ್ನು ನೀಡಲಾಗಿದೆ.

ಗಾರ್ಡ್‌ಗೆ ರೂ.7,737.24ಗಳನ್ನು ಪಾವತಿಸಬೇಕಿತ್ತು.

ಆದರೆ 2014–15ರ ಸಾಲಿಗೆ 705 ಗ್ರಾಹಕ ಸೂಚ್ಯಾಂಕ ಅಂಶಗಳ ಏರಿಕೆಯಾಗಿ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಸಹಾಯಕ ಆಯುಕ್ತರು ತಮ್ಮ ಪತ್ರ ಸಂಖ್ಯೆ ಸಕಾಆಮೈ/4/ಇತರೆ–1/2014–15 ದಿನಾಂಕ 22.04.2014 ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರ ಪತ್ರ ದಿನಾಂಕ 07.06.2014 ರನ್ವಯ ಭದ್ರತಾ ಗಾರ್ಡ್‌ಗೆ ಪರಿಷ್ಕೃತ ದರ ರೂ8,862.30 ಮತ್ತು ವಾಷಿಂಗ್ ಅಲೋಯೆನ್ಸ್ ರೂ250.00 ಗಳೂ ಸೇರಿದಂತೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್7/131/2014–15 ದಿನಾಂಕ 16.08.2014ರ ಮೇರೆಗೆ ಪ್ರತಿ ಗಾರ್ಡ್‌ಗೆ ರೂ9112.32ರ ದರದಂತೆ ವೇತನ ಲೆಕ್ಕ ಹಾಕಿ ಮೆ॥ಶ್ರೀ ರಂಗನಾಥ ಎಂಟರ್‌ಪ್ರೈಸಸ್ ರವರಿಗೆ ಪಾವತಿಸಿದೆ.

ಭದ್ರತಾ ಸಿಬ್ಬಂದಿಗೆ ಸರ್ಕಾರದ ಕಾರ್ಮಿಕ ಇಲಾಖೆಯು ನಿಗದಿಪಡಿಸಿದ ದರದಲ್ಲಿ ವೇತನ ನಿಗದಿಪಡಿಸಿ ಪಾವತಿಸಿರುವುದರಿಂದ ಮತ್ತೊಮ್ಮೆ ಟೆಂಡರ್ ಕರೆದು ದರ ನಿಗದಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲವಾದ್ದರಿಂದ ಮೆ॥ಶ್ರೀ ರಂಗನಾಥ ಎಂಟರ್‌ಪ್ರೈಸಸ್ ರವರನ್ನೇ ಮುಂದುವರಿಸಿದೆ.

ಹಾಗೂ ಇವರು ಪ್ರತಿ ಮಾಹೆಯಲ್ಲೂ ಕ್ಲೇಮ್ ಮಾಡುತ್ತಿರುವ ಬಿಲ್ಲಿನಲ್ಲಿ ಇ.ಎಸ್.ಐ/ ಇ.ಪಿ.ಎಫ್ ಮೊತ್ತಗಳನ್ನು ಕಟಾಯಿಸಿ ಆಯಾ ಖಾತೆಗಳಿಗೆ ಜಮೆ ಮಾಡಲಾಗುತ್ತಿದೆ. ಲೆಕ್ಕ ತನಿಖಾ ಸಮಯದಲ್ಲಿ ಬಿಲ್ಲುಗಳು ಹಾಗೂ ಇತರೆ ದಾಖಲಾತಿಗಳನ್ನು ಒದಗಿಸಲಾಗಿತ್ತು.

ಆದ್ದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

| | |
|---|---|
| ಹಾಗೂ ಈ ಸಂಬಂಧ ಜುಲೈ–2015ರ ಮಾಹೆಯಿಂದ ಫೆಬ್ರವರಿ–2016ರ ಮಾಹೆಯವರೆಗೆ 2015–16 ನೇ ಸಾಲಿಗೆ ಒಟ್ಟು ರೂ.1,09,34,784/–ಗಳನ್ನು ಸಂಸ್ಥೆಯವರಿಗೆ ಮಾಹೆಯಾನ 150 ಮಂದಿ ಭದ್ರತಾ ಸಿಬ್ಬಂದಿಗಳ ವೇತನವನ್ನು ಪಾವತಿಸಲಾಗಿದೆ.<br><br>ನಿಗದಿತ ಗುತ್ತಿಗೆ ಅವಧಿ ಪೂರ್ಣಗೊಂಡ ನಂತರ ಕೆ.ಟಿ.ಪಿ.ಪಿ–ಕಾಯ್ದೆ 1999/2000ರ ಪ್ರಕಾರ ಹೊಸದಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಭದ್ರತಾ ಸೇವೆ ಪಡೆಯಬೇಕಾಗಿರುತ್ತದೆ. ಆದರೆ ಸದರಿ ಪ್ರಕರಣದಲ್ಲಿ ಟೆಂಡರ್ ಕರೆಯದೆ 2015–16ನೇ ಸಾಲಿನಲ್ಲಿ ಹಿಂದಿನ ಸೇವೆಯನ್ನು ಮುಂದುವರೆಸಿರುವುದು ನಿಯಮಬಾಹಿರ ಕ್ರಮವಾಗಿರುತ್ತದೆ. ಟೆಂಡರ್ ಕರೆಯದೆ ಹಿಂದಿನ ಟೆಂಡರ್‌ದಾರರನ್ನು ಮುಂದುವರೆಸಿರುವ ಬಗ್ಗೆ ಸೂಕ್ತ ವಿವರಣೆ ನೀಡುವವರೆಗೆ ಪಾವತಿಸಲಾದ ಮೊಬಲಗು **ರೂ.1,09,34,784/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು **ಅನುಬಂಧ–48** ರಲ್ಲಿ ನೀಡಲಾಗಿದೆ. | |
| **63. ಕೆ.ಟಿ.ಪಿ.ಪಿ ನಿಯಮವನ್ನು ಮೀರಿ ಶ್ರೀ ರಜತ್ ಸೇಲ್ಸ್ ಏಜೆನ್ಸೀಸ್ ಮೈಸೂರುರವರಿಗೆ ಪಾವತಿಸಿರುವ ಕುರಿತು :– (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ F&R ಖಾತೆಗೆ ಸಂಬಂಧಿಸಿದಂತೆ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಿರುವ ಲೇಖನ ಸಾಮಗ್ರಿಗಳನ್ನು ಖರೀದಿಸಿದ ಬಾಬ್ತು ಶ್ರೀ ರಜತ್ ಸೇಲ್ಸ್ ಏಜೆನ್ಸೀಸ್, ಮೈಸೂರು ರವರಿಗೆ ಒಟ್ಟು ರೂ.1,67,645/–ಗಳನ್ನು ಧನಾದೇಶ ಸಂಖ್ಯೆ:523258/– ದಿನಾಂಕ:28.01.2016ರಲ್ಲಿ ಪಾವತಿಸಿರುವುದು ಕಂಡುಬಂದಿರುತ್ತದೆ. ಸದರಿ ಸಾಮಗ್ರಿಗಳ ಖರೀದಿಗಾಗಿ ಪ್ರಸಕ್ತ ವರ್ಷ ಟೆಂಡರ್ ಕರೆಯದೆ ವಿಶ್ವವಿದ್ಯಾನಿಲಯದ ಟೆಂಡರ್ ಪ್ರಕಟಣೆ ಸಂಖ್ಯೆ:ಜಿಎಲ್6/134/2006–07 ದಿನಾಂಕ:16.01.2014ರಂತೆ 2014–15ನೇ ಸಾಲಿನಲ್ಲಿ ಅನುಮೋದನೆ ಆಗಿರುವ ಸಂಸ್ಥೆಯನ್ನೇ 2015–16ನೇ ಸಾಲಿನಲ್ಲೂ ಮುಂದುವರೆಸಿರುವುದು ಕೆ.ಟಿ.ಪಿ.ಪಿ ನಿಯಮ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ ವಿಚಾರಣೆ ಸಂಖ್ಯೆ:82/21.12.2017ರಲ್ಲಿ ಸೂಕ್ತ ವಿವರಣೆ ನೀಡಲು ಕೋರಲಾಗಿತ್ತು. ಲೇಖನ ಸಾಮಗ್ರಿಗಳ ಖರೀದಿಯಲ್ಲಿ ಕೆ.ಟಿ.ಪಿ.ಪಿ ನಿಯಮ ಪಾಲಿಸದಿರುವುದರಿಂದ ರಜತ್ ಸೇಲ್ಸ್ ಏಜೆನ್ಸೀಸ್, ಮೈಸೂರು ರವರಿಗೆ ಪಾವತಿಸಲಾಗಿರುವ ಮೊತ್ತ **ರೂ.1,67,645/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು **ಅನುಬಂಧ–49ರಲ್ಲಿ** ನೀಡಿದೆ. | ವಿಶ್ವವಿದ್ಯಾನಿಲಯದ ಟೆಂಡರ್ ಪ್ರಕಟಣೆ ಸಂಖ್ಯೆ :ಜಿಎಲ್6/134/2006–07 ದಿನಾಂಕ:07.10.2013ರ ಅನ್ವಯ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು/ ಕಛೇರಿಗಳು/ ಕಾಲೇಜುಗಳು ಹಾಗೂ ಎಲ್ಲಾ ಅಂಗ ಸಂಸ್ಥೆಗಳಿಗೂ ಸೇರಿದಂತೆ ಅವಶ್ಯಕ ಲೇಖನ ಸಾಮಾಗ್ರಿ ಖರೀದಿಸಲು ನಿಯಮಾನುಸಾರ ಟೆಂಡರ್ ಕರೆದು ಅತೀ ಕಡಿಮೆ ದರ ನಮೂದಿಸಿದ್ದ ಮೆ॥ ಶ್ರೀ ರಜತ್ ಸೇಲ್ಸ್ ಏಜೆನ್ಸೀಸ್, ಮೈಸೂರು ಇವರ ದರವನ್ನು ಅಂಗೀಕರಿಸಿ ಆದೇಶ ನೀಡಲಾಗಿರುತ್ತದೆ. ಸದರಿ ಆದೇಶದಲ್ಲಿ ಮೇಲಿನ ಅನುಮೋದಿತ ದರವು ಒಂದು ವರ್ಷದವರೆಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಚಾಲ್ತಿಯಲ್ಲಿರುತ್ತದೆ ಎಂಬುದಾಗಿ ತಿಳಿಸಿದೆ.<br><br>ಆದ್ದರಿಂದ 2014–15 ಮತ್ತು 2015–16ರ ಸಾಲಿನಲ್ಲೂ ಸದರಿ ಅನುಮೋದಿತ ದರದಲ್ಲೇ ಲೇಖನ ಸಾಮಾಗ್ರಿಗಳನ್ನು ಖರೀದಿಸಿದೆ. ಆದ್ದರಿಂದ **ರೂ.1,67,645/–ಗಳನ್ನು** ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **64. ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ E-procurement ಮೂಲಕ ಟೆಂಡರ್ ಕರೆಯದೇ ಪೂಜಾ ಫರ್ನಿಚರ್ಸ್, ಮೈಸೂರುರವರಿಗೆ ಪಾವತಿಸಿರುವ ಕುರಿತು :– (ಹಣಕಾಸು ವಿಭಾಗ)** | |

| | |
|---|---|
| ಮೈಸೂರು ವಿಶ್ವವಿದ್ಯಾನಿಲಯದ 95ನೇ ಘಟಿಕೋತ್ಸವ ಸಮಾರಂಭಕ್ಕೆ ಪೆಂಡಾಲ್, ಲೈಟಿಂಗ್ಸ್, ಸೌಂಡ್ ಸಿಸ್ಟಂ ಇತ್ಯಾದಿಗಳನ್ನು ಸರಬರಾಜು ಮಾಡಿರುವ ಬಾಬ್ತು ಪೂಜಾ ಫರ್ನಿಚರ್ಸ್, ಮೈಸೂರು ರವರಿಗೆ ಚೆಕ್ ಸಂಖ್ಯೆ:523603/04.03.2016ರಲ್ಲಿ ಒಟ್ಟು ರೂ.5,82,984/-ಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. (ವಿವರವನ್ನು **ಅನುಬಂಧ-50ರಲ್ಲಿ** ನೀಡಿದೆ). ಕೆ.ಟಿ.ಪಿ.ಪಿ ನಿಯಮದನ್ವಯ ರೂ.5.00 ಲಕ್ಷಕ್ಕೂ ಮೇಲ್ಪಟ್ಟ ಸಾಮಗ್ರಿ ಸೇವೆಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಬೇಕಿರುತ್ತದೆ. ಸದರಿ ನಿಯಮವನ್ನು ಪಾಲಿಸದೆ ಮೊತ್ತವನ್ನು ವಿಭಜಿಸಿ (Split) ಕೇವಲ ದರಪಟ್ಟಿ ಕರೆದು ಮೇಲ್ಕಂಡ ಮೊತ್ತವನ್ನು ಪಾವತಿಸಿರುವ ಬಗ್ಗೆ ವಿಚಾರಣೆ ಸಂಖ್ಯೆ:133/09.01.2018ರಲ್ಲಿ ಸೂಕ್ತ ವಿವರಣೆಯನ್ನು ಲೆಕ್ಕತನಿಖೆಗೆ ಒದಗಿಸಲು ಕೋರಲಾಗಿತ್ತು. ಇದುವರೆವಿಗೂ ಯಾವುದೇ ವಿವರಣೆಯನ್ನು ಲೆಕ್ಕತನಿಖೆಗೆ ಒದಗಿಸದಿರುವುದರಿಂದ ನಿಯಮವನ್ನು ಉಲ್ಲಂಘಿಸಿ ಪೂಜಾ ಫರ್ನಿಚರ್ಸ್, ಮೈಸೂರು ರವರಿಗೆ ಪಾವತಿಸಲಾಗಿರುವ ಒಟ್ಟು **ರೂ.5,82,984/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಮೈಸೂರು ವಿಶ್ವವಿದ್ಯಾನಿಲಯದ 95ನೇ ಘಟಿಕೋತ್ಸವ ಸಮಾರಂಭಕ್ಕೆ ಅವಶ್ಯಕವಿದ್ದ ಪೆಂಡಾಲ್, ಲೈಟಿಂಗ್ಸ್, ಸೌಂಡ್ ಸಿಸ್ಟಂ ಇತ್ಯಾದಿಗಳನ್ನು ನಿಗದಿತ ಸ್ಥಳಗಳಲ್ಲಿ ಅಳವಡಿಸುವ ಸಲುವಾಗಿ ವಿವಿಧ ಸಂಸ್ಥೆಗಳಿಂದ ದರಪಟ್ಟಿಗಳನ್ನು ಕರೆದು ಕಡಿಮೆ ದರ ನಮೂದಿಸಿದ್ದ ಮೆ॥ ಪೂಜಾ ಫರ್ನಿಚರ್ಸ್, ಮೈಸೂರು ಇವರ ದರವನ್ನು ಅಂಗೀಕರಿಸಲಾಯಿತು. ಕೆ.ಟಿ.ಪಿ.ಪಿ ನಿಯಮ ಅನುಸರಿಸಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು ನಿರ್ವಹಿಸಲು ಸಾಕಷ್ಟು ಸಮಯಾವಕಾಶ ಇಲ್ಲದಿದ್ದ ಕಾರಣ ಕೊಟೇಶನ್ ಕರೆದು ನಿರ್ವಹಿಸಲಾಗಿರುತ್ತದೆ. |
| **66. ಒಂದೇ ಕಾರ್ಯಕ್ರಮಕ್ಕೆ ಬೇಕಾದ ಸಾಮಾಗ್ರಿಗಳು/ಪದಾರ್ಥಗಳನ್ನು ಭಾಗಗಳಾಗಿ ವಿಂಗಡಿಸಿ ಟೆಂಡರ್ ಕರೆಯದೆ ದರಪಟ್ಟಿಗಳ ಮೂಲಕ ಖರೀದಿ ಪಡೆದಿರುವುದು :- (ಹಣಕಾಸು ವಿಭಾಗ)**<br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:17.04.2015ರಂದು ನಡೆದಿರುವ 95ನೇ ವಾರ್ಷಿಕ ಘಟಿಕೋತ್ಸವದ ಪ್ರಯುಕ್ತ ವಿವಿಧ ಸಂಸ್ಥೆಗಳಿಗೆ ಹಣವನ್ನು ಪಾವತಿಸಲಾಗಿದೆ. ಹಲವು ಸಂಸ್ಥೆಗಳಿಗೆ ಬಿಲ್ಲುಗಳನ್ನು ಭಾಗಗಳಾಗಿ ವಿಂಗಡಿಸಿ ನಂತರ ರೂ ಒಂದು ಲಕ್ಷಗಳಿಗಿಂತ ಹೆಚ್ಚಿಗೆ ಮೊತ್ತವನ್ನು ಪಾವತಿಸಲಾಗಿದೆ. ಹೀಗೆ ಒಂದೇ ಕಾರ್ಯಕ್ರಮವನ್ನು ವಿವಿಧ ಭಾಗಗಳಾಗಿ (ಒಂದೇ ತೆರನಾದ ಕಾರ್ಯಗಳನ್ನು) ವಿಂಗಡಿಸಿ ತಮ್ಮ ಅಧಿಕಾರದ ವ್ಯಾಪ್ತಿಗೆ ಬರುವಂತೆ ಒಂದು ಲಕ್ಷದ ಒಳಗೆ ದರಪಟ್ಟಿಗಳನ್ನು (ಕೊಟೇಷನ್) ಕರೆದು ಪಾವತಿಸಿರುವುದು ನಿಯಮಬಾಹಿರ ಟೆಂಡರ್ ಕರೆಯದೆ ಕೆ.ಟಿ.ಪಿ.ಪಿ ನಿಯಮಗಳಿಗೆ ವಿರುದ್ಧವಾಗಿ ಭಾಗಗಳಾಗಿ ಮಾಡಿರುವುದು ಕ್ರಮಬದ್ದವಲ್ಲ ಹಲವಾರು ಪ್ರಕರಣಗಳಲ್ಲಿ ದರಪಟ್ಟಿಗಳಲ್ಲಿ ವ್ಯಾಟ್ ಸೇರಿ ಅನುಮೋದನೆಯಾಗಿದ್ದರೆ ಪ್ರತ್ಯೇಕವಾಗಿ ವ್ಯಾಟ್ ಸೇರಿಸಿ ಹೆಚ್ಚುವರಿಯಾಗಿ ಪಾವತಿಸಿರುವುದು ಕಂಡುಬಂದಿದೆ. ಅವುಗಳ ಒಟ್ಟು ಮೊತ್ತ ರೂ.8,903/-ಗಳಾಗಿವೆ. ಸದರಿ ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆಗಳಿಂದ ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಲು ಕ್ರಮವಹಿಸಲು ಸೂಚಿಸಲಾಗಿದೆ.<br>ದರಪಟ್ಟಿಗಳನ್ನು ಕೆ.ಕ್ಯೂ1ರ ನಮೂನೆಯಲ್ಲಿ ಕರೆದಿರುವ ಮಾಹಿತಿಯಲ್ಲಿ ಖರೀದಿಸಿರುವ ಸಾಮಗ್ರಿಗಳನ್ನು ದಾಸ್ತಾನಿಗೆ ತೆಗೆದುಕೊಂಡಿರುವ ಮಾಹಿತಿ ಹಾಗೂ ವಿತರಣೆಯ ಮಾಹಿತಿ ಸೇವೆಯನ್ನು ತೃಪ್ತಿರವಾಗಿ ನೀಡಿರುವ ಮಾಹಿತಿ ಹಾಗೂ ಇತರೆ ಹಲವಾರು ವಿಷಯಗಳ ಪೂರ್ಣ ವಿವರಗಳನ್ನು ನೀಡಲು ಕೋರಿ, ಆಡಿಟ್ ವಿಚಾರಣಾ ಪತ್ರ ಸಂಖ್ಯೆ:128/2017-18, ದಿನಾಂಕ:08.01.2018, ವಿಚಾರಣೆ ಪತ್ರ | ಈ ಕಂಡಿಕೆಗೆ ಸಂಬಂಧಿಸಿದಂತೆ ಅನುಬಂಧ (51)ರಲಿ ತಿಳಿಸಿರುವ ಸಾಮಾಗ್ರಿಗಳು ಅಂದರೆ ಬ್ರೋಚರ್ಸ್ ಬಹುಮಾನ ಪ್ರಮಾಣ ಪತ್ರಗಳು ಆಹ್ವಾನ ಪತ್ರಿಕೆ; ಔತಣ ಕೂಟ ಚಿತ್ರೀಕರಣ, ಏಲಕ್ಕಿ ಹಾರ ಖರೀದಿ, ಹೂವಿನ ಹಾರ, ಶಾಲು, ಪೇಟ, ಡ್ರೈ ಫ್ರೂಟ್ಸ್; ನೀರಿನ ಬಾಟಲಿಗಳು, ಬೊಕ್ಕೆಗಳು, ಕಾಫಿ, ಟೀ, ಕೇಕ್ಸ್, ಬನಾನ ಚಿಪ್ಸ್; ಈ ರೀತಿ ಎಲ್ಲವೂ ವಿವಿಧ ಸಾಮಾಗ್ರಿಗಳಾಗಿರುತ್ತದೆ. ಇವುಗಳೆಲ್ಲವನ್ನು ಆಯಾ ಸಂಸ್ಥೆಗಳಿಂದ ದರಪಟ್ಟಿ ಕರೆದು ಕಡಿಮೆ ದರ ನಮೂದಿಸಿರುವುದನ್ನು ಅನುಮೋದಿಸಿಕೊಂಡ ನಂತರವೇ ಇವುಗಳನ್ನು ಖರೀದಿಸಲಾಗಿದೆ. ಇವೆಲ್ಲವೂ ಒಂದೇ ಸಂಸ್ಥೆ/ಅಂಗಡಿಗಳಿಂದ ಸಿಗುವಂತಹವುಗಳಾಗಿರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸುತ್ತಾ: ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

| | |
|---|---|
| ಸಂಖ್ಯೆ:156/2017–18, ದಿನಾಂಕ:19.01.2018 ಹಾಗೂ 181/217–18 ದಿನಾಂಕ:27.01.2018ರಲ್ಲಿ ತಿಳಿಸಲಾಗಿತ್ತು. ಆದರೆ ಯಾವುದೇ ಮಾಹಿತಿಗಳನ್ನು ಪೂರಕ ದಾಖಲಾತಿಗಳೊಂದಿಗೆ ಲಿಖಿತವಾಗಿ ನೀಡಿರುವುದಿಲ್ಲ.<br><br>ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವವು ಪ್ರತಿ ವರ್ಷ ನಡೆಯುವ ಪ್ರಕ್ರಿಯೆಯಾಗಿದ್ದು, ಇಂತಹ ಕಾರ್ಯಕ್ಕೆ ಟೆಂಡರ್ ಕರೆಯದೆ ದರಪಟ್ಟಿಗಳನ್ನು ಮೂಲಕ ಕೆಕ್ಯೂ1ರ ನಮೂನೆಯಲ್ಲಿ ಕರೆಯದೆ ಮಾಹಿತಿಗಳನ್ನು ನೀಡದ ಹಿನ್ನೆಲೆಯಲ್ಲಿ ಪಾವತಿಗಳ ಸತ್ಯಾಸತ್ಯತೆಗಳನ್ನು ತಿಳಿಯಲು ಸಾಧ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪೂರ್ಣ ಮಾಹಿತಿಯನ್ನು ನೀಡುವವರೆಗೆ ಇದಕ್ಕಾಗಿ ಪಾವತಿಸಿರುವ ಒಟ್ಟು ಮೊತ್ತ **ರೂ.5,62,849/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ** ಹಾಗೂ ಹೆಚ್ಚುವರಿಯಾಗಿ ಪಾವತಿಸಿರುವ ವ್ಯಾಟ್ ಬಾಬ್ತು **ರೂ.8,903/–ಗಳನ್ನು ವಸೂಲಾತಿಗೆ** ಸೂಚಿಸಲಾಗಿದೆ. (ಆಕ್ಷೇಪಣೆ ಮೊತ್ತ ರೂ.5,62,849 + ವಸೂಲಾತಿ ಮೊತ್ತ ರೂ.8,903 = 5,71,752/–) ವಿವರಗಳನ್ನು **ಅನುಬಂಧ–51ರಲ್ಲಿ** ನೀಡಲಾಗಿದೆ. | |
| **67. ಕೊಟೇಷನ್‌ಗಳನ್ನು ಪಡೆಯದೆ ಖರೀದಿ ಪ್ರಕ್ರಿಯೆ ಕೈಗೊಂಡಿರುವುದು:– (ಹಣಕಾಸು ವಿಭಾಗ)**<br><br>2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಸಾಮಾನ್ಯ ಖಾತೆಯ ಆಗಸ್ಟ್ 2015 ರಿಂದ ಜನವರಿ 2016ರವರೆಗಿನ ವೆಚ್ಚಭರಿಸಿರುವ ಓಚರ್‌ಗಳನ್ನು ಪರಿಶೀಲಿಸಲಾಗಿ, ವಿವಿಧ ಸಾಮಾಗ್ರಿಗಳ ಖರೀದಿಯಲ್ಲಿ ರೂ.5,000/– ಕ್ಕಿಂತ ಹೆಚ್ಚು ರೂ.1,00,000/– ಕ್ಕಿಂತ ಕಡಿಮೆ ಮೊತ್ತದವರೆಗೆ ಸರ್ಕಾರಿ ಆದೇಶ ಸಂಖ್ಯೆ:ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ರವರ ಸಂಖ್ಯೆ:ಆಇ1/ಟಿಸಿಇ/2012/ಬೆಂ/21.06.2012 ರನ್ವಯ ಕನಿಷ್ಠ ಮೂರು (3) ಸಂಸ್ಥೆಗಳಿಂದ ದರಪಟ್ಟಿಗಳನ್ನು ಪಡೆದು ಕನಿಷ್ಠ ದರ ನಮೂದಿಸಿರುವ ಸಂಸ್ಥೆಯಿಂದ ಖರೀದಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ. **ಅನುಬಂಧ–52ರಲ್ಲಿ** ವಿವಿಧ ಸಾಮಾಗ್ರಿಗಳ ಖರೀದಿ ಕೈಗೊಂಡು ರೂ. **33,35,635/–**ಗಳನ್ನು ಪಾವತಿಸಿದ್ದು, ಸದರಿ ಪಾವತಿಗೆ ಸಂಬಂಧಿಸಿದಂತೆ, ದರಪಟ್ಟಿಗಳನ್ನು ಹಾಜರುಪಡಿಸುವಂತೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:162/22.01.2018ರಲ್ಲಿ ಕೋರಲಾಗಿದ್ದು, ದರಪಟ್ಟಿಗಳನ್ನು ಕರೆದಿರುವ ಕಡತಗಳನ್ನು ಹಾಜರುಪಡಿಸದಿರುವುದರಿಂದ **ರೂ.33,35,635/– ಗಳನ್ನು ಆಕ್ಷೇಪಿಸಲಾಗಿದ್ದು**, ವಿವರಗಳನ್ನು **ಅನುಬಂಧ–52ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ಈ ಎಲ್ಲಾ ಸಾಮಾಗ್ರಿಗಳ ಖರೀದಿಗಳೂ ವಿವಿಧ ಅಂಗ ಸಂಸ್ಥೆಗಳಿಗೆ ಸಂಬಂಧಿಸಿದವುಗಳಾಗಿದ್ದು; ಎಲ್ಲಾ ಪ್ರಕರಣಗಳಲ್ಲೂ ನಿಯಮಾನುಸಾರ ದರಪಟ್ಟಿ ಕರೆದು ಕಡಿಮೆ ದರ ನಮೂದಿಸಿದ್ದ ಸಂಸ್ಥೆಗಳ ದರಗಳನ್ನು ಅನುಮೋದಿಸಿಕೊಂಡು ಮತ್ತು ಈ ಸಂಬಂಧ ವಿ.ವಿ.ನಿಲಯದ ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರವೇ ಸಾಮಾಗ್ರಿಗಳನ್ನು ಖರೀದಿಸಲಾಗಿದೆ. ವಿವಿದ ಸಂಸ್ಥೆಗಳ ಕಡಿಮೆ ದರ ಅಂಗೀಕರಿಸಿ ನೀಡಿರುವ ಆದೇಶದ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ: ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ. |
| **68. ಕೆ.ಟಿ.ಪಿ.ಪಿ ಕಾಯ್ದೆ 2000 ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಕೈಗೊಳ್ಳದೆ M/s ಕಾವೇರಿ ಟೂರ್ಸ್ & ಟ್ರಾವೆಲ್ಸ್ ರವರಿಂದ ವಾಹನಗಳನ್ನು ಬಾಡಿಗೆಗೆ ಪಡೆದಿರುವುದು:– (ಪರೀಕ್ಷಾ ವಿಭಾಗ)**<br><br>2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಪರೀಕ್ಷಾಂಗ ಖಾತೆಯ ಓಚರ್‌ಗಳನ್ನು ಪರಿಶೀಲಿಸಲಾಗಿ, | ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಹಾಗೂ ಇನ್ನಿತರ ಕಾರ್ಯಗಳಿಗೆ ವಾಹನಗಳನ್ನು ಒದಗಿಸುವ ಸಂಬಂಧ ನಿಯಮಾನುಸಾರ ಟೆಂಡರ್ ಕರೆದು ಕಡಿಮೆ ದರ ನಮೂದಿಸಿದ ಮೆ॥ |

ಈ ಕೆಳಕಂಡ ವಿವರದಂತೆ ವಾಹನ ಬಾಡಿಗೆಗೆ ಪಡೆದು ಹಣ ಪಾವತಿಸಲಾಗಿದೆ.

| **ಕ್ರ ಸಂ** | **ಬಿ.ಆರ್.ಸಂಖ್ಯೆ/ ದಿನಾಂಕ** | **ಧನಾದೇಶ ಸಂಖ್ಯೆ/ ದಿನಾಂಕ** | **ಮೊತ್ತ** |
|---|---|---|---|
| 1 | 93/843/07.07.15 | 520842 | 9,86,260 |
| 2 | | 523238 22.01.2016 | 3,58,664 |
| 3 | 242/27.01.16 | 523669 | 7,30,185 |
| 4 | 303/04.03.16 | 524244 10.05.2016 | 41,782 |
| | | **ಒಟ್ಟು ಮೊತ್ತ ರೂ.** | **21,16,891** |

ಮೆ॥ ಕಾವೇರಿ ಟೂರ್ಸ್ & ಟ್ರಾವೆಲ್ಸ್ ರವರಿಂದ ಪರೀಕ್ಷಾ ಕಾರ್ಯಗಳಿಗೆ ವಾಹನಗಳನ್ನು ಬಾಡಿಗೆಗೆ ಪಡೆದು, ಒಟ್ಟು ಮೊತ್ತ ರೂ.21,16,891/–ಗಳನ್ನು ಪಾವತಿಸಿದ್ದು, ಕೆ.ಟಿ.ಪಿ.ಪಿ ಕಾಯ್ದೆ:2000ರ ಕಲಂ 5ರ ನಿಯಮ 4(ಇ) ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡು L1 ಬಿಡ್ಡುದಾರರಿಂದ ಕರಾರು ಮಾಡಿಕೊಂಡು ವಾಹನಗಳನ್ನು ಬಾಡಿಗೆಗೆ ಪಡೆದಿರುವ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:9/07.02.2018 ಮತ್ತು ಲೆಕ್ಕಪತ್ರ ವಿಚಾರಣೆ ಸಂಖ್ಯೆ:19/15.02.2018ರಲ್ಲಿಯೂ ಕೋರಲಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದಿಲ್ಲ. ಕೆ.ಟಿ.ಪಿ.ಪಿ ಕಾಯ್ದೆ 2000ರ ಕಲಂ 5ರ ನಿಯಮ 4(ಇ) ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡ ಎಲ್ಲಾ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸದಿರುವುದರಿಂದ ಮೆ॥ ಕಾವೇರಿ ಟೂರ್ಸ್ & ಟ್ರಾವೆಲ್ಸ್ ರವರಿಗೆ ಪಾವತಿಸಿರುವ **ರೂ.21,16,891/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್ ಮೈಸೂರು. ಇವರ ದರವನ್ನು ಅಂಗೀಕರಿಸುವುದರೊಂದಿಗೆ ಆದೇಶ ಸಂಖ್ಯೆ ಜಿಎಲ್8/531/2000–01, ದಿನಾಂಕ:01.08.2013 ರಂದು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಇದರನ್ವಯ ವಾಹನಗಳನ್ನು ಬಾಡಿಗೆಗೆ ಪಡೆದು ವೆಚ್ಚಗಳನ್ನು ಭರಿಸಲಾಗಿದೆ.

ಆದೇಶದ ಪ್ರತಿಗಳನ್ನು ಲಗತ್ತಿಸಿದೆ.

ಆದ್ದರಿಂದ ರೂ.21,16,891.00ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

| | |
|---|---|
| **69. ಸಾಮಾಗ್ರಿಗಳ ಖರೀದಿಯ ಸಂದರ್ಭದಲ್ಲಿ ಟೆಂಡರ್/ದರಪಟ್ಟಿಗಳನ್ನು ಕರೆಯದೆ ಖರೀದಿಸಿರುವುದು(ಪರೀಕ್ಷಾ ವಿಭಾಗ)**<br><br>2015–16ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಎಫ್ ಅಂಡ್ ಆರ್ ಓಚರ್ಸ್‌ಗಳನ್ನು ಪರಿಶೀಲಿಸಲಾಗಿ ಅನುಬಂಧ–53 ಮತ್ತು 53ಎ ರಲ್ಲಿ ವಿವರಿಸಲಾಗಿರುವ ಖರೀದಿ ಬಿಲ್ಲು ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999–2000 ನಿಯಮದನ್ವಯ ನಿಯಮವನ್ನು ಉಲ್ಲಂಘಿಸಿ ಸಾಮಾಗ್ರಿಗಳನ್ನು ಖರೀದಿಸಲಾಗಿದ್ದು ಮತ್ತು ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸುವ(Avoid) ಉದ್ದೇಶದ ಹಿನ್ನಲೆಯಲ್ಲಿ ಅನುಬಂಧದ ವಿವರಗಳಂತೆ ಒಟ್ಟು ಮೊತ್ತ ರೂ.9,54,910/–ಗಳನ್ನು ಆಕ್ಷೇಪಿಸಲಾಗಿದೆ. | ವಿಶ್ವವಿದ್ಯಾನಿಲಯದಲ್ಲಿ 2015–16ನೇ ಸಾಲಿನಲ್ಲಿ ಲೇಖನ ಸಾಮಗ್ರಿಗಳ ಖರೀದಿಗಾಗಿ ನಿಯಮಾನುಸಾರ ಇ.ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು; ಅತೀ ಕಡಿಮೆ ದರ ನಮೂದಿಸಿರುವ ಮೆ॥ರಜತ್ ಸೇಲ್ಸ್ ಮೈಸೂರು ಇವರನ್ನು ಅನುಮೋದಿಸುವುದರ ಮೂಲಕ ಅವಶ್ಯಕ ಮಂಜೂರಾತಿ ನೀಡಲಾಗಿದೆ. ಈ ಎಲ್ಲಾ ಸಾಮಾಗ್ರಿಗಳೂ ಬೇರೆ ಬೇರೆ ತರಹದ ಸಾಮಾಗ್ರಿಗಳಾಗಿದ್ದು, ಅನುಮೋದಿತ ದರದಲ್ಲಿ ಸಾಮಾಗ್ರಿಗಳನ್ನು ಖರೀದಿಸಿದೆ. ಈ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗಿತ್ತು. ಹಾಗೂ ಹಣಕಾಸು ಶಾಖೆಯ ಲೆಕ್ಕ ತನಿಖಾ ಸಮಯದಲ್ಲಿ ಓಚರ್‌ಗಳೊಂದಿಗೆ ಟೆಂಡರ್ ಕಡತಗಳನ್ನೂ ಪರಿಶೀಲಿಸಲಾಗಿದೆ.ಅವಶ್ಯಕವೆ–ನಿಸಿದರೆ ಅವುಗಳನ್ನು ಮತ್ತೊಮ್ಮೆ ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗುವುದು.<br><br>ಆದ್ದರಿಂದ ರೂ9,54,910.00ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **72. ಆರೋಗ್ಯ ಕೇಂದ್ರಕ್ಕೆ ಔಷದಗಳನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದರೂ ದರಪಟ್ಟಿ ಮೂಲಕ ಔಷಧಿಗಳನ್ನು ಖರೀದಿಸಿರುವುದು :– (ಆರೋಗ್ಯ ಕೇಂದ್ರ, ಮಾನಸಗಂಗೋತ್ರಿ, ಮೈಸೂರು)**<br><br>2014–15ನೇ ಸಾಲಿನಿಂದ 2015–16ನೇ ಸಾಲಿನ ಲೆಕ್ಕತಪಾಸಣೆಯನ್ನು ಆರೋಗ್ಯ ಕೇಂದ್ರ ಮಾನಸ ಗಂಗೋತ್ರಿ, ಮೈಸೂರು, ಇಲ್ಲಿ ಕೈಗೊಂಡ ಅವಧಿಯಲ್ಲಿ ಟೆಂಡರ್ ಮೂಲಕ ಆದೇಶವನ್ನು ವಿಶ್ವವಿದ್ಯಾನಿಲಯದವರು ಹೊರಡಿಸಿರುವುದು ಗಮನಿಸಲಾಗಿದೆ. ಆದೇಶದ ವಿವರಗಳು ಕೆಳಕಂಡಂತೆ ಇವೆ.<br><br>1. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ.ಎಲ್ 6/162/2007–08, ದಿನಾಂಕ:4.11.2013 8 ಸಂಸ್ಥೆಗಳಿಗೆ ದರಪಟ್ಟಿ ಅಂಗೀಕರಿಸಿರುತ್ತಾರೆ.<br>2. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್6/162/2007–08 ದಿನಾಂಕ:07.06.2016 4 ಸಂಸ್ಥೆಗಳಿಗೆ ದರಪಟ್ಟಿ ಅಂಗೀಕರಿಸಿರುತ್ತಾರೆ.<br><br>ಮೇಲಿನ ವಿವರದಲ್ಲಿ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಿದ್ದ, ಸಂಸ್ಥೆಗಳಲ್ಲಿ | Karnataka Drug's and logistics and ware housing ಇವರಿಂದ ಔಷಧಗಳ ಲಭ್ಯತೆಯ ಬಗ್ಗೆ ದೂರವಾಣಿ ಮೂಲಕ ಸಂಪರ್ಕಿಸಲಾಗಿ ಅವರು ಔಷಧಗಳ ಲಭ್ಯತೆ ಹಾಗೂ ಕೊರತೆಯ ಬಗ್ಗೆ ತಿಳಿಸಿದ ನಂತರವೇ ಇ–ಟೆಂಡರ್ ಮೂಲಕ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್.6/162/2007–08 ದಿನಾಂಕ 14–11–2013 ರಲ್ಲಿ 2013–14 ನೇ ಸಾಲಿಗೆ ಅಥವಾ ಮುಂದಿನ ಆದೇಶ ನೀಡುವವರೆಗೆ 8 ಸಂಸ್ಥೆಗಳ ದರಪಟ್ಟಿ ಅಂಗೀಕರಿಸಿ ಆದೇಶ ನೀಡಿರುತ್ತಾರೆ. ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಟೆಂಡರ್ ನಿಯಮಾವಳಿ ಪ್ರಕಾರ ಕನಿಷ್ಠ ದರ ನಮೂದಿಸಿದ ಒಂದೇ ಸಂಸ್ಥೆ ಔಷಧ ಸರಬರಾಜು ಮಾಡಬೇಕಾಗಿರುತ್ತದೆ. ಆದರೆ ಒಂದೇ ಸಂಸ್ಥೆಯಲ್ಲಿ ಆರೋಗ್ಯ ಕೇಂದ್ರಕ್ಕೆ ಬೇಕಾದ ಹಾಗೂ ಅವಶ್ಯಕವಾದ ಔಷಧಗಳು ದೊರೆಯದ ಕಾರಣದಿಂದಾಗಿ 8 ಸಂಸ್ಥೆಗಳಿಂದ ಆಯಾಯ ಸಂಸ್ಥೆಗಳಲ್ಲಿ ಲಭ್ಯವಿರುವ ಔಷಧಗಳನ್ನು ಖರೀದಿಸಲು ದರಪಟ್ಟಿ ಅಂಗೀಕರಿಸಲಾಗಿದೆ. ಅಲ್ಲದೆ ಟೆಂಡರ್ ಅಂಗೀಕಾರ ಸಂಸ್ಥೆಯಲ್ಲಿ |

ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು 2000 ಕಾಯ್ದೆ 25, 26 Nopwd 1359 So/FC 2001 (P-2) Bangalore Dated:25.10.2002 ರ ಪ್ರಕಾರ ಯಾವುದಾದರೂ ಒಂದು ಸಂಸ್ಥೆ ಕನಿಷ್ಠದರ ನಮೂದಿಸಿದವರಿಗೆ ವಹಿಸಿರುವುದು ಟೆಂಡರ್ ನಿಯಮಾವಳಿ ಆದರೆ ಟೆಂಡರ್ ಪ್ರಕ್ರಿಯೆ ನಡೆಸಿ ವರ್ಷವಾರು 8 ಮತ್ತು 4 ಸಂಸ್ಥೆಗಳಿಗೆ ದರಪಟ್ಟಿ ಮೂಲಕ ಔಷದಿ ಸರಬರಾಜು ಮಾಡುವಂತೆ ಒಪ್ಪಿ ಆದೇಶಗಳನ್ನು ನೀಡಿರುವುದು ಲೆಕ್ಕ ತಪಾಸಣೆ ಅವಧಿಯಲ್ಲಿ ಕಂಡುಬಂದಿರುತ್ತದೆ. ಈ ರೀತಿ ಔಷಧ ಖರೀದಿಸುವಂತೆ ಹೊರಡಿಸಿರುವ ಆದೇಶ ಕೆ.ಟಿ.ಪಿ.ಪಿ ಕಾಯ್ದೆ ನಿಯಮಕ್ಕೆ ವಿರುದ್ಧವಾಗಿರುತ್ತದೆ. ಹಾಗೂ Karnataka Drug's and logistics and ware housing ಇವರಿಂದ ಔಷಧ ಲಭ್ಯತೆ ಹಾಗೂ ಕೊರತೆ ಇವುಗಳನ್ನು ತಿಳಿದು ನಂತರವೆ ದರಪಟ್ಟಿ ಕೈಗೊಳ್ಳುವ ಆದೇಶವನ್ನು ವಿಶ್ವವಿದ್ಯಾನಿಲಯದಿಂದ ಪಡೆದಿರುವುದು ವರ್ಷವಾರು ಔಷಧಗಳನ್ನು ಖರೀದಿಸಿರುವ ವಿವರಗಳನ್ನು 2014-15 ರಿಂದ 2015-16ನೇ ಸಾಲಿನವರೆಗೆ **ಅನುಬಂಧ-55 ಮತ್ತು 56ರಲ್ಲಿ** ಪಟ್ಟಿ ಮಾಡಲಾಗಿದೆ. ಹಾಗೂ ಟೆಂಡರ್ ಮೂಲ ಕಡತ ದಾಖಲಾತಿಗಳನ್ನು ಔಷದ ಗುಣಮಟ್ಟದ ಬಗ್ಗೆ ದೃಢೀಕರಣ ಪಡೆಯದೆ ಇರುವುದು 5% ಭದ್ರತಾ ಠೇವಣಿಯನ್ನು K.G-1 Clause-27 (ಪ್ರಕಾರ performance security ಪಡೆದಿರುವ ದಾಖಲಾತಿಗಳನ್ನು ಆಡಿಟ್ ವಿತರಣೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:04/2017-18 ದಿನಾಂಕ:02.06.2018ರಂದು ನೀಡಲಾಗಿದ್ದು, ವಿಚಾರಣೆಗೆ ಯಾವುದೇ ಉತ್ತರ ನೀಡಿರುವುದಿಲ್ಲ. ಉತ್ತರ ಸಲ್ಲಿಸುವವರೆಗೆ ಔಷಧ ಖರೀದಿಸಿರುವ ಮೊತ್ತ **ರೂ.31,05,640/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

1. 2014-15 – 17,62,592
2. 2015-16 – 13,43,048

ಒಟ್ಟು – 31,05,640

ಅಂಗೀಕೃತವಾದ ಸಂಸ್ಥೆಯ ಔಷಧಗಳ ಗುಣಮಟ್ಟವನ್ನು ಇಬ್ಬರು ವೈದ್ಯಾಧಿಕಾರಿಗಳು ಪರಿಶೀಲಿಸಿದ ನಂತರವೇ ಸರಬರಾಜು ಆದೇಶ ನೀಡಲಾಗಿದೆ. ಇನ್ನು ಮುಂದೆ Karnataka Drug's and logistics and ware housing ಇವರಿಂದ ಔಷಧಗಳ ಲಭ್ಯತೆ ಹಾಗೂ ಕೊರತೆ ಇವುಗಳನ್ನು ಲಿಖಿತವಾಗಿ ಪಡೆದುಕೊಂಡು ನಂತರ ಮುಂದಿನ ಕ್ರಮವಹಿಸುವುದಾಗಿ ನಿವೇದಿಸಿದೆ. ಸದರಿ ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸಿದ 8 ಸಂಸ್ಥೆಗಳಿಂದ 5% ಭದ್ರತಾ ಠೇವಣಿಯನ್ನು ಪಡೆಯಲಾಗಿದೆ. ಟೆಂಡರ್‌ನಲ್ಲಿ ಕೋಟ್ ಮಾಡದೆ ಇರುವ ಓ.ಟಿ ಮತ್ತು ಲ್ಯಾಬ್‌ಗೆ ಸಂಬಂಧಿಸಿದ ಸಲಕರಣೆಗಳಿಗೆ ದರಪಟ್ಟಿಗಳನ್ನು ಕರೆದು ಅತಿ ಕಡಿಮೆ ದರ ನಮೂದಿಸಿರುವ ಸಂಸ್ಥೆಗಳಿಂದ ಖರೀದಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಕುಲಸಚಿವರಿಂದ ಆಡಳಿತಾತ್ಮಕ ಮಂಜೂರಾತಿ ಪಡೆಯಲಾಗಿದೆ. ಅನುಬಂಧ-56 ರ ಕ್ರ.ಸಂ 2,3 ಮತ್ತು 8 ರಲ್ಲಿ ಒಟ್ಟು ಮೊತ್ತ ರೂ2,30,138.00ಗಳು.(ಪ್ರತಿ ಲಗತ್ತಿಸಿದೆ) ಕಂಡಿಕೆ 72 ಅನುಬಂಧ-55 ರಲ್ಲಿ ಪ್ರಸ್ತಾಪಿಸಿರುವ ಒಟ್ಟು ಮೊತ್ತ ರೂ17,62,592.00 ರಲ್ಲಿ ಕ್ರಮಸಂಖ್ಯೆ 7ರ ಬಿ.ಆರ್39/ 22-07-2014 ಮೆ॥ ವಿನಯ್ ಅಸೋಸಿಯೇಟ್ಸ್‌ರವರಿಂದ ಔಷಧಗಳ ಖರೀದಿ ರೂ4,06,250.00ಗಳ ಕ್ರಮಸಂಖ್ಯೆ 12 ರಲ್ಲಿ ಬಿ.ಆರ್‌ನಂ 66/10-02-2015 ಮೆ॥ ವಿನಯ್ ಅಸೋಸಿಯೇಟ್ಸ್‌ರವರಿಂದ ಇ.ಎನ್.ಟಿ ಉಪಕರಣವನ್ನು ಖರೀದಿಸಿ ರೂ4,06,250.00 ಎಂಬುದಾಗಿ ನಮೂದಿತವಾಗಿದೆ. ಆದರೆ ಇದು ಒಂದೇ ಬಿಲ್ಲು ಬಿ.ಆರ್ ನಂ39/22-07-2014ರ ರೂ4,06,250.00ಗಳನ್ನು ರದ್ದುಪಡಿಸಿ ಬಿ.ಆರ್‌ನಂ 66/10-02-2015 ರಲ್ಲಿ ರೂ4,06,250.00ಗಳ ವೆಚ್ಚದಲ್ಲಿ ಮೆ॥ ವಿನಯ್ ಅಸೋಸಿಯೇಟ್ಸ್‌ರವರಿಂದ ಇ.ಎನ್.ಟಿ ಉಪಕರಣವನ್ನು ಖರೀದಿಸಲಾಗಿದೆ. ಈ ಬಗ್ಗೆ 2014-15 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಭಾಗ-3 ರ ಕಂಡಿಕೆ ಸಂಖ್ಯೆ 50ರಲ್ಲಿ ಅನುಪಾಲನಾ ವರದಿಯನ್ನು ಈಗಾಗಲೇ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಮೈ.ವಿ.ವಿ/ಲೆ.ತ.ವ/2014-15/2018-19/1658-62, ದಿನಾಂಕ: 08.02.2019ರಂದು ತಮ್ಮ ಕಛೇರಿಗೆ ಸಲ್ಲಿಸಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳು ಮತ್ತು ಅವರುಗಳ ಕುಟುಂಬದ ಚಿಕಿತ್ಸಾ ಸೌಕರ್ಯಕ್ಕಾಗಿ ಅವಶ್ಯಕವಾದ ಔಷಧಗಳು ಮತ್ತು ವೈದ್ಯಕೀಯ ಉಪಕರಣಗಳನ್ನು ಖರೀದಿಸಿ ವೆಚ್ಚ ಭರಿಸಿರುವ ಅಂಶವನ್ನು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳಲಾಗಿದೆ.ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಒಟ್ಟು ಮೊತ್ತ ರೂ31,05,640.00ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಬೇಕಾಗಿ ಕೋರಲಾಗಿದೆ.

| | |
|---|---|
| **73. <u>ಕೆ.ಟಿ.ಪಿ.ಪಿ ಕಾಯ್ದೆ 1999–2000 ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ರಾಸಾಯನಿಕಗಳು ಮತ್ತು ಗಾಜಿನ ಪರಿಕರಗಳನ್ನು ಖರೀದಿಸಿರುವುದು :– (ಯುವರಾಜ ಕಾಲೇಜು)</u>**<br><br>2015–16ನೇ ಸಾಲಿನ ಯುವರಾಜ ಕಾಲೇಜಿನ ವಿವಿಧ ಅಧ್ಯಯನ ವಿಭಾಗಗಳಿಗೆ ಪ್ರಯೋಗಾಲಯಗಳಿಗೆ ಅಗತ್ಯವಿರುವ ರಾಸಾಯನಿಕಗಳು ಮತ್ತು ಗಾಜಿನ ಪರಿಕರಗಳನ್ನು ಖರೀದಿಸಲು ರೂ.10,37,172/–ಗಳ ವೆಚ್ಚ ಭರಿಸಿರುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ ಕೆ.ಟಿ.ಪಿ.ಪಿ ಕಾಯ್ದೆ 1999–2000ರ ನಿಯಮ 4 (ಇ) ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್_ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ:13/03.04.2018ರಲ್ಲಿ ಕೋರಲಾಗಿ ಯಾವುದೇ ಕಡತಗಳನ್ನು/ಸೂಕ್ತ ವಿವರಣೆಯನ್ನು ನೀಡಿರುವುದಿಲ್ಲ.<br><br>ರಾಸಾಯನಿಕಗಳು ಮತ್ತು ಗಾಜಿನ ಪರಿಕರಗಳನ್ನು ಪ್ರಯೋಗಶಾಲೆಗೆ ಖರೀದಿಸುವಾಗ ಕೆಲವೊಂದು ಬಿಲ್ಲುಗಳಲ್ಲಿ ದರಪಟ್ಟಿಗಳನ್ನು ಕರೆದು ಖರೀದಿಸಲಾಗಿದ್ದು, ಮತ್ತು ಕೆಲವು ಬಿಲ್ಲುಗಳಲ್ಲಿ ನೇರವಾಗಿ ಒಂದು ಸಂಸ್ಥೆಯಿಂದ ಖರೀದಿಸಿರುವುದನ್ನು ಲೆಕ್ಕ ತನಿಖೆಯಲ್ಲಿ ಗಮನಿಸಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ 1999–2000 ರ ನಿಯಮ 4 (ಇ) ಅನ್ನು ಉಲ್ಲಂಘಿಸಿ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರ ಆದೇಶದಂತೆ 2013–14ನೇ ಸಾಲಿನ ದರ ನಿಗದಿಪಡಿಸಿರುವ ದರಗಳಲ್ಲೆ ಖರೀದಿಸಿರುವುದರಿಂದ **ರೂ.10,37,172/–ಗಳನ್ನು** ಸೂಕ್ತ ವಿವರಣೆ ನೀಡುವವರೆಗೂ ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **<u>ಅನುಬಂಧ–57ರಲ್ಲಿ</u>** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ವಿಶ್ವವಿದ್ಯಾನಿಲಯದ ಎಲ್ಲಾ ಸೈನ್ಸ್ ವಿಭಾಗ ಮತ್ತು ಕಾಲೇಜುಗಳಿಗೆ ಸಂಬಂಧಿಸಿದಂತೆ ಆಯಾ ಪ್ರಯೋಗಶಾಲೆಗಳಿಗೆ ಅವಶ್ಯಕವಿದ್ದ ರಸಾಯನಿಕ ಮತ್ತು ಗಾಜಿನ ಪದಾರ್ಥಗಳನ್ನು ಖರೀದಿಸುವ ಸಲುವಾಗಿ ನಿಯಮಾನುಸಾರ ವಿವಿಧ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡು ಕಡಿಮೆದರ ನಮೂದಿಸಿದ್ದ ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ. ಜಿ.ಎಲ್6/162/(1)/2007–08, 14.05.2013ರ ಅನ್ವಯ ಅಂಗೀಕರಿಸಲಾಗಿದೆ. ಇದರನ್ವಯ ಅವಶ್ಯಕ ರಸಾಯನಿಕ ಮತ್ತು ಗಾಜಿನ ಪದಾರ್ಥಗಳನ್ನು ನಿಗದಿತ ದರದಲ್ಲಿ ಆಯಾ ಸಮಯದಲ್ಲಿ ಪ್ರಯೋಗ ಶಾಲೆಗಳಿಗೆ ಆಯಾ ಸಂಸ್ಥೆಗಳಿಂದ ಖರೀದಿಸಿ ಉಪಯೋಗಿಸಲಾಗಿದೆ. ಇದಕ್ಕೆ ಸಂಬಂಧಿಸಿದ ದಾಸ್ತಾನು ಮತ್ತು ವಿತರಣ ಲೆಕ್ಕಗಳನ್ನು ತನಿಖಾ ಸಮಯದಲ್ಲಿ ಲೆಕ್ಕ ಪರಿಶೋಧನಾಧಿಕಾರಿಗಳಿಗೆ ಒದಗಿಸಿ ಅದನ್ನು ಪರಿಶೀಲನೆ ಮಾಡಿರುತ್ತಾರೆ.<br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ. ಜಿ.ಎಲ್6/162/(1)/2007–08, ದಿನಾಂಕ: 14.05.2013ರ ಪ್ರತಿಯನ್ನು ಅವಶ್ಯಕ ತುಲನಾತ್ಮಕ ಪಟ್ಟಿಯೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.<br>ಆದ್ದರಿಂದ, ರೂ.10,37,172/–ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **75. <u>ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ 10ನೇ ಕನ್ನಡ ಸಾಹಿತ್ಯ ವಿಜ್ಞಾನ ಸಮ್ಮೇಳನಕ್ಕೆ ಊಟೋಪಚಾರ ವ್ಯವಸ್ಥೆ ಮಾಡಿದ ಕೇಟರಿಂಗ್‌ರವರಿಗೆ ಪಾವತಿಸಿರುವ ಬಗ್ಗೆ:– (ಗಣಕ ಕೇಂದ್ರ, ಮಾನಸ ಗಂಗೋತ್ರಿ)</u>**<br><br>10ನೇ ಕನ್ನಡ ಸಾಹಿತ್ಯ ವಿಜ್ಞಾನ ಸಮ್ಮೇಳನವನ್ನು ವಿಶ್ವವಿದ್ಯಾನಿಲಯದ ಗಣಕ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದು, ಸಮ್ಮೇಳನಕ್ಕೆ ನೋಂದಣಿ ಮಾಡಿಸಿದ ಶಿಬಿರಾರ್ಥಿಗಳು, ಸಂಪನ್ಮೂಲ ವ್ಯಕ್ತಿಗಳು, ವಿದ್ಯಾರ್ಥಿಗಳು ಹಾಗೂ ಅತಿಥಿ/ಗಣ್ಯರುಗಳಿಗೆ ದಿನಾಂಕ:15.09.2014 ರಿಂದ 17.09.2014ರವರೆಗೆ ಊಟೋಪಚಾರ ವ್ಯವಸ್ಥೆ ಕಲ್ಪಿಸಲು ರೂ.2,92,222/–ಗಳನ್ನು ವೆಚ್ಚಭರಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ. | ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ದಿನಾಂಕ 15.9.2014 ರಿಂದ ದಿನಾಂಕ 17.9.2014 ರವರೆಗೆ ಜರುಗಿದ 10ನೇ ಕನ್ನಡ ಸಾಹಿತ್ಯ ವಿಜ್ಞಾನ ಸಮ್ಮೇಳನಕ್ಕೆ ಅವಶ್ಯಕ ಕಾಫಿ, ಟೀ, ತಿಂಡಿ ಹಾಗೂ ಊಟ ಇತ್ಯಾದಿಗಳಿಗಾಗಿ ವಿವಿಧ ಹೊಟೇಲ್‌ಗಳಿಂದ ಸರಬರಾಜು ಮಾಡಿದ ಬಾಬ್ತು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿಎಲ್5/17/2013–14 ದಿನಾಂಕ 6.12.2014ರ ಅನ್ವಯ ಒಟ್ಟು ಮೊತ್ತ ರೂ 2,92,222.00ಗಳ ವೆಚ್ಚ ಭರಿಸಲು ಆಡಳಿತಾತ್ಮಕ ಮಂಜೂರಾತಿ |

| | |
|---|---|
| 1. ಧನಾದೇಶ ಸಂಖ್ಯೆ:507210/18.09.2014, ರೂ.97,407/– ಸಿ.ಕೆ.ಕೆಫೆ, ಮೈಸೂರು ರವರಿಗೆ ಪಾವತಿಸಿರುವುದು.<br>2. ಧನಾದೇಶ ಸಂಖ್ಯೆ:507208/18.09.2014, ರೂ.97,554/– ಹೋಟೆಲ್ ಕಂಟ್ರಿ ಕ್ವಿಸಿನ್ [Country cuisine] ರವರಿಗೆ ಪಾವತಿಸಿರುವುದು.<br>3. ಧನಾದೇಶ ಸಂಖ್ಯೆ:507204/18.07.2014, ರೂ.97,261/–ಗಳನ್ನು ಎಸ್.ಜೆ.ಸಿ.ಇ ಕ್ಯಾಂಪಸ್ ಕ್ಯಾಂಟೀನ್ ರವರಿಗೆ ಪಾವತಿಸಿರುವುದು.<br><br>ಈ ಮೇಲೆ ತಿಳಿಸಿರುವಂತೆ 3 ಹೋಟೆಲ್‌ಗಳಿಂದ ಬಿಡಿ ಬಿಡಿಯಾಗಿ ಊಟೋಪಚಾರಗಳನ್ನು ಖರೀದಿಸಿ ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ ಕಾಯ್ದೆ 1999–2000ರ ನಿಯಮ 4(ಇ)ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:01, ದಿನಾಂಕ:27.04.2018ರಲ್ಲಿ ಕೋರಲಾಗಿ, ಟೆಂಡರ್ ಪ್ರಕ್ರಿಯೆ ಕೈಗೊಂಡು ಉಪಹಾರಗಳನ್ನು ಸರಬರಾಜು ಮಾಡಿರುವ ಕಡತಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುವುದಿಲ್ಲ.<br><br>ಕೆ.ಟಿ.ಪಿ.ಪಿ. ಕಾಯ್ದೆ 2000ರ ನಿಯಮ 4(ಇ)ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ನಿಯಮ ಉಲ್ಲಂಘಿಸಿ ಬಿಡಿ ಬಿಡಿಯಾಗಿ ಊಟೋಪಚಾರಗಳನ್ನು ವಿವಿಧ ಹೋಟೆಲ್‌ಗಳಿಂದ ಸರಬರಾಜು ಮಾಡಿಸಿಕೊಂಡಿರುವ ಬಗ್ಗೆ ಸೂಕ್ತ ಸಮಜಾಯಿಷಿಯನ್ನು ನೀಡದಿರುವುದರಿಂದ **ರೂ.2,92,222/– ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** | ನೀಡಲಾಗಿದೆ.<br><br>ಈ ಕಾರ್ಯಕ್ರಮವನ್ನು ಜರೂರಾಗಿ ಕೈಗೊಂಡಿದುದರಿಂದ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಹತ್ತಿರದಲ್ಲೇ ಇದ್ದ ಎಸ್.ಜೆ.ಸಿ.ಇ ಕ್ಯಾಂಟೀನ್ ಹಾಗೂ ಕಂಟ್ರಿಕ್ವಿಸಿನ್ ಹೋಟೆಲ್‌ರವರ ದರಗಳನ್ನು ಪರೀಕ್ಷಿಸಿ ಕಡಿಮೆ ದರದಲ್ಲಿ ಸಮಯಕ್ಕೆ ಸರಿಯಾಗಿ ಸರಬರಾಜು ಮಾಡಲು ಒಪ್ಪಿದುದರಿಂದ ಇವರಿಗೆ ಸರಬರಾಜು ಆದೇಶ ನೀಡಲಾಗಿದೆ.ಹಾಗೂ ಒಟ್ಟು ರೂ.2,92,222.00ಗಳ ವೆಚ್ಚ ಭರಿಸಿದೆ.<br><br>ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ರೂ.2,92,222.00ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **76. <u>ಕೆ.ಟಿ.ಪಿ.ಪಿ ಕಾಯ್ದೆ 2000ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಕಾವೇರಿ ಟೂರ್ಸ್ & ಟ್ರಾವೆಲ್ಸ್ ರವರಿಂದ ವಾಹನಗಳನ್ನು ಬಾಡಿಗೆಗೆ ಪಡೆದಿರುವುದು:– (ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ)</u>**<br><br>2015–16ನೇ ಸಾಲಿನಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿ ವತಿಯಿಂದ 31ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ವೆಚ್ಚ ಭರಿಸಿರುವ ಬಿ.ಆರ್ ಸಂಖ್ಯೆ: 110/26.02.2016 ಧನಾದೇಶ ಸಂಖ್ಯೆ: 51603/11.03.2016 ರೂ.1,76,476/– ಗಳನ್ನು M/S ಕಾವೇರಿ ಟೂರ್ಸ್ & ಟ್ರಾವೆಲ್ಸ್, ಮೈಸೂರು ರವರಿಗೆ ಪಾವತಿಸಿ ವಿವಿಧ ಬಗೆಯ ವಾಹನಗಳನ್ನು ಬಾಡಿಗೆಗೆ ಪಡೆದಿರುವ ಓಚರ್‌ಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ 1999/2000ರ ನಿಯಮ 4(e)ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಜರು ಪಡಿಸುವಂತೆ ಕೋರಿ ಲೆಕ್ಕ ತನಿಖಾ ವಿಚಾರಣಾ ಪತ್ರಸಂಖ್ಯೆ:02, ದಿನಾಂಕ:25.04.2018ರಲ್ಲಿ ಕೋರಲಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಗೂ ವಾಹನಗಳನ್ನು ಬಾಡಿಗೆಗೆ ಪಡೆದಾಗ ಟ್ರಿಪ್ | ಕೆ.ಟಿ.ಪಿ.ಪಿ ಕಾಯ್ದೆ 2000ರ ಅನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಡಿಮೆ ದರ ನಮೂದಿಸಿದ್ದ ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್ ಮೈಸೂರು ಇವರ ದರವನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್/8/531/2000–01, ದಿನಾಂಕ.1.8.2013ರ ಅನ್ವಯ ಅಂಗೀಕರಿಸಲಾಗಿದೆ. ಇದರನ್ವಯ ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದ್ದ 31ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮಕ್ಕೆ ಅವಶ್ಯಕವಿದ್ದ ವಾಹನಗಳನ್ನು ಮೇಲಿನ ಸಂಸ್ಥೆಯಿಂದ ಬಾಡಿಗೆಗೆ ಪಡೆದು ಉಪಯೋಗಿಸಲಾಗಿದೆ.<br><br>ಮೈಸೂರು ವಿಶ್ವದ್ಯಾನಿಲಯದ ಶತಮಾನೋತ್ಸವದ ಪ್ರಯುಕ್ತ ದಿನಾಂಕ 15.02.2016 ರಿಂದ 19.02.2016 ರವರೆಗೆ ನಡೆದ ರಾಷ್ಟ್ರೀಯ ಯುವಜನೋತ್ಸವದ ಕಾರ್ಯಕ್ರಮಕ್ಕೆ ವಾಹನಗಳ |

| | |
|---|---|
| ಶೀಟ್‌ಗಳನ್ನು ಸಹ ಹಾಜರು ಪಡಿಸಿರುವುದಿಲ್ಲ. ಕೆ.ಟಿ.ಪಿ.ಪಿ ಕಾಯ್ದೆ 1999/2000 ರ ನಿಯಮ 4(e) ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು, ಪಾವತಿಗೆ ಸಂಬಂಧಿಸಿದ ಟ್ರಿಪ್ ಶೀಟ್‌ಗಳನ್ನು ಲೆಕ್ಕ ತನಿಖೆಗೆ ಹಾಜರು ಪಡಿಸುವ ವರೆಗೂ **ರೂ.1,76,476/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** | ವ್ಯವಸ್ಥೆಗಾಗಿ ಮಾನ್ಯ ಕುಲಸಚಿವರನ್ನು ಕೋರಲಾಗಿ ಆದೇಶ ಸಂಖ್ಯೆ ಜಿ.ಎಲ್.8/101/2015–16, ದಿನಾಂಕ 12.02.2016ರಲ್ಲಿ 2 ಇನೋವಾ, 2 ಬಸ್ 2 ಮಿನಿಬಸ್ ಮತ್ತು 3 ಕಾರುಗಳ ವೆಚ್ಚ ಭರಿಸಲು ಅನುಮೋದನೆ ನೀಡಿದ್ದು, ವಾಹನಗಳ ಬಾಡಿಗೆ ದರ ಹೆಚ್ಚಳದ ಪರಿಷ್ಕೃತ ಆದೇಶ ಸಂಖ್ಯೆ ಜಿ.ಎಲ್.8/561/2000–01, ದಿನಾಂಕ 01.06.2014ರನ್ವಯ ಸದರಿ ವಾಹನಗಳನ್ನು ಬಾಡಿಗೆಗೆ ಪಡೆದಿದ್ದು, ವೆಚ್ಚ ಭರಿಸಲಾಗಿರುತ್ತದೆ. ಸದರಿ ಯುವಜನೋತ್ಸವ ಕಾರ್ಯಕ್ರಮವು ಅನಿವಾರ್ಯ ಮತ್ತು ಅವಶ್ಯವಾಗಿ ನಡೆಸಬೇಕಾದುದರಿಂದ ಸದರಿ ಸಮಾರಂಭಕ್ಕೆ ಗಣ್ಯವ್ಯಕ್ತಿಗಳು ಮತ್ತು ಪ್ರತಿನಿಧಿಗಳನ್ನು ಕರೆತರುವ ವ್ಯವಸ್ಥೆಗಾಗಿ ವಾಹನಗಳನ್ನು ಉಪಯೋಗಿಸಿಕೊಳ್ಳಲಾಗಿದೆ.<br><br>ವಿಶ್ವವಿದ್ಯಾನಿಲಯದ ಮೇಲಿನ ಆದೇಶವು ಒಂದು ವರ್ಷದ ಅವಧಿಗೆ ಅಂದರೆ ದಿನಾಂಕ:1.8.2013 ರಿಂದ ದಿನಾಂಕ 31.7.2014ರ ವರೆಗೆ ಅಥವಾ ಮುಂದಿನ ಆದೇಶದ ವರೆಗೂ ಚಾಲ್ತಿಯಲ್ಲಿರುತ್ತದೆ. ಅಂದರೆ 2016–17ರ ಸಾಲಿನವರೆಗೂ ಚಾಲ್ತಿಯಲ್ಲಿರುತ್ತದೆ. ಆದೇಶದ ಪ್ರತಿಗಳು ಹಾಗೂ ಟ್ರಿಪ್ ಶೀಟ್‌ಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಲಾಗಿದೆ. ಆದುದರಿಂದ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| 77. **ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ನೀರು ಶುದ್ಧೀಕರಣ ಯಂತ್ರಗಳನ್ನು ಖರೀದಿಸಿರುವುದು:– (ವಿದ್ಯಾರ್ಥಿ ಕ್ಷೇಮಪಾಲನಾ)**<br><br>2015–16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಓಚರ್‌ಗಳನ್ನು ಪರಿಶೀಲಿಸಲಾಗಿ ಧನಾದೇಶ ಸಂಖ್ಯೆ:174043, ದಿನಾಂಕ:28.03.2016ರಲ್ಲಿ ರೂ.2,00,000/–ಗಳನ್ನು ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿಯ ಅಧೀನಕ್ಕೊಳಪಡುವ ವಿದ್ಯಾರ್ಥಿ ನಿಲಯಗಳಿಗೆ ಶುದ್ಧೀಕರಿಸಿದ ನೀರು ಪೂರೈಸಲು ಹಣ ಬಿಡುಗಡೆ ಮಾಡಿದ್ದು ರೂ.1,96,000/–ಗಳನ್ನು ವೆಚ್ಚ ಭರಿಸಿ M/S S.S. Water Life Technology, Mysore, ರವರಿಂದ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಮಂಡ್ಯ, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ, ಹೇಮಗಂಗೋತ್ರಿ, ಹಾಸನ ಮತ್ತು ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1 & 3 ಗಳಿಗೆ ಬಿಡಿ–ಬಿಡಿಯಾಗಿ ರೂ.1,96,000/–ಗಳ ವೆಚ್ಚ ಭರಿಸಿ ನೀರಿನ ಶುದ್ಧೀಕರಣ ಯಂತ್ರಗಳನ್ನು ಖರೀದಿಸಲಾಗಿರುತ್ತದೆ. ಆದರೆ ಕೆ.ಟಿ.ಪಿ.ಪಿ ಕಾಯ್ದೆ–1999–2000 ರ ನಿಯಮ 4(e) ಪ್ರಕಾರ ಟೆಂಡರ್ ಪ್ರಕ್ರಿಯೆ ಕೈಗೊಂಡು ಖರೀದಿಸಬೇಕಾಗಿರುತ್ತದೆ. ಆದರೆ, ಕೆ.ಟಿ.ಪಿ.ಪಿ ಕಾಯ್ದೆ–2000 ರ ನಿಯಮ 4(e) ಯನ್ನು ಉಲ್ಲಂಘಿಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಬಿಡಿ–ಬಿಡಿಯಾಗಿ ದರಪಟ್ಟಿಗಳನ್ನು ಪಡೆದು ಖರೀದಿಸಿರುವುದರಿಂದ **ರೂ.1,96,000/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** | 2015–16 ನೇ ಸಾಲಿನಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿಯ ಅಧೀನಕ್ಕೊಳಪಡುವ ವಿದ್ಯಾರ್ಥಿನಿಲಯಗಳಿಗೆ ಶುದ್ಧೀಕರಿಸಿದ ನೀರು ಪೂರೈಸಲು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ವಿಕ್ಷೇಪಾ 1/52/1771/2015–16 ದಿನಾಂಕ 10–03–2016 ರಲ್ಲಿ ರೂ.2,00,000/–ಗಳ ಮುಂಗಡ ಹುಂಡಿಯ ಮೂಲಕ ಪಡೆದು ವೆಚ್ಚ ಭರಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಅದರನ್ವಯ ಎ.ಸಿ.ಬಿಲ್ಲಿನಲ್ಲಿ ಧನಾದೇಶ ಸಂಖ್ಯೆ 174042 ದಿನಾಂಕ 28.03.2016ರಲ್ಲಿ ರೂ.2,00,000/–ಗಳ ಮುಂಗಡ ಪಡೆದು ಎನ್.ಡಿ.ಸಿ ಬಿಲ್ಲಿನ ಬಿ.ಆರ್.ನಂ 3&4ರಲ್ಲಿ ಸಿ M/S S.S. Water Life Technology, Mysore, ರವರ ಇನ್‌ವಾಯ್ಸ್ ನಂ 086 ದಿನಾಂಕ 18.6.2016ರಲ್ಲಿ ರೂ.69,000/–ಗಳನ್ನು ಮಂಡ್ಯ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯಕ್ಕೆ ನೀರಿನ ಶುದ್ಧೀಕರಣ ಯಂತ್ರ ಖರೀದಿ ಮತ್ತು ಇದೇ ಸಂಸ್ಥೆಯಿಂದ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ, ಹೇಮಗಂಗೋತ್ರಿ, ಹಾಸನದ ವಿದ್ಯಾರ್ಥಿ ನಿಲಯಕ್ಕೆ ಇನ್‌ವಾಯ್ಸ್ ನಂ 087 ದಿನಾಂಕ 8.6.2016 ರೂ.29,000/–ಗಳ ವೆಚ್ಚ ಭರಿಸಿರುತ್ತದೆ. |

| | |
|---|---|
| | ಮೆ॥ ಎಂ.ಎಸ್ ಎಂಟರ್‌ಪ್ರೈಸಸ್ ಮೈಸೂರು ಇನ್‌ವಾಯ್ಸ್ ನಂ 48 ದಿನಾಂಕ 26.12.2016ರಲ್ಲಿ 100 ಎಲ್.ಪಿ.ಹೆಚ್ ಆರ್.ಓ ನಂ–1 ಮತ್ತು 50 ಎಲ್.ಪಿ.ಹೆಚ್ ಪಿ.ಓ ಸಿಸ್ಟಂ ನಂ–1 ಒಟ್ಟು 2 ಸಿಸ್ಟಂಗಳನ್ನು ಖರೀದಿಸಿ 100 ಎಲ್.ಪಿ.ಹೆಚ್ ಸಿಸ್ಟಂ ಅನ್ನು ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1 ಮತ್ತು 50 ಎಲ್.ಪಿ.ಹೆಚ್ ಸಿಸ್ಟಂ ಅನ್ನು ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–3 ವಿದ್ಯಾರ್ಥಿ ನಿಲಯಗಳಿಗೆ ಸರಬರಾಜು ಮಾಡಲಾಗಿರುತ್ತದೆ. ಈ ನೀರಿನ ಶುದ್ಧೀಕರಣ ಯಂತ್ರ ಖರೀದಿ ಸಂಬಂಧ ದರ ಪಟ್ಟಿ ಕರೆದು ಅತೀ ಕಡಿಮೆ ದರ ಸೂಚಿಸಿರುವ ಸಂಸ್ಥೆಗಳಿಂದ ಖರೀದಿಸಿ ವೆಚ್ಚ ಭರಿಸಿದ್ದು, ಎನ್.ಡಿ.ಸಿ ಬಿಲ್ಲು ಸಲ್ಲಿಸಿ ಹಣಕಾಸು ಅಧಿಕಾರಿಗಳಿಂದ ಎನ್.ಡಿ.ಸಿ. ಪತ್ರ ಪಡೆಯಲಾಗಿದೆ. ಎಂಬ ಅಂಶವನ್ನು ತಮ್ಮಲ್ಲಿ ನಿವೇದಿಸುತ್ತ M/S S.S. Water Life Technology, Mysore, ರವರಿಂದ ಬಿಡಿ ಬಿಡಿಯಾಗಿ ಖರೀದಿಸಿರುವುದಿಲ್ಲ. ಸದರಿ ಸಂಸ್ಥೆಯಲ್ಲಿನ ಮಂಡ್ಯ ಮತ್ತು ಹಾಸನ ಸ್ನಾತಕೋತ್ತರ ವಿದ್ಯಾರ್ಥಿ ನಿಲಯಗಳಿಗೆ ನೀರಿನ ಶುದ್ಧೀಕರಣ ಯಂತ್ರ ಮತ್ತು ಟ್ಯಾಂಕ್‌ಗಳನ್ನು ಸರಬರಾಜು ಮಾಡಿರುತ್ತದೆ.<br>ಮೆ॥ ಎಂ.ಎಸ್ ಎಂಟರ್‌ಪ್ರೈಸಸ್ ಮೈಸೂರುರವರು ಗಂಗೋತ್ರಿಯ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1 ಮತ್ತು ಬ್ಲಾಕ್ 3ಗೆ ನೀರಿನ ಶುದ್ಧೀಕರಣ ಯಂತ್ರ ಖರೀದಿ ಮತ್ತು ಅಳವಡಿಕೆ ಮಾಡಿರುವುದಾಗಿ ನಿವೇದಿಸುತ್ತ, ಎ.ಸಿ ಬಿಲ್ಲು ಮುಂಗಡದ ಆದೇಶ ಮತ್ತು ಎನ್.ಡಿ.ಸಿ ಬಿಲ್ಲು ಹಾಗೂ ಎನ್.ಡಿ.ಸಿ ಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಲಾಗಿದೆ. ಆದ್ದರಿಂದ ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.1,96.000/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |
| **78. <u>ಕೆ.ಟಿ.ಪಿ.ಪಿ ಕಾಯ್ದೆ 2000ರನ್ವಯ ಈ–ಪ್ರೊಕ್ಯೂರ್ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ಮೆಸ್ ಗುತ್ತಿಗೆ ನೀಡಿರುವುದು:– (ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ)</u>**<br><br>2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ 19 ವಿದ್ಯಾರ್ಥಿ ನಿಲಯಗಳಿಗೆ ಮೆಸ್ ಗುತ್ತಿಗೆಯನ್ನು ಗುತ್ತಿಗೆದಾರರಿಗೆ ವಹಿಸಿಕೊಟ್ಟು ಮೆಸ್ ಗುತ್ತಿಗೆದಾರರಿಗೆ ಪಾವತಿಸಿರುವ ಓಚರ್‌ಗಳನ್ನು ಪರಿಶೀಲಿಸಲಾಗಿ ರೂ.3,48,70,149/–ಗಳನ್ನು ಪಾವತಿಸಲಾಗಿರುತ್ತದೆ. ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯು ದಿನಾಂಕ:12.06.2014 ರಂದು ಪ್ರಥಮ ಸಭೆಯನ್ನು ನಡೆಸಿ ಸಭಾ ನಡಾವಳಿಯ ಕ್ರಮ ಸಂಖ್ಯೆ:02 ರ ತೀರ್ಮಾನದಲ್ಲಿ ಮೆಸ್ ಗುತ್ತಿಗೆಯನ್ನು ನೀಡಲು ಈ–ಪ್ರೊಕ್ಯೂರ್ಮೆಂಟ್ ಮೂಲಕವೋ, ಹಾಲಿ ಮೆಸ್ ಗುತ್ತಿಗೆದಾರರ ಮರು ನೇಮಕವೋ ಅಥವಾ ನೇರ ಸಂದರ್ಶನದ ಮೂಲಕ | ದಿನಾಂಕ 12.06.2015ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2015–16ನೇ ಸಾಲಿನ ವಿಶ್ವವಿದ್ಯಾನಿಲಯದ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ನಡಾವಳಿಯ ಕ್ರಮ ಸಂಖ್ಯೆ 2ರಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಮೆಸ್ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ ಇ–ಟೆಂಡರ್ ಆಹ್ವಾನಿಸುವ ಮೂಲಕವೋ ಅಥವಾ ತೆರೆದ ಟೆಂಡರ್ ಕರೆದು ನೇರ ಸಂದರ್ಶನದ ಮೂಲಕ ನೇಮಿಸುವುದೋ ಎಂಬುದರ ಬಗ್ಗೆ ವಿಷಯವನ್ನು ಮಂಡಿಸಿದ್ದು ಸದರಿ ಸಭೆಯಲ್ಲಿ ಪ್ರೊಕ್ಯೂರ್‌ಮೆಂಟ್ ಹಾಗೂ ತೆರೆದ ಟೆಂಡರ್ |

| | |
|---|---|
| ಎಲ್ಲ ವಿದ್ಯಾರ್ಥಿ ನಿಲಯಗಳಿಗೆ ಮೆಸ್ ಗುತ್ತಿಗೆದಾರರನ್ನು ನೇಮಕ ಮಾಡಿಕೊಳ್ಳಲು ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರಿಗೆ ಸಮಿತಿಯು ನಿರ್ದೇಶನ ನೀಡಿರುವ ತೀರ್ಮಾನ ಕೈಗೊಂಡಿರುತ್ತದೆ. ದಿನಾಂಕ:17.07.2015ರ ಮೆಸ್ ಸಮಿತಿ ಸಭೆಯ ನಡಾವಳಿಯನ್ವಯ ಮೆಸ್ ಗುತ್ತಿಗೆದಾರರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಮೆಸ್ ಸಮಿತಿಯ ಒಟ್ಟು 9 ಜನ ಸದಸ್ಯರಲ್ಲಿ ಪ್ರೊ॥ ಖೈಸರ್ ನಿಖಿಮ್ ರವರು ಕಾನೂನಿನ ನಿಯಮದನ್ವಯ ಮೆಸ್ ಗುತ್ತಿಗೆಯನ್ನು ನೀಡಬೇಕೆಂದು ತಿಳಿಸಿರುತ್ತಾರೆ. ಅದೇ ರೀತಿ ಮತ್ತೋರ್ವ ಸದಸ್ಯರಾದ ಪ್ರೊ॥ ರಾಜಣ್ಣರವರು ಟೆಂಡರ್ ಪ್ರಕ್ರಿಯೆ ಕೈಗೊಂಡು ಮೆಸ್ ಗುತ್ತಿಗೆಯನ್ನು ನೀಡಬೇಕೆಂದು ತಿಳಿಸಿರುತ್ತಾರೆ. ಮೆಸ್ ಸಮಿತಿಯ ಅಧ್ಯಕ್ಷರಾದ ಪ್ರೊ॥ ಬಸವರಾಜು.ಸಿ, ಕುಲಸಚಿವರು ರವರು ಮಾತನಾಡುತ್ತಾ ಟೆಂಡರ್‌ದಾರರ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳಲು ಏನಾದರೂ statutes, regulations ಅಥವಾ ಕಾನೂನು ಆಡಳಿತದಲ್ಲಿ (ಆಡಿಟ್ ಆಕ್ಷೇಪಣೆ ಹೊರತು ಪಡಿಸಿ) ಮಾರ್ಗ ಸೂಚಿಗಳೇನಾದರೂ ಇದ್ದರೆ ತಿಳಿಸುತ್ತಾ ಈ ಸಭೆಯಲ್ಲಿ ಕೈಗೊಂಡ ತೀರ್ಮಾನವೇ ಅಂತಿಮವೆಂದು ತಿಳಿಸಿರುತ್ತಾರೆ.<br><br>ಈ ಮೇಲೆ ತಿಳಿಸಿರುವ ಮೆಸ್ ಸಲಹಾ ಸಮಿತಿ ಸದಸ್ಯರುಗಳು ಮತ್ತು ಅಧ್ಯಕ್ಷರು ಕೆ.ಟಿ.ಪಿ.ಪಿ ಕಾಯ್ದೆ 1999/2000ರ ಕಾಯ್ದೆಯ ಬಗ್ಗೆ ಗಮನಿಸದೆ ಕಾಯ್ದೆಯನ್ನು ಉಲ್ಲಂಘಿಸಿ ಮೆಸ್ ಗುತ್ತಿಗೆಯನ್ನು ಈ–ಪ್ರೊಕ್ಯೂರ್ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ಹಳೆಯ ಮೆಸ್ ಗುತ್ತಿಗೆದಾರರನ್ನೇ 2015–16ನೇ ಸಾಲಿಗೆ ಮುಂದುವರೆಸಿರುವ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರಸಂಖ್ಯೆ:03 ದಿನಾಂಕ:23.04.2018ರಲ್ಲಿ ಕೋರಲಾಗಿ ಯಾವುದೇ ಸೂಕ್ತ ವಿವರವನ್ನಾಗಲಿ, ಈ–ಪ್ರೊಕ್ಯೂರ್ಮೆಂಟ್ ಕೈಗೊಂಡ ಕಡತಗಳನ್ನಾಗಲೀ ಲೆಕ್ಕ ತನಿಖೆಗೆ ಹಾಜರು ಪಡಿಸದಿರುವುದಿಲ್ಲ. 2014–15ನೇ ಸಾಲಿನ ಲೆಕ್ಕತನಿಖಾ ವರದಿಗಳಲ್ಲಿ ಹಳೆಯ ಟೆಂಡರ್‌ದಾರರನ್ನೇ ಮುಂದುವರೆಸಿ ಮೆಸ್ ಗುತ್ತಿಗೆಯನ್ನು ನೀಡಿರುವುದನ್ನು ಆಕ್ಷೇಪಿಸಿದ್ದರೂ ಹಾಗೂ ಕೆ.ಟಿ.ಪಿ.ಪಿ ಕಾಯ್ದೆ 2000ನೇ ಸಾಲಿನ ಟೆಂಡರ್ ಪ್ರಕ್ರಿಯೆ ಮಾಡದೆ ನಿಯಮ ಉಲ್ಲಂಘಿಸಿ 2013–14ರ ಗುತ್ತಿಗೆದಾರರನ್ನು ಮುಂದುವರೆಸಿರುವುದಕ್ಕೆ ಆರ್ಥಿಕ ಇಲಾಖೆಯಿಂದ **4 (ಜಿ)** ವಿನಾಯಿತಿ ಪಡೆದಿರುವುದಾಗಲೀ ಅಥವಾ ಟೆಂಡರ್ ಪ್ರಕ್ರಿಯೆ ಮಾಡದೆ ಹಿಂದಿನ ಗುತ್ತಿಗೆದಾರರನ್ನೇ ಮುಂದುವರಿಸಲು ಸರ್ಕಾರದ ಅನುಮತಿ ಇರುವುದಿಲ್ಲ. ಹೀಗಿದ್ದರೂ ಸಹ ಭೋಜನ ವ್ಯವಸ್ಥೆ ಸಮಿತಿ ಅನುಮೋದನೆ ನೀಡಿ ಎಂದು ತಿಳಿಸಲಾಗಿದೆ. ಸಮಿತಿ ಸದಸ್ಯರು ಟೆಂಡರ್ ಪ್ರಕ್ರಿಯೆ ಮೂಲಕ ಮಾಡುವಂತೆ ಸೂಚಿಸಿದರೂ ಸಹ ಅಧ್ಯಕ್ಷರು ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಹಿಂದಿನ ಗುತ್ತಿಗೆದಾರರನ್ನು ಮುಂದುವರಿಸಲು ಆದೇಶಿಸಲಾಗಿದೆ. ಸದರಿ ಸಮಿತಿಗೆ ಶಾಸನ ಬದ್ಧ ಅಧಿಕಾರ ಇರುವುದಿಲ್ಲ. ಆದ್ದರಿಂದ ಕೆ.ಟಿ.ಪಿ.ಪಿ ನಿಯಮ 4,9 ಅನ್ನು ಉಲ್ಲಂಘಿಸಿರುವುದರಿಂದ ಕೆ.ಟಿ.ಪಿ.ಪಿ ನಿಯಮ 23ರನ್ವಯ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸುತ್ತಾ **ರೂ.3,48,70,149/–ಗಳನ್ನು** ಆಕ್ಷೇಪಣೆಗೆ ಸೂಚಿಸಿದೆ. ವಿವರಗಳನ್ನು **ಅನುಬಂಧ-58ರಲ್ಲಿ** ನೀಡಲಾಗಿದ್ದು ವರದಿಗೆ ಲಗತ್ತಿಸಿದೆ. | ವ್ಯವಸ್ಥೆಯ ಸಾಧಕಬಾಧಕಗಳ ಬಗ್ಗೆ ಚರ್ಚಿಸಿ, ವಿದ್ಯಾರ್ಥಿನಿಲಯಗಳಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವಂತೆ ತೆರೆದ ಟೆಂಡರ್ ಕರೆದು ನೇರ ಸಂದರ್ಶನದ ಮೂಲಕ ಮೆಸ್ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಹಾಗೂ ಇದಕ್ಕೆಂದೇ ಒಂದು ಪ್ರತ್ಯೇಕ ಆಯ್ಕೆ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದ್ದು ಈ ಬಗ್ಗೆ ದಿನಾಂದ 23.07.2015ರಂದು ನಡೆದ ಸಿಂಡಿಕೇಟ್ ಸಭೆಯಿಂದ ಅನುಮೋದನೆ ಪಡೆಯಲಾಗಿದೆ. ಪ್ರತಿ ಲಗತ್ತಿಸಿದೆ.<br><br>ಹಾಗೂ ದಿನಾಂಕ 17.07.2015ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಕ್ಕೆ ಮೆಸ್ ಸಮಿತಿಯ ಸಭೆಯು ಸದಸ್ಯರುಗಳ ಸಲಹೆ ಹಾಗೂ ಸೂಚನೆಗಳನ್ನು ಕೂಲಂಕುಷವಾಗಿ ಚರ್ಚಿಸಿ ಸಭೆಯು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಮೆಸ್ ಗುತ್ತಿಗೆದಾರರನ್ನು ಒಂದು ವರ್ಷದ ಮಟ್ಟಿಗೆ ಷರತ್ತಿಗೊಳಪಟ್ಟು ಮುಂದುವರಿಸುವುದು ಹಾಗೂ ಮುಂದಿನ ಆದೇಶ ನೀಡುವವರೆಗೂ ಹಳೆಯ ದರದಲ್ಲಿಯೇ ಮೆಸ್ ವ್ಯವಸ್ಥೆಯನ್ನು ಮುಂದುವರೆಸುವುದಾಗಿ ಹಾಗೂ ಹಿಂದಿನ ಸಾಲಿನ ಟೆಂಡರ್ ದಾರರು ಉತ್ತಮ ಭೋಜನ ನೀಡುತ್ತಿದ್ದು ವಿದ್ಯಾರ್ಥಿಗಳಿಂದ ಯಾವುದೇ ದೂರು ಹಾಗೂ ಆಕ್ಷೇಪಣೆಗಳು ಬಂದಿಲ್ಲವಾದರಿಂದ ಹಾಗೂ ಸ್ನಾತಕ ಪೂರ್ವ ತರಗತಿಗಳು ಪ್ರಾರಂಭ ಹಂತದಲ್ಲಿದ್ದು ತುರ್ತಾಗಿ ಮೆಸ್ ಪ್ರಾರಂಭ ಮಾಡಬೇಕಾಗಿರುವುದರಿಂದ ಅವರುಗಳನ್ನೇ ಮುಂದುವರೆಸಲು ಸಮಿತಿಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿರುತ್ತಾರೆ. ಅದರನ್ವಯ 2015–16ನೇ ಸಾಲಿನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯನ್ನು ನಿರ್ವಹಿಸಲಾಗಿರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಬಯಸುತ್ತಾ ಕಂಡಿಕೆಯಲ್ಲಿ ಆಕ್ಷೇಪಣೆ ಮೊತ್ತ ರೂ.3,48,70,149/–ಗಳನ್ನು ಕೈಬಿಡುವಂತೆ ಕೋರಲಾಗಿದೆ. |

| | |
|---|---|
| **79. ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಊಟ ಸರಬರಾಜು ಮಾಡಿದ ಗುತ್ತಿಗೆದಾರರ ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನತೆಗಳ ಬಗ್ಗೆ:** (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ)<br><br>ಉಪಕುಲಸಚಿವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಮೈಸೂರು, ಈ ಕಛೇರಿ ವ್ಯಾಪ್ತಿಗೆ 19 ವಸತಿನಿಲಯಗಳು ಕಾರ್ಯ ನಿರ್ವಹಿಸಲ್ಪಡುತ್ತಿದೆ. ಈ 19 ಹಾಸ್ಟೆಲ್‌ಗಳಲ್ಲಿ 17 ಹಾಸ್ಟೆಲ್‌ಗಳಲ್ಲಿ 2015–16ನೇ ಸಾಲಿನಲ್ಲಿ ಊಟ ಸರಬರಾಜು ಮಾಡಿದ ಗುತ್ತಿಗೆದಾರರ ಬಿಲ್ಲುಗಳನ್ನು ಪರಿಶೀಲಿಸಲಾಗಿ ವಿವರ ಕೆಳಕಂಡಂತಿರುತ್ತದೆ.<br><br>2015–16ನೇ ಸಾಲಿನಲ್ಲಿ– 3,35,36,246/–ಅನ್ನು 15 ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ.<br><br>ಮೇಲ್ಕಂಡ ಪಾವತಿ ಬಗ್ಗೆ ವಿವರವಾಗಿ ಪರಿಶೀಲಿಸಲಾಗಿ ವಿದ್ಯಾರ್ಥಿಗಳ ಹಾಜರಾತಿ ಹಾಗೂ ಗುತ್ತಿಗೆದಾರರ ಬಿಲ್ಲುಗಳೊಂದಿಗೆ ತಾಳೆ ಮಾಡುವಾಗ ವಿದ್ಯಾರ್ಥಿಗಳ ಹಾಜರಾತಿ ವಹಿಯಲ್ಲಿ ವಿದ್ಯಾರ್ಥಿಗಳ ಹೆಸರಿನ ಮುಂದೆ 'ಪಿ' ಎಂದು ಅಕ್ಷರವನ್ನು ನಮೂದಿಸಿ ಶೇ.100 ಭಾಗ ಹಾಜರಾತಿ ಬಿಲ್ಲನ್ನು ಗುತ್ತಿಗೆದಾರರಿಗೆ ಪಾವತಿಸಿರುತ್ತಾರೆ. ಹಾಜರಾತಿ ವಹಿಯಲ್ಲಿ ವಿದ್ಯಾರ್ಥಿಗಳ ಸಹಿ ಪಡೆದು ನಂತರವೇ ಗುತ್ತಿಗೆದಾರರ ಬಿಲ್ಲನ್ನು ಅನುಮೋದಿಸಿ ನಂತರ ಪಾವತಿಸಬೇಕಾಗಿರುತ್ತದೆ. ಆದರೆ, ಹಾಜರಾತಿ ವಹಿಯಲ್ಲಿ 'ಪಿ' ಎಂದು ನಮೂದಿಸಿ ಗುತ್ತಿಗೆದಾರರಿಗೆ ಪಾವತಿಸಲಾಗಿರುವುದು ಸಂಶಯಕ್ಕೆ ಎಡೆಮಾಡಿ ಕೊಟ್ಟಿದೆ. ಈ ಬಗ್ಗೆ ಸೂಕ್ತ ಕ್ರಮ ವಹಿಸಿ ವಿದ್ಯಾರ್ಥಿಗಳ ಸಹಿ ಏಕೆ ಪಡೆದಿಲ್ಲ ಎಂಬ ಬಗ್ಗೆ ವಿವರಣೆ ಒದಗಿಸುವುದು. | ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಊಟ ಸರಬರಾಜು ಮಾಡಿದ ಗುತ್ತಿಗೆದಾರರ ಬಿಲ್ಲುಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಪುಸ್ತಕದನ್ವಯ "ಪಿ" ಎಂಬುದಾಗಿ ನಮೂದಿಸಿದೆ. ಹಾಗೂ ಇದು ವಿದ್ಯಾರ್ಥಿನಿಲಯದ ಶಿಕ್ಷಕ ಸಲಹೆಗಾರರಿಂದ ದೃಡೀಕರಿಸಲ್ಪಟ್ಟಿರುತ್ತದೆ. ವಿದ್ಯಾರ್ಥಿಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುತ್ತಾರೆ. ಪ್ರತೀ ಬಿಲ್ಲು ತಯಾರಿಸುವ ಸಂದರ್ಭದಲ್ಲಿ ಎಲ್ಲಾ ವಿದ್ಯಾರ್ಥಿಗಳಿಂದ ಸಹಿ ಪಡೆಯುವುದು ಕಷ್ಟಸಾಧ್ಯವಾಗಿರುತ್ತದೆ. ಹೀಗಾಗಿ ಹಾಜರಾತಿ ಪುಸ್ತಕದಲ್ಲಿನ ಹಾಜರಾತಿಯನ್ವಯ ಬಿಲ್ಲಿನಲ್ಲಿ "ಪಿ" ಎಂದು ನಮೂದಿಸಿ ದೃಡೀಕರಿಸಲಾಗಿರುತ್ತದೆ.<br><br>ಆದ್ದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| **80. ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಊಟ ಸರಬರಾಜು ಮಾಡಿದ ಗುತ್ತಿಗೆದಾರರ ಟೆಂಡರ್ ಪ್ರಕ್ರಿಯೆಯಲ್ಲಿನ ನ್ಯೂನತೆಯ ಬಗ್ಗೆ:**<br><br>ಉಪಕುಲಸಚಿವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಕಛೇರಿಯ ವ್ಯಾಪ್ತಿಗೆ ಬರುವ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಊಟ ಸರಬರಾಜು ಮಾಡಿದ ಗುತ್ತಿಗೆದಾರರ ಆಯ್ಕೆ ಮತ್ತು ಟೆಂಡರ್ ಪ್ರಕ್ರಿಯೆ ಬಗ್ಗೆ ಕೋರಲಾಗಿ ಸದರಿ ಗುತ್ತಿಗೆದಾರರ ಟೆಂಡರ್ ಪ್ರಕ್ರಿಯೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಡೀನ್ ಕಛೇರಿಯಿಂದ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತದೆ ಎಂದು ಈ ಕಛೇರಿಯಲ್ಲಿ ತಿಳಿಸಿರುತ್ತಾರೆ. ಸದರಿ ಗುತ್ತಿಗೆದಾರರ ಒಪ್ಪಂದದ ಕರಾರು(17)ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ಇವುಗಳನ್ನು ಪರಿಶೀಲಿಸಲಾಗಿ ಕೆ.ಟಿ.ಪಿ.ಪಿ ನಿಯಮದ ಪ್ರಕಾರ ಗುತ್ತಿಗೆದಾರರ ಆಯ್ಕೆಯ ಬಗ್ಗೆ ಪ್ರತಿ ವಾರ್ಷಿಕ ಟೆಂಡರ್ ಕರೆದು ಕಡಿಮೆ ದರವನ್ನು ಸೂಚಿಸಿರುವ ಗುತ್ತಿಗೆದಾರರಿಗೆ ಮಾತ್ರ | ಈ ಕಂಡಿಕೆಯ ಆಕ್ಷೇಪಣೆಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ಕೆ.ಟಿ.ಪಿ.ಪಿ ಕಾಯ್ದೆ 2000ರ ಅನ್ವಯ ಇ –ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೇ ಮೆಸ್ ಗುತ್ತಿಗೆ ನೀಡಿರುವುದು ಎಂಬ ಬಗ್ಗೆ ಕಂಡಿಕೆ78.00ರಲ್ಲಿ ವಿವರವಾದ ಅನುಪಾಲನಾ ವರದಿ ಸಲ್ಲಿಸಲಾಗಿದೆ.<br><br>ಆದ್ದರಿಂದ ಈ ಆಕ್ಷೇಪಣೆಯನ್ನು ಇಲ್ಲಿ ಕೈ ಬಿಡಲು ಕೋರಿದೆ. |

| | |
|---|---|
| ಕಾರ್ಯದೇಶ ನೀಡಬೇಕಾಗಿರುತ್ತದೆ. ಆದರೆ, ಸದರಿ ಒಪ್ಪಂದ ಕರಾರನ್ನು ಯಾವುದೇ ಟೆಂಡರ್ ಕರೆಯದೇ ನೇರವಾಗಿ ಅಡುಗೆ ಗುತ್ತಿಗೆದಾರರನ್ನು ನೇಮಿಸಿದ್ದು ಇದು ಕೆ.ಟಿ.ಪಿ.ಪಿ 1999/2000ರ ನಿಯಮ 4(1)ರ ನಿಯಮದ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ. | |
| **81. M/S Datanet India Pvt Ltd ರವರಿಂದ Online Statistical database ತಂತ್ರಾಂಶವನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವುದು:– (ಸ್ನಾತಕೋತ್ತರ ಗ್ರಂಥಾಲಯ)**<br><br>2015–16ನೇ ಸಾಲಿನ ಸ್ನಾತಕೋತ್ತರ ಗ್ರಂಥಾಲಯ ವಿಭಾಗದಲ್ಲಿ M/S Datanet India Pvt Ltd ರವರಿಂದ Online Statistical database ತಂತ್ರಾಂಶವನ್ನು ಖರೀದಿಸಲಾಗಿದ್ದು, ಸದರಿ ತಂತ್ರಾಂಶವನ್ನು ಖರೀದಿಸಲು ಬಿ.ಆರ್. ಸಂಖ್ಯೆ:478 ಧನಾದೇಶ ಸಂಖ್ಯೆ:821964/ದಿನಾಂಕ:15.06.2015 ರಲ್ಲಿ ರೂ.2,56,181/–ಗಳನ್ನು ವೆಚ್ಚ ಭರಿಸಲಾಗಿದ್ದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ನಿಯಮ 1999–2000 ರ ನಿಯಮ 4(e) ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡು ತಂತ್ರಾಂಶವನ್ನು ಖರೀದಿಸದೆ, ಸೋಲ್ ಪ್ರೊಪ್ರೈಟರ್ ಎಂದು ಸದರಿ ಕಂಪನಿಯವರಿಂದ ದೃಢೀಕರಣವನ್ನು ಪಡೆದು ಖರೀದಿಸಲಾಗಿದ್ದು 4(g) ವಿನಾಯಿತಿಯನ್ನು ಪಡೆದಿರುವ ಆದೇಶವನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುವುದಿಲ್ಲ. ಟೆಂಡರ್ ಕರೆಯದೇ Data base ಖರೀದಿಸಿರುವುದರಿಂದ ಸ್ಪರ್ಧಾತ್ಮಕ ದರಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಟೆಂಡರ್ ಕರೆದಿದ್ದಲ್ಲಿ ಇವರಿಗಿಂತ ಬೇರೆಯವರು ಕಡಿಮೆದರ ನಮೂದಿಸುವ ಅವಕಾಶವಿತ್ತು. ಆಗ ವಿಶ್ವವಿದ್ಯಾನಿಲಯಕ್ಕೆ ಉಳಿತಾಯವಾಗುತ್ತಿತ್ತು ಎಂಬುದನ್ನು ಲೆಕ್ಕತಪಾಸಣೆಯಲ್ಲಿ ಗಮನಿಸಲಾಗಿದೆ.<br><br>ಕೆ.ಟಿ.ಪಿ.ಪಿ ಕಾಯ್ದೆ 1999–2000ರ ನಿಯಮ 4(g) ವಿನಾಯಿತಿಯನ್ನು ಸರ್ಕಾರದಿಂದ ಪಡೆದಿರುವ ಆದೇಶವನ್ನು ಲೆಕ್ಕತನಿಖೆಗೆ ಹಾಜರು ಪಡಿಸುವವರೆಗೆ M/S Datanet India Pvt Ltd, ರವರಿಗೆ ಪಾವತಿಸಿರುವ ಮೊತ್ತ **ರೂ.2,56,181/– ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** | M/S Datanet India Pvt Ltd ರವರು ಭಾರತದಾದ್ಯಂತ ಪ್ರಖ್ಯಾತಿ ಹೊಂದಿದ ಸಂಸ್ಥೆಯಾಗಿದ್ದು; database ಅಂಕಿ ಅಂಶಗಳನ್ನು ಸಂಗ್ರಹಿಸಿ 56 ವಿಷಯಗಳಲ್ಲಿ ನಿಗದಿತ ನಮೂನೆಯಲ್ಲಿ ಅಂಕಿ ಅಂಶಗಳನ್ನು ನೀಡುವ ಏಕೈಕ ಸಂಸ್ಥೆಯಾಗಿರುತ್ತದೆ.ಇದರ ಸೌಲಭ್ಯವನ್ನು ಎಲ್ಲಾ ವಿಶ್ವವಿದ್ಯಾನಿಲಯಗಳು, ಸಂಶೋಧನಾ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳು ಚಂದಾ ನೀಡಿ ಮಾಹಿತಿ ಪಡೆಯುತ್ತಿರುತ್ತಾರೆ. ಇದು **Online Statistical database** ಮಾಹಿತಿ ಆಗಿರುತ್ತದೆಯೇ ವಿನಹ: ತಂತ್ರಾಂಶ ಆಗಿರುವುದಿಲ್ಲ. ಈ ಸಂಸ್ಥೆಯವರು ಅಂತರ್ಜಾಲದಲ್ಲಿ ಮಾಹಿತಿಗಳು ಲಭ್ಯವಾಗುವಂತೆ ಮಾಡಿ ಕಡಿಮೆದರದಲ್ಲಿ ನೀಡುವ ಸಂಸ್ಥೆ ಬೇರೆ ಯಾವುದೂ ಇಲ್ಲ.<br><br>ಇವರ ಸೋಲ್ ಅಕ್ಸೆಸ್ ದೃಢೀಕರಣ ಪತ್ರವನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ.<br><br>ಹಾಗಾಗಿ ಈ ಕಾರ್ಯಕ್ಕೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ.<br><br>ಆದ್ದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **82. M/S Manupatra Information Solutions Pvt Ltd ರವರಿಂದ Manupatra Legal database ತಂತ್ರಾಂಶವನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವುದು:– (ಸ್ನಾತಕೋತ್ತರ ಗ್ರಂಥಾಲಯ)** | |

2015–16ನೇ ಸಾಲಿನ ಸ್ನಾತಕೋತ್ತರ ಗ್ರಂಥಾಲಯ ವಿಭಾಗದಲ್ಲಿ ವಿವಿಧ ನ್ಯಾಯಾಲಯಗಳ ತೀರ್ಪಿನ ಆದೇಶಗಳನ್ನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಸಹಕರಿಸುವ Manupatra Legal database ತಂತ್ರಾಂಶವನ್ನು ಖರೀದಿಸಿದ್ದು, ಬಿ.ಆರ್ ಸಂಖ್ಯೆ:536/ದಿನಾಂಕ:29.02.2016, ಧನಾದೇಶ ಸಂಖ್ಯೆ:822576/ದಿನಾಂಕ:29.03.16 ರಲ್ಲಿ ರೂ.1,71,750/–ಗಳನ್ನು M/S Manupatra Information Solutions Pvt Ltd ರವರಿಗೆ ಪಾವತಿಸಿರುವುದು ಲೆಕ್ಕತನಿಖೆಯಲ್ಲಿ ಕಂಡುಬಂದಿರುತ್ತದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ನಿಯಮ 1999–2000ರ ನಿಯಮ 4(e) ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡು ತಂತ್ರಾಂಶವನ್ನು ಖರೀದಿಸಬೇಕಾಗಿರುತ್ತದೆ. ಆದರೆ, ಸದರಿ ಕಂಪನಿಯವರಿಂದ ಸೋಲ್ ಪ್ರೊಪ್ರೈಟರ್ ಎಂದು ದೃಢೀಕರಣವನ್ನು ಪಡೆದು ತಂತ್ರಾಂಶವನ್ನು ಖರೀದಿಸಿದ್ದು, 4(g) ವಿನಾಯಿತಿಯನ್ನು ಪಡೆದಿರುವ ಆದೇಶವನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುವುದಿಲ್ಲ.

ಕೆ.ಟಿ.ಪಿ.ಪಿ ಕಾಯ್ದೆ–1999–2000ರ ನಿಯಮ 4(g) ವಿನಾಯಿತಿಯನ್ನು ಸರ್ಕಾರದಿಂದ ಪಡೆದಿರುವ ಆದೇಶವನ್ನು ಲೆಕ್ಕತನಿಖೆಗೆ ಹಾಜರು ಪಡಿಸುವವರೆಗೆ M/S Manupatra Information Solutions Pvt Ltd ರವರಿಗೆ ಪಾವತಿಸಿರುವ ಮೊತ್ತ **ರೂ.1,71,750/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.**

**M/S Manupatra Information Solutions Pvt Ltd** ಸಂಸ್ಥೆಯು ನ್ಯಾಯಾಲಯ ಕ್ಷೇತ್ರದಲ್ಲಿ ಪರಾಮರ್ಶನ ಗ್ರಂಥಗಳು, ನಿಯತಕಾಲಿಕೆಗಳು ಹಾಗೂ ಕಾನೂನು ಕಾಯಿದೆಗಳನ್ನು ಆನ್‌ಲೈನ್ ಮೂಲಕ ಸರಬರಾಜು ಮಾಡುವ ಸಂಸ್ಥೆಯಾಗಿರುತ್ತದೆ. ಈ ಸೌಲಭ್ಯವನ್ನು ಪಡೆಯಲು ಅನೇಕ ವಿಶ್ವವಿದ್ಯಾನಿಲಯಗಳು, ಕಾನೂನು ಕಾಲೇಜುಗಳು ಹಾಗೂ ಸರ್ಕಾರಿ ಸಂಸ್ಥೆಗಳು ಮಾಹಿತಿಗಾಗಿ ಚಂದಾದಾರರಾಗಿರುತ್ತಾರೆ. ಮುಖ್ಯವಾಗಿ ನ್ಯಾಯಶಾಸ್ತ್ರದ ಮಾಹಿತಿ ಕಣಜಕ್ಕಾಗಿ ಮಾಹಿತಿ ಹಾಗೂ ಪ್ರಕಟಣೆಗಳನ್ನು ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿ ನಿಗದಿತ ನಮೂನೆಯಲ್ಲಿ ಅಂತರ್ಜಾಲದಲ್ಲಿ ಲಭ್ಯವಾಗುವಂತೆ ಮಾಡುವ ಏಕೈಕ ಸಂಸ್ಥೆ ಇದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸೋಲ್ ಅಕ್ಸೆಸ್ ದೃಢೀಕರಣ ಪತ್ರವನ್ನು ಲಗತ್ತಿಸಿದೆ. ಮತ್ತು ಗ್ರಂಥ ಪತ್ರಿಕೆಗಳಿಗೆ ಟೆಂಡರ್ ಕರೆಯುವ ಪದ್ಧತಿಯನ್ನು ಕೂಡ ಭಾರತ ಸರ್ಕಾರ ತೆಗೆದುಹಾಕಿರುತ್ತದೆ. ಪ್ರತಿಯನ್ನು ಲಗತ್ತಿಸಿದೆ.

ಈ ಸಂಸ್ಥೆಯು ಅಂತರ್ಜಾಲದಲ್ಲಿ ಮಾಹಿತಿ ದತ್ತಾಂಶ ಕೋಶ ಆಗಿರುತ್ತದೆಯೇ ವಿನಹ: ತಂತ್ರಾಂಶ ಆಗಿರುವುದಿಲ್ಲ.

ಹಾಗಾಗಿ ಇದಕ್ಕೆ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದಿಲ್ಲ ಎಂಬ ಮಾಹಿತಿಯನ್ನು ನೀಡುತ್ತಾ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

**83. <u>ಪಂಡಿತಾವೃತ್ತಿ ಪುಸ್ತಕ ಮಾಲೆಗಳ ಮುದ್ರಣವನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಮಾಡಿಸಿರುವುದು :– (ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)</u>**

ಕುವೆಂಪು ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಕನಕದಾಸ ಕೀರ್ತನೆಗಳು ಪಂಡಿತಾವೃತ್ತಿ ಮತ್ತು ಜನಪ್ರಿಯ ಆವೃತ್ತಿ ಪುಸ್ತಕ ಮಾಲೆಗಳ ಮುದ್ರಣಗಳನ್ನು ವಿವಿಧ ಮುದ್ರಕರಿಂದ ಮುದ್ರಣ ಮಾಡಿಸಿರುವ ಹುಂಡಿಗಳು/ಓಚರ್‌ಗಳನ್ನು 2015–16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿದ್ದು, ಪಾವತಿಯ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಬಿ.ಆರ್ ಸಂಖ್ಯೆ ದಿನಾಂಕ | ಧನಾದೇಶ ಸಂಖ್ಯೆ ದಿನಾಂಕ | ಪ್ರಕಾಶಕರ ವಿವರ | ಮೊತ್ತ |
|---|---|---|---|---|

2015–16ನೇ ಸಾಲಿನಲ್ಲಿ ಪಂಡಿತಾವೃತ್ತಿ ಮತ್ತು ಜನಪ್ರಿಯ ಆವೃತ್ತಿಯನ್ನು ಮುದ್ರಿಸಲು ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯದ ಪಠ್ಯಪುಸ್ತಕದ ಕಾರ್ಯವನ್ನು ಪ್ರಗತಿ ಗತಿಯಿಂದ ನಿರ್ವಹಿಸುತ್ತಿದ್ದುದರಿಂದ ಡಿ.ಟಿ.ಪಿ ಕಾರ್ಯವನ್ನು ನಿರ್ವಹಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದರಿಂದ ವಿವಿಧ ಸಂಸ್ಥೆಯವರು ದರಪಟ್ಟಿಯನ್ನು ಕರೆದು ಅದರಲ್ಲಿ ಅತಿ ಕಡಿಮೆ ದರವನ್ನು ನಮೂದಿಸಿರುವ ಅಭಿರುಚಿ ಪ್ರಕಾಶನ, ಮೈಸೂರು ಅವರಿಂದ ಡಿ.ಟಿ.ಪಿ ಕಾರ್ಯವನ್ನು ಮಾಡಿಸಲು ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ ಜಿಎಲ್1/367/2004–05, ದಿನಾಂಕ: 15.05.2015ರ ಪ್ರಕಾರ ಕಾರ್ಯವನ್ನು ನಿರ್ವಹಿಸಿ ರೂ.44,768.00 ಹುಂಡಿಯನ್ನು

| | | | | |
|---|---|---|---|---|
| 1 | 43/08.06.2015 | 806369/10.07.2015 | ವಾಣಿ ಪ್ರೆಸ್ | 99350 |
| 2 | 26/27 | 806346/16.06.2015 | ಅಭಿರುಚಿ ಪ್ರಕಾಶನ | 44768 |
| | | | ಒಟ್ಟು | **144118** |

ಮೇಲಿನ ಪಾವತಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ:01/ದಿನಾಂಕ:12.06.2018 ಮತ್ತು 06/ದಿನಾಂಕ:15.06.2018ರಲ್ಲಿ ಕೋರಲಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುವುದಿಲ್ಲ. 'ಪಡಿತಾವೃತ್ತಿ' ಪುಸ್ತಕ ಮಾಲೆ ಮುದ್ರಣಕ್ಕೆ ಸಂಬಂಧಿಸಿದ, ಮುದ್ರಣ ಕಾರ್ಯಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ಮುದ್ರಣ ಮಾಡಿಸದೇ ಖಾಸಗಿ ಮುದ್ರಣ ಸಂಸ್ಥೆಗಳಿಂದ ಮುದ್ರಣ ಕಾರ್ಯ ಕೈಗೊಂಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ. ಜೊತೆಗೆ ಕೆ.ಟಿ.ಪಿ.ಪಿ ಕಾಯ್ದೆ 1999–2000ರ ನಿಯಮ 4, 4 (ಇ) ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಮುದ್ರಣ ಕಾರ್ಯಗಳನ್ನು ವಿಭಜಿಸಿ ಎರಡು ಸಂಸ್ಥೆಗಳಿಂದ ಮುದ್ರಣ ಕಾರ್ಯ ಮಾಡಿಸಿರುವುದು ಕೆ.ಟಿ.ಪಿ.ಪಿ ಕಾಯ್ದೆ 1999–2000 ರ ನಿಯಮ ಉಲ್ಲಂಘಿಸಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ಮುದ್ರಣ ಕಾರ್ಯ ಕೈಗೊಳ್ಳದೆ ಹಾಗೂ ಕೆ.ಟಿ.ಪಿ.ಪಿ ಕಾಯ್ದೆ 1999–2000ರ ನಿಯಮವನ್ನು ಉಲ್ಲಂಘಿಸಿ ಮುದ್ರಣ ಕಾರ್ಯಕೈಗೊಂಡಿರುವುದರಿಂದ **ರೂ.1,44,118/–ಗಳನ್ನು ಆಕ್ಷೇಪಿಸಲಾಗಿದ್ದು,** ಈ ಬಗ್ಗೆ ಕಛೇರಿ ಮುಖ್ಯಸ್ಥರು ಸೂಕ್ತ ವಿವರಣೆಯನ್ನು ನೀಡುವಂತೆ ಸೂಚಿಸಿದೆ.

ಪಾವತಿಸಲಾಗಿದೆ. ಹಾಗೆಯೇ ವಾಣಿ ಪ್ರೆಸ್ ರವರಿಂದ ಮುದ್ರಣ ಕಾರ್ಯವನ್ನು ಮಾಡಿಸಲು ಮೈಸೂರು ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ ಜಿಎಲ್1/367/2004–05 ದಿನಾಂಕ: 28.05.2015ಪಡೆದು ಮುದ್ರಿಸಲಾಗಿದೆ ಹಾಗೂ ರೂ.99,350.00ಗಳ ಹುಂಡಿಯನ್ನು ಪಾವತಿಯಾಗಿದೆ. ಇದರೊಡನೆ ದರಪಟ್ಟಿ ಮತ್ತು ತುಲನಾತ್ಮಕಪಟ್ಟಿ ಮತ್ತು ಆದೇಶದ ಪ್ರತಿಗಳನ್ನು ಲಗತ್ತಿಸಲಾಗಿದೆ.

ಹಾಗೆಯೇ ಡಿ.ಟಿ.ಪಿ ಕಾರ್ಯದ ಮತ್ತು ಮುದ್ರಣಕಾರ್ಯ ಬೇರೆಯಾಗಿರುವುದರಿಂದ ಟೆಂಡರ್ ಕರೆದಿರುವುದಿಲ್ಲವೆಂಬ ವಿಷಯವನ್ನು ತಮ್ಮ ಗಮನಕ್ಕೆ ತರಲಾಗಿದೆ. ಆಕ್ಷೇಪಣೆಯ ಮೊತ್ತ ರೂ.1,44,115.00ಗಳನ್ನು ಕೈಬಿಡಲು ಕೋರಲಾಗಿದೆ.

**84. <u>ವಚನ ಚಿಂತನ ಮಾಲೆ ಅಡಿಯಲ್ಲಿ ಕಿರು ಪುಸ್ತಕಗಳನ್ನು ಮುದ್ರಣ ಮಾಡಿಸಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಮುದ್ರಣ ಮಾಡಿಸಿರುವುದು :– (ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)</u>**

2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಮತ್ತು ವಿಸ್ತರಣಾ ಪೀಠದ ವತಿಯಿಂದ 'ವಚನ ಚಿಂತನಮಾಲೆ' ಅಡಿಯಲ್ಲಿ 30 ಕಿರು ಪುಸ್ತಕಗಳ ಮುದ್ರಣವನ್ನು ಸ್ವಾನ್ ಪ್ರಿಂಟರ್ಸ್ ಬೆಂಗಳೂರುರವರಿಂದ ಮಾಡಿಸಿಕೊಂಡು ಬಿ.ಆರ್.ಸಂಖ್ಯೆ 117/ಧನಾದೇಶ ಸಂಖ್ಯೆ:806/20.08.2015ರಲ್ಲಿ ರೂ.3,93,000/–ಗಳು ಹಾಗೂ ಬಿ.ಆರ್.ಸಂಖ್ಯೆ 127/03.10.2015 ರೂ.8,06,464/–ಗಳಿಗೆ ಬಿಲ್ಲನ್ನು ಸಲ್ಲಿಸಿದ್ದು, ಇದರಲ್ಲಿ ರೂ.3,47,029/–ಗಳು ಒಟ್ಟಾರೆಯಾಗಿ ರೂ.7,40,029/–ಗಳನ್ನು (393000 + 347029) ಪಾವತಿಸಿರುವ ಓಚರ್ಸ್‌ಗಳನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ 1999–2000ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡು ಮುದ್ರಣಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ. ಆದರೆ ಟೆಂಡರ್ ಪ್ರಕ್ರಿಯೆ

ಮೈಸೂರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಡಿವಿ–7/95/2010–11/ದಿನಾಂಕ:05.02.2014 ಮತ್ತು ದಿನಾಂಕ:18.7.2016ರ ಪ್ರಕಾರ ದರಪಟ್ಟಿಯನ್ನು ಕರೆದು ಅದರಲ್ಲಿ ಕಡಿಮೆ ದರ ನಮೂದಿಸಿರುವ ಮೆ॥ ಸ್ವ್ಯಾನ್ ಪ್ರಿಂಟರ್ಸ್, ಚಾಮರಾಜಪೇಟೆ ಬೆಂಗಳೂರು ಇವರಿಂದ ಮುದ್ರಣಕಾರ್ಯವನ್ನು ಕೈಗೊಂಡು ಪುಸ್ತಕಗಳನ್ನು ಪ್ರಕಟಣೆ ಮಾಡಿದೆ. (ಪ್ರತಿಗಳನ್ನು ಲಗತ್ತಿಸಲಾಗಿದೆ.)

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯವು ಪಠ್ಯಪುಸ್ತಕಗಳ ಮುದ್ರಣ ಕಾರ್ಯದಲ್ಲಿ ತೊಡಗಿದ್ದರಿಂದ, ಇಲ್ಲಿ ಮುದ್ರಿಸಲು ಸಾಧ್ಯವಾಗದ ಕಾರಣ ಈ ಪುಸ್ತಕಗಳ ಮುದ್ರಣ ಕಾರ್ಯವನ್ನು ಮೇಲಿನ ಸಂಸ್ಥೆಯಲ್ಲಿ ಮಾಡಿಸಬೇಕಾದ ಅನಿವಾರ್ಯತೆ ಒದಗಿತ್ತು.

| | |
|---|---|
| ಕೈಗೊಳ್ಳದೇ ಕೆ.ಟಿ.ಪಿ.ಪಿ ಕಾಯ್ದೆ 1999–2000 ರ ನಿಯಮ – 4ನ್ನು ಉಲ್ಲಂಘಿಸಿ ದರ ಪಟ್ಟಿಗಳನ್ನು ಪಡೆದು ಮುದ್ರಣ ಮಾಡಿಸಿರುವುದು ನಿಯಮಕ್ಕೆ ವಿರುದ್ಧವಾಗಿರುತ್ತದೆ.<br><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮುದ್ರಣ ವಿಭಾಗವಿದ್ದರೂ ಸಹ ಮುದ್ರಣ ಮಾಡಿಸದೇ ಮೆ॥ ಸ್ವಾನ್ ಪ್ರಿಂಟರ್ಸ್, ಬೆಂಗಳೂರುರವರಿಂದ ಮುದ್ರಣ ಮಾಡಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಆದುದರಿಂದ ಕೆ.ಟಿ.ಪಿ.ಪಿ ಕಾಯ್ದೆ 1999–2000ರ ಕಾಯ್ದೆ ಉಲ್ಲಂಘಿಸಿರುವುದು ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮುದ್ರಣ ಮಾಡಿಸದೇ ಖಾಸಗಿಯವರಿಂದ ಮುದ್ರಣ ಮಾಡಿಸಿರುವುದಕ್ಕೆ ಸೂಕ್ತ ವಿವರಣೆ ನೀಡುವವರೆಗೆ **ರೂ.7,40,029/–ಗಳನ್ನು ಆಕ್ಷೇಪಿಸಲಾಗಿದ್ದು,** ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮಕೈಗೊಂಡು ಲೆಕ್ಕ ತನಿಖೆಗೆ ಸೂಕ್ತ ವಿವರಣೆಯನ್ನು ನೀಡುವಂತೆ ಸೂಚಿಸಿದೆ. | ಪ್ರೊ.ಬರಗೂರು ರಾಮಚಂದ್ರಪ್ಪನವರು ಸಂದರ್ಶಕ ಪ್ರಾಧ್ಯಾಪಕರಾಗಿದ್ದ ಅವಧಿಯಲ್ಲಿ ಅವರು ಮೇಲೆ ಹೇಳಿರುವ 30 ಪುಸ್ತಕಗಳ ಪ್ರಕಟಣೆಗೆ ಕ್ರಮತೆಗೆದುಕೊಂಡು ಮುದ್ರಣ ಕಾರ್ಯವನ್ನು ಬೆಂಗಳೂರಿನ ಸ್ವ್ಯಾನ್ ಪ್ರಿಂಟರ್ಸ್ ಅವರಿಂದ ಮಾಡಿಸಿಕೊಂಡು ಪುಸ್ತಕಗಳನ್ನು ಪ್ರಕಟಿಸಿರುತ್ತಾರೆ. ಈ ವಿಷಯವಾಗಿ ಅವರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯವು ಅನುಮೋದಿಸಿ ಇದಕ್ಕೆ ಸಂಬಂಧಿಸಿದ ಧನಾದೇಶವನ್ನು ನೀಡಿರುತ್ತಾರೆ. ಹಾಗಾಗಿ ಯೋಜನೆಗೆ ಸಂಬಂಧಪಟ್ಟಂತೆ ಹಣ ಬಿಡುಗಡೆಯಾಗಿ ಸಂದಾಯವಾಗಿರುತ್ತದೆ.ಈ ಯೋಜನೆಗೆ ನಿಯಮಾವಳಿ ಪ್ರಕಾರ ಅಂದಿನ ಪ್ರಾಧ್ಯಾಪಕರು, ದರಪಟ್ಟಿಗಳನ್ನು ಮಾತ್ರ ತರಿಸಿಕೊಂಡು ಮುದ್ರಣಕಾರ್ಯವನ್ನು ಪೂರ್ಣಗೊಳಿಸಿರುತ್ತಾರೆ.<br><br>ಮೇಲಿನ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ ಆಕ್ಷೇಪಣೆಯ ಮೊತ್ತ ರೂ.7,40,029.00ಗಳನ್ನು ಕೈಬಿಡಲು ಕೋರಿದೆ. |
| **85. <u>ದರಪಟ್ಟಿಗಳನ್ನು ಕರೆಯದೇ ವಿವಿಧ ವೆಚ್ಚಗಳನ್ನು ಭರಿಸಿರುವುದು:– (ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ)</u>**<br>ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿನ 2015–16 ನೇ ಸಾಲಿನ ಲೆಕ್ಕತನಿಖೆಯಲ್ಲಿ ಎ.ಸಿ., ಎನ್.ಡಿ.ಸಿ. ಬಿಲ್ಲುಗಳನ್ನು ಪರಿಶೀಲಿಸಲಾಗಿ ಅನುಬಂಧ–3 ರಲ್ಲಿ ವಿವರಿಸಿರುವಂತೆ ಲೇಖನ ಸಾಮಾಗ್ರಿಗಳ ಖರೀದಿ, ಶಾಮಿಯಾನ ಬಾಡಿಗೆಗೆ ಪಡೆದಿರುವುದು, ಕಾವೇರಿ ಟೂರ್ಸ್ ಮತ್ತು ಟ್ರಾವೆಲ್ಸ್‌ರವರಿಂದ ವಾಹನಗಳನ್ನು ಬಾಡಿಗೆಗೆ ಪಡೆದಿರುವುದು ಹಾಗೂ ಇನ್ನಿತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ದರ ಪಟ್ಟಿಗಳನ್ನು ಕರೆದು ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಆದೇಶ ಸಂಖ್ಯೆ:ಆಇ01/ಟಿ.ಸಿ.ಇ/2012/ಬೆಂ/21.06.2012 ರ ಆದೇಶದನ್ವಯ ರೂ.5,000=00 ಹಾಗೂ 5,000=00 ಕ್ಕಿಂತ ಹೆಚ್ಚು ಮೊತ್ತಗಳ ಖರೀದಿಗೆ ಕನಿಷ್ಟ 3 ದರಪಟ್ಟಿಗಳನ್ನು ಕರೆದು ಕನಿಷ್ಟ ದರ ನಮೂದಿಸಿರುವ ಸಂಸ್ಥೆಯಿಂದ ಖರೀದಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ. ಆದರೆ ಯಾವುದೇ ದರಪಟ್ಟಿಗಳನ್ನು ಕರೆಯದೇ **ರೂ.1,44,505/–** ಗಳ ವೆಚ್ಚ ಭರಿಸಿರುವುದನ್ನು ಆಕ್ಷೇಪಿಸಲಾಗಿದೆ. ವಿವರಗಳನ್ನು **<u>ಅನುಬಂಧ–59 ರಲ್ಲಿ</u>** ನೀಡಲಾಗಿದ್ದು ವರದಿಗೆ ಲಗತ್ತಿಸಿದೆ ಹಾಗೂ ಈ ವಿಚಾರವಾಗಿ ಕಛೇರಿ ಮುಖ್ಯಸ್ಥರು ಸೂಕ್ತವಾದ ಕ್ರಮವಹಿಸಿ ಕಛೇರಿಗೆ ವರದಿ ನೀಡಲು ಸೂಚಿಸಿದೆ. | Part-A<br>2013–14ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು / ಕಛೇರಿಗಳು / ಕಾಲೇಜುಗಳು ಮತ್ತು ಅಂಗ ಸಂಸ್ಥೆ ಅವಶ್ಯವಿರುವ ಲೇಖನ ಸಾಮಾಗ್ರಿಗಳನ್ನು ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ ಜಿಎಲ್6/134/2006–17 ದಿನಾಂಕ 16.1.2014 ರಲ್ಲಿ ಶ್ರೀ ಚಂಪಲಾಲ್, ಮೆ॥ ರಜತ್ ಸೇಲ್ಸ್ ಏಜೆನ್ಸೀಸ್, ಮೈಸೂರು ಇವರಿಂದ ದಿನಾಂಕ 17.12.2013 ರಿಂದ ಜಾರಿಗೆ ಬಂದಂತೆ ಒಂದು ವರ್ಷ ಅವಧಿಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಖರೀದಿಸಬಹುದಾಗಿದೆ ಎಂಬ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ (ಪ್ರತಿ ಲಗತ್ತಿಸಿದೆ). ಇದರಂತೆ ಈ ಕೇಂದ್ರದಲ್ಲಿ ನಡೆಯುವ ವಿವಿಧ ಶಿಬಿರಗಳಿಗೆ ಅವಶ್ಯವಿರುವ Part-A ನಲ್ಲಿ ನಮೂದಿಸಿದ ಲೇಖನ ಸಾಮಾಗ್ರಿಗಳನ್ನು ಖರೀದಿಸಲಾಗಿದೆ. ನಿಯಮಾನುಸಾರ ಲೇಖನ ಸಾಮಾಗ್ರಿಗಳನ್ನು ದಾಸ್ತಾನು ಪುಸ್ತಕದಲ್ಲಿ ನಮೂದಿಸಲಾಗಿದೆ.<br>**Part-B**<br>ಪೂಜಾ ಫರ್ನಿಚರ್ಸ್ ಇವರಿಂದ ಶಾಮಿಯಾನ ಮತ್ತು ಇನ್ನಿತರೆ ವಸ್ತುಗಳನ್ನು ಬಾಡಿಗೆಗೆ ಪಡೆದಿರುವ ಬಾಬ್ತು ರೂ.11,078.00 ಗಳಾಗಿದ್ದು, ಸದರಿ ಖರೀದಿಯನ್ನು ನಿಯಮಾನುಸಾರ 3 ದರಪಟ್ಟಿಗಳನ್ನು ಕರೆದು ಕನಿಷ್ಠ ದರ ನಮೂದಿಸಿರುವ ಸಂಸ್ಥೆಯಿಂದ ಖರೀದಿಸಲಾಗಿದೆ ಹಾಗೂ ಖರೀದಿಗೆ ಅನುಸರಿಸಲಾದ ಪ್ರಕ್ರಿಯೆಯ ಪ್ರತಿಗಳನ್ನು ಲಗತ್ತಿಸಲಾಗಿದೆ (ಕಛೇರಿ ಆದೇಶ, |

| | |
|---|---|
| | ಕೊಟೇಷನ್, ಹೋಲಿಕೆ ದರಪಟ್ಟಿ ಪ್ರತಿಗಳನ್ನು ಲಗತ್ತಿಸಲಾಗಿದೆ)<br>**Part-C**<br>ವಿಶ್ವವಿದ್ಯಾನಿಲಯದಿಂದ ಅಂಗೀಕೃತವಾಗಿರುವ ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವಲ್ಸ್, ಮೈಸೂರು ಇವರಿಂದ ಟ್ಯಾಕ್ಸಿಗಳನ್ನು ವಿಶವಿದ್ಯಾನಿಲಯ ನಿಗಧಿಪಡಿಸಿರುವ ದರಗಳಂತೆ ಟ್ಯಾಕ್ಸಿಗಳನ್ನು ಪಡೆದು ಪಾವತಿ ಮಾಡಲು ಆದೇಶಸಿರುತ್ತಾರೆ. ಇದರಂತೆ ಈ ಕೇಂದ್ರದಲ್ಲಿ ನಡೆಯುವ ವಿವಿಧ ಶಿಬಿರಗಳ ಉದ್ಘಾಟನಾ ಮತ್ತು ಸಮಾರೋಪ ಸಮಾರಂಭಗಳಿಗೆ ಆಗಮಿಸುವ ಮುಖ್ಯ ಅತಿಥಿಗಳಿಗೆ ಕಾವೇರಿ ಟೂರ್ಸ್ ಅಂಡ್ ಟ್ರಾವಲ್ಸ್, ಮೈಸೂರು ಇವರಿಂದ ವಾಹನಗಳನ್ನು ಪಡೆದು ಪ್ರಯಾಣಿಸಿದ ದೂರಕ್ಕೆ ದರಗಳನ್ನು ಪಾವತಿ ಮಾಡಲಾಗಿದೆ. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿಎಲ್9/531/2000–01 ದಿನಾಂಕ 01.08.2013ರ ಆದೇಶದ ಪ್ರತಿಯನ್ನು ಲಗತ್ತಿಸಲಾಗಿದೆ. |
| <u>ಖರೀದಿ ವಿಭಾಗ (**Purchases**)</u><br>**86. <u>ಸಹೋದ್ಯಮ ಕೋರ್ಸುಗಳು ಶೀರ್ಷಿಕೆಯಡಿ ಆರ್ಥಿಕ ಮಿತಿಯನ್ನು ಮೀರಿ ಹೊಸ ವಾಹನ ಖರೀದಿಸಿರುವುದು:– (ಹಣಕಾಸು ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಸಹೋದ್ಯಮ ಕೋರ್ಸುಗಳು (Collaboration courses) ಶೀರ್ಷಿಕೆಯಡಿ 2015–16ನೇ ಸಾಲಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್8/128/2015–16/ ದಿನಾಂಕ: 05.12.2015 ರಲ್ಲಿ ಹೊಸ ವಾಹನ Eichen 10.751+ New skyline (32 seater college bus) ವಾಹನವನ್ನು B.R. ಸಂಖ್ಯೆ:–345/2015–16 ದಿನಾಂಕ:05.12.2015, ಧನಾದೇಶ ಸಂಖ್ಯೆ:538291 ದಿ:19.12.2015, M/S Rashica motors, Brahmapura village & post, Srirangapatna Taluk, Mysore ಸಂಸ್ಥೆಗೆ ಹೊಸ ವಾಹನ ಖರೀದಿಗಾಗಿ ರೂ.19,38,000/–ಗಳನ್ನು ಪಾವತಿಸಿರುವುದನ್ನು ಲೆಕ್ಕತನಿಖೆಯಲ್ಲಿ ಗಮನಿಸಿದೆ. ಕಡತದಲ್ಲಿ ಸಂಸ್ಥೆಯ ಬಿಲ್ಲಿನ ಮೂಲ ಪ್ರತಿ ಲಭ್ಯವಿರುವುದಿಲ್ಲ. ಸರ್ಕಾರದ ಆದೇಶ ದಿನಾಂಕ: 09.05.2013ರ ಪ್ರಕಾರ ಇಲಾಖಾ ಮುಖ್ಯಸ್ಥರು ಮತ್ತು ಪ್ರಧಾನ ಕಾರ್ಯದರ್ಶಿಗಳ ಶ್ರೇಣಿಯ ಅಧಿಕಾರಿಗಳಿಗೆ ಗರಿಷ್ಟ–9.00ಲಕ್ಷ ಮಿತಿಯೊಳಗೆ ಮಾತ್ರ ಖರೀದಿಸಲು ಅವಕಾಶವಿದ್ದು ಅಧಿಕ ಮೊತ್ತದ ವಾಹನ ಖರೀದಿ ಕ್ರಮವು ಸರ್ಕಾರದ ನಿಯಮಾವಳಿಗಳಿಗೆ ವಿರುದ್ಧವಾಗಿರುತ್ತದೆ. ಮತ್ತು ಕೆ.ಟಿ.ಪಿ.ಪಿ ಕಾಯ್ದೆಯನ್ನು ಅನುಸರಿಸದೆ ವಾಹನ ಖರೀದಿಸಿರುವುದು, ವಿಶ್ವವಿದ್ಯಾನಿಲಯದ ಖರೀದಿ (Purchase committe) ಸಮಿತಿ ಸಭೆಯ ಅನುಮೋದನೆ ಪ್ರತಿ, ಸರ್ಕಾರದ ಹಣಕಾಸು (ಆರ್ಥಿಕ) ಇಲಾಖೆಯ ಪೂರ್ವಾನುಮತಿ ಆದೇಶ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ **ರೂ.19,38,000/–** | ಹಾಸನದ ಸ್ನಾತಕೋತ್ತರ ಕೇಂದ್ರ (ಹೇಮಗಂಗೋತ್ರಿ)ಯು ಹಾಸನದ ಬಸ್ ನಿಲ್ದಾಣದಿಂದ ಸುಮಾರು 07 ಕಿ.ಮೀ ದೂರವಿದ್ದು ಹಾಸನ, ಚನ್ನರಾಯಪಟ್ಟಣ ಮಾರ್ಗವಾಗಿ ಚಲಿಸುವ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಈ ಸ್ಥಳದಲ್ಲಿ ನಿಲುಗಡೆ ಇರುವುದಿಲ್ಲ. ಹಾಗೂ ಮುಖ್ಯ ರಸ್ತೆಯಿಂದ ಕೇಂದ್ರವು 1 ಕಿ.ಮೀ ದೂರವಿರುತ್ತದೆ. ಈ ಹಿನ್ನೆಲೆಯಲ್ಲಿ ಹಲವು ಬಾರಿ ಹಾಸನದ ಕೆ.ಎಸ್.ಆರ್.ಟಿ.ಸಿ ನಿಯಂತ್ರಣಾಧಿಕಾರಿಗಳಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದಿನಕ್ಕೆ ನಾಲ್ಕುಬಾರಿ ಬಸ್ಸಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಮನವಿಮಾಡಿಕೊಳ್ಳಲಾಗಿತ್ತು. ಆದರೆ ಸದರಿಯವರು ಆ ಸ್ಥಳಕ್ಕೆ ಬಸ್ಸಿನ ವ್ಯವಸ್ಥೆ ಮಾಡಲು ಕ್ರಮವಹಿಸಿರುವುದಿಲ್ಲ. ಸದರಿ ಕಾರಣದಿಂದಾಗಿ ವಿಧ್ಯಾರ್ಥಿಗಳು ಸರಿಯಾದ ಸಮಯಕ್ಕೆ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತಿರಲಿಲ್ಲ. ಈ ಕಾರಣಗಳಿಂದ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿಎಲ್8/128/2015–16 ದಿನಾಂಕ 05.12.2015ರ ಅನ್ವಯ Eicher 10.751+ New skyline 32ಆಸನವುಳ್ಳ ಕಾಲೇಜು ಬಸ್ಸನ್ನು Eicher ಕಂಪನಿಯ ಅಧಿಕೃತ ಮಾರಾಟಗಾರರಾದ M/S Rashica motors, Brahmapura village & post, Srirangapatna Taluk, Mysore ಇವರಿಂದರೂ.16,38,000/–ಗಳ ವೆಚ್ಚದಲ್ಲಿ ವಾಹನ ಖರೀದಿಸಿ ಉಳಿದ ಮೊತ್ತ ರೂ.3.00ಗಳನ್ನು ವಿಮೆ, ನೊಂದಣಿ ಮತ್ತು |

<table>
<tr>
<td>ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. (ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–49/ದಿ:01.12.2017)</td>
<td>ಆರ್.ಟಿ.ಓ ರವರ ಮಾರ್ಗದರ್ಶನದ ಇತರೆ ವೆಚ್ಚಗಳಿಗೆ ಖರ್ಚುಮಾಡಲಾಗಿದೆ. (ಹುಂಡಿಯನ್ನು ಲಗತ್ತಿಸಿದೆ) ಸದರಿ ಮೊತ್ತವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲಾಗಿದೆ.<br><br>ವಿದ್ಯಾರ್ಥಿಗಳ ಅನುಕೂಲಕ್ಕಾಗಿ 32 ಆಸನವುಳ್ಳ ವಾಹನವನ್ನು ಖರೀದಿಸ ಬೇಕಾಗಿದ್ದುದರಿಂದ ಅಲ್ಲದೆ ವಾಹನವು ರೂ.9.00ಲಕ್ಷಗಳ ಮಿತಿಯಲ್ಲಿ ಲಭ್ಯವಿಲ್ಲದ ಕಾರಣದಿಂದ ರೂ.16,38,000/–ಗಳ ವೆಚ್ಚದಲ್ಲಿ ಖರೀದಿಸಲಾಗಿದೆ, ವಾಹನವು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅತೀ ಜರೂರಾಗಿ ಖರೀದಿಸಬೇಕಾಗಿದ್ದುದರಿಂದ ಸರ್ಕಾರದ ಅನುಮತಿ ಪಡೆಯಲು ಹಾಗೂ ಕೆ.ಟಿ.ಪಿ.ಪಿ ನಿಯಮ ಪಾಲಿಸಲು ಸಾಧ್ಯವಾಗಿರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಆಕ್ಷೇಪಣೆಯ ಮೊತ್ತ ರೂ.19,38,000/–ಗಳನ್ನು ಕೈಬಿಡಲು ಕೋರಿದೆ.</td>
</tr>
<tr>
<td>88. <u>ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಆಚರಣೆ ಸಂಬಂಧ ನೆನಪಿನ ಕಾಣಿಕೆಯಾಗಿ ಉದ್ಯೋಗಿಗಳಿಗೆ ಹೆಚ್.ಎಂ.ಟಿ ಕೈಗಡಿಯಾರಗಳನ್ನು ಖರೀದಿಸಿರುವುದು :– (ಹಣಕಾಸು ವಿಭಾಗ)</u><br>ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಆಚರಣೆ ಸಂಬಂಧ ನೆನಪಿನ ಕಾಣಿಕೆಯಾಗಿ ಉದ್ಯೋಗಿಗಳಿಗೆ ಹೆಚ್.ಎಂ.ಟಿ ಕೈಗಡಿಯಾರಗಳನ್ನು ನೀಡುವುದು ಮತ್ತು ಶತಮಾನೋತ್ಸವ ಮಳಿಗೆಯಲ್ಲಿ ಮಾರಾಟಕ್ಕಿಡಲು ಕೈಗಡಿಯಾರಗಳನ್ನು ಹೆಚ್.ಎಂ.ಟಿ ವಾಚಸ್ ಲಿಮಿಟೆಡ್, ಇವರಿಂದ 1595 ಸಂಖ್ಯೆ ಕೈಗಡಿಯಾರಗಳನ್ನು ಖರೀದಿಸಲು ರೂ. 22,09,718/–ಗಳಿಗೆ ಮಂಜೂರಾತಿ ನೀಡಿದೆ.<br>
<table>
<tr><td>ಉದ್ಯೋಗಿಗಳಿಗೆ</td><td>1295 ಸಂಖ್ಯೆ</td><td>ರೂ. 1618750</td></tr>
<tr><td>ಮಳಿಗೆ ಮಾರಾಟಕ್ಕಾಗಿ</td><td>300 ಸಂಖ್ಯೆ</td><td>ರೂ. 448750</td></tr>
<tr><td></td><td>2% transportion charges</td><td>ರೂ. 43,328</td></tr>
<tr><td></td><td>Logo charges</td><td>ರೂ. 98,890</td></tr>
<tr><td></td><td></td><td>ರೂ. 22,09,718</td></tr>
</table>
ಸದರಿ ಸಾಮಗ್ರಿಗಳ ಖರೀದಿಯ ಹೊಂದಾಣಿಕೆ ಬಿಲ್ಲನ್ನು ಪರಿಶೀಲಸಲಾಗಿ ಕೆಳಕಂಡ ಅಂಶಗಳು ಕಂಡು ಬಂದಿದ್ದು ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕತಪಾಸಣೆಗೆ ಒದಗಿಸುವಂತೆ ಕೋರಿದೆ.<br><br>300 ಸಂಖ್ಯೆ HMT ಕೈಗಡಿಯಾರಗಳನ್ನು ಮಳಿಗೆ ಮಾರಾಟಕ್ಕಾಗಿ ರೂ.4,48,750/–ಗಳ ಮೊತ್ತದಲ್ಲಿ ಖರೀದಿಸಲಾಗಿದ್ದು, ಈ ಕೈಗಡಿಯಾರಗಳನ್ನು ದಾಸ್ತಾನು ಲೆಕ್ಕಕ್ಕೆ ತೆಗೆದುಕೊಂಡಿರುವ</td>
<td>ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಆಚರಣೆಗೆ ನೆನಪಿನ ಕಾಣಿಕೆಯಾಗಿ ಉದ್ಯೋಗಿಗಳಿಗೆ ಹೆಚ್.ಎಂ.ಟಿ ಕೈಗಡಿಯಾರಗಳನ್ನು ನೀಡುವ ಸಂಬಂಧ ಸರ್ಕಾರದ ಸುತ್ತೋಲೆ ಸಂಖ್ಯೆ ಸಿ.ಆ.ಸು.ಇ/49/ಹೆಚ್.ಇ.ಟಿ/2011 ದಿನಾಂಕ 09–03–2011ರಲ್ಲಿ ನಿರ್ದೇಶನ ನೀಡಿರುವುದರಿಂದ ಒಟ್ಟು 1595 ಕೈಗಡಿಯಾರಗಳನ್ನು ಹೆಚ್.ಎಂ.ಟಿ ಕೈ ಗಡಿಯಾರ ಸಂಸ್ಥೆಯಿಂದ ಖರೀದಿಸಲಾಗಿದೆ. ಈ ಪೈಕಿ 1295 ಕೈ ಗಡಿಯಾರಗಳನ್ನು ಉದ್ಯೋಗಿಗಳಿಗೆ ಮತ್ತು ಗಣ್ಯರಿಗೆ ನೀಡಲು ಮತ್ತು ಉಳಿದ 300 ಗಡಿಯಾರಗಳನ್ನು ಮಳಿಗೆಯಲ್ಲಿಟ್ಟು ಮಾರಾಟ ಮಾಡಲು ಉದ್ದೇಶಿಸಲಾಗಿತ್ತು. ಆದರೆ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಒಟ್ಟು 300 ಕೈಗಡಿಯಾರಗಳನ್ನು ಮಾರಾಟ ಮಾಡಲಾಗಿರುವುದಿಲ್ಲ. ಎಲ್ಲಾ ಗಡಿಯಾರಗಳನ್ನೂ ದಾಸ್ತಾನು ಲೆಕ್ಕಕ್ಕೆ ತೆಗೆದುಕೊಂಡು ನೆನಪಿನ ಕಾಣಿಕೆಯಾಗಿ ಅತಿಥಿಗಳು, ಗಣ್ಯವ್ಯಕ್ತಿಗಳು ಹಾಗೂ ಉದ್ಯೋಗಿಗಳಿಗೆ ನೀಡಲಾಗಿದೆ.<br><br>ಸಿಂಡಿಕೇಟ್ ನಿರ್ಣಯದ ಪ್ರತಿ ಹಾಗೂ ದಾಸ್ತಾನು ಮತ್ತು ವಿತರಣೆಯ ಪ್ರತಿಯನ್ನು ಈ ಕೂಡ ಲಗತ್ತಿಸುತ್ತಾ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.</td>
</tr>
</table>

| | |
|---|---|
| ವಿವರ/ದಾಸ್ತಾನು ಪುಸ್ತಕದಲ್ಲಿ ದೃಢೀಕರಣ ಹಾಗೂ ಶತಮಾನೋತ್ಸವ ಮಾರಾಟ ಮಳಿಗೆಯಲ್ಲಿ ಕೈಗಡಿಯಾರಗಳ ಮಾರಾಟದ ವಿವರ, ಉಳಿಕೆ ದಾಸ್ತಾನು ಹಾಗೂ ಮಾರಾಟದಿಂದ ಬಂದ ಹಣವನ್ನು ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಿದ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ಸಮಜಾಯಿಷಿ ನೀಡುವವರೆಗೆ ಹಾಗೂ ದಾಸ್ತಾನು ವಿವರಗಳನ್ನು ಹಾಜರುಪಡಿಸುವವರೆಗೆ ಪಾವತಿಸಿರುವ ಮೊತ್ತ **ರೂ.4,48,750/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | |
| **89. <u>ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ಮೈಸೂರು ವಿಶ್ವವಿದ್ಯಾನಿಲಯ ಎಲ್ಲಾ ಅಧ್ಯಯನ ಕೇಂದ್ರಗಳಿಗೆ ರಾಸಾಯನಿಕ ಮತ್ತು ಪ್ರಯೋಗಶಾಲೆ ಪರಿಕರಗಳನ್ನು ಖರೀದಿಸಿರುವುದು :– (ಹಣಕಾಸು ವಿಭಾಗ)</u>**<br><br>2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಎಲ್ಲಾ ಅಧ್ಯಯನ ವಿಭಾಗಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಕಾಲೇಜುಗಳಿಗೆ ರಾಸಾಯನಿಕ ಪದಾರ್ಥಗಳು ಮತ್ತು ಪ್ರಯೋಗಶಾಲೆ ಪರಿಕರಗಳನ್ನು ಖರೀದಿಸಿರುವ ಓಚರ್ಸ್‌ಗಳನ್ನು ಪರಿಶೀಲಿಸಲಾಗಿ ರೂ.45,15,172/–ಗಳನ್ನು ವಿವಿಧ ರಾಸಾಯನಿಕಗಳ ಸರಬರಾಜುದಾರರಿಗೆ ಪಾವತಿಸಲಾಗಿದೆ. ರಾಸಾಯನಿಕಗಳು/ಗಾಜಿನ ಪರಿಕರಗಳ ಕಛೇರಿ ಟಿಪ್ಪಣಿಯ ಕಡತವನ್ನು ಪರಿಶೀಲಿಸಲಾಗಿ ಕಛೇರಿ ಟಿಪ್ಪಣಿಯ 57ರ ಕಡತ ಸಂಖ್ಯೆ 162 (1)ರಲ್ಲಿ (ಜಿಎಲ್6) 2014–15ನೇ ಸಾಲಿನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಕುಲಸಚಿವರು ಮತ್ತು ಮಾನ್ಯಕುಲಪತಿಗಳು ಕಡತದಲ್ಲಿ ಅನುಮೋದಿಸಿದ್ದರೂ ಮತ್ತೆ ಕಛೇರಿ ಟಿಪ್ಪಣಿ ಪುಟ ಸಂಖ್ಯೆ:58/ ದಿನಾಂಕ:05.11.2014ರಲ್ಲಿ ಮತ್ತೆ ರಾಸಾಯನಿಕಗಳು/ಗಾಜಿನ ಪರಿಕರಗಳನ್ನು ವಿಶ್ವವಿದ್ಯಾನಿಲಯದ ಎಲ್ಲಾ ಅಂಗಸಂಸ್ಥೆಗಳು/ಅಧ್ಯಯನ ವಿಭಾಗಗಳಿಗೆ ಖರೀದಿಸಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವಂತೆ ಕಛೇರಿ ಟಿಪ್ಪಣಿಯಲ್ಲಿ ಅನುಮೋದಿಸಿದ್ದರೂ ಕರ್ನಾಟಕ ಪಾರದರ್ಶಕ ಕಾಯ್ದೆ–2000 ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಬಿಡಿ ಬಿಡಿಯಾಗಿ ವಿವಿಧ ರಾಸಾಯನಿಕ ಸರಬರಾಜುದಾರರಿಂದ ಖರೀದಿಸಿರುವುದು ನಿಯಮ ಉಲ್ಲಂಘನೆಯಾಗಿರುವುದಕ್ಕೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:167/23.01.20158ರಲ್ಲಿ ಕೋರಲಾಗಿ ಯಾವುದೇ ಸೂಕ್ತ ವಿವರಣೆಯನ್ನು ನೀಡದಿರುವುದರಿಂದ **ರೂ.45,15,172/–ಗಳನ್ನು ಆಕ್ಷೇಪಣೆಗೆ** ಸೂಚಿಸಿದೆ. ವಿವರಗಳನ್ನು **<u>ಅನುಬಂಧ–60ರಲ್ಲಿ</u>** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ವಿಶ್ವವಿದ್ಯಾನಿಲಯ ಅಧೀನ ವಿಭಾಗಗಳಿಗೆ 2015–16ನೇ ಪ್ರಯೋಗ ಶಾಲೆಗಳಿಗೆ ಅವಶ್ಯಕವಿದ್ದ ರಸಾಯನಿಕ ಪದಾರ್ಥಗಳನ್ನು ಹಾಗೂ ಇತರೆ ಪರಿಕರಣಗಳನ್ನು ಖರೀದಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ.ಎಲ್6/162/(1) 2007–08 ದಿನಾಂಕ:14.5.2013ರ ಅನ್ವಯದಂತೆ ನಿಯಮಾನುಸಾರ ಟೆಂಡರ್ ಕರೆದು ಕಡಿಮೆ ದರ ನಮೂದಿಸಿರುವ ಹಾಗೂ ಅತೀ ಹೆಚ್ಚು ರಿಯಾಯಿತಿ ನೀಡುವ ಕೆಲವು ಸಂಸ್ಥೆಗಳನ್ನು ಅನುಮೋದಿಸುವುದರೊಂದಿಗೆ ಮಂಜೂರಾತಿ ನೀಡಲಾಗಿದೆ. ಈ ಆದೇಶವು 2013–14ನೇ ಸಾಲಿನ ಮತ್ತು ಮುಂದಿನ ಆದೇಶ ನೀಡುವ ವರೆಗೆ ಅಂದರೆ ಮುಂದಿನ ಆದೇಶದ ದಿನಾಂಕ:03.11.2016ರ ವರೆಗೂ ಚಾಲ್ತಿಯಲ್ಲಿರುತ್ತದೆ.<br><br>ಇದರನ್ವಯ ಆಯಾ ವಿಭಾಗಗಳಿಗೆ ಅದರಲ್ಲೂ ಮುಖ್ಯವಾಗಿ ಸೈನ್ಸ್ ವಿಭಾಗಗಳಲ್ಲಿನ ನಿರಂತರವಾಗಿ ನಡೆಯುವ ಪ್ರಯೋಗಾಲಯಗಳಿಗೆ ಅವಶ್ಯಕವಿರುವ ರಸಾಯನಿಕ ಹಾಗೂ ಪರಿಕರಗಳನ್ನು ಖರೀದಿಸಿ ಉಪಯೋಗಿಸಲಾಗುತ್ತಿದೆ. ಪ್ರಯೋಗಾಲಯಗಳಿಗೆ ವರ್ಷಕ್ಕೆ ಲಕ್ಷಾಂತರ ರೂಪಾಯಿಗಳ ರಸಾಯನಿಕ ಮತ್ತು ಗಾಜಿನ ಪದಾರ್ಥಗಳ ಖರೀದಿ ಅವಶ್ಯಕವಿದ್ದರೂ ಸಹ ಅವುಗಳನ್ನು ಒಟ್ಟಿಗೆ ಖರೀದಿಸಿ ಇಟ್ಟುಕೊಂಡು ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವುಗಳನ್ನು ಸುಮ್ಮನೆ ಇಟ್ಟರೂ ಹಾಳಾಗುವಂತಹವುಗಳು ಹೀಗಾಗಿ, ಆಯಾ ಸಮಯದಲ್ಲಿ ಅವಶ್ಯಕವಿರುವಷ್ಟನ್ನೇ ಬಿಡಿ, ಬಿಡಿಯಾಗಿ ಖರೀದಿಸಿ ಉಪಯೋಗಿಸಲಾಗುತ್ತಿದೆ.<br><br>ಹೀಗಾಗಿ, ಎಲ್ಲಾ ವಿಭಾಗಗಳಿಗೂ ಒಂದು ವರ್ಷಕ್ಕೆ ಅವಶ್ಯಕವಿರುವ ರಸಾಯನಿಕ ಮತ್ತು ಗಾಜಿನ ಪದಾರ್ಥಗಳನ್ನು ಖರೀದಿಸುವ ಸಲುವಾಗಿ ಒಟ್ಟಿಗೇ ಟೆಂಡರ್ ಕರೆದು ಖರೀದಿಸಿ ಇಟ್ಟುಕೊಂಡು ಉಪಯೋಗಿಸುವ ಕ್ರಮ ಸಾಧ್ಯವಾಗದು. ಖರೀದಿಸಿ ಇಟ್ಟುಕೊಂಡರೆ ಅವುಗಳು ಕೆಡುತ್ತವೆ. |

| | |
|---|---|
| | ಆದ್ದರಿಂದ, ಮೇಲಿನಂತೆ ರಸಾಯನಿಕ ಮತ್ತು ಗಾಜಿನ ಪದಾರ್ಥಗಳ ಖರೀದಿಯಲ್ಲಿನ ವಾಸ್ತವಿಕತೆಯನ್ನು ಪರಿಗಣಿಸಿ ಆಕ್ಷೇಪಣೆ ಮೊತ್ತ ರೂ.45,15,172.00ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. ವಿಶ್ವವಿದ್ಯಾನಿಲಯದ ದಿನಾಂಕ 14.05.2013 ಮತ್ತು ದಿನಾಂಕ 3.11.2016ರ ಪ್ರತಿಗಳನ್ನು ಲಗತ್ತಿಸಿದೆ. |
| **90. ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಮಂಡ್ಯ ಅಡುಗೆಯ ಗ್ಯಾಸ್ ಸ್ಟವ್ ರಿಪೇರಿಗೆ ಹಣ ಪಾವತಿಸಿರುವುದು ಮತ್ತು ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಮಂಡ್ಯ ಮತ್ತು ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್–2, ಮಾನಸ ಗಂಗೋತ್ರಿ ನಿಲಯಗಳಿಗೆ Heavy duty ರುಬ್ಬುವ ಯಂತ್ರಗಳನ್ನು ಖರೀದಿಸಿ ಹಣ ಪಾವತಿಸಿರುವುದು :– (ಹಣಕಾಸು ವಿಭಾಗ)**<br><br>ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಮಂಡ್ಯ ಇಲ್ಲಿನ ಅಡುಗೆಯ ಗ್ಯಾಸ್ ಸ್ಟವ್ ರಿಪೇರಿಗೆ ಚೆಕ್ ಸಂಖ್ಯೆ: 0515545/16.02.2016 ರಲ್ಲಿ ರೂ.2,300/–ಗಳನ್ನು ಪಾವತಿಸಲಾಗಿರುತ್ತದೆ. ಸದರಿ ನಿಲಯದ ಊಟದ ವ್ಯವಸ್ಥೆಯ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ವಹಿಸಿರುವುದರಿಂದ ಮತ್ತು ನಿಲಯದ ಗ್ಯಾಸ್ ಸ್ಟವ್‌ನ್ನು ಗುತ್ತಿಗೆದಾರರೆ ಉಪಯೋಗಿಸುತ್ತಿರುವುದರಿಂದ ಗುತ್ತಿಗೆದಾರರೆ ರಿಪೇರಿ ಮಾಡಿಸಿಕೊಳ್ಳಬೇಕಾಗಿರುತ್ತದೆ. ಈ ಸಂಬಂಧ ವಿವರಣೆಯನ್ನು ನೀಡುವಂತೆ ಆಡಿಟ್ ವಿಚಾರಣೆ ಸಂಖ್ಯೆ:38/2017–18 ದಿನಾಂಕ:20.11.2017ರಲ್ಲಿ ಕೇಳಲಾಗಿದ್ದರೂ ಸಹ ಯಾವುದೇ ವಿವರಣೆಯನ್ನುನೀಡಿರುವುದಿಲ್ಲ. ಆದ್ದರಿಂದ ಗ್ಯಾಸ್ ಸ್ಟವ್ ರಿಪೇರಿಗೆ ಪಾವತಿಸಿರುವ ಮೊತ್ತ **ರೂ.2,300/–ಗಳನ್ನು ಸಂಬಂಧಿಸಿದವರಿಂದ ವಸೂಲಾತಿಗೆ ಸೂಚಿಸಿದೆ.**<br>ವಿಶ್ವೇಶ್ವರಯ್ಯ, ಸ್ನಾತಕೋತ್ತರ ವಿದ್ಯಾರ್ಥಿನಿಲಯ ಮಂಡ್ಯ ಹಾಗೂ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್–2 ಮಾನಸ ಗಂಗೋತ್ರಿ, ವಿದ್ಯಾರ್ಥಿನಿಲಯಗಳಿಗೆ Heavy duty ರುಬ್ಬುವ ಯಂತ್ರಗಳನ್ನು CQ No 05150447/09.02.2016 ರಲ್ಲಿ ರೂ.58,500/–ಗಳನ್ನು ಪಾವತಿಸಿ ಖರೀದಿಸಲಾಗಿದೆ. ಮೇಲಿನ ಎರಡು ನಿಲಯಗಳಲ್ಲಿ ಭೋಜನ ವ್ಯವಸ್ಥೆಯ ನಿರ್ವಹಣೆಯನ್ನು ಗುತ್ತಿಗೆದಾರರು ನಿರ್ವಹಿಸುತ್ತಿರುವುದರಿಂದ ಗುತ್ತಿಗೆದಾರರು ತಮ್ಮದೆ ಆದ ರುಬ್ಬುವ ಯಂತ್ರಗಳ ಮತ್ತು ಇತರೆ ಅಡುಗೆ ಸಲಕರಣೆಗಳನ್ನು ಭೋಜನ ತಯಾರಿಸಲು ಉಪಯೋಗಿಸಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದಿಂದ ಖರೀದಿಸಿ ಗುತ್ತಿಗೆದಾರರಿಗೆ ಒದಗಿಸುವ ಅವಶ್ಯಕತೆ ಇರುವುದಿಲ್ಲ. ಈ ಬಗ್ಗೆ ವಿವರಣೆಯನ್ನು ನೀಡಲು ಆಡಿಟ್ ವಿಚಾರಣೆ ಸಂಖ್ಯೆ:38/2017–18 ದಿನಾಂಕ:20.11.2017ರಲ್ಲಿ ಕೇಳಿದ್ದರೂ ಸಹ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.ಆದ್ದರಿಂದ Heavy duty ರುಬ್ಬುವ ಯಂತ್ರಗಳನ್ನು ಖರೀದಿಸುವ ಸಲುವಾಗಿ ಪಾವತಿಸಿರುವ ಮೊತ್ತ **ರೂ.58,500/–ಗಳನ್ನು ಸಂಬಂಧಿಸಿದವರಿಂದ ವಸೂಲಾತಿಗೆ** ಸೂಚಿಸಲಾಗಿದೆ. | ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಮಂಡ್ಯ ಇಲ್ಲಿನ ಗುತ್ತಿಗೆದಾರರು ಬದಲಾವಣೆಗೊಳ್ಳುತ್ತಿದ್ದು, ಕಡಿಮೆ ಅವಧಿಗೆ ಗುತ್ತಿಗೆದಾರರನ್ನು ನಿಯೋಜಿಸುತ್ತಿದ್ದುದರಿಂದ ಹಾಗು ಸದರಿ ವಿದ್ಯಾರ್ಥಿನಿಲಯವು ಗ್ರಾಮಾಂತರ ಪ್ರದೇಶದಲ್ಲಿದ್ದು, ಯಾರೂ ಮೆಸ್ ನಡೆಸಲು ಬಾರದ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಸಮಯಾನುಸಾರ ಊಟದ ವ್ಯವಸ್ಥೆ ಆಗಬೇಕಾಗಿದ್ದುದರಿಂದ ವಿದ್ಯಾರ್ಥಿನಿಲಯದ ಅಡುಗೆಯ ಗ್ಯಾಸ್‌ಸ್ಟವ್ ಅನ್ನು ನಿಲಯದಿಂದಲೇ ದುರಸ್ತಿಗೊಳಿಸುವ ವ್ಯವಸ್ಥೆ ಮಾಡಬೇಕಾದ ಅನಿವಾರ್ಯತೆ ಇತ್ತು. ಮತ್ತು ಈ ಸಂಬಂಧ ರೂ2,300/–ಗಳ ವೆಚ್ಚ ಭರಿಸಲಾಯಿತು.<br>ಅಲ್ಲದೆ, ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಮಂಡ್ಯ ಹಾಗೂ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್–2 ಮಾನಸ ಗಂಗೋತ್ರಿ, ಮೈಸೂರು ಇಲ್ಲಿನ ರುಬ್ಬುವ ಯಂತ್ರಗಳು ದುರಸ್ತಿಗೆ ಬಂದಿದ್ದು, ಅವುಗಳನ್ನು ಸರಿಯಾದ ರೀತಿಯಲ್ಲಿ ದುರಸ್ತಿಗೊಳಿಸಲು ಸಾಧ್ಯವಿಲ್ಲವೆಂದು ತಿಳಿದು ಬಂದಿದುದರಿಂದ ವಿದ್ಯಾರ್ಥಿಗಳ ಭೋಜನ ವ್ಯವಸ್ಥೆಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಸಲುವಾಗಿ 2 ಹೊಸ ಗ್ರೈಂಡರ್‌ಗಳನ್ನು ಖರೀದಿಸಿ ಒದಗಿಸಲಾಗಿದೆ.ಈ ಯಂತ್ರಗಳನ್ನು ಆಯಾ ವಿದ್ಯಾರ್ಥಿನಿಲಯಗಳ ದಾಸ್ತಾನು ಲೆಕ್ಕದಲ್ಲಿ ನಮೂದಿಸಿಕೊಂಡು ಉಪಯೋಗಿಸಲಾಗುತ್ತಿದೆ.<br>ಇಂತಹ ದುರಸ್ತಿಕಾರ್ಯ ಹಾಗೂ ಎಲ್ಲಾ ಪರಿಕರಗಳನ್ನು ಗುತ್ತಿಗೆದಾರರೇ ಸರಬರಾಜು ಮಾಡಿಕೊಂಡು ಭೋಜನಾ ತಯಾರಿಕೆ ಕಾರ್ಯವನ್ನು ನಡೆಸಬೇಕಾಗಿದ್ದರೂ ಸಹ ಗುತ್ತಿಗೆದಾರರು ಸರಿಯಾದ ಆಸಕ್ತಿ ತೋರಿಸದೆ ಇದ್ದುದರಿಂದ ವಿದ್ಯಾರ್ಥಿಗಳ ಭೋಜನಾ ವ್ಯವಸ್ಥೆ ಸರಿಯಾಗಿ ನಡೆಯದೇ ವಿದ್ಯಾರ್ಥಿಗಳಿಂದ ಗಲಾಟೆಗೆ ಅವಕಾಶವಾಗಬಾರದೆಂಬ ಉದ್ದೇಶದಿಂದ ಇವುಗಳ ದುರಸ್ತಿ ಹಾಗೂ ಖರೀದಿಗಳನ್ನು ಮಾಡಿ ವೆಚ್ಚ ಭರಿಸಲಾಗಿದೆ. |

| | |
|---|---|
| **92. DGS and D ಯಿಂದ ಅನುಮೋದಿಸಲ್ಪಟ್ಟ ದರದ ಅವಧಿಯು ಮುಗಿದ ನಂತರ Microscope ನ್ನು ಖರೀದಿಸಿರುವುದು :– (ಯುವರಾಜ ಕಾಲೇಜು)**<br><br>ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನ 2015–16ನೇ ಸಾಲಿನ ಎಸ್.ಬಿ.ಎಂ ಯು.ಜಿ.ಸಿ ಖಾತೆಯ ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ DGS and D New Delhi ಸರಬರಾಜು ಸಂಸ್ಥೆಯಿಂದ ಅನುಮೋದಿಸಲ್ಪಟ್ಟ ಮೆ॥ಕುಮಾರ್ ಡಯಾಗ್ನೋಸ್ಟಿಕ್ ಸಂಸ್ಥೆಯಿಂದ ಅವಶ್ಯವಿರುವ Microscope ನ್ನು ರೂ.58,291/–ಗಳ ಮೊತ್ತಕ್ಕೆ ಖರೀದಿಸಿ ಧನಾದೇಶ ಸಂಖ್ಯೆ:864424/ದಿನಾಂಕ:06.06.2015ರನ್ವಯ ಹಣವನ್ನು ಪಾವತಿಸಿರುವುದು ಕಂಡುಬಂದಿರುತ್ತದೆ.<br><br>ಆದರೆ DGS and D ಅನುಮೋದಿಸಲ್ಪಟ್ಟ ಸಂಸ್ಥೆಗಳ ಮಾರಾಟ ವ್ಯವಹಾರಗಳ ಅವಧಿಯು ದಿನಾಂಕ:16.12.2013 ರಿಂದ 31.12.2014ರವರೆಗಿನ ಅವಧಿಗೆ ಮುಕ್ತಾಯವಾಗಿರುತ್ತದೆ. ಈ DGS and D Validity ದಿನಾಂಕವು ಮುಗಿದ ನಂತರ ಅಂದರೆ ದಿನಾಂಕ:24.03.2015 ರಂದು ಸದರಿ Microscope ಉಪಕರಣವನ್ನು ಖರೀದಿಸಿರುವುದು ಕರ್ನಾಟಕ ಸಾರ್ವಜನಿಕ ಪಾರದರ್ಶಕ ನಿಯಮ 2000ರನ್ವಯ ಉಲ್ಲಂಘನೆಯಾಗಿರುತ್ತದೆ. DGS and D ಯವರು ಅನುಮೋದಿಸಲ್ಪಟ್ಟ ಅವಧಿಯು ಸಾಮಾನ್ಯವಾಗಿ ಒಂದು ವರ್ಷದ ಅವಧಿಯಾಗಿರುತ್ತದೆ. ಆದುದರಿಂದ ಉಪಕರಣವನ್ನು ಖರೀದಿಸುವ ಪೂರ್ವಾನ್ವಯವಾಗಿ DGS and D Validity ಅವಧಿಯನ್ನು ಪರಿಶೀಲಿಸಿ ನಂತರ ಉಪಕರಣವನ್ನು ಖರೀದಿಸಬೇಕಾಗಿತ್ತು. ಆದರೆ ಈ ರೀತಿ ಮಾಡದೆ ಅಥವಾ ಕೆ.ಟಿ.ಪಿ.ಪಿ ನಿಯಮಗಳಂತೆ ದರಪಟ್ಟಿಗಳನ್ನು ಕರೆಯದೆ ಸದರಿ ಉಪಕರಣವನ್ನು ಖರೀದಿಸಿರುವುದಕ್ಕೆ ಸ್ಪಷ್ಟೀಕರಣವನ್ನು ನೀಡಲು ಸೂಚಿಸಲಾಗಿದೆ. ಅಲ್ಲಿಯವರೆಗೆ ಸದರಿ ಖರೀದಿ ಮೊತ್ತ **ರೂ.58,291/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಮೈಕ್ರೋಬಯಾಲಜಿ ವಿಭಾಗಕ್ಕೆ ಮೈಕ್ರೋಸ್ಕೋಪ್‌ನ್ನು ಭಾರತ ಸರ್ಕಾರದ ರೇಟ್ ಕಾಂಟ್ರಾಕ್ಟ್ ಹೊಂದಿರುವ DGS and D New Delhi ಇವರಿಂದ ದಿನಾಂಕ:31.12.2014ರ ವರೆಗೆ ಅವಧಿ ಇರುತ್ತದೆ. ಆದ್ದರಿಂದ ದಿನಾಂಕ:26.12.2014ರಂದೆ ದಾಸ್ತಾನುದಾರರಾದ ಮೆ॥ಕುಮಾರ್ ಡಯಾಗ್ನೋಸ್ಟಿಕ್ ಸಂಸ್ಥೆಯಿಂದ ಮೈಕ್ರೋಸ್ಕೋಪ್‌ಗಳನ್ನು ಖರೀದಿಸಲು ಕೋರಲಾಗಿತ್ತು (ಪ್ರತಿ ಲಗತ್ತಿಸಿದೆ.) ದಿನಾಂಕ:31.12.2014 DST ಅವಧಿ ಮುಕ್ತಾಯವಾಗುತ್ತಿದ್ದುದರಿಂದ ದಿನಾಂಕ:26.12.2014 ರಂದೇ ದಾಸ್ತಾನುದಾರರಿಂದ ಸರಬರಾಜು ಮಾಡಲು ಕೋರಲಾಗಿರುತ್ತದೆ. ಆದರೆ ಸರಬರಾಜುದಾರರು ದಿನಾಂಕ:16.02.2015 ರಂದು ಹಿಂದಿನ ದರದಲ್ಲಿ ಸರಬರಾಜು ಮಾಡಿರುತ್ತಾರೆ. ರೇಟ್ ಕಾಂಟ್ರಾಕ್ಟ್ ಅವಧಿ ಮುಗಿಯುವ ಮುನ್ನವೇ ಖರೀದಿ ಆದೇಶ ನೀಡಿರುವುದರಿಂದ ಕಂಪನಿಯವರು ಸದರಿ ಉಪಕರಣಗಳನ್ನು ತಡವಾಗಿ ಸರಬರಾಜು, ಮಾಡಿದ್ದರೂ ಸಹ ಉಪಕರಣಗಳನ್ನು ದಾಸ್ತಾನು ವಹಿಯಲ್ಲಿ ತೆಗೆದುಕೊಂಡು ಪುಟಸಂಖ್ಯೆ 118ರಲ್ಲಿ ನಮೂದಿಸಲಾಗಿದೆ ಹಾಗೂ ಬಿಲ್ಲಿನಲ್ಲಿ ದೃಢೀಕರಿಸಲಾಗಿದೆ.(ಪ್ರತಿಯನ್ನು ಲಗತ್ತಿಸಿದೆ)<br><br>ಆದ್ದರಿಂದ, ರೂ.58,291.00ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |
| **93. ವಿದ್ಯಾರ್ಥಿ ನಿಲಯಗಳ ಮೆಸ್ ಗುತ್ತಿಗೆದಾರರಿಗೆ ಗ್ರೈಂಡರ್‌ಗಳನ್ನು ಖರೀದಿ ಮಾಡಿಕೊಟ್ಟಿರುವುದು:– (ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ)**<br><br>ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿಯ 2015–16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಓಚರ್‌ಗಳನ್ನು ಪರಿಶೀಲಿಸಲಾಗಿ ಧನಾದೇಶ ಸಂಖ್ಯೆ:515446, ದಿನಾಂಕ:09.02.2016ರಲ್ಲಿ ರೂ.57,155/–ಗಳನ್ನು M/S ಶಾಂತಿ ಅಪ್ಲೈಯನ್ಸ್, ಮೈಸೂರು ರವರಿಂದ ವಿದ್ಯಾರ್ಥಿ ನಿಲಯದ ಮೆಸ್ ಗುತ್ತಿಗೆ ಪಡೆದಿರುವ ಗುತ್ತಿಗೆದಾರರಿಗೆ ಎರಡು ಗ್ರೈಂಡರ್‌ಗಳನ್ನು ಖರೀದಿಸಿ ನೀಡಲಾಗಿರುವ ಓಚರ್‌ಗಳನ್ನು ಪರಿಶೀಲಿಸಲಾಗಿದ್ದು | ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ, ಮಂಡ್ಯ ಇಲ್ಲಿನ ಗುತ್ತಿಗೆದಾರರು ಬದಲಾವಣೆಗೊಳ್ಳುತ್ತಿದ್ದು ಕಡಿಮೆ ಅವಧಿಗೆ ಮೆಸ್ ಗುತ್ತಿಗೆದಾರರನ್ನು ನಿಯೋಜಿಸುತ್ತಿದ್ದರಿಂದ ಹಾಗೂ ಸದರಿ ವಿದ್ಯಾರ್ಥಿನಿಲಯವು ಗ್ರಾಮಾಂತರ ಪ್ರದೇಶದಲ್ಲಿದ್ದು ಯಾರೂ ಮೆಸ್ ನಡೆಸಲು ಬಾರದ ಹಿನ್ನಲೆಯಲ್ಲಿ ಮತ್ತು ವಿದ್ಯಾರ್ಥಿನಿಲಯದ ಭೋಜನ ತಯಾರಿಕೆಗೆ ರುಬ್ಬುವ ಯಂತ್ರದ |

| | |
|---|---|
| ಮೆಸ್ ಗುತ್ತಿಗೆದಾರರು, ಗುತ್ತಿಗೆಯನ್ನು ಪಡೆಯಲು ಒಡಂಬಡಿಕೆ ಮಾಡಿಕೊಳ್ಳುವಾಗ ಪಾತ್ರೆ ಪರಿಕರಗಳನ್ನು ಸ್ವತಃ ಗುತ್ತಿಗೆದಾರರೇ ತಂದು ಮೆಸ್ ಗುತ್ತಿಗೆಯನ್ನು ನಿರ್ವಹಿಸಬೇಕಾಗಿರುತ್ತದೆ. ಆದರೆ ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿಯಿಂದ ಎರಡು ಗ್ರೈಂಡರ್‌ಗಳನ್ನು ಖರೀದಿಸಿ ನೀಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದು **ರೂ.57,155**/–ಗಳನ್ನು ಗ್ರೈಂಡರ್‌ಗಳನ್ನು ಖರೀದಿಸಿ ನೀಡಿರುವ ಮೆಸ್ ಗುತ್ತಿಗೆದಾರರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡುವಂತೆ ಸೂಚಿಸಿದೆ. | ಅವಶ್ಯಕತೆಯಿದ್ದರಿಂದ, ಸದರಿ ವಿದ್ಯಾರ್ಥಿನಿಲಯಕ್ಕೆ ಈ ಶೀರ್ಷಿಕೆಯಡಿಯಲ್ಲಿ ಹೊಸ ರುಬ್ಬುವ ಯಂತ್ರವನ್ನು ಖರೀದಿಸಿ ನೀಡಲಾಗಿದೆ. ಸದರಿ ರುಬ್ಬುವ ಯಂತ್ರವು ಸ್ನಾತಕೋತ್ತರ ವಿದ್ಯಾರ್ಥಿನಿಲಯ, ಮಂಡ್ಯ ಇಲ್ಲಿನ ದಾಸ್ತಾನಿನಲ್ಲಿದ್ದು ವಿದ್ಯಾರ್ಥಿನಿಲಯದ ಉಪಯೋಗಕ್ಕೆ ಬಳಸಲಾಗುತ್ತದೆ.<br><br>ಸ್ನಾತಕೋತ್ತರ ಪುರುಷ ವಿದ್ಯಾರ್ಥಿನಿಲಯ ಬ್ಲಾಕ್–2 ಇಲ್ಲಿನ ಗುತ್ತಿಗೆದಾರರು ಆಂತರಿಕ ಬದಲಾವಣೆಗೊಂಡಿದ್ದ ಸಂದರ್ಭದಲ್ಲಿ ರುಬ್ಬುವ ಯಂತ್ರ ದುರಸ್ಥಿಗೆ ಬಂದಿದ್ದು ದುರಸ್ಥಿ ಮಾಡುವವರನ್ನು ಕರೆದು ವಿಚಾರಿಸಲಾಗಿ ರಿಪೇರಿ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ್ದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಭೋಜನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ: ವಿ.ಷೇ.ಪಾ 1/33/1215/2015–16, ದಿನಾಂಕ:22.12.2015ರಲ್ಲಿ ಈ ವಿದ್ಯಾರ್ಥಿ ನಿಲಯಗಳಿಗೆ 2 ರುಬ್ಬುವ ಯಂತ್ರಗಳನ್ನು ಖರೀದಿಸಲು ಹಾಗೂ ವಿದ್ಯಾರ್ಥಿನಿಲಯಗಳಿಗೆ ಅವಶ್ಯವಿರುವ ಸಾಮಾಗ್ರಿಗಳ ನಿರ್ವಹಣೆ ಶೀರ್ಷಿಕೆಯಲ್ಲಿ ವೆಚ್ಚ ಭರಿಸಲು ಮಂಜೂರಾತಿ ಆದೇಶ ದೊರಕಿದ್ದು (ಪತ್ರ ಲಗತ್ತಿಸಿದೆ). ವಿದ್ಯಾರ್ಥಿಗಳ ಭೋಜನಕ್ಕೆ ತೊಂದರೆಯಾಗಬಾರದೆಂಬ ಹಿತದೃಷ್ಟಿಯಿಂದ ಅವಶ್ಯಕವಿರುವ 2 ರುಬ್ಬುವ ಯಂತ್ರಗಳನ್ನು ಖರೀದಿಸಿ ವಿದ್ಯಾರ್ಥಿನಿಲಯದ ದಾಸ್ತಾನು ಲೆಕ್ಕದಲ್ಲಿ ನಿರ್ವಹಿಸಲಾಗಿದೆ ಎಂಬ ಅಂಶವನ್ನು ನಿವೇದಿಸುತ್ತಾ ರೂ,57,155/–ಗಳ ವಸೂಲಾತಿ ಕಂಡಿಕೆಯನ್ನು ಕೈಬಿಡಬೇಕಾಗಿ ಕೋರಲಾಗಿದೆ. |
| **ಸಿವಿಲ್ ಕಾಮಗಾರಿಗಳ ವಿಭಾಗ (Civil Works)**<br><br>**94. ಇಂಜಿನಿಯರಿಂಗ್ ವಿಭಾಗದ ಶಾಸನಬದ್ಧ ಅಧಿಕಾರಿಗಳು ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರ ಆದೇಶ (Delegation of Financial/Technical powers) ಪ್ರತಿಯನ್ನು ಒದಗಿಸದಿರುವುದು:– (ಇಂಜಿನಿಯರಿಂಗ್ ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ 2015–16ನೇ ಸಾಲಿನ ಸಿವಿಲ್/ವಿದ್ಯುತ್ ಕಾಮಗಾರಿ ಬಿಲ್ಲುಗಳು/ಡಿ.ಸಿ. ಬಿಲ್ಲುಗಳ ಪರಿಶೀಲನೆಗಾಗಿ ಶಾಸನಬದ್ಧ ಅಧಿಕಾರಿಗಳು – ಕುಲಸಚಿವರು/ಹಣಕಾಸು ಅಧಿಕಾರಿಗಳು/ ಕಾರ್ಯಪಾಲಕ ಅಭಿಯಂತರರು ರವರು ತಾಂತ್ರಿಕ/ಆರ್ಥಿಕ/ಆಡಳಿತಾತ್ಮಕ ಅನುಮೋದನೆ ಹೊಂದಿರುವಂಥಹ ಆರ್ಥಿಕ ಪ್ರತ್ಯಾಧಿಕಾರ (Delegation of Financial powers) ಬಗ್ಗೆ ಅನುಮೋದಿತ ಆದೇಶ ಪ್ರತಿಯನ್ನು ಒದಗಿಸುವಂತೆ ಲೆಕ್ಕತನಿಖಾ | ಮೈಸೂರು ವಿಶ್ವವಿದ್ಯಾನಿಲಯವು ಒಂದು ಸ್ವಾಯತ್ತ ಶೈಕ್ಷಣಿಕ ಸ್ಥಳೀಯ ಸಂಸ್ಥೆಯಾಗಿದ್ದು; ಇತರೆ ಸರ್ಕಾರಿ ಲೋಕೋಪಯೋಗಿ ಇಲಾಖೆಯ ಕೈಪಿಡಿಯ ನಿಯಮಗಳಂತೆ ಯಾವುದೇ ಕಾಮಗಾರಿ ಅಂದಾಜುಗಳನ್ನು ಮಂಜೂರಾತಿಗಾಗಿ ಅಧೀಕ್ಷಕ ಇಂಜಿನಿಯರ್‌ರವರು; ಮುಖ್ಯ ಇಂಜಿನಿಯರ್ ರವರು ಹಾಗೂ ಸರ್ಕಾರಕ್ಕೆ ಸಲ್ಲಿಸುವ ಕ್ರಮ ಇರುವುದಿಲ್ಲ. ಬದಲಾಗಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ.ಜಿಎಲ್7/77–78 ದಿನಾಂಕ 30.09.1977ರ ಅನ್ವಯದಂತೆ |

| | |
|---|---|
| ವಿಚಾರಣೆ ಸಂಖ್ಯೆ:3/07.02.2018ರಲ್ಲಿ ಕೋರಲಾಗಿದ್ದು, ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಇದರಿಂದ 2015–16ನೇ ಸಾಲಿನಲ್ಲಿ ಭರಿಸಲಾದ ಕಾಮಗಾರಿಗಳ ಅಂದಾಜುಪಟ್ಟಿ/ ವೆಚ್ಚಗಳು ಸಿಂಧುವಾಗಿದೆಯೇ, ಇಲ್ಲವೇ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಈ ಕುರಿತು ಸೂಕ್ತ ವಿವರಣೆಯನ್ನು ಹಾಗೂ ಪ್ರತ್ಯಾಧಿಕಾರದ ಅನುಮೋದಿತ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಮುಖ್ಯ ಇಂಜಿನಿಯರ್‌ರವರಿಗೆ ಹಾಗೂ ಸರ್ಕಾರಕ್ಕೆ ಇರುವ ಆರ್ಥಿಕ ವ್ಯಾಪ್ತಿಯಲ್ಲಿ ಕಾರ್ಯಪಾಲಕ ಅಭಿಯಂತರರು, ಹಣಕಾಸು ಸಮಿತಿ, ತಾಂತ್ರಿಕ ಸಮಿತಿ, ಕಟ್ಟಡ ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳಿಗೆ ಸಮನಾಂತರವಾಗಿ ಅಧಿಕಾರವನ್ನು ನೀಡುವ ಕ್ರಮ ಇರುತ್ತದೆ. ಸರ್ಕಾರವು ತೆಗೆದುಕೊಳ್ಳುವ ನಿರ್ಣಯವನ್ನು ಸಿಂಡಿಕೇಟ್ ಸಭೆಯು ತೆಗೆದುಕೊಳ್ಳಬಹುದಾಗಿದೆ ಎಂದು ಮೇಲಿನ ಆದೇಶದಲ್ಲಿ ತಿಳಿಸಲಾಗಿದೆ. ಕಟ್ಟಡ ಸಮಿತಿಯಲ್ಲಿ ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಅಧೀಕ್ಷಕ ಅಭಿಯಂತರರು ಸದಸ್ಯರಾಗಿರುತ್ತಾರೆ. ಯಾವುದೇ ತಾಂತ್ರಿಕ ವಿಚಾರಗಳಲ್ಲಿ ಇವರು ಸಲಹೆ ಸೂಚನೆಗಳನ್ನು ನೀಡುತ್ತಾರೆ. ಅಂದಾಜುಗಳನ್ನು ಹಣಕಾಸು ಸಮಿತಿ, ಕಟ್ಟಡ ಸಮಿತಿಯಲ್ಲಿ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿಗಳನ್ನು ಪಡೆದು ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.<br><br>ವಿಶ್ವವಿದ್ಯಾನಿಲಯದ ದಿನಾಂಕ.30.9.1977ರ ಆದೇಶದ ಪ್ರತಿಯನ್ನು ಲಗತ್ತಿಸಿದೆ. |
| **96. ಶ್ರೀ ಗಿರೀಶ್.ಎಂ. ಸ್ವಾಮಿ Consultants ರವರಿಗೆ ಪಾವತಿಸಿರುವ ಸಲಹಾ ವೆಚ್ಚ [Consultant charger] ಕುರಿತಂತೆ:– (ಇಂಜಿನಿಯರಿಂಗ್ ವಿಭಾಗ)**<br><br>2015–16ನೇ ಸಾಲಿನ ಲೆಕ್ಕತಪಾಸಣಾ ಅವಧಿಯಲ್ಲಿ ಹಾಜರುಪಡಿಸಿರುವ ಡಿ.ಸಿ.ಬಿಲ್ಲುಗಳನ್ನು ಪರಿಶೀಲಿಸಲಾಗಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಹಲವಾರು ನಿರ್ಮಾಣ ಕಾಮಗಾರಿಯ ಕಟ್ಟಡಗಳ ನಕ್ಷೆ ಮತ್ತು ವಿನ್ಯಾಸ [Architectural & Structural] ತಯಾರಿಸಿ ಕೊಟ್ಟಿರುವ ಸಂಬಂಧ ಸದರಿ ಗುತ್ತಿಗೆದಾರರಿಗೆ ಸಲಹಾ ವೆಚ್ಚದ ಒಟ್ಟು ಬಾಬ್ತು ರೂ.51,91,255/–ಗಳನ್ನು ಡಿ.ಸಿ.ಬಿಲ್ಲುಗಳ ಮುಖಾಂತರ ಬಿಡಿಬಿಡಿಯಾಗಿ ಪಾವತಿಸಲಾಗಿರುತ್ತದೆ. ಆದರೆ ಇಲ್ಲಿ ಪಾವತಿಸಿರುವ ಮೊತ್ತ ರೂ.5 ಲಕ್ಷಗಳನ್ನು ಮೀರಿರುವುದರಿಂದ ಈ ಕಾಮಗಾರಿಯನ್ನು ಪ್ಯಾಕೇಜ್ ಸಿಸ್ಟಮ್ [Packaged System] ಮೂಲಕವೇ e-tender ಕರೆದು ನಿರ್ವಹಿಸಬೇಕಾಗಿತ್ತು. ಈ ನಿಯಮವನ್ನು KTPP Actನ ಕಲಂ 4(ಇಇ) ನಿಯಮ 28(ಬಿ)ರಲ್ಲಿ ವಿವರಿಸಲಾಗಿರುತ್ತದೆ. ಈ ನಿಯಮದ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಮತ್ತು ಸದರಿ ಗುತ್ತಿಗೆದಾರರಿಗೆ ಭರಿಸಿರುವ ಸಲಹಾ ವೆಚ್ಚದ ಪಾವತಿಗೆ ಸಂಬಂಧಿಸಿದಂತೆ ವಿಚಾರಣಾ ಪತ್ರದ ಸಂಖ್ಯೆ:21/23.02.2018ರಲ್ಲಿ ಕೆಳಕಂಡ ಮಾಹಿತಿಯನ್ನು ನೀಡುವಂತೆ ಕೋರಲಾಗಿತ್ತು. ಯಾವುದೇ ಮಾಹಿತಿಯನ್ನು ನೀಡದಿರುವುದರಿಂದ ಪಾವತಿಸಿರುವ ಒಟ್ಟು ಮೊತ್ತ **ರೂ.51,91,255/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರಗಳನ್ನು **ಅನುಬಂಧ–62ರಲ್ಲಿ** ಒದಗಿಸಲಾಗಿದೆ. ಕೋರಿರುವ ಮಾಹಿತಿಗಳು ಈ ರೀತಿಯಾಗಿದೆ. | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಕ್ಷೆ ಮತ್ತು ವಿನ್ಯಾಸ ತಯಾರಿಸುವ ಸೇವೆ ಪಡೆಯುವ ಸಲುವಾಗಿ ಇ–ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲಿ ಟೆಂಡರ್ ಪ್ರಕಟಣೆ ಹೊರಡಿಸಲಾಯಿತು. ಈ ಸಂಬಂಧ ಕಡಿಮೆದರ ನಮೂದಿಸಿದ್ದ ಮೆ॥ ಗಿರೀಶ್ ಎಂ.ಸ್ವಾಮಿ ಇವರ ದರವನ್ನು ದಿನಾಂಕ 18–02–2014ರಂದು ಮತ್ತು ದಿನಾಂಕ 20–02–2014 ರಂದು ನಡೆದ ಟೆಂಡರ್ ಅಂಗೀಕಾರ ಸಮಿತಿಯಲ್ಲಿ ತಾಂತ್ರಿಕ ಅನುಮೋದನೆ ಪಡೆಯಲಾಯಿತು. ಹಾಗೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್7/154/2011–12 ದಿನಾಂಕ 28–02–2014 ಮತ್ತು ಆದೇಶ ಸಂಖ್ಯೆ ಜಿ.ಎಲ್7/130/2014–15 ದಿನಾಂಕ 30–07–2015 ರ ಅನ್ವಯದಂತೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. ಇದರನ್ವಯದಂತೆ ಆಯಾ ಪ್ಯಾಕೇಜ್ ಕಾಮಗಾರಿಗಳಿಗೆ ನಕ್ಷೆ ಮತ್ತು ವಿನ್ಯಾಸ ತಯಾರಿಸುವ ಕಾರ್ಯಕ್ಕೆ ಕಾರ್ಯಾದೇಶ ನೀಡಿ ಕರಾರು ಒಪ್ಪಂದ ಮಾಡಿಕೊಂಡು ಪೂರ್ಣಗೊಳಿಸಿದ ಆಯಾ ಕಾಮಗಾರಿಗಳ ಸಂಬಂಧ ಹಂತ ಹಂತವಾಗಿ ಪಾವತಿಗಳನ್ನು ಮಾಡಲಾಗಿದೆ. ಆಯಾ ಬಿಲ್ಲುಗಳಲ್ಲಿ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಕಟಾಯಿಸಲಾಗಿದೆ. ಡಿ.ಸಿ ಬಿಲ್ಲು ಜೊತೆಯಲ್ಲಿ ಲಗತ್ತಿಸಲಾಗಿದ್ದ ಓಚರ್‌ನಲ್ಲಿ ಆದಾಯ ತೆರಿಗೆ ಕಟಾವು ಬಗ್ಗೆ ಮಾಹಿತಿ ಲಭ್ಯವಿದ್ದು; ತನಿಖಾ ಸಮಯದಲ್ಲಿ ಅವುಗಳನ್ನು |

| | |
|---|---|
| (i) Tender process documents<br>(ii) Technical & Administrative approval<br>(iii) Explanation regarding tax deductions<br>(iv) Classification on Invoice | ಪರಿಶೀಲಿಸಲಾಗಿರುತ್ತದೆ.<br><br>ದಿನಾಂಕ 20.2.2014 ರಂದು ನಡೆದ ಟೆಂಡರ್ ಪ್ರಾಧಿಕಾರ ಸಮಿತಿ ಅನುಮೋದನೆ ಪ್ರತಿ, ಇ–ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ, ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ.ಎಲ್.7/154/2011–12 ದಿನಾಂಕ 28.2.2014 ಮತ್ತು ಆದೇಶ ಸಂಖ್ಯೆ:ಜಿ.ಎಲ್7/130/2014–15 ದಿನಾಂಕ 30.7.2015ರ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ.<br><br>ಆದ್ದರಿಂದ ರೂ.51,91,255/–ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **97. <u>ಸಣ್ಣ ಕಾಮಗಾರಿಗಳು ಮತ್ತು ದೊಡ್ಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವ ಸಂಬಂಧವಾಗಿ Work registerನ್ನು ಪ್ರತ್ಯೇಕವಾಗಿ ನಿರ್ವಹಣೆ ಮಾಡುವ ಬಗ್ಗೆ:– (ಇಂಜಿನಿಯರಿಂಗ್ ವಿಭಾಗ)</u>**<br><br>2015–16ನೇ ಸಾಲಿಗೆ ಇಂಜಿನಿಯರಿಂಗ್ ವಿಭಾಗದಲ್ಲಿ ಅನುಷ್ಠಾನಗೊಳಿಸಲಾಗಿರುವ ಸಣ್ಣ ಕಾಮಗಾರಿಗಳು ಮತ್ತು ದೊಡ್ಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು, ಇವುಗಳ ವಿವರಣೆಯನ್ನು ನಮೂದಿಸಿರುವ Work registerನ್ನು ಪ್ರತ್ಯೇಕವಾಗಿ ನಿರ್ವಹಣೆ ಮಾಡಿರುವ ಬಗ್ಗೆ ವಿಚಾರಣೆ ಸಂಖ್ಯೆ:27/2018–19, ದಿನಾಂಕ:28.02.2018ರಲ್ಲಿ ಕೋರಲಾಗಿದೆ.<br><br>ಕರ್ನಾಟಕ ಲೋಕೋಪಯೋಗಿ ಲೆಕ್ಕ ಸಂಹಿತೆ Iರ ಪ್ಯಾರಾಗ್ರಾಫ್ (284)ರ ಪ್ರಕಾರ Majar Ext. and Minor Ext. ಎಂದು ಪ್ರತ್ಯೇಕವಾಗಿ ನಿರ್ವಹನೆ ಮಾಡಬೇಕಾಗಿದೆ ಹಾಗೂ ಕೈಗೊಳ್ಳುವ ಕಾಮಗಾರಿವಾರು ವೆಚ್ಚದ ವಿವರಗಳನ್ನು ನಿಗಧಿತ ನಮೂನೆ PWG 12 ಮತ್ತು PWG 13ರಲ್ಲಿ ಈ ಕೆಳಕಂಡಂತೆ ಮಾಹಿತಿಯನ್ನು ನಮೂದಿಸುವುದು.<br><br>ಅ) ಲೆಕ್ಕಶೀರ್ಷಿಕೆ<br>ಆ) ಕಾಮಗಾರಿಯ ವಿವರಗಳು<br>ಇ) ಅಂದಾಜು ವೆಚ್ಚ<br>ಈ) ತಾಂತ್ರಿಕ ಮಂಜೂರಾತಿ ವಿವರಗಳು<br>ಉ) ಆಡಳಿತಾತ್ಮಕ ಮಂಜೂರಾತಿ ವಿವರಗಳು | ಈ ಕಂಡಿಕೆಯಲ್ಲಿನ ಸೂಚನೆಯಂತೆ ಸಣ್ಣ ಕಾಮಗಾರಿಗಳು ಮತ್ತು ದೊಡ್ಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರತ್ಯೇಕವಾಗಿ Work registerನ್ನು ನಿರ್ವಹಿಸಿ ತಿಳಿಸಿರುವ ಎಲ್ಲಾ ಮಾಹಿತಿಗಳನ್ನೂ ನಮೂದಿಸಿ ಲೆಕ್ಕ ತನಿಖೆಗೆ ಒದಗಿಸುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಲಾಗಿದೆ. |

| | |
|---|---|
| ಊ) ಗುತ್ತಿಗೆದಾರರ ಹೆಸರು ಮತ್ತು ವಿಳಾಸ<br>ಋ) ಕೆಲಸವನ್ನು ಪ್ರಾರಂಭಿಸಲು ಸ್ಥಳ ವಹಿಸಿಕೊಟ್ಟ ದಿನಾಂಕ<br>ಎ) ನಿಗಧಿ ಪಡಿಸಿದ ಕಾಲಾವಧಿ<br>ಏ) ಕೆಲಸವನ್ನು ಪೂರ್ಣಗೊಳಿಸಿಕೊಡಬೇಕಾದ ದಿನಾಂಕ<br>ಐ) ವಾಸ್ತವವಾಗಿ ಪೂರ್ಣಗೊಳಿಸಿರುವ ದಿನಾಂಕ<br>ಒ) 2015–16ನೇ ಸಾಲಿಗೆ ನಿಗಧಿಪಡಿಸಿರುವ ಅನುದಾನ<br>ಓ) ಹಣ ಪಾವತಿ ಮಾಡಿರುವ ವಿವರಗಳು | |
| **103**.Package-01 **ಕ್ರೋಢೀಕೃತ ಕಾಮಗಾರಿಯ ಬಿಲ್ಲುಗಳಲ್ಲಿ ಕಡತ ಇತರ ದಾಖಲೆ ಒದಗಿಸದೆ ಇರುವುದು:– (ಇಂಜಿನಿಯರಿಂಗ್ ವಿಭಾಗ)**<br><br>2015–16ನೇ ಸಾಲಿನಲ್ಲಿ Package-01 ರ ಕ್ರೋಢೀಕೃತ ಕಾಮಗಾರಿಗಳಾದ<br>1) Construction of Moulya Bhavan<br>2) Renovation of Executive Guest House<br>3) Construction of class room block YCM.<br>4) Construction of footpath at Maharaja College Campus.<br>5) Construction of indoor stadium.<br>6) Vasting of main entry gate (07 Nos.)<br>7) Construction of entry gate (02 Nos) at Maharaja College Premiss.<br>8) Construction of canteen for Yuvaraja College Mysore.<br>9) Construction of staff room block Yuvaraja College<br>1) ಅಳತೆ ಪುಸ್ತಕ(ಎಂ.ಬಿ) (1) 2219 (2) 2202 (3) 2205<br>2) ವಾರ್ಷಿಕ ಕಾರ್ಯಕ್ರಮದ ಪಟ್ಟಿ<br>3) ಕ್ರಿಯಾ ಯೋಜನೆ<br>4) ಕಟ್ಟಡಗಳಿಗೆ ಸಂಬಂಧಿಸಿದ ವಿನ್ಯಾಸ<br>5) ನಕ್ಷೆಗಾರರಿಗೆ ಪಾವತಿಸಿರುವ ವಿವರ/Electrification Design<br>6) ಮೈಸೂರು ಮಹಾನಗರ ಪಾಲಿಕೆ ಅನುಮೋದಿಸಿದ ಯೋಜನೆ<br>7) ಟೆಂಡರ್ ಮೊತ್ತ ರೂ.4498,87,432/– | ಪ್ಯಾಕೇಜ್-01 ರ ಅಡಿಯಲ್ಲಿ ಒಟ್ಟು 9 ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದು; ಈ ಕಾಮಗಾರಿಗಳಿಗೆ ಸಂಬಂಧಿಸಿದ ಅಳತೆ ಪುಸ್ತಕಗಳು, ವಾರ್ಷಿಕ ಕಾರ್ಯಕ್ರಮದ ಪಟ್ಟಿ, ತಾಂತ್ರಿಕ ಮಂಜೂರಾತಿ, ಕಟ್ಟಡಗಳ ವಿನ್ಯಾಸ, ಕ್ರಿಯಾಯೋಜನೆ ನಕ್ಷೆಗಾರರಿಗೆ ಪಾವತಿಸಿದ ಹಣದ ವಿವರ, ಮಹಾನಗರ ಪಾಲಿಕೆ ಅನುಮೋದನೆ, ಸಿ.ರಿಜಿಸ್ಟರ್ ಇತ್ಯಾದಿ ಎಲ್ಲಾ ದಾಖಲಾತಿಗಳನ್ನು ಲೆಕ್ಕ ಪರಿಶೋಧನಾ ಸಮಯದಲ್ಲಿ ಒದಗಿಸಲಾಗಿತ್ತು .ಆದಾಗ್ಯೂ; ಅವುಗಳ ಪ್ರತಿಗಳನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗುತ್ತದೆ.<br><br>(II) ಮತ್ತು (III) ಮೈಸೂರು ವಿಶ್ವವಿದ್ಯಾನಿಲಯ ಪ್ಯಾಕೇಜ್ -01 ರ ಅಡಿಯಲ್ಲಿ 9 ಕಾಮಗಾರಿಗಳು ಪ್ರಗತಿಯಲ್ಲಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಕ್ಕೆ 100 ವರ್ಷದ ಶತಮಾನೋತ್ಸವ ಆಚರಣೆ ಹಾಗೂ 103ನೇ ಭಾರತೀಯ ವಿಜ್ಞಾನ ಸಮಾವೇಶ ಸಮಾರಂಭಕ್ಕೆ ಸನ್ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಸನ್ಮಾನ್ಯ ರಾಷ್ಟ್ರಪತಿಗಳು ಆಗಮಿಸುತ್ತಿದ್ದ ಹಿನ್ನೆಲೆಯಲ್ಲಿ ಪ್ರಮುಖ ಕೆಲಸಗಳಾದ ಮಾನಸಗಂಗೋತ್ರಿಯಲ್ಲಿ ಗಡಿಯಾರ ಗೋಪುರ ನಿರ್ಮಾಣ; ಬಯಲು ರಂಗಮಂದಿರ ಅಭಿವೃದ್ಧಿ ಇತ್ಯಾದಿ ಕೆಲಸಗಳನ್ನು ನಿಯಮಾನುಸಾರ ಟೆಂಡರ್ ಕರೆದು ನಿರ್ವಹಿಸಲು ಸಾಕಷ್ಟು ಸಮಯಾವಕಾಶಗಳು ಇಲ್ಲವಾಗಿದ್ದ ಪ್ರಯುಕ್ತ ಪ್ಯಾಕೇಜ್ ಕಾಮಗಾರಿಗಳ ಐಟಂಗಳ ಅಡಿಯಲ್ಲಿ ಈ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಿದ ಪ್ರಯುಕ್ತ ಹೆಚ್ಚುವರಿ ಕೆಲಸ ಮತ್ತು ಹೆಚ್ಚುವರಿ ಐಟಂಗಳ ನಿರ್ವಹಣೆ ಉದ್ಭವಿಸಿರುತ್ತದೆ. ಈ ಹೆಚ್ಚುವರಿ ಕೆಲಸ ಹಾಗೂ ಹೆಚ್ಚುವರಿ ಐಟಂಗಳ ನಿರ್ವಹಣೆಗೆ ವಿಶ್ವವಿದ್ಯಾನಿಲಯದ ಆದೇಶ |

| | |
|---|---|
| 8) ಸಿ. ರಿಜಿಸ್ಟರ್<br>9) EIRL work slip<br>9) ತಾಂತ್ರಿಕ ಮಂಜೂರಾತಿ<br>10) ಶಾಸನಬದ್ಧ ಕಡತಗಳನ್ನು ಸಂಬಂಧಿಸಿದ ಇಲಾಖೆಗೆ ಜಮೆ ಮಾಡಿದ ವಿವರ<br>11) ಸರ್ಕಾರದಿಂದ ಅನುಮೋದನೆ ಪಡೆದ ವಿವರಗಳು<br>ಇವುಗಳನ್ನು ಆಡಿಟ್ ವಿಚಾರಣೆಗೆ ಹಾಜರುಪಡಿಸುವಂತೆ ಲೆಕ್ಕತನಿಖಾ ವಿಚಾರಣಾ ಸಂಖ್ಯೆ:66/18–19, ದಿ:02.04.2018 ನೀಡಿದ್ದರೂ ಹಾಜರುಪಡಿಸಿರುವುದಿಲ್ಲ. ಆದ್ದರಿಂದ package-01 ಕಾಮಗಾರಿಗಳ ಬಿಲ್ಲುಗಳ ವಿವರಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ.<br>**III] Package-01 ಕ್ರೋಢೀಕೃತ ಕಾಮಗಾರಿಗಳಲ್ಲಿ Shedule-B ರಲ್ಲಿ ನಮೂದಿಸಿರುವ Quantityಗಿಂತ ಹೆಚ್ಚುವರಿ ಪರಿಮಾಣ [Excess Quantity] ಕೆಲಸ ನಿರ್ವಹಿಸಿರುವುದು ಮತ್ತು ಬಿಲ್ ಪಾವತಿಸಿರುವುದು:– (ಇಂಜಿನಿಯರಿಂಗ್ ವಿಭಾಗ)**<br>2015–16ನೇ ಸಾಲಿನಲ್ಲಿ Package-01 ರ ಕ್ರೋಢೀಕೃತ ಕಾಮಗಾರಿಗಳಾದ 1) Construction of moulleya bhavan 2) Construction of indoor stadeum 3) Construction of class room Yuvaraja College 4) Construction of footpath ರಲ್ಲಿ ಅಂದಾಜು ಪಟ್ಟಿ ಮತ್ತು Shedule-B ಯಲ್ಲಿ ನಮೂದಿಸಿರುವ Quantity ಗಿಂತ ಹೆಚ್ಚುವರಿಯಾಗಿ [**Excess** Quantity] ಕೆಲಸ ನಿರ್ವಹಿಸಲಾಗಿದೆ. ಅಂದಾಜುಪಟ್ಟಿ ಮತ್ತು Shedule-B ಯಲ್ಲಿ ನಿಗದಿಪಡಿಸಿ ಮಂಜೂರಾತಿ ಪಡೆದಿರುವ ಪರಿಮಾಣ (Quantity)ಕ್ಕಿಂತ ಹೆಚ್ಚಿನ ಪರಿಮಾಣ [**Excess** Quantity] ಕ್ಕೆ ಸಕ್ಷಮ ಪ್ರಾಧಿಕಾರದಿಂದ Work slip ಗೆ ಅನುಮೋಧನೆ/ಆಡಳಿತಾತ್ಮಕ ಅನುಮೋಧನೆ ಮಂಜೂರಾತಿ ಪಡೆದಿರುವುದಿಲ್ಲ. Shedule-B ಯಲ್ಲಿ ನಿಗಧಿಪಡಿಸಿರುವ Quantity ಗಿಂತ ಹೆಚ್ಚಿನ Quantity [Excess Quantity]ಗೆ ಪಾವತಿಸಿರುವ ಮೊತ್ತ **ರೂ.1,85,76,285/– ಗಳನ್ನು ಸಕ್ಷಮ ಅಧಿಕಾರಿಗಳಿಂದ ಅನುಮೋಧನೆ ಪಡೆಯುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.** ವಿವರಗಳನ್ನು **ಅನುಬಂಧ–64ರಲ್ಲಿ** ಲಗತ್ತಿಸಿದೆ.<br>**V. EIRL ಪರಿಮಾಣ ನಿರ್ವಹಿಸಿರುವುದಕ್ಕೆ ಅನುಮೋದನೆ ಪಡೆಯದಿರುವುದು:– (ಇಂಜಿನಿಯರಿಂಗ್ ವಿಭಾಗ)**<br>Package-01 ಕ್ರೋಢೀಕೃತ ಕಾಮಗಾರಿಯ ಬಿಲ್ಲುಗಳಲ್ಲಿ EIRL ಪರಿಮಾಣವನ್ನು ಕೆಳಗಿನ ವಿವರದಂತೆ ಪಾವತಿಸಲಾಗಿರುತ್ತದೆ. KPWA code ನಿಯಮ–323ರಂತೆ ಸಕ್ಷಮ ಪ್ರಾಧಿಕಾರ, ಸಿಂಡಿಕೇಟ್‌ನಿಂದ ನಮೂನೆ PWG-45ರಲ್ಲಿ ಅನುಮೋದನೆ ಪಡೆದಿರುವ ಪ್ರತಿ ಹಾಜರುಪಡಿಸಿಲ್ಲವಾದ್ದರಿಂದ | ಸಂಖ್ಯೆ.ಜಿ.ಎಲ್/7/412/2013–14 ದಿನಾಂಕ:17.9.2016ರ ಅನ್ವಯದಂತೆ ಅನುಮೋದನೆ ನೀಡಲಾಗಿರುತ್ತದೆ. ಆದೇಶದ ಪ್ರತಿ ಲಗತ್ತಿಸಿದೆ.<br><br>ಕಾಮಗಾರಿಗಳಿಗೆ ಅನುಮೋದನೆ ನೀಡುವುದು ಮತ್ತು ಅವುಗಳನ್ನು ನಿರ್ವಹಿಸುವ ಕಾರ್ಯವನ್ನು ಇದೇ ಸಾಲಿನ ವರದಿಯ ಕಂಡಿಕೆ 94.00ರಲ್ಲಿ ವಿವರಿಸಿರುವಂತೆ ವಿಶ್ವವಿದ್ಯಾನಿಲಯದಲ್ಲೇ ನಿರ್ವಹಿಸಲಾಗುತ್ತಿದೆ. ಸರ್ಕಾರದ ಅನುಮೋದನೆ ಪಡೆಯಲಾಗುತ್ತಿಲ್ಲ. ಏಕೆಂದರೆ ವಿಶ್ವವಿದ್ಯಾನಿಲಯವು ಒಂದು ಸ್ಥಳೀಯ ಶೈಕ್ಷಣಿಕ ಸಂಸ್ಥೆ ಆಗಿರುತ್ತದೆ. ಸರ್ಕಾರದ ಇಲಾಖೆ ಆಗಿರುವುದಿಲ್ಲ ಎಂಬ ವಿಚಾರವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.<br><br>ಆದ್ದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

ಪಾವತಿಸಲಾದ EIRL ಪರಿಮಾಣದ ಮೊತ್ತ **ರೂ.23,45,067/-** ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ವಿವರವನ್ನು ಒದಗಿಸಲು ಸೂಚಿಸಿದೆ.

**EIRL ಪಾವತಿಗೆ ಸಂಬಂಧಿಸಿದಂತೆ ಅನುಮೋದನೆ ಪಡೆಯದಿರುವುದರ ವಿವರ**

| ಐಟಂ ಸಂಖ್ಯೆ | ಪರಿಮಾಣ | ದರ | ಮೊತ್ತ |
|---|---|---|---|
| 1 | 60.90 | 515159 | 313732 |
| 2 | 56925 | 151.35 | 67177 |
| 1 | 375 | 40.00 | 15000 |
| 2 | 275.10<br>1125<br>850.10 | 50.00<br>50.00<br>50.84 | 13755<br>56250<br>43219 |
| 1 | 192.80<br>192.80<br>6.35 | 472.05<br>354.04<br>6800 | 91011<br>68258<br>43180 |
| 2 | 5.58 | 6460 | 36046 |
| 14 | 914.51<br>1085.78 | 80<br>76 | 33160<br>82519 |
| 15 | 30320.52<br>10349.36 | 175.33<br>35.05 | 531692<br>362745 |
| 11 | 14.84 | 5122.55 | 76018 |
| 12 | 5.00 | 3988 | 19940 |
| 1 | 192.80<br>192.80 | 472.5<br>354.04 | 91011<br>68258 |
| 2 | 6.35<br>5.58 | 6800<br>6460 | 43180<br>36046 |
| 64 | 11 | 1700 | 18700 |
| 65 | 9 | 5000 | 45000 |

| | | | |
|---|---|---|---|
| 66 | 27 | 360 | 9720 |
| 69 | 4 | 15500 | 62000 |
| 83 | 405 | 290 | 117450 |
| | | **ಒಟ್ಟು ರೂ.** | **23,45,067** |

**ದಾಸ್ತಾನು ವಿಭಾಗ (Stock)**

**112. ಪಿ.ಹೆಚ್.ಡಿ. ಪ್ರಮಾಣ ಪತ್ರಗಳನ್ನು ಖರೀದಿಸಿದ ಬಗ್ಗೆ ದಾಸ್ತಾನು ಪುಸ್ತಕ ಹಾಜರುಪಡಿಸದೆ ಇರುವುದು:- (ಪರೀಕ್ಷಾ ವಿಭಾಗ)**

ಮೈಸೂರು ವಿಶ್ವವಿದ್ಯಾನಿಲಯದ 2015-16ನೇ ಸಾಲಿನಲ್ಲಿ ಪಿ.ಹೆಚ್.ಡಿ ಪರೀಕ್ಷಾ ಕಾರ್ಯ ಚಟುವಟಿಕೆಗಳ ಬಗ್ಗೆ Ph.D Course Certificate ಮತ್ತು Ph.D Eligibality Certificate ಗಳನ್ನು ಖಾಸಗಿ ಮುದ್ರಣಾಲಯಗಳಿಂದ ಮುದ್ರಿಸಿ ಖರೀದಿಸಿರುವುದರ ಬಗ್ಗೆ ವಿವರ ಕೆಳಕಂಡಂತಿದೆ.

| ಕ್ರ.ಸಂ | ಸಂಸ್ಥೆಯ ಹೆಸರು | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ | ಷರಾ |
|---|---|---|---|---|
| 1 | ಮೆ॥ ಜ್ಞಾನೋದಯ ಅಕಾಡೆಮಿಕ್ ಪಬ್ಲಿಕೇಷನ್, ಮೈಸೂರು | 520707/ 24.06.15 | 14060-00 | 1) Ph.D Eligibality Certificate-74<br>2) Ph.D Course work certificate-74 |
| 2 | ಮೆ॥ ಸುರೀನಾ ಗ್ರಾಫಿಕ್ಸ್, ಮೈಸೂರು | 520705/ 24.06.15 | 29657-00 | Ph.D Course work certificate-248 |
| 3 | ಮೆ॥ ಜ್ಞಾನೋದಯ ಅಕಾಡೆಮಿಕ್ ಪಬ್ಲಿಕೇಷನ್ | 520711/ 25.06.15 | 13205-00 | 1) Ph.D Eligibality Certificate-107<br>2) Ph.D Course work certificate-31 |
| 4 | ಮೆ॥ ಜ್ಞಾನೋದಯ | 520948/ | 10355-00 | |

ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ಮಲ್ಟಿ ಕಲರ್ ಪ್ರಿಂಟಿಂಗ್ ಪ್ರಮಾಣ ಪತ್ರಗಳನ್ನು ಮುದ್ರಿಸುವ ವ್ಯವಸ್ಥೆ ಇಲ್ಲದೇ ಇರುವುದರಿಂದ ಈ ಕಾರ್ಯಕ್ಕೆ ನಿಯಮಾನುಸಾರ ದರಪಟ್ಟಿ ಕರೆದು ಕಡಿಮೆ ದರ ನಮೂದಿಸಿದ್ದ ಮೆ॥ ಜ್ಞಾನೋದಯ ಅಕೆಡೆಮಿಕ್ ಪಬ್ಲಿಕೇಶನ್ ಇವರ ದರವನ್ನು ಅಂಗೀಕರಿಸುವುದರೊಂದಿಗೆ ಕಾರ್ಯಾದೇಶ ನೀಡಲಾಗಿದೆ. ತುಲನಾತ್ಮಕ ಪಟ್ಟಿ ಹಾಗೂ ಕುಲಸಚಿವರ ಆದೇಶದ ಸಂಖ್ಯೆ:ಡಿಓಆರ್.95/ಪಿಹೆಚ್‌ಡಿ/ಕೆಜಿಎಲ್/2014-15 ದಿನಾಂಕ:11.5.2015ರ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಲಾಗಿದೆ.

ಈ ಖಾಲಿ ಪ್ರಮಾಣ ಪತ್ರಗಳ ಒಟ್ಟು ಸಂಖ್ಯೆ:5800ಗಳನ್ನು ದಾಸ್ತಾನು ಪುಸ್ತಕದಲ್ಲಿ ದಾಖಲಿಸಿಕೊಂಡು ವಿತರಿಸಿರುವ ಬಗ್ಗೆ ದಾಸ್ತಾನು ಮತ್ತು ವಿತರಣೆಯ ವಹಿಗಳನ್ನು ಲೆಕ್ಕ ತನಿಖೆಗೆ ಒದಗಿಸುವಂತೆ ಪರೀಕ್ಷಾಂಗ ವಿಭಾಗಕ್ಕೆ ಸೂಚನೆ ನೀಡಲಾಗಿರುತ್ತದೆ.

| | | | | |
|---|---|---|---|---|
| | ಅಕಾಡೆಮಿಕ್ ಪಬ್ಲಿಕೇಷನ್ | 17.07.15 | | |
| 5 | ಮೆ॥ ಜ್ಞಾನೋದಯ ಅಕಾಡೆಮಿಕ್ ಪಬ್ಲಿಕೇಷನ್ | 521320/ 06.08.15 | 11305–00 | Ph.D Course work certificate-119 |
| 6 | ಮೆ॥ ಜ್ಞಾನೋದಯ ಅಕಾಡೆಮಿಕ್ ಪಬ್ಲಿಕೇಷನ್ | 521462/ 17.08.15 | 19285–00 | Ph.D Course work certificate-203 |
| 7 | ಮೆ॥ ಜ್ಞಾನೋದಯ ಅಕಾಡೆಮಿಕ್ ಪಬ್ಲಿಕೇಷನ್ | 523350/ 11.02.16 | 16625–00 | |
| | **ಒಟ್ಟು ಮೊತ್ತ ರೂ.** | | **114492–00** | |

ಮೇಲ್ಕಂಡ ವಿವರದಂತೆ ಮೈಸೂರು ವಿಶ್ವವಿದ್ಯಾನಿಲಯ ತನ್ನದೆ ಆದ ಮುದ್ರಣಾಲಯವನ್ನು ಪ್ರಸಾರಾಂಗವನ್ನು ಹೊಂದಿದ್ದರೂ ಸಹ ಖಾಸಗಿ ಮುದ್ರಣಾಲಯದಿಂದ ಪ್ರಮಾಣ ಪತ್ರಗಳನ್ನು ಮುದ್ರಿಸಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ವೀಕೃತಿ ಮಾಡಿರುವುದಕ್ಕೆ ಯಾವುದೇ ದಾಸ್ತಾನು ಪುಸ್ತಕವನ್ನು ಹಾಜರುಪಡಿಸದೆ ಇರುವುದರಿಂದ ಸದರಿ ಪ್ರಮಾಣ ಪತ್ರಗಳು ದುರುಪಯೋಗವಾಗುವ ಸಂಭವವಿರುವುದರಿಂದ **ರೂ.1,14,492/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

**113. ಪಿ.ಹೆಚ್.ಡಿ ಖಾಲಿ ಪದವಿ ಪ್ರಮಾಣ ಪತ್ರಗಳ ಸ್ವೀಕೃತಿ, ರವಾನೆಯಲ್ಲಿರುವ ನ್ಯೂನತೆಗಳ ಬಗ್ಗೆ:– (ಪರೀಕ್ಷಾ ವಿಭಾಗ)**

ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನಲ್ಲಿ ಪಿ.ಹೆಚ್.ಡಿ ಖಾಲಿ ಪದವಿ ಪ್ರಮಾಣ ಪತ್ರಗಳು ಸ್ವೀಕೃತಿ ನೀಡಿಕೆ ಬಗ್ಗೆ ಘಟಿಕೋತ್ಸವ ಶಾಖೆಯಲ್ಲಿ ದಾಸ್ತಾನು ಸ್ವೀಕೃತಿ ಹಾಗೂ ರವಾನೆ ಬಗ್ಗೆ ಯಾವುದೇ ಲೆಕ್ಕದ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

| ಪರೀಕ್ಷಾ ವಿಭಾಗದಲ್ಲಿ ಸ್ವೀಕೃತಿ | | ಪರೀಕ್ಷಾ ಶಾಖೆಯಿಂದ ಘಟಿಕೋತ್ಸವ ಶಾಖೆಗೆ ನೀಡಿರುವುದು | |
|---|---|---|---|
| 39/17.04.2015 | 800 ಸಂಖ್ಯೆ | 800 ಸಂಖ್ಯೆ ಪಿ.ಹೆಚ್.ಡಿ ಪ್ರಮಾಣ ಪತ್ರಗಳನ್ನು ವಿಶೇಷ ಅಧಿಕಾರಿ ಘಟಿಕೋತ್ಸವ ಶಾಖೆಗೆ ನೀಡಿಕೆ ದಿನಾಂಕ:15.05.15 | 800 ಸಂಖ್ಯೆ |
| 326/17.04.15 | 5000 | ಕೆ.ಟಿ. ಮನು, ಘಟಿಕೋತ್ಸವ ಶಾಖೆ | 1000 ಸಂಖ್ಯೆ |

ಈ ಕಂಡಿಕೆಯಲ್ಲಿ ತಿಳಿಸಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಕ್ರಮವಾಗಿ ದಾಸ್ತಾನು ಪುಸ್ತಕವನ್ನು ನಿರ್ವಹಿಸಿ ಲೆಕ್ಕ ತನಿಖೆಗೆ ಒದಗಿಸುವಂತೆ ಪರೀಕ್ಷಾಂಗ ಶಾಖೆಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

| | | | |
|---|---|---|---|
| | | (ವಿಷಯನಿರ್ವಾಹಕರು) | |
| | | ಅಂತಿಮ ಶಿಲ್ಕು | 4000 ಸಂಖ್ಯೆ |
| | 5800 ಸಂಖ್ಯೆ | | 5800 ಸಂಖ್ಯೆ |

ಪರೀಕ್ಷಾ ವಿಭಾಗದಿಂದ 5800 ಖಾಲಿ ಪಿ.ಹೆಚ್.ಡಿ ಪದವಿ ಪ್ರಮಾಣ ಪತ್ರಗಳನ್ನು ಸ್ವೀಕೃತಿ ಮಾಡಿದ್ದು ಇದರಲ್ಲಿ 1800 ಖಾಲಿ ಪಿ.ಹೆಚ್.ಡಿ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವ ಶಾಖೆಗೆ ನೀಡಿದ್ದು, 1800 ಪಿ.ಹೆಚ್.ಡಿ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವ ಶಾಖೆಯಲ್ಲಿ ಸ್ವೀಕೃತಿ ಹಾಗೂ ರವಾನೆ ಮಾಡಿರುವ ಬಗ್ಗೆ ಯಾವುದೆ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲದಿರುವುದು ಇದನ್ನು ದುರುಪಯೋಗಪಡಿಸಿಕೊಳ್ಳುವ ಸಂಭವವಿರುವುದರಿಂದ **ರೂ.63,000/-ನ್ನು ಆಕ್ಷೇಪಣೆಯಲ್ಲಿಡಲಾಗಿದೆ.** (1800x35=63000)

**114. ದಾಸ್ತಾನಿನ ಸ್ವೀಕೃತಿ ಮತ್ತು ವಿತರಣೆಯಲ್ಲಿನ ಲೋಪಗಳು :- (ಮುದ್ರಣಾಲಯ)**

ವಿಷಯಕ್ಕೆ ಸಂಬಂಧಿಸಿದಂತೆ 2015-16ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯ ಮುದ್ರಣಾಲಯ ಮತ್ತು ಲೇಖನಾ ಸಾಮಗ್ರಿಗಳ ವಿಭಾಗಕ್ಕೆ ಸರಬರಾಜು ಆಗಿರುವ ಹಲವು ಸಾಮಗ್ರಿಗಳ ದಾಸ್ತಾನಿನ ಸ್ವೀಕೃತಿ ಮತ್ತು ವಿತರಣೆಯಲ್ಲಿ ಹಲವು ಲೋಪಗಳು ಕಂಡುಬಂದಿದ್ದು, ಅಂತಹ ಹಲವು ವಿವರಗಳು ಇಂತಿವೆ. (1) ಬಿ.ಆರ್.ನಂ.74/15-16/ದಿನಾಂಕ:17.08.2015ರಲ್ಲಿ ಒಟ್ಟು ರೂ.31,122/-ಗಳನ್ನು ಮೆ॥ ಸಾಹಿಲ್ ಏಜೆನ್ಸಿಸ್, ಮೈಸೂರು ಇವರಿಗೆ 5000 ಸಂಖ್ಯೆಯ ಸಿಂಗಲ್ ಡಮ್ಮಿ ಎಕ್ಸಿಕ್ಯೂಟಿವ್ ಬಾಂಡ್ ಪೇಪರ್ ಸರಬರಾಜು ಮಾಡಿದ ಬಾಬ್ತು ಚೆಕ್ ನಂ.521646/ದಿನಾಂಕ:27.08.2015ರಂತೆ ಪಾವತಿಸಲಾಗಿದೆ. ಈ ಸಂಬಂಧ ಸಾಮಗ್ರಿಗಳ ಖರೀದಿಗಾಗಿ ಆದೇಶ ಸಂಖ್ಯೆ:ಎಂ.ಯು.ಪಿ.ಪಿ/ಎಸ್.ಡಿ/998-1000/14-15 ದಿನಾಂಕ:11.02.2015ರಲ್ಲಿ ದರಪಟ್ಟಿಯನ್ನು ಕರೆಯಲಾಗಿದೆ. ದಿನಾಂಕ:19.02.2015ರಲ್ಲಿ ಸ್ವೀಕರಿಸಿರುವ ದರಪಟ್ಟಿಗಳನ್ನು ತೆರೆಯಲಾಗಿದೆ. ಹಾಗೂ ಕಡಿಮೆ ದರ ನಮೂದಿಸಿರುವ ಮೆ॥ ಸಾಹಿಲ್ ಏಜೆನ್ಸಿಸ್ ಮೈಸೂರು (ದರ ರೂ.5.90 + ವ್ಯಾಟ್ 5.50 (110 gsm) ಪತ್ರಿಯೊಂದಕ್ಕೆ) ಇವರ ದರಗಳ ಮಂಜೂರಾತಿಗಾಗಿ ಪತ್ರ ಸಂಖ್ಯೆ:ಎಂ.ಯು.ಪಿ.ಪಿ/ಎಸ್.ಡಿ/ 1043/14-15, ದಿನಾಂಕ:26.02.2015ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಪತ್ರವನ್ನು ಬರೆಯಲಾಗಿದೆ. ನಂತರ ಇದೇ ವಿಷಯವಾಗಿ ದಿನಾಂಕ:16.07.2015ರಲ್ಲಿ ಮತ್ತೆ ಮಂಜೂತಿಗಾಗಿ ಪತ್ರ ಬರೆಯಲಾಗಿದೆ. ಇದರಂತೆ ಆದೇಶ ಸಂಖ್ಯೆ:ಪ.ವಿ/1.7/ ಸ್ಟೇಷನರಿ/ಎಂ.ಯು.ಪಿ.ಪಿ/14-15, ದಿನಾಂಕ:30.07.2015ರಲ್ಲಿ ಘಟನೋತ್ತರ ಮಂಜೂರಾತಿ ನೀಡಲಾಗಿದೆ.

ಮೆ॥ ಸಾಹಿಲ್ ಏಜೆನ್ಸೀಸ್ ಮೈಸೂರುರವರು ದಿನಾಂಕ 26-02-2015ರಂದು 5000 ಶೀಟ್‌ಗಳನ್ನು ಸರಬರಾಜು ಮಾಡಿರುತ್ತಾರೆ.ಆದರೆ ಇವರ ಡೆಲಿವರಿ ಚಲನ್ ದಿನಾಂಕ 28-02-2015 ಎಂಬುದಾಗಿ ತಪ್ಪಾಗಿ ನಮೂದಿಸಿದೆ.

ದಿನಾಂಕ 26-02-2015 ರಂದು ಸರಬರಾಜು ಆದ 5000 ಶೀಟ್‌ಗಳ ಪೈಕಿ 4750 ಶೀಟ್‌ಗಳನ್ನು ದಿನಾಂಕ 26-02-2015 ರಂದೇ ವಿತರಿಸಲಾಗಿದೆ.ಇದು ಪರೀಕ್ಷಾಂಗ ಕಛೇರಿಯ ಲೆಟರ್‌ಹೆಡ್‌ಗಳಿಗಾಗಿ ಖರೀದಿ ಮಾಡಲಾಗಿದ್ದು ಮುದ್ರಿಸಿ ವಿತರಿಸಲಾಗಿದೆ. ಆದರೆ ಸರಬರಾಜು ಆದ ದಿನಾಂಕ 26-02-2015 ರಂದೇ ದಾಸ್ತಾನಿಗೆ ತೆಗೆದುಕೊಳ್ಳುವ ಬದಲಾಗಿ ತಪ್ಪಾಗಿ ಇವರ ಬಿಲ್ ದಿನಾಂಕ 03-08-2015 ರಂದು ದಾಸ್ತಾನು ತೆಗೆದುಕೊಳ್ಳಲಾಗಿದೆ. ಡೆಲಿವರಿ ಚಲನ್‌ನಲ್ಲಿ 110 ಜಿ.ಎಸ್.ಎಂ ಬಗ್ಗೆ ದಾಖಲಿಸಿದೆ. ಆದರೆ ಬಿಲ್ಲಿನಲ್ಲಿ ಇದನ್ನು ನಮೂದಿಸುವುದನ್ನು ಕೈಬಿಟ್ಟಿದೆ.ಆದರೆ ಇದು 110 ಸ್ಟಾಂಡರ್ಡ್ ಸೈಜು ಸರಿಯಾಗಿ ಸರಬರಾಜು ಆಗಿದೆ. ಇದರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಮುಂದೆ ಇಂತಹ ನ್ಯೂನತೆಗಳಿಗೆ ಅವಕಾಶವಾಗದಂತೆ ಎಚ್ಚರವಹಿಸುವಂತೆ ಸಂಬಂಧಿಸಿದ ನೌಕರ ವರ್ಗದವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ವಿಶ್ವವಿದ್ಯಾನಿಲಯದ ದಿನಾಂಕ30-7-2015ರ ಘಟನೋತ್ತರ ಮಂಜೂರಾತಿ ಪತ್ರ, ದಿನಾಂಕ28-02-2015ರ ಡೆಲಿವರಿ ಚಲನ್, ಕುಲಚಿವರು, ಪರೀಕ್ಷಾಂಗ ಇವರ ದಿನಾಂಕ 04-

| | |
|---|---|
| ಈ ಸಂಬಂಧ ಸಂಸ್ಥೆಯವರು ನೀಡಿರುವ ಇನ್‌ವಾಯ್ಸ್ ನಂ.2451, ದಿನಾಂಕ:03.08.2015ರಲ್ಲಿ 5000 ಸಂಖ್ಯೆಯ ಬಾಂಡ್‌ಪೇಪರ್ಸ್‌ಗೆ ಬಿಲ್ಲು ಇದೆ. ಬಿಲ್ಲಿನಲ್ಲಿ 110 Gsm ಬಗ್ಗೆ ದಾಖಲಾತಿಯಿಲ್ಲ. ಸದರಿ ಸಾಮಗ್ರಿಗಳ ಖರೀದಿಗೆ ಸರಬರಾಜು ಆದೇಶವನ್ನು ಯಾವಾಗ ನೀಡಲಾಗಿದೆ, ಸಾಮಗ್ರಿಗಳನ್ನು ಯಾವ ಡೆಲಿವರಿ ಚಲನ್ ಮೂಲಕ ಸರಬರಾಜು ಮಾಡಿದೆ ಎಂಬ ವಿವರಗಳಿಲ್ಲ. ಬಿಲ್ಲಿನಲ್ಲಿ ದಾಖಲಾಗಿರುವ ದೃಢೀಕರಣದ ಮಾಹಿತಿಯಂತೆ (ಕ್ರ.ಸಂ.2) ದಿನವಹಿಯ Vol-3 ಪುಟ ಸಂಖ್ಯೆ:126ರಲ್ಲಿ ದಿನಾಂಕ:03.08.2015ರಲ್ಲಿ ಹಾಗೂ 2015–16ನೇ ಸಾಲಿನ ದಾಸ್ತಾನು ಪುಸ್ತಕದ ಪುಟ ಸಂಖ್ಯೆ:05ಲ್ಲಿ ದಿನಾಂಕ:03.08.2015ರಲ್ಲಿ ದಾಸ್ತಾನಿಗೆ ತೆಗೆದುಕೊಂಡಿರುವುದಾಗಿ ದಾಖಲಿಸಿದೆ. ಹಾಗೂ ಇದೇ ಪುಟದಲ್ಲಿ 5000 ಸಂಖ್ಯೆ ಬಾಂಡ್ ಪೇಪರ್‌ಗಳನ್ನು 2014–15ನೇ ಸಾಲಿನಲ್ಲಿ ಡೆಲಿವರಿಯಾಗಿರುವುದಾಗಿ (ವಿತರಣೆ)ತಿಳಿಸಿದೆ. ಆದರೆ ವಾಸ್ತವವಾಗಿ ಯಾವಾಗ ಸಾಮಾಗ್ರಿಗಳನ್ನು ಸ್ವೀಕರಿಸಲಾಗಿದೆ. ಯಾವಾಗ ಉಪಯೋಗಿಸಲಾಗಿದೆ, ಯಾವ ಕಾರ್ಯಗಳಿಗಾಗಿ ಉಪಯೋಗಿಸಲಾಗಿದೆ. ಯಾವ ಸಂಸ್ಥೆಯ ಕಾರ್ಯಗಳಿಗೆ ಉಪಯೋಗಿಸಲಾಗಿದೆ ಇತ್ಯಾದಿಗಳ ಮಾಹಿತಿಗಳನ್ನು ನೀಡಲು ಆಡಿಟ್ ವಿಚಾರಣಾ ಪತ್ರದ ಸಂಖ್ಯೆ:16/2018–19 ದಿನಾಂಕ:08.05.2018ರಲ್ಲಿ ಕೋರಲಾಗಿತ್ತು. ಆದರೆ ಯಾವುದೇ ಮಾಹಿತಿಯನ್ನು ಲಿಖಿತವಾಗಿ ನೀಡಿರುವುದಿಲ್ಲ.<br><br>ನಿಯಮಗಳ ಪ್ರಕಾರ ಯಾವುದೇ ಟೆಂಡರ್/ಕೊಟೇಷನ್ ಪ್ರಕ್ರಿಯೆಯು ಟೆಂಡರ್/ಕೊಟೇಷನ್ ಕರೆದ ಮೂರು ತಿಂಗಳೊಳಗೆ ಪೂರ್ಣಗೊಳ್ಳಬೇಕಾಗಿದೆ. ಆದರೆ ಇಲ್ಲಿ ದಿನಾಂಕ:19.02.2015ರಲ್ಲಿ ದರಪಟ್ಟಿಯನ್ನು ತೆರೆದಿದ್ದು, ದಿನಾಂಕ:03.08.2015ರಲ್ಲಿ ಬಿಲ್ಲು ಇದ್ದು ದಾಸ್ತಾನಿಗೆ 03.08.2015 ಅಂದರೆ 2015–16ರಲ್ಲಿ ತೆಗೆದುಕೊಂಡು 2014–15ರಲ್ಲಿಯೇ ವಿತರಿಸಿರುವುದು (ಡೆಲಿವರಿಯೆಂದು) ಹೇಗೆ ಸಾಧ್ಯ ಎಂದು ತಿಳಿದುಬಂದಿಲ್ಲ. ಇದರಿಂದ ಸಾಮಗ್ರಿಗಳನ್ನು ಪಡೆದಿರುವುದೇ ಅನುಮಾನವಾಗಿದ್ದು, ಕೇವಲ ದಾಸ್ತಾನಿನಲ್ಲಿ ತೋರಿಸಿರುವುದಾಗಿ ಪರಿಗಣಿಸಬಹುದಾಗಿರುತ್ತದೆ. ಹಾಗೂ ಈ ಸಂಬಂಧ ಆಡಿಟ್ ವಿಚಾರಣಾ ಪತ್ರಕ್ಕೆ ಯಾವುದೇ ಲಿಖಿತ ಉತ್ತರವನ್ನು ನೀಡದ ಕಾರಣ ಸದರಿ ಸರಬರಾಜಿಗಾಗಿ ಮೆ॥ ಸೆಹಲ್ ಏಜೆನ್ಸೀಸ್, ಮೈಸೂರು ಇವರಿಗೆ ಪಾವತಿಸಿರುವ **ಮೊತ್ತ ರೂ.31,122/–ಗಳನ್ನು ಸಂಬಂಧಪಟ್ಟವರಿಂದ** ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಲು ಕ್ರಮವಹಿಸಲು ಸೂಚಿಸಲಾಗಿದೆ. | 02–2015ರ ಬೇಡಿಕೆ ಪತ್ರ,ಇನವಾಯ್ಸ್ ಸಂಖ್ಯೆ 2451 ದಿನಾಂಕ3–8–2015 ಹಾಗೂ ದಾಸ್ತಾನು ಪುಟ5,ದಿನವಹಿ ಪುಸ್ತಕ ಪುಟ 126 ರ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಲಾಗಿದೆ.<br><br>ಆದುದರಿಂದ ರೂ31,222/–ಗಳ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **115. ದಿನವಹಿ (Day book) ಹಾಗೂ ದಾಸ್ತಾನು ವಹಿಯಲ್ಲಿ ದಾಸ್ತಾನು ತೆಗೆದುಕೊಳ್ಳದಿರುವುದು :– (ಮುದ್ರಣಾಲಯ)**<br><br>2015–16ನೇ ಸಾಲಿನಲ್ಲಿ ಡಿ.ಸಿ ಬಿಲ್ಲುಗಳ ಹಾಗೂ ಎನ್.ಡಿ.ಸಿ ಬಿಲ್ಲುಗಳ ಮೂಲಕ ಖರೀದಿಸಿರುವ | ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆಯ ಪುಸ್ತಕ ಕನ್ನಡ ಅಧ್ಯಯನ ಸಂಸ್ಥೆಯ |

| | |
|---|---|
| ಸಾಮಗ್ರಿಗಳ ಹಾಗೂ ಸೇವೆಗಳ ಬಗ್ಗೆ ದಾಸ್ತಾನು ವಹಿ ಹಾಗೂ ದಿನವಹಿ ಪುಸ್ತಕಗಳಿಗೆ ದಾಖಲಾಗಿರುವ ಮಾಹಿತಿಗಳು ಹಲವು ಪ್ರಕರಣಗಳಲ್ಲಿ ಲಭ್ಯವಿರುವುದಿಲ್ಲ. ಈ ಸಂಬಂಧ ಪೂರ್ಣ ಮಾಹಿತಿಯನ್ನು ನೀಡುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:18/2018-19 ದಿನಾಂಕ:10.05.2018ರಲ್ಲಿ ಕೋರಲಾಗಿತ್ತು. ಆದರೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಲಿಖಿತವಾಗಿ ನೀಡಿರುವುದಿಲ್ಲ. ಅಂತಹ ಪ್ರಕರಣಗಳು ಈ ಕೆಳಗಿನಂತಿವೆ.<br>1. ಬಿ.ಆರ್.ನಂ.129/15-16, ದಿನಾಂಕ:2311.2015 ರೂ.9,548/-ಗಳನ್ನು ಮೆ॥ ಗುಪ್ತ ಆಫ್‌ಸೆಟ್ ಪ್ರಿಂಟರ್ಸ್, ಮೈಸೂರು ಇವರಿಗೆ (ಬಿಲ್ ನಂ.314/18.11.2015) ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆಯ ಪುಸ್ತಕಗಳ ಮುಖಪುಟಗಳ ಲ್ಯಾಮಿನೇಷನ್ ಮಾಡಿಸಿದ ಬಾಬ್ತು ಪಾವತಿಸಿದೆ. ಇದನ್ನು ಡೇ ಬುಕ್‌ನ ಪುಟ ಸಂಖ್ಯೆ-128ರಲ್ಲಿ ದಾಖಲಿಸಲಾಗಿದೆ ಎಂದು ಬಿಲ್ಲಿನಲ್ಲಿ ದೃಢೀಕರಿಸಿದೆ. ಆದರೆ ಸದರಿ ಪುಟದಲ್ಲಿ ಇದರ ಬಗ್ಗೆ ದಾಖಲಾಗಿರುವುದಿಲ್ಲ.<br>2. ಬಿ.ಆರ್‌ನಂ.34/15-16 ದಿನಾಂಕ:12.06.2015ರಲ್ಲಿ ರೂ.50,000/-ಗಳ ಎನ್.ಡಿ.ಸಿ ಬಿಲ್ಲಿನಲ್ಲಿ ರೂ.24301/-ಗಳನ್ನು ಮೆ॥ ಮಹಾಲಕ್ಷ್ಮಿ ಎಂಟರ್‌ಪ್ರೈಸಸ್ ಇವರಿಗೆ ಮೈಸೂರು ವಿಶ್ವವಿದ್ಯಾನಿಲಯ 95ನೇ ಘಟಿಕೋತ್ಸವದ Eligibility List print out ಮತ್ತು ಜೆರಾಕ್ಸ್ ಮಾಡಿಸಿದ ಬಾಬ್ತು ಪಾವತಿಸಿದೆ. ಈ ಸಂಬಂಧ ದಾಸ್ತಾನಿಗೆ ಪಡೆದ ಮಾಹಿತಿಯಿಲ್ಲ ಹಾಗೂ ಇದರ ಲಿಸ್ಟ್ (ಪಟ್ಟಿ) ಲಭ್ಯವಿರುವುದಿಲ್ಲ.<br>ಈ ಸಂಬಂಧ ದಾಸ್ತಾನಿಗೆ ತೆಗೆದುಕೊಳ್ಳದ ಬಾಬ್ತು **ರೂ.9,548/-ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿ** ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಲು ಹಾಗೂ Eligibility List ನ್ನು ಹಾಜರುಪಡಿಸುವವರೆಗೆ ಇದಕ್ಕಾಗಿ ಪಾವತಿಸಿರುವ ಮೊತ್ತ **ರೂ.24,301/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಪ್ರತಿಯಾಗಿದ್ದು; ಈ ಪ್ರತಿಯ ಮುಖಪುಟವನ್ನು ಲ್ಯಾಮಿನೇಷನ್ ಮಾಡಿಸಿ ವಿತರಿಸಲಾಗಿದೆ ಮತ್ತು ಘಟಿಕೋತ್ಸವಕ್ಕೆ ಸಂಬಂಧಿಸಿದ ಪ್ರತಿಗಳು ಕೂಡ ಮೆ॥ ಮಹಾಲಕ್ಷ್ಮಿ ಎಂಟರ್‌ಪ್ರೈಸಸ್ ಮೈಸೂರು ಇವರಿಂದ ಕೈಗೊಂಡ ಕಾರ್ಯವಾಗಿರುತ್ತದೆ. ಸಂಬಂಧಿಸಿದ ಎರಡೂ ಮಾಹಿತಿಗಳನ್ನು ದಿನವಹಿ ಪುಸ್ತಕದಲ್ಲಿ ದಾಖಲಿಸಿ ದೃಢೀಕರಿಸಿದೆ.ವಿವರ ಈ ಕೆಳಗಿನಂತಿದೆ.<br>1)ಇನ್‌ವಾಯ್ಸ್ ಸಂಖ್ಯೆ 314/18-11-2015 ರೂ9,548-00 ದಾಸ್ತಾನು ಪುಟ 128<br>2)ಇನ್‌ವಾಯ್ಸ್ ಸಂಖ್ಯೆ 448/24-04-2015 ರೂ24,873-00 ದಾಸ್ತಾನು ಪುಟ 125<br>ದಾಸ್ತಾನು ವಹಿಯ ಪ್ರತಿಗಳು ಹಾಗೂ ಓಚರ್ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಲಾಗಿದೆ.<br>ಎಲಿಜಬಲಿಟಿ ಲಿಸ್ಟ್ 670 ಪುಟಗಳನ್ನೊಳಗೊಂಡಿದ್ದು; ಅವುಗಳನ್ನು ಈ ಉತ್ತರದೊಂದಿಗೆ ಲಗತ್ತಿಸಿ ಸಲ್ಲಿಸುವುದು ಸಾಧ್ಯವಾಗಿರುವುದಿಲ್ಲ. ಇದನ್ನು ಸ್ಥಳೀಯ ಪರಿಶೀಲನಾ ಸಮಯದಲ್ಲಿ ಹಾಜರು ಪಡಿಸಲಾಗುವುದು.<br>ಆದ್ದರಿಂದ, ರೂ.9548.00 ಮತ್ತು ರೂ.24,873.00ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ. |
| **<u>116. ದಾಸ್ತಾನು ಪುಸ್ತಕದಲ್ಲಿ ಕಂಡುಬಂದ ನ್ಯೂನತೆಗಳು :- (ಮುದ್ರಣಾಲಯ)</u>**<br>2014-15ನೇ ಸಾಲಿನ ದಾಸ್ತಾನು ಪುಸ್ತಕದ ಪುಟ ಸಂಖ್ಯೆ 13ರಲ್ಲಿ Offset Bloack Ink ನ ಅಂತಿಮ ಶಿಲ್ಕು (2015-16ನೇ ಸಾಲಿನ ಆರಂಭಿಕ ಶಿಲ್ಕು) 80 ಕೆ.ಜಿ ಗಳಿಗೆ ಬದಲಾಗಿ 20 ಕೆ.ಜಿಗಳು ಎಂದು ನಮೂದಾಗಿದ್ದು, 60 ಕೆ.ಜಿಗಳಷ್ಟು ವ್ಯತ್ಯಾಸ ಕಂಡುಬಂದಿರುತ್ತದೆ. ಈ ಸಂಬಂಧ ವ್ಯತ್ಯಾಸ ಶಿಲ್ಕಿನ ಮೊತ್ತ ರೂ.10,020/-ಗಳ (60ಕೆ.ಜಿ x 167 ರೂ.) ಮೆ॥ ಸಂಜೀವ್ ಅಸೋಸಿಯೇಟ್ಸ್ ಬಿಲ್ ಸಂಖ್ಯೆ :2259/ ದಿನಾಂಕ: 31.03.2015ರಲ್ಲಿ ನಮೂದಾಗಿರುವ ದರಗಳ ಆಧಾರದ ಮೇಲೆ ಮೊತ್ತವನ್ನು ವಸೂಲಾತಿಗೆ ಸೂಚಿಸಲಾಗಿದೆ. ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:14/08.05.2018ರಲ್ಲಿ | ಈ ಆಕ್ಷೇಪಣೆಗೆ ಸಂಬಂಧಿಸಿದಂತೆ ಆಫ್ಸೆಟ್ ಬ್ಲಾಕ್ ಇಂಕ್ 60 ಕೆ.ಜಿಯು ಡೆಲಿವರಿ ಚಲನ್ ನಂ;1648/ದಿನಾಂಕ 19-07-2013 ರಂದು ಸರಬರಾಜು ಆಗಿರುತ್ತದೆ. ಸದರಿ ಇಂಕನ್ನು ದಾಸ್ತಾನು ವಹಿಯ ಪುಟ 26 ರಲ್ಲಿ ದಾಖಲಿಸಿಕೊಳ್ಳಲಾಗಿತ್ತು. ಹಾಗೂ ದಿನಾಂಕ 19-02-2014ರಂದು ವಿತರಿಸಲಾಗಿದೆ. ಆದರೆ ಸರಬರಾಜುದಾರರು ಇವರ ಇನವಾಯ್ಸ್ ಸಂಖ್ಯೆ 1078 ದಿನಾಂಕ 27-09-2014 ನ್ನು ತಡವಾಗಿ ಸಲ್ಲಿಸಿದುದರಿಂದ ವಿಷಯ ನಿರ್ವಾಹಕರು ಮತ್ತೊಮ್ಮೆ 2014-15 ರಲ್ಲೂ ಕೈ ತಪ್ಪಿನಿಂದಾಗಿ ದಾಸ್ತಾನಿನಲ್ಲಿ ದಾಖಲಿಸಿದುದರಿಂದ ಈ ವ್ಯತ್ಯಾಸಕ್ಕೆ ಕಾರಣವಾಗಿದೆ. ಈಗ ಇದನ್ನು ತಿದ್ದುಪಡಿ ಮಾಡಿ ಸರಿಪಡಿಸಿದೆ. ಇದರನ್ವಯ 2013-14, |

| | |
|---|---|
| ಕೋರಲಾಗಿ ಲೆಕ್ಕತಪಾಸಣೆ ಮುಕ್ತಾಯವಾಗುವವರೆಗೂ ಯಾವುದೇ ಲಿಖಿತ ಉತ್ತರ ಬಾರದಿರುವುದರಿಂದ ಮೇಲ್ಕಂಡ ಮೊತ್ತವನ್ನು **ರೂ.10,020/–ಗಳನ್ನು** ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡುವಂತೆ ಸೂಚಿಸಿದೆ. | 2014–15 ಮತ್ತು 2015–16ರ ಆರಂಭ ಶಿಲ್ಕು, ಸ್ವೀಕೃತಿ,ವಿತರಣೆ ಹಾಗೂ ಬಾಕಿ ವಿವರಗಳು ಈ ಕೆಳಗಿನಂತಿವೆ.<br><br>ವರ್ಷ \| ಆ.ಶಿಲ್ಕು \| ಸ್ವೀಕೃತಿ \| ಒಟ್ಟು \| ವಿತರಣೆ \| ಅಂ.ಶಿಲ್ಕು<br>2013–14 \| 20 \| 120 \| 140 \| 100 \| 40<br>2014–15 \| 40 \| 100 \| 140 \| 120 \| 20<br>2015–16 \| 20 \| 200 \| 220 \| 100 \| 120<br><br>ಸಂಬಂಧಿಸಿದ ನೌಕರರುಗಳಿಗೆ ಇನ್ನು ಮುಂದೆ ಇಂತಹ ನ್ಯೂನತೆಗಳಿಗೆ ಅವಕಾಶವಾಗದಂತೆ ಎಚ್ಚರವಹಿಸುವಂತೆ ಸೂಚಿಸಲಾಗಿದೆ. ದಾಸ್ತಾನು ವಹಿಯ ಪುಟ 26 ಹಾಗೂ ಪುಟ 13ರ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **ಪರೀಕ್ಷಾ ವಿಭಾಗ (Exam)**<br><br>**117. F&R ಖಾತೆಯಲ್ಲಿ ಯು.ಜಿ.ಸಿ ಶ್ರೇಣಿಯ ಬೋಧಕ ವರ್ಗದವರಿಗೆ ಪರೀಕ್ಷಾ ಕಾರ್ಯದ ಮೌಲ್ಯಮಾಪನ ಕಾರ್ಯಕ್ಕಾಗಿ ಸಂಭಾವನೆಯನ್ನು ಪಾವತಿಸಿರುವುದು :– (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವಿವಿದ್ಯಾನಿಲಯದ ಹಣಕಾಸು ವಿಭಾಗದ 2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಜನವರಿ–2016ರ E-Payment ಪಾವತಿ ಓಚರ್‌ಗಳನ್ನು ಪರಿಶೀಲಿಸಿದಾಗ ಯು.ಜಿ.ಸಿ ಶ್ರೇಣಿಯ ಬೋಧಕ ವರ್ಗದವರಿಗೆ ಪರೀಕ್ಷಾ ಕಾರ್ಯದ ಮೌಲ್ಯಮಾಪನಕ್ಕಾಗಿ ಒಟ್ಟು ರೂ.15,90,291/– ಪಾವತಿಸಲಾಗಿರುವುದು ಕಂಡುಬಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಕ್ರಮಾಂಕ ED 30/UNE 2000 ದಿನಾಂಕ:19.05.2003 ರನ್ವಯ UGC/AICTE ವೇತನ ಶ್ರೇಣಿ ಪಡೆಯುವ ಬೋಧಕ ವರ್ಗದವರು ಯಾವುದೇ ರೀತಿಯ ಪರೀಕ್ಷಾ ಸಂಭಾವನೆ ಪಡೆಯಲು ಅರ್ಹರಿರುವುದಿಲ್ಲ. ಈ ಬಗ್ಗೆ ವಿಚಾರಣೆ ಸಂಖ್ಯೆ:71/14.12.2017ರಲ್ಲಿ ಯು.ಜಿ.ಸಿ ವೇತನ ಶ್ರೇಣಿ ಪಡೆಯುವ ಬೋಧಕವರ್ಗದವರಿಗೆ ಸಂಭಾವನೆ ಪಾವತಿಸಿರುವ ಕುರಿತು ಸೂಕ್ತ ವಿವರಣೆ ನೀಡುವಂತೆ ಕೋರಲಾಗಿತ್ತು. ಈ ಬಗ್ಗೆ ಸರ್ಕಾರದ ಆದೇಶವನ್ನು ಮೀರಿ ಬೋಧಕ ವರ್ಗದವರಿಗೆ ಪಾವತಿಸಲಾಗಿರುವ ಪರೀಕ್ಷಾ ಸಂಭಾವನೆ ಮೊತ್ತ ಒಟ್ಟು **ರೂ.15,90,291/–ಗಳನ್ನು** ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಲಾಗಿದೆ. ವಿವರಗಳನ್ನು **ಅನುಬಂಧ–74ರಲ್ಲಿ** ನೀಡಿದೆ. | ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯವು ಪ್ರಮುಖವಾಗಿದ್ದು; ಸಂಭಾವನೆ ನೀಡದಿದ್ದರೆ ಈ ಕಾರ್ಯಗಳನ್ನು ನಿರ್ವಹಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ವಿಶೇಷ ಪರೀಕ್ಷೆ ಕೆಲಸಗಳಾದ ಜಾಗೃತದಳ ಕಾರ್ಯನಿರ್ವಹಣೆ, ಕೇಂದ್ರೀಯ ಮೌಲ್ಯಮಾಪನ ವೀಕ್ಷಕರಾಗಿ ಪರೀಕ್ಷಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವುದು, ಪ್ರಶ್ನೆ ಪತ್ರಿಕೆ ರವಾನೆ ಇತ್ಯಾದಿ ಕೆಲಸಗಳನ್ನೂ ಖಾಯಂ ಅಧ್ಯಾಪಕರಿಂದ ನಿರ್ವಹಿಸಬೇಕಾಗಿರುತ್ತದೆ. ಕಾರಣ ಪರೀಕ್ಷೆಗೆ ಸಂಬಂಧಿಸಿದ ಕೆಲಸ ಕಾರ್ಯಗಳು ಗೌಪ್ಯತೆ ಕಾರ್ಯಗಳಾಗಿರುವುದರಿಂದ ಸಂಭಾವನೆ ನೀಡಿ ಈ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.ಸಂಭಾವನೆ ನೀಡದಿದ್ದರೆ ಈ ಕಾರ್ಯಗಳನ್ನು ನಿರ್ವಹಿಸಲು ಯಾರೂ ಮುಂದೆ ಬರುವುದಿಲ್ಲ. ಏನಾದರೂ ಒಂದು ಕಾರಣ ನೀಡಿ ಪರೀಕ್ಷಾ ಕಾರ್ಯಕ್ಕೆ ತಪ್ಪಿಸಿಕೊಳ್ಳುತ್ತಾರೆ. ಪರೀಕ್ಷಾ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿ ಸಕಾಲಕ್ಕೆ ಫಲಿತಾಂಶಗಳನ್ನು ಪ್ರಕಟಿಸಲು ಹಾಗೂ ಶೈಕ್ಷಣಿಕ ಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಇಂತಹ ಪಾವತಿಗಳು ಅನಿವಾರ್ಯವಾಗಿರುತ್ತದೆ. ಈ ಪಾವತಿಗಳಿಗೆ ಸರ್ಕಾರದಿಂದ ಅನುದಾನ ಕೋರಲಾಗುತ್ತಿಲ್ಲ. ಸರ್ಕಾರದ ಆದೇಶ ಸಂಖ್ಯೆ:ಇಡಿ30/ಯುಎನ್‌ಇ2000 ದಿನಾಂಕ:19.5.2003ರ ಕ್ರಮ ಸಂಖ್ಯೆ 4ರಲ್ಲಿ ಸೂಚಿಸಿರುವಂತೆ ಸದರೀ ಸಂಭಾವನೆ ಮೊತ್ತವನ್ನು ವಿಶ್ವವಿದ್ಯಾನಿಲಯದ ಆಂತರಿಕ |

| | |
|---|---|
| | ಸಂಪನ್ಮೂಲದಿಂದಲೇ ಭರಿಸಲಾಗಿದೆ.<br><br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್5/142/2012-13 ದಿನಾಂಕ:19-08-2017 ರಂತೆ ದಿನಾಂಕ 01-08-2017 ರಿಂದ ಜಾರಿಗೆ ಬಂದಂತೆ ಯು.ಜಿ.ಸಿ ವೇತನ ಪಡೆಯುವ ಬೋಧಕವರ್ಗದವರಿಗೆ ಪರೀಕ್ಷೆ ಸಂಭಾವನೆ ಪಾವತಿಸುವುದನ್ನು ನಿಲ್ಲಿಸಲಾಗಿದೆ. ಪ್ರತಿಯನ್ನು ಲಗತ್ತಿಸಿದೆ.<br>ಆದುದರಿಂದ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **118. ಪರೀಕ್ಷಾ ಕಾರ್ಯ ನಿರ್ವಹಿಸಿರುವ ಬೋಧಕ ವರ್ಗದವರಿಗೆ ಕೆ.ಸಿ.ಎಸ್.ಆರ್ ನಿಯಮದನ್ವಯ ದಿನಭತ್ಯೆ ಪಾವತಿಸದೆ ನಿಯಮಬಾಹಿರವಾಗಿ ಹೆಚ್ಚುವರಿ ದಿನಭತ್ಯೆ ಪಾವತಿಸಿರುವುದು :- (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2015-16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಜನವರಿ 2016ರ ಮಾಹೆಯ E-payment ಪಾವತಿ ಓಚರ್‌ಗಳಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿರುವ ಬೋಧಕ ವರ್ಗದವರಿಗೆ ಕೆ.ಸಿ.ಎಸ್.ಆರ್ ನಿಯಮ 451 ರನ್ವಯ ದಿನಭತ್ಯೆಯನ್ನು ಪಾವತಿಸದೆ, ಹೆಚ್ಚುವರಿ ದಿನಭತ್ಯೆ ಒಟ್ಟು ರೂ.11,55,695/-ಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. (ವಿವರವನ್ನು ಅನುಬಂಧ-75ರಲ್ಲಿ ನೀಡಲಾಗಿದೆ). ವಿಚಾರಣೆ ಸಂಖ್ಯೆ:121/08.01.2018 ರಲ್ಲಿ ನಿಯಮಬಾಹಿರವಾಗಿ ಹೆಚ್ಚುವರಿ ದಿನಭತ್ಯೆ ಪಾವತಿಸಿರುವ ಬಗ್ಗೆ ಸೂಕ್ತ ವಿವರಣೆಯನ್ನು ಲೆಕ್ಕತನಿಖೆಗೆ ಒದಗಿಸಲು ಕೋರಲಾಗಿತ್ತು. ಸದರಿ ಆಕ್ಷೇಪಣೆಗೆ ವಿಶ್ವವಿದ್ಯಾನಿಲಯದ ಹಣಕಾಸು ಶಾಖೆಯಿಂದ ನೀಡಲಾಗಿರುವ ಉತ್ತರವು ಸಮಂಜಸವಾಗಿರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮ ಉಲ್ಲಂಘಿಸಿ ಹೆಚ್ಚುವರಿ ದಿನಭತ್ಯೆ ಪಾವತಿಸಿರುವ ಮೊತ್ತ **ರೂ.11,55,695/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು** ಸೂಚಿಸಲಾಗಿದೆ. | 2015-16 ಸಾಲಿನಲ್ಲಿ ಮೌಲ್ಯಮಾಪನ ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಭೋದಕ ವರ್ಗದವರು ಎಲ್ಲರಿಗೂ ಸಮಾನವಾಗಿ ಅಂದರೆ ಅವರವರ ಮೂಲ ವೇತನದ ಆಧಾರದ ಮೇಲೆ ದಿನಭತ್ಯೆ ನೀಡುವುದನ್ನು ಪರಿಗಣಿಸದೇ ದಿನ ಭತ್ಯೆಗಳನ್ನು ಸಮನಾಗಿ ಎಲ್ಲರಿಗೂ ಒಂದೇ ದರದಲ್ಲಿ ನೀಡಬೇಕು ಇಲ್ಲವಾದಲ್ಲಿ ಪರೀಕ್ಷಾ ಕಾರ್ಯಕ್ಕೆ ಹಾಜರಾಗಲು ಸಾಧ್ಯವಿಲ್ಲ ಎಂಬುದಾಗಿ ಮೌಲ್ಯಮಾಪನ ಕಾರ್ಯವನ್ನು ಬಹಿಷ್ಕರಿಸಲು ತೀರ್ಮಾನಿಸಿದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಮೌಲ್ಯಮಾಪನ ಕಾರ್ಯಕ್ಕೆ ತೊಂದರೆಯಾಗಿ ಪರೀಕ್ಷಾ ಫಲಿತಾಂಶಗಳನ್ನು ಸಮಯಕ್ಕೆ ಪ್ರಕಟಿಸಲು ತೊಂದರೆಯಾಗುತ್ತದೆಂಬ ಉದ್ದೇಶದಿಂದ ಮೌಖಿಕವಾಗಿ ಎಲ್ಲರಿಗೂ ಒಂದೇ ದರದಲ್ಲಿ ದಿನಭತ್ಯೆ ಪಾವತಿಸುವಂತೆ ಸೂಚಿಸಿರುತ್ತಾರೆ.<br><br>ಈ ಕಾರಣದಿಂದಾಗಿ ದಿನಭತ್ಯೆ ಪಾವತಿಸುವಲ್ಲಿ ಹೆಚ್ಚುವರಿಯಾಗಿರುತ್ತದೆ. ಇದೊಂದು ಪರೀಕ್ಷಾ ಕಾರ್ಯದ ಹಿತದೃಷ್ಟಿಯಿಂದಲೇ ಹೊರತು ಬೇರೆ ಉದ್ದೇಶದಿಂದಲ್ಲ.<br><br>ಆದ್ದರಿಂದ ಇದನ್ನು ಒಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **119. ಪರೀಕ್ಷಾ ಕಾರ್ಯ ನಿರ್ವಹಿಸಿರುವ ವಿಶ್ವವಿದ್ಯಾನಿಲಯದ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಸಂಭಾವನೆ ಪಾವತಿಸಿರುವುದು :- (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2015-16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ F&R ಖಾತೆಯ ಪಾವತಿ ಓಚರ್‌ಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ | ದಿನಾಂಕ 12.11.2013 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ; ಜಿ.ಎಲ್.5/142/2012-13, ದಿನಾಂಕ 13.12.2013 |

| | |
|---|---|
| ಅಧಿಕಾರಿ/ಸಿಬ್ಬಂದಿ ವರ್ಗದವರು ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಿಕೆ, ಪ್ರಶ್ನೆಪತ್ರಿಕೆ ಹಂಚುವಿಕೆ ಕಾರ್ಯ, ಉತ್ತರ ಪತ್ರಿಕೆಗಳನ್ನು ಸಂಗ್ರಹಿಸುವ ಕಾರ್ಯ, ಮೌಲ್ಯ ಮಾಪನ ಕಾರ್ಯ, Convocationಗೆ ಸಂಬಂಧಿಸಿದಂತೆ ನಿರ್ವಹಿಸಿರುವ ಕೆಲಸ ಕಾರ್ಯಗಳಿಗಾಗಿ ಸಂಭಾವನೆ ಮೊತ್ತವನ್ನು ಎ.ಸಿ ಬಿಲ್ಲು/ಡಿ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಿ ಪಾವತಿಸಲಾಗಿರುವುದು ಕಂಡುಬಂದಿರುತ್ತದೆ. (ವಿವರವನ್ನು ಅನುಬಂಧ–76ರಲ್ಲಿ ಲಗತ್ತಿಸಲಾಗಿದೆ). ಕೆ.ಸಿ.ಎಸ್.ಆರ್ ನಿಯಮ 28ರನ್ವಯ ಸಿಬ್ಬಂದಿವರ್ಗದವರು ನಿರ್ವಹಿಸಿರುವ ಕೆಲಸಕ್ಕಾಗಿ ವೇತನವಲ್ಲದೆ ಬೇರೆ ಯಾವುದೇ ಇತರೆ ಸಂಭಾವನೆ/ಭತ್ಯೆ ಪಾವತಿಸುವುದು ನಿಯಮಬಾಹಿರವಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ವಿಚಾರಣೆ ಸಂಖ್ಯೆ:116/05.01.2018ರಲ್ಲಿ ಸೂಕ್ತ ವಿವರಣೆಯನ್ನು ಕೋರಲಾಗಿತ್ತು. ಪರೀಕ್ಷಾ ಕಾರ್ಯ ನಿರ್ವಹಿಸಿರುವ ವಿಶ್ವವಿದ್ಯಾನಿಲಯದ ಸಿಬ್ಬಂದಿವರ್ಗದವರಿಗೆ ನೀಡಿರುವ ಸಂಭಾವನೆ ಮೊತ್ತ ಒಟ್ಟು **ರೂ.6,47,688/–ಗಳನ್ನು ವಸೂಲಿಸಲು** ಸೂಚಿಸಿದೆ. | ರನ್ವಯದಂತೆ ಪರೀಕ್ಷಾ ಕಾರ್ಯಗಳಿಗೆ ನಿಯೋಜನೆಗೊಂಡ ಅಧ್ಯಾಪಕೇತರ ನೌಕರರಿಗೆ ಸಂಭಾವನೆಗಳನ್ನು ಪಾವತಿಸಲಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯವು ಪ್ರಮುಖವಾಗಿದ್ದು, ಸಮಯಾನುಸಾರ ಪರೀಕ್ಷೆ ಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಬೇಕಾಗಿರುತ್ತದೆ. ಈ ಕಾರ್ಯಕ್ಕೆ ನಿಯೋಜನೆಗೊಂಡ ನೌಕರರು ಸಂಭಾವನೆ ನೀಡದಿದ್ದರೆ ಪರೀಕ್ಷಾ ಕಾರ್ಯಕ್ಕೆ ಒಂದಲ್ಲಾ ಒಂದು ಕಾರಣ ನೀಡಿ ತಪ್ಪಿಸಿಕೊಳ್ಳುತ್ತಾರೆ ಮತ್ತು ತೃಪ್ತಿಕರವಾಗಿ ಕಾರ್ಯಗಳನ್ನು ನಿರ್ವಹಿಸುವುದಿಲ್ಲ. ಏಕೆಂದರೆ ಈ ಕಾರ್ಯವು ಕಛೇರಿ ವೇಳೆಯನ್ನು ಹೊರತುಪಡಿಸಿ ಹೆಚ್ಚಿನ ಅವಧಿ ಕೆಲಸ ಮಾಡುವುದರಿಂದ ಇವರಿಗೆ ನಿಗದಿತ ದರದಲ್ಲಿ ಸಂಭಾವನೆ ಪಾವತಿ ಮಾಡಲಾಗಿದೆ.<br><br>ಲೆಕ್ಕ ತನಿಖೆಯಲ್ಲಿ ಸೂಚಿಸಿರುವಂತೆ ಇಂತಹ ಅನಿವಾರ್ಯ ಪಾವತಿಗಳ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ಮಾರ್ಗದರ್ಶನ ಕೋರಲಾಗುತ್ತದೆ. |
| **120. ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ ಬಾಬ್ತು ಸಂಭಾವನೆ ಪಾವತಿಸಿರುವ ಕುರಿತು :– (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2015–16ನೇ ಸಾಲಿನ ಲೆಕ್ಕತಪಾಸಣೆ ಸಂದರ್ಭದಲ್ಲಿ F&R ಖಾತೆಯ ಪಾವತಿ ಓಚರ್‌ಗಳ ಪರಿಶೀಲನೆ ಮಾಡಿದಾಗ ಪಿ.ಹೆಚ್.ಡಿ ಕೋರ್ಸ್‌ವರ್ಕ್ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ ಬಾಬ್ತು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಒಟ್ಟು ರೂ.59,000/– ಸಂಭಾವನೆಯನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. ವಿವರ ಅನುಬಂಧ–77ರಲ್ಲಿ ಲಗತ್ತಿಸಿದೆ. ಇದಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:DOR99/Phd/EE-13/2013-14 ದಿನಾಂಕ:17.10.2014ರಂತೆ ಪಿ.ಹೆಚ್.ಡಿ ಕೋರ್ಸ್ ವರ್ಕ್ ಪ್ರಶ್ನೆಪತ್ರಿಕೆ ಸಿದ್ಧಪಡಿಸಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಹೊರಭಾಗದ (ರಾಜ್ಯದ ಹಾಗೂ ಹೊರ ರಾಜ್ಯದ) ಅಧ್ಯಾಪಕರುಗಳಿಗೆ ಮಾತ್ರ ಸಂಭಾವನೆ ನಿಗದಿಪಡಿಸಿದ್ದು, ಸದರಿ ಆದೇಶದಂತೆ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಸಂಭಾವನೆ ಪಾವತಿಸುವಂತಿಲ್ಲ. ಹಾಗೂ ಸರ್ಕಾರದ ಆದೇಶ ಸಂಖ್ಯೆ:ED/30/UNE/2000, ದಿನಾಂಕ:19.05.2003ರನ್ವಯ ಯು.ಜಿ.ಸಿ ವೇತನ ಶ್ರೇಣಿಯ ಅಧ್ಯಾಪಕರು ಪರೀಕ್ಷಾ ಕಾರ್ಯದ ಸಂಬಂಧ ಯಾವುದೇ ರೀತಿಯ ಸಂಭಾವನೆ ಪಡೆಯಲು ಅರ್ಹರಿರುವುದಿಲ್ಲ. ಮೇಲ್ಕಂಡಂತೆ ಸಂಭಾವನೆ ಪಾವತಿಸಿರುವ ಕುರಿತು ವಿಚಾರಣೆ ಸಂಖ್ಯೆ:92/ದಿನಾಂಕ:29.12.2017ರಲ್ಲಿ ಸೂಕ್ತ ವಿವರಣೆಯನ್ನು ಲೆಕ್ಕತನಿಖೆಗೆ ಒದಗಿಸಲು ಕೋರಲಾಗಿತ್ತು. ಯಾವುದೇ ವಿವರಣೆ ನೀಡದ ಕಾರಣ ಸರ್ಕಾರದ ಆದೇಶವನ್ನು ಮೀರಿ ಅಧ್ಯಾಪಕರುಗಳಿಗೆ | ವಿಶ್ವವಿದ್ಯಾನಿಲಯದಲ್ಲಿ ಪಿ.ಹೆಚ್.ಡಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ ಸಂಬಂಧ ವಿಶ್ವವಿದ್ಯಾನಿಲಯವು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ನಿಗದಿಪಡಿಸಿದ ದರದಲ್ಲಿ ಸಂಭಾವನೆಯನ್ನು ಪಾವತಿಸಲಾಗುತ್ತಿತ್ತು. ಈ ಮಧ್ಯೆ ಸರ್ಕಾರವು ಆದೇಶ ಸಂಖ್ಯೆ:ಇ.ಡಿ.30/ಯು.ಎನ್.ಇ/2000, ದಿನಾಂಕ:09.05.2003 ರನ್ವಯದಂತೆ ಅಧ್ಯಾಪಕರುಗಳಿಗೆ ಯಾವುದೇ ಸಂಭಾವನೆ ಪಾವತಿಸುವ ಹಾಗಿಲ್ಲವೆಂದೂ ಹಾಗೂ ಇಂತಹ ಸಂಭಾವನೆ ಪಾವತಿಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಕೋರಬಾರದೆಂದೂ ಬದಲಾಗಿ ಇಂತಹ ಸಂಭಾವನೆ ಪಾವತಿಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದಲೇ ಭರಿಸಬೇಕೆಂದು ಸೂಚಿಸಲಾಗಿದೆ. ಇದರನ್ವಯ ಪರೀಕ್ಷೆ ಕಾರ್ಯ ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ಕಾರ್ಯಗಳಿಗೆ ಸಂಭಾವನೆಯನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದಲೇ ಭರಿಸಲಾಗುತ್ತಿತ್ತು.<br>ಆದರೆ, ಸರ್ಕಾರದ ದಿನಾಂಕ 09.05.2003ರಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಸಂಬಂಧ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಜಿ.ಎಲ್.5/142/2012–13, ದಿನಾಂಕ:19.8.2017ರ ಅನ್ವಯದಂತೆ ದಿನಾಂಕ: 01.08.2017ರ ನಂತರ ಯು.ಜಿ.ಸಿ ವೇತನ ಪಡೆಯುತ್ತಿರುವ ಅಧ್ಯಾಪಕರುಗಳಿಗೆ ಯಾವುದೇ ಮೌಲ್ಯಮಾಪನ ಸಂಭಾವನೆಯನ್ನು |

| | |
|---|---|
| ಸಂಭಾವನೆ ಪಾವತಿಸಿರುವ ಒಟ್ಟು ಮೊತ್ತ **ರೂ.59,000/–ಗಳನ್ನು ವಸೂಲಿಸಲು ಸೂಚಿಸಲಾಗಿದೆ.** | ನೀಡಲಾಗುವುದಿಲ್ಲವೆಂದು ಆದೇಶ ಹೊರಡಿಸಲಾಗದೆ. ಪ್ರತಿಯನ್ನು ಲಗತ್ತಿಸಿದೆ.<br><br>ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **121. ಖಾಯಂ ಬೋಧಕ/ಬೋಧಕೇತರ ನೌಕರರುಗಳಿಗೆ ಕಛೇರಿ ಕರ್ತವ್ಯದ ಸಮಯದಲ್ಲಿ ಸ್ಥಳೀಯ ತನಿಖಾ ಕಾರ್ಯಕ್ಕೆ ಗೌರವ ಸಂಭಾವನೆಯನ್ನು ನೀಡಿರುವುದು:– (ಹಣಕಾಸು ವಿಭಾಗ)**<br><br>2015–16ನೇ ಸಾಲಿನಲ್ಲಿನ ಲೆಕ್ಕತನಿಖೆಯಲ್ಲಿ ಯು.ಜಿ.ಸಿ ವೇತನ ಪಡೆಯುತ್ತಿರುವ ಖಾಯಂ ಬೋಧಕ ವರ್ಗದವರು ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳಪಟ್ಟಿರುವ ಸಂಯೋಜಿತ ಕಾಲೇಜುಗಳ ತನಿಖಾ ಕಾರ್ಯವನ್ನು ಕೈಗೊಳ್ಳಲು ಕಛೇರಿಯ ಕರ್ತವ್ಯದ ಸಮಯದಲ್ಲಿ ಮೈಸೂರಿನ ವಿವಿಧ ಕಾಲೇಜುಗಳ ತನಿಖಾ ಕಾರ್ಯಕ್ಕೆ ಹಾಜರು ಆಗಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯವರುಗಳಿಗೆ ಪ್ರತಿಯೊಂದು ಕಾಲೇಜಿಗೆ **ಅನುಬಂಧ–78ರಲ್ಲಿ** ವಿವರಿಸಲಾಗಿರುವ ಅಧಿಕಾರಿಗಳ ವೃಂದಕ್ಕೆ 33,000/– ರೂಗಳನ್ನು ಎನ್.ಡಿ.ಸಿ ಬಿಲ್ ಸಂಖ್ಯೆ:11/6199 ಧನಾದೇಶ ಸಂಖ್ಯೆ:511915/15.07.2015ರನ್ವಯ ಗೌರವ ಸಂಭಾವನೆಯನ್ನು ಪಾವತಿಸಲಾಗಿದ್ದು, ಈ ಕ್ರಮವು ಕೆ.ಸಿ.ಎಸ್.ಆರ್. ನಿಯಮ 513ರನ್ವಯ ಗೌರವ ಸಂಭಾವನೆಯನ್ನು ಪಾವತಿಸಲು ಅವಕಾಶವಿರುವುದಿಲ್ಲ. ಯಾವುದೇ ಸರ್ಕಾರಿ ನೌಕರನು ಯಾವ ದಿನದೊಂದು ಕೇಂದ್ರ ಸ್ಥಳದಿಂದ 8 ಕಿ.ಮೀ.ಗಳನ್ನು ಮೀರುವ ದೂರವನ್ನು ತಲುಪುವುದಿಲ್ಲವೋ ಅಂತಹ ಸ್ಥಳಕ್ಕೆ/ದಿನಕ್ಕೆ ಯಾವುದೇ ಪ್ರಯಾಣಭತ್ಯೆಗೆ ಅರ್ಹರಿರುವುದಿಲ್ಲ. ಹಾಗೂ ಕೆ.ಸಿ.ಎಸ್.ಆರ್. ನಿಯಮ 28 (ಎ) (ಬಿ) ರನ್ವಯ ಯಾವುದೇ ಗೌರವ ಸಂಭಾವನೆಯನ್ನು ಪಡೆಯಲು ಅರ್ಹರು ಇರುವುದಿಲ್ಲ. ಯಾವುದೇ ಸಿಂಡಿಕೇಟ್ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನಗಳು/ಅಧಿನಿಯಮಗಳಿಗೆ ತಿದ್ದುಪಡಿಗಳನ್ನು ಮಾಡಿದಾಗ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000 ನಿಯಮ 41(5), 41(6), 41(7)ರ ಗಳನ್ವಯ ಸರ್ಕಾರ ಹಾಗೂ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಹೊರತು ಯಾವುದೇ ನಿಯಮಾವಳಿಗಳು/ಅಧಿನಿಯಮಗಳನ್ನು ಜಾರಿಗೆ ತರಲು ಅವಕಾಶವಿರುವುದಿಲ್ಲವಾದ್ದರಿಂದ, ಯು.ಜಿ.ಸಿ, ವೇತನ ಪಡೆಯುತ್ತಿರುವ ಬೋಧಕರು ಹಾಗೂ ಬೋಧಕೇತರ ನೌಕರರುಗಳಿಗೆ ಸ್ಥಳೀಯ ತನಿಖಾ ಕಾರ್ಯಗಳಿಗೆ ಹಾಜರಾಗಲು ವಾಹನಗಳ ವ್ಯವಸ್ಥೆಗಳು ಇದ್ದಾಗ್ಯೂ ಗೌರವ ಸಂಭಾವನೆ ಪಡೆದಿರುವುದರ ಮೇಲೆ ತಿಳಿಸಿರುವಂತೆ, ಕೆ.ಸಿ.ಎಸ್.ಆರ್. ನಿಯಮ 28, 513 ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000 ನಿಯಮ 41(5) (6) (7)ರ ನಿಯಮಗಳಿಗೆ ವಿರುದ್ಧವಾಗಿರುವುದರಿಂದ ರೂ.**33,000/– ರೂಗಳನ್ನು ಸಂಬಂಧಪಟ್ಟವರಿಂದ ವಸೂಲಿ** ಮಾಡಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಿದೆ. | ಪರೀಕ್ಷೆ ನಡೆಯುವ ಸಂದರ್ಭಗಳಲ್ಲಿ ಖಾಯಂ ಬೋಧಕ ಮತ್ತು ಬೋಧಕೇತರ ನೌಕರರು ಜಾಗೃತದಳದ ಸದಸ್ಯರಾಗಿ ನೇಮಕಗೊಂಡಿರುವುದರಿಂದ ದಿನಾಂಕ 04.12.2014 ರಂದು ನಡೆದ ಸಿಂಡಿಕೇಟ್ ಸಭೆಯ ಶಿಫಾರಸ್ಸಿನಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ.ಎಲ್.5/142/2012–13, ದಿನಾಂಕ:06.01.2015ರನ್ವಯ ಗೌರವ ಸಂಭಾವನೆಯನ್ನು ಪಾವತಿಸಲಾಗಿದೆ.<br><br>ಆದಾಗ್ಯೂ: ಈ ಕಂಡಿಕೆಯಲ್ಲಿನ ಸೂಚನೆಯಂತೆ ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ಮಾರ್ಗದರ್ಶನ ಕೋರಲಾಗುವುದು. |

| | |
|---|---|
| **122. ಅಧಿಕಾರಿಗಳು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ತನಿಖಾ ಕಾರ್ಯ ಕೈಗೊಳ್ಳಲು ವಿವಿಧ ಸ್ಥಳಗಳಿಗೆ ಪ್ರವಾಸ ಮಾಡಿರುವ ಅವಧಿಗೆ ತಂಗಿದ ಅವಧಿಗೆ ದಿನಭತ್ಯೆ ಪಾವತಿಸುವ ಬದಲು ಗೌರವ ಸಂಭಾವನೆ ಪಾವತಿಸಿರುವುದು :– (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಎನ್.ಡಿ.ಸಿ ಬಿಲ್ಲು ಸಂಖ್ಯೆ:8079/14.03.2016 ಧನಾದೇಶ ಸಂಖ್ಯೆ:173683/19.3.2016ರ ಬಿಲ್ಲನ್ನು ಪರಿಶೀಲಿಸಲಾಗಿ ಯು.ಜಿ.ಸಿ ಬೋದಕ ಅಧಿಕಾರಿಗಳು ಮತ್ತು ಬೋಧಕೇತರ ಸಿಬ್ಬಂದಿಯವರು ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಒಳಪಟ್ಟಿರುವ ಸಂಯೋಜಿತ ಕಾಲೇಜುಗಳ ತನಿಖಾ ಕಾರ್ಯಕ್ಕೆ **ಅನುಬಂಧ–79ರಲ್ಲಿ** ವಿವರಿಸಲಾಗಿರುವ ಸಿಬ್ಬಂದಿಯವರು ವಿವಿಧ ಕಾಲೇಜುಗಳ ತನಿಖೆಗಾಗಿ ಮೈಸೂರು ವಿಶ್ವವಿದ್ಯಾನಿಲಯದವರು ನೀಡಲಾದ ವಾಹನಗಳಲ್ಲಿ ಪ್ರವಾಸ ಮಾಡಿರುತ್ತಾರೆ. ಈ ಪ್ರವಾಸದ ಅವಧಿಯಲ್ಲಿ ಅಧಿಕಾರಿಗಳು ಪ್ರವಾಸ ಮಾಡಿದ ಸ್ಥಳಗಳಲ್ಲಿ ತಂಗಿದ ಅವಧಿಗೆ ದಿನಭತ್ಯೆಯನ್ನು ಲೆಕ್ಕಹಾಕಿ ಪಾವತಿಸುವ ಬದಲಾಗಿ ಪ್ರವಾಸ ಮಾಡಲಾದ ಅಧಿಕಾರಿಗಳಿಗೆ ಗೌರವ ಸಂಭಾವನೆ ರೂಪದಲ್ಲಿ ಯು.ಜಿ ಕಾಲೇಜುಗಳಿಗೆ ರೂ.500/– ಪಿ.ಜಿ. ಕಾಲೇಜುಗಳಿಗೆ ರೂ.1000/–ಗಳನ್ನು ಮತ್ತು ಸ್ಥಳೀಯ ಕಾಲೇಜುಗಳಿಗೆ ಭೇಟಿ ನೀಡಿ ಒಂದು ವಿಭಾಗಕ್ಕೆ ಯು.ಜಿ.ಗೆ ರೂ.500/– ಪಿ.ಜಿ.ಕಾಲೇಜುಗಳಿಗೆ ರೂ.1000/– ಗಳನ್ನು ಮತ್ತು ಸ್ಥಳೀಯ ಕಾಲೇಜುಗಳಿಗೆ ಭೇಟಿ ನೀಡಿ ಒಂದು ವಿಭಾಗಕ್ಕೆ ಯು.ಜಿ.ಗೆ ರೂ.500/– ಪಿ.ಜಿ.ಗೆ ರೂ.1000/–ರಂತೆ ಒಂದೊಂದು ವಿಭಾಗಗಳಿಗೂ ಭತ್ಯೆಯನ್ನು ಪಡೆದಿರುತ್ತಾರೆ. ಈ ಕ್ರಮವು ಕೆ.ಸಿ.ಎಸ್.ಆರ್ ನಿಯಮ 28 (ಬಿ) ಟಿಪ್ಪಣಿ 1 ರಲ್ಲಿ ಉಪನಿಯಮ ಬಿ ರಂತೆ ಈ ಕರ್ತವ್ಯವು ಸರ್ಕಾರಿ ಕರ್ತವ್ಯವಾಗಿರುವುದರಿಂದ ನೌಕರರ ಹೊಣೆಗಾರಿಕೆಯಾಗಿರುವುದರಿಂದ ಈ ಹಿನ್ನೆಲೆಯಲ್ಲಿ ಯಾವ ಗೌರವ ಸಂಭಾವನೆಯನ್ನು ನೀಡತಕ್ಕದಲ್ಲ. ಆದರೆ ಕೆ.ಸಿ.ಎಸ್.ಆರ್ ನಿಯಮ 514ರನ್ವಯ ಪ್ರವಾಸದ ಕಾಲದ ತಂಗುವಿಕೆ ಕಾಲಕ್ಕೆ ದಿನಭತ್ಯೆಯನ್ನು ನೀಡಬಹುದಾಗಿದೆ.<br><br>ಆದ್ದರಿಂದ ಈ ಪ್ರಕರಣದಲ್ಲಿ ನೀಡಲಾಗಿರುವ ಗೌರವಧನ, ಸಂಭಾವನೆಯ ಮೊತ್ತವನ್ನು ಸಂಬಂಧಪಟ್ಟವರಿಂದ **ರೂ.5,99,797/–ಗಳನ್ನು** ವಸೂಲಿ ಮಾಡಿ ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸುವುದು ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಪ್ರವಾಸದ ಕುರಿತು ಡಿ.ಎ Journalನ್ನು ಪಡೆದು ದಿನಭತ್ಯೆಯನ್ನು ಲೆಕ್ಕಹಾಕಿ ದಿನಭತ್ಯೆಯ ಮೊತ್ತವನ್ನು ನೀಡುವ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. | ದಿನಾಂಕ 12.05.2016 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಸ್ಥಳೀಯ ತನಿಖಾ ಸಮಿತಿಯ ಸದಸ್ಯರು ಮತ್ತು ಸಮಿತಿಯ ಜೊತೆ ಹೋಗುವ ಕಛೇರಿ ಸಹಾಯಕರು ಹಾಗೂ ಚಾಲಕರುಗಳಿಗೆ ಉಟೋಪಚಾರಕ್ಕೆ ಪ್ರತಿ ತಂಡಕ್ಕೆ ರೂ 1200/–ಗಳಿಗೆ ನಿಗದಿಪಡಿಸಲಾಗಿದೆ.<br><br>ಹಾಗೂ ತನಿಖಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ನೀಡುತ್ತಿರುವ ಗೌರವ ಸಂಭಾವನೆಯನ್ನು ರೂ.1000.00ಗಳಿಗೆ ನಿಗದಿಪಡಿಸಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಯುಎ2/119/2003–04 ದಿನಾಂಕ.27.7.2016 ಅನ್ವಯ ತಿದ್ದುಪಡಿ ಆದೇಶ ಹೊರಡಿಸಲಾಗಿದೆ.<br><br>ಇದರನ್ವಯ ಗೌರವ ಸಂಭಾವನೆಗಳನ್ನು ಪಾವತಿಸಲಾಗಿದೆ.<br><br>ದಿನಾಂಕ.12.5.2016ರ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರತಿ ಹಾಗೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಯುಎ2/119/2013–14 ದಿನಾಂಕ.27.7.2016ರ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| **123. ಪರೀಕ್ಷಾ ವಿಭಾಗದ ನೌಕರರುಗಳಿಗೆ ಪರೀಕ್ಷಾ ಕರ್ತವ್ಯ ನಿರ್ವಹಿಸಿರುವುದಕ್ಕೆ ಸಂಭಾವನೆಯನ್ನು ಪಾವತಿ ಮಾಡಿರುವುದು:– (ಪರೀಕ್ಷಾ ವಿಭಾಗ)**<br><br>2015–16ನೇ ಸಾಲಿನ ಪರೀಕ್ಷಾ ವಿಭಾಗದ ಎ.ಸಿ.ಬಿಲ್ಲುಗಳಿಗೆ ಪ್ರತಿಯಾಗಿ ಎನ್.ಡಿ.ಸಿ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯವು ಒಂದು ಪ್ರಮುಖ |

| | |
|---|---|
| ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ **ಅನುಬಂಧ-80ರಲ್ಲಿ** ವಿವರಿಸಿರುವಂತೆ, ಪರೀಕ್ಷಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಸದರಿ ನೌಕರರುಗಳನ್ನು ನೇಮಕ ಮಾಡಿಕೊಂಡಿರುವುದರಿಂದ ಪರೀಕ್ಷಾ ಕರ್ತವ್ಯವು ನೌಕರರುಗಳ ದಿನನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಕೆ.ಸಿ.ಎಸ್.ಆರ್ ನಿಯಮ 28(ಸಿ) V ನ್ವಯ ವಿಶೇಷ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶದ ಮೂಲಕ ಅನ್ಯತಾ ಉಪಸಂಬಂಧಿಸಿದನ್ನು ಬಿಟ್ಟು ವಿಶೇಷ ಅನುಮತಿ ಇಲ್ಲದೆ ಯಾವುದೇ ಸಂಭಾವನೆಯನ್ನು ಪಡೆಯುವಂತಿಲ್ಲ/ಪಾವತಿಸುವಂತಿಲ್ಲ. ಹಾಗೂ 28(ಎ)(ಬಿ) ಮತ್ತು (ಇ) ಗಳನ್ವಯ ಸರ್ಕಾರಿ ನೌಕರನು ಕಛೇರಿಯ ಕರ್ತವ್ಯದ ಹೆಚ್ಚು ಸಮಯ ಕರ್ತವ್ಯ ನಿರ್ವಹಿಸುವುದು ಹೊಣೆಯಾಗಿರುವುದರಿಂದ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000ರ ನಿಯಮ 41(5)(6)(7)ಗಳನ್ವಯ ಯಾವುದೇ ಆದೇಶಗಳು/ಅದ್ಯಾದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರ/ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯದೆ ಇರುವುದರಿಂದ ಸದರಿ ನೌಕರರಿಗೆ ಪಾವತಿಸಿರುವ ಸಂಭಾವನೆಯ ಒಟ್ಟು ಮೊತ್ತ **ರೂ.3,48,400/-ಗಳನ್ನು ಸಂಬಂಧಿಸಿದ ನೌಕರರಿಂದ ವಸೂಲಿಗೆ** ಸೂಚಿಸಲಾಗಿದೆ. | ಕಾರ್ಯವಾಗಿದ್ದು; ನೌಕರರು ತಮ್ಮ ದಿನನಿತ್ಯದ ಕಛೇರಿ ಕೆಲಸ ಕಾರ್ಯಗಳ ಜೊತೆಗೆ ಪರೀಕ್ಷಾ ಕಾರ್ಯಗಳಿಗೆ ನಿಯೋಜಿಸಿದ ಸಂದರ್ಭದಲ್ಲಿ ಕಛೇರಿ ಕೆಲಸದ ಅವಧಿಯನ್ನು ಮೀರಿ ಹೆಚ್ಚಿನ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ಸಂಭಾವನೆ ಪಾವತಿಸಿರುವುದು ಅನಿವಾರ್ಯವಾಗಿರುತ್ತದೆ. ಸಂಭಾವನೆ ನೀಡದಿದ್ದರೆ ನೌಕರರು ಹೆಚ್ಚಿನ ಪರೀಕ್ಷಾ ಕಾರ್ಯ ನಿರ್ವಹಿಸಲು ಏನಾದರೂ ಕಾರಣ ನೀಡಿ ಪರೀಕ್ಷಾ ಕಾರ್ಯದಿಂದ ತಪ್ಪಿಸಿಕೊಳ್ಳುತ್ತಾರೆ. ಹೀಗಾಗುವ ಸಂದರ್ಭಗಳಲ್ಲಿ ಪರೀಕ್ಷಾ ಕಾರ್ಯಗಳನ್ನು ನಿಗದಿತ ಸಮಯಕ್ಕೆ ಸುಸೂತ್ರವಾಗಿ ನಡೆಸಲು ಸಾಧ್ಯವಾಗುವುದಿಲ್ಲ.<br><br>ಆದಾಗ್ಯೂ 2016-17ರ ಸಾಲಿನಲ್ಲಿ ಲೆಕ್ಕತನಿಖಾ ವರದಿಯ ಮರುಪರಿಶೀಲನೆ ಸಂದರ್ಭದಲ್ಲಿ ನೀಡಿರುವ ತಮ್ಮ ಸಲಹೆ ಸೂಚನೆಗಳನ್ವಯ ಈ ವಿಚಾರದಲ್ಲಿ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರದ ಮಾರ್ಗದರ್ಶನ ಕೋರಲಾಗುವುದು. |
| **124. ಪರೀಕ್ಷಾ ಕಾರ್ಯಕ್ಕೆ ಅಧಿಕಾರಿಗಳು/ನೌಕರರುಗಳನ್ನು ಜಾಗೃತದಳದ ಸದಸ್ಯರುಗಳಾಗಿ ನಿಯೋಜಿಸಿ ಪ್ರಯಾಣ ಭತ್ಯೆ/ ದಿನಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದು:- (ಪರೀಕ್ಷಾ ವಿಭಾಗ)**<br><br>ಪರೀಕ್ಷಾಂಗ ವಿಭಾಗದ ಖಾಯಂ ಅಧಿಕಾರಿಗಳು/ನೌಕರರುಗಳನ್ನು ಪರೀಕ್ಷಾ ಕಾರ್ಯಗಳಿಗೆ ಜಾಗೃತದಳದ ಸದಸ್ಯರುಗಳಾಗಿ ನೇಮಕ ಮಾಡಿಕೊಂಡು ದಿನಭತ್ಯೆ (D.A), ಪ್ರಯಾಣ ಭತ್ಯೆ (T.A) ಹಾಗೂ ಸಂಭಾವನೆಯನ್ನು ಪಾವತಿಸಿರುವುದನ್ನು ಲೆಕ್ಕತಪಾಸಣೆಯಲ್ಲಿ ಪರಿಶೀಲಿಸಲಾಗಿದ್ದು, **ಅನುಬಂಧ-81 ಮತ್ತು 82ರಲ್ಲಿ** ವಿವರಿಸಿರುವಂತೆ ರೂ.8,54,400/-ಗಳನ್ನು ಪಾವತಿಸಲಾಗಿದೆ. ಕೆ.ಸಿ.ಎಸ್.ಆರ್. ನಿಯಮ 451ರನ್ವಯ ನೌಕರರ ವೇತನ ಶ್ರೇಣಿಗೆ ಅನುಗುಣವಾಗಿ ಪ್ರಯಾಣ ಭತ್ಯೆಯನ್ನು ನೀಡಬೇಕಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ 498 ರಿಂದ 516 ನಿಯಮಗಳನ್ವಯ ವಾಸ್ತವಿಕ ತಂಗುವಿಕೆಗೆ ವೇತನ ಶ್ರೇಣಿಗನುಗುಣವಾಗಿ ಲೆಕ್ಕಾಚಾರ ಮಾಡಿ ದಿನಭತ್ಯೆಯನ್ನು ಪಾವತಿಸಬೇಕಾಗುತ್ತದೆ. ಆದರೆ ಕೆ.ಸಿ.ಎಸ್.ಆರ್. ನಿಯಮ 28ರನ್ವಯ ಖಾಯಂ ಸರ್ಕಾರಿ ನೌಕರನು ಪ್ರತಿನಿತ್ಯದ ತಾನು ನಿರ್ವಹಿಸುವ ಕರ್ತವ್ಯದ ಹೆಚ್ಚುವರಿ ಕೆಲಸಕ್ಕೆ ಯಾವುದೇ ಸಂಭಾವನೆಯನ್ನು ಪಡೆಯಲು ಅರ್ಹನಿರುವುದಿಲ್ಲ. **ಅನುಬಂಧ-81 ಮತ್ತು 82ರಲ್ಲಿ** ದಿನಭತ್ಯೆ, ಪ್ರಯಾಣಭತ್ಯೆಗಳನ್ನು ನೌಕರರಿಗೆ ಪಾವತಿಸಲು ನಿಯಮಾವಳಿಯಲ್ಲಿ ಅವಕಾಶವಿದ್ದು, ಸಂಭಾವನೆಯನ್ನು ನೀಡಲು ನಿಯಮಾವಳಿಯಲ್ಲಿ ಅವಕಾಶಗಳಿಲ್ಲದಿರುವುದರಿಂದ, ಸಂಭಾವನೆಯನ್ನು ಪಾವತಿಸಿರುವ ಒಟ್ಟು ಮೊತ್ತ **ರೂ.8,54,400/-ಗಳನ್ನು ಸಂಬಂಧಪಟ್ಟ ಅಧಿಕಾರಿಗಳು/ನೌಕರರಿಂದ ವಸೂಲಾತಿ** | ಜಾಗೃತದಳದ ಸದಸ್ಯರುಗಳಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ನೀಡಲಾಗುತ್ತಿಲ್ಲ. ಪರೀಕ್ಷೆ ಕಾರ್ಯವು ಗೌಪ್ಯ, ಪಾವಿತ್ರತೆ ಹಾಗೂ ಗಂಭೀರ ಸ್ವರೂಪವಾದ್ದರಿಂದ ನಿಯೋಜನೆಗೊಂಡ ಸದಸ್ಯರುಗಳು ಪರೀಕ್ಷೆ ನಡೆಯುವ ಸ್ಥಳಗಳಿಗೆ ತೆರಳಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಅವರಿಗೆ ದಿನ ಒಂದಕ್ಕೆ ರೂ.700.00ರಂತೆ ಸಂಭಾವನೆಯನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿಎಲ್5/142/2012-13 ದಿನಾಂಕ 27.01.2016ರ ಅನ್ವಯದಂತೆ ಪಾವತಿ ಮಾಡಲಾಗಿರುತ್ತದೆ.<br><br>ವಿಶ್ವವಿದ್ಯಾನಿಲಯದ ದಿನಾಂಕ 27.01.2016ರ ಆದೇಶದ ಪ್ರತಿಯನ್ನು ಲಗತ್ತಿಸಿ ಸಲ್ಲಿಸುತ್ತಾ; ರೂ.8,54,400.00ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

| | |
|---|---|
| ಮಾಡಿ ಪರೀಕ್ಷಾ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–81 ಮತ್ತು 82ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | |
| **125. ಪರೀಕ್ಷಾ ಕಾರ್ಯಗಳಿಗೆ ಹಾಜರಾದ ಪ್ರಾಧ್ಯಾಪಕರುಗಳಿಗೆ ದಿನಭತ್ಯೆ/ಪ್ರಯಾಣ ಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದು:– (ಪರೀಕ್ಷಾ ವಿಭಾಗ)**<br>ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ಪರೀಕ್ಷಾ ಕಾರ್ಯಗಳಿಗೆ ಅಂದರೆ, ಪ್ರಶ್ನೆ ಪತ್ರಿಕೆ ತಯಾರಿಸುವಿಕೆ, ಮೌಲ್ಯಮಾಪನ ಜೊತೆಗೆ ಬಿ.ಓ.ಇ ಸಭೆಗಳಿಗೆ ಹಾಜರಾಗುವ ಪ್ರಾಧ್ಯಾಪಕರುಗಳಿಗೆ ಪ್ರಯಾಣಭತ್ಯೆ, ದಿನಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದನ್ನು ಲೆಕ್ಕತಪಾಸಣೆಯಲ್ಲಿ ಪರಿಶೀಲಿಸಲಾಗಿ, ಯು.ಜಿ.ಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ 6ನೇ ಯು.ಜಿ.ಸಿ ವೇತನ ಪರಿಷ್ಕರಣೆ ನಿಯಮಾವಳಿಗಳಲ್ಲಿ ಯಾವುದೇ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ. ಆದರೆ, ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವ ಪ್ರಾಧ್ಯಾಪಕರುಗಳಿಗೆ ನಿಯಮಾನುಸಾರ ದಿನಭತ್ಯೆ, ಪ್ರಯಾಣಭತ್ಯೆಗಳನ್ನು ಪಡೆಯಲು ಅವಕಾಶವಿದ್ದು, ಸಂಭಾವನೆ ಪಡೆಯಲು ಅವಕಾಶವಿರುವುದಿಲ್ಲ. ದಿನಭತ್ಯೆ, ಪ್ರಯಾಣಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದರಿಂದ ಯು.ಜಿ.ಸಿ ನಿಯಮಾವಳಿ ಹಾಗೂ ಕೆ.ಸಿ.ಎಸ್.ಆರ್ ನಿಯಮ 514ರ ನಿಯಮಾವಳಿಯ ಉಲ್ಲಂಘನೆಯಾಗಿರುತ್ತದೆ. ಪ್ರಾಧ್ಯಾಪಕರುಗಳಿಗೆ ಸಂಭಾವನೆಯನ್ನು ಪಾವತಿಸಿರುವ ಮೊತ್ತ **ರೂ.8,11,418/–ಗಳನ್ನು** **ಅನುಬಂಧ–83, 83(ಎ), 83(ಬಿ), 83(ಸಿ), 83(ಡಿ) ಮತ್ತು 83(ಇ) ರಲ್ಲಿ** ವಿವರಿಸಿರುವಂತೆ ಸದರಿ ಪ್ರಾಧ್ಯಾಪಕರುಗಳಿಂದ ವಸೂಲಿಸಿ ಪರೀಕ್ಷಾ ಖಾತೆಗೆ ಜಮೆ ಮಾಡಲು ಸೂಚಿಸಿದೆ. | ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯಕ್ಕೆ ಹಾಜರಾದ ಅಧ್ಯಾಪಕ/ಅಧಿಕಾರಿ/ಸಿಬ್ಬಂದಿಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಮೇರೆಗೆ ಒಂದು ಸೆಷನ್‌ಗೆ ರೂ.550.00ರಂತೆ ಪಾವತಿಸಲಾಗುತ್ತದೆ. ಅಧಿಕಾರಿಗಳು/ಸಿಬ್ಬಂದಿ ವರ್ಗದವರು ನಿಯೋಜಿತ ಸ್ಥಳಕ್ಕೆ ಹೋಗಿ ಬರಲು ಪ್ರಯಾಣ ಭತ್ಯೆ, ಹಾಗೂ 1/4 ರಷ್ಟು ಸಂಭಾವನೆಯನ್ನು ಮತ್ತು ತಂಗಿದ್ದಕ್ಕಾಗಿ 1/4 ಭಾಗದಷ್ಟು ದಿನ ಭತ್ಯೆಯನ್ನು ಲೆಕ್ಕಹಾಕಿ ಪಾವತಿಸಲಾಗಿದೆ. ಪರೀಕ್ಷಾ ಕಾರ್ಯಗಳಿಗೆ ನಿಯೋಜನೆಗೊಂಡ ಪ್ರಾಧ್ಯಾಪಕರು/ಅಧ್ಯಾಪಕರು ಹಾಗೂ ನೌಕರರುಗಳಿಗೆ ಸಂಭಾವನೆ, ತಂಗಲಾಗಿರುವುದಕ್ಕೆ ತಂಗು ಭತ್ಯೆ ಹಾಗೂ ಹೊರಗಿನ ಸ್ಥಳಕ್ಕೆ ಪ್ರಯಾಣ ಭತ್ಯೆಗಳನ್ನು ಪಾವತಿಮಾಡುವುದು ಅನಿವಾರ್ಯವಾಗಿರುತ್ತದೆ. ಏಕೆಂದರೆ, ಪರೀಕ್ಷಾ ಕಾರ್ಯಗಳು ವಿಶ್ವವಿದ್ಯಾನಿಲಯದಲ್ಲಿ ಪ್ರಮುಖ ಕಾರ್ಯಗಳಾಗಿದ್ದು ಸಂಭಾವನೆ ನೀಡದಿದ್ದರೆ ಯಾರೂ ಕಾರ್ಯಕ್ಕೆ ಮುಂದೆ ಬರುವುದಿಲ್ಲ. |
| **126. ಪರೀಕ್ಷಾ ವಿಭಾಗದ ನೌಕರರು ವಿವಿಧ ಕಾಲೇಜುಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲು ತೆರಳಿರುವುದಕ್ಕೆ ಪ್ರವಾಸ ಭತ್ಯೆಯನ್ನು ಪಾವತಿಸುವ ಬದಲು ಸಂಭಾವನೆ ಪಾವತಿಸಿರುವುದು:– (ಪರೀಕ್ಷಾ ವಿಭಾಗ)**<br>2015–16ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಎನ್.ಡಿ.ಸಿ ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ **ಅನುಬಂಧ–84ರಲ್ಲಿ** ವಿವರಿಸಿರುವಂತೆ, ಪರೀಕ್ಷಾ ವಿಭಾಗದ ನೌಕರರು, ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ವಿವಿಧ ವಿಭಾಗಗಳಲ್ಲಿ ಬರುವ ಕಾಲೇಜುಗಳಿಗೆ ಪ್ರಶ್ನೆಪತ್ರಿಕೆಗಳನ್ನು ವಿತರಿಸುವ ಕಾರ್ಯಕ್ಕೆ ವಿಶ್ವವಿದ್ಯಾನಿಲಯದ ವಾಹನಗಳ ಸೌಲಭ್ಯದ ಮೂಲಕ ಪ್ರವಾಸ ಮಾಡಿರುತ್ತಾರೆ. ಈ ರೀತಿ ಪ್ರವಾಸ ಮಾಡಲಾಗಿರುವ ಸ್ಥಳಗಳಲ್ಲಿ ನೌಕರರು ತಂಗಿದ ಅವಧಿಗೆ ಕೆ.ಸಿ.ಎಸ್.ಆರ್. ನಿಯಮ 514ರಡಿಯಲ್ಲಿ ಬರುವ ನಿಯಮಗಳಿಗೆ ಒಳಪಟ್ಟು ಪ್ರವಾಸದ ದಿನಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ (ಡಿ.ಎ). ಆದರೆ ಈ ಪ್ರಕರಣದಲ್ಲಿ ದಿನಭತ್ಯೆಯನ್ನು ಪಾವತಿಸುವ ಬದಲು | ಪ್ರಶ್ನೆಪತ್ರಿಕೆ ವಿತರಣೆ ಹಾಗೂ ಉತ್ತರ ಪತ್ರಿಕೆಗಳ ಸ್ವೀಕೃತಿ ಕಾರ್ಯವು ತುಂಬಾ ಜವಾಬ್ದಾರಿಯಿಂದ ಕೂಡಿದ್ದು; ಈ ಸಂದರ್ಭಗಳಲ್ಲಿ ಉದ್ಯೋಗಿಗಳ ಊಟ, ತಿಂಡಿ ಇನ್ನಿತರೆ ವೆಚ್ಚಗಳನ್ನು ಭರಿಸುವುದು ಕಷ್ಟಸಾಧ್ಯವಾದ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ದರದಲ್ಲಿ ಸಂಭಾವನೆಗಳನ್ನು ಪಾವತಿಸಲಾಗಿದೆ.ಲೆಕ್ಕ ತನಿಖೆಯಲ್ಲಿ ತಿಳಿಸಿರುವಂತೆ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ಮಾರ್ಗದರ್ಶನ ಕೋರಲಾಗುವುದು. |

| | |
|---|---|
| ಸಂಭಾವನೆಯನ್ನು ಪಾವತಿಸಿರುತ್ತಾರೆ. ಈ ಪಾವತಿಯ ಕ್ರಮವು ಕೆ.ಸಿ.ಎಸ್.ಆರ್ ನಿಯಮ 28(ಎ)(ಬಿ) ಮತ್ತು (ಸಿ)(ಇ) ಗಳ ಅನ್ವಯ ನಿಯಮಗಳಿಗೆ ಉಲ್ಲಂಘನೆಯಾಗಿರುತ್ತದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000ರ ನಿಯಮ 41(5)(6) ಮತ್ತು (7)ರನ್ವಯ ಯಾವುದೇ ಆದೇಶಗಳು/ಅದ್ಯಾದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರ/ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಪಡೆಯದೆ ಸಂಭಾವನೆ ಪಾವತಿಸಿರುವುದರಿಂದ ನೀಡಲಾಗಿರುವ ಸಂಭಾವನೆಯ ಮೊತ್ತಗಳಲ್ಲಿ ನೌಕರರಿಗೆ ಅರ್ಹತೆ ಇರುವ ದಿನಭತ್ಯೆ ಮೊತ್ತಗಳನ್ನು ಕಳೆದು, ಉಳಿದ ಮೊತ್ತಗಳ ವಿವರಗಳನ್ನು ಅನುಬಂಧದಲ್ಲಿ ವಿವರಿಸಲಾಗಿದ್ದು, ವಿವರಣೆಯಂತೆ ದಿನಭತ್ಯೆಯ ಮೊತ್ತಗಳನ್ನು ಕಳೆದು ಉಳಿದ ವೋಚರ್ ಮೊತ್ತ **ರೂ.58,555/–ಗಳನ್ನು ಸಂಬಂಧಿಸಿದ ನೌಕರರಿಂದ** ವಸೂಲಿಗೆ ಸೂಚಿಸಿದೆ. ವಿವರಗಳನ್ನು **ಅನುಬಂಧ–84ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | |
| **127. ಪರೀಕ್ಷಾಂಗ ಶಾಖೆಯಲ್ಲಿಯೇ ಪ್ರಶ್ನೆ ಪತ್ರಿಕೆಗಳನ್ನು ವಿತರಣೆ ಮಾಡಲಾಗಿರುವ ಖಾಯಂ ನೌಕರರುಗಳಿಗೆ ಸಹಾಯಧನ ಮತ್ತು ಸಂಭಾವನೆಗಳನ್ನು ಪಾವತಿಸಿರುವುದು:– (ಪರೀಕ್ಷಾ ವಿಭಾಗ)**<br><br>2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಪರೀಕ್ಷಾ ವಿಭಾಗದ ಖಾಯಂ ನೌಕರರು ಪರೀಕ್ಷಾಂಗ ವಿಭಾಗದ ಶಾಖೆಯಲ್ಲಿರುವ ಪ್ರಶ್ನೆಪತ್ರಿಕೆಗಳನ್ನು ವಿತರಿಸುವ ಕರ್ತವ್ಯಕ್ಕೆ ಸಂಭಾವನೆ ಹಾಗೂ ಸಹಾಯಧನ ಈ ಎರಡನ್ನು, ಬಿ.ಆರ್.ಸಂಖ್ಯೆ:158, ಧನಾದೇಶ ಸಂಖ್ಯೆ:520252/ದಿನಾಂಕ:16.05.2015ರಲ್ಲಿ ರೂ.68,510/–ಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ.<br><br>ಕೆ.ಸಿ.ಎಸ್.ಆರ್. ನಿಯಮಾವಳಿ ನಿಯಮ 28(ಎ) (ಬಿ) ಮತ್ತು (ಸಿ) (ಇ)ಗಳನ್ವಯ, ಪರೀಕ್ಷಾಂಗ ಕರ್ತವ್ಯವವು ಪರೀಕ್ಷಾಂಗ ವಿಭಾಗದ ನೌಕರರುಗಳ ಆದ್ಯ ಕರ್ತವ್ಯವಾಗಿರುವುದರಿಂದ ನಿಯಮಾನುಸಾರ ಸಂಭಾವನೆ ಮತ್ತು ಸಹಾಯಧನವನ್ನು ಪಡೆಯಲು ಅವಕಾಶವಿರುವುದಿಲ್ಲ ಹಾಗೂ ಕೆ.ಸಿ.ಎಸ್.ಆರ್. ನಿಯಮ 514ರನ್ವಯ ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನದಿಂದ 08 ಕಿ.ಮೀ. ಮೀರುವ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ ದಿನಭತ್ಯೆಯನ್ನು ಪಾವತಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೆ ಪರೀಕ್ಷಾ ವಿಭಾಗದ ಖಾಯಂ ನೌಕರರು ಪ್ರಶ್ನೆ ಪತ್ರಿಕೆಗಳ ವಿತರಣಾ ಕಾರ್ಯವು ಕೇಂದ್ರಸ್ಥಾನದಲ್ಲಿನ ಮಿತಿ ಒಳಗೆ ಇರುವುದರಿಂದ ದಿನಭತ್ಯೆಯನ್ನು ಸಹ ಪಡೆಯಲು ಅವಕಾಶವಿರುವುದಿಲ್ಲ. ಆದರೆ ಕುಲಸಚಿವರ ಆದೇಶ ಸಂಖ್ಯೆ:ಪವಿ/117/20/2015–16, ದಿನಾಂಕ:04.06.2015ರ ಆದೇಶವನ್ನು ಕುಲಸಚಿವರು ಪರೀಕ್ಷಾಂಗ ಇವರು ಮಾಡಿಕೊಂಡು ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯಿದೆ 2000ರ ನಿಯಮ 41 (5) (6) ಹಾಗೂ (7)ಗಳನ್ವಯ ಅನುಮೋದನೆಯನ್ನು ಪಡೆದು ಅನಂತರ | ಪ್ರಶ್ನೆ ಪತ್ರಿಕೆಗಳನ್ನು ಸ್ಥಳೀಯ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಬೇರೆ ಬೇರೆ ಊರುಗಳ ಕಾಲೇಜುಗಳಿಗೆ ತಲುಪಿಸುವ ಜವಾಬ್ದಾರಿಯು ವಿಶ್ವವಿದ್ಯಾನಿಲಯದಾಗಿರುತ್ತದೆ. ಪರೀಕ್ಷೆಗಳು ನಡೆಯುವ ದಿನಗಳಂದು ಸಂಬಂಧಪಟ್ಟ ಸಿಬ್ಬಂದಿ ವರ್ಗದವರು ಬೆಳಿಗ್ಗೆ 6.00ಗಂಟೆಗೆ ಕಛೇರಿಗೆ ಹಾಜರಾಗಿ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಬೇಕಾಗಿದ್ದು; ಸಿಂಡಿಕೇಟ್ ಅನುಮೋದನೆ ಮೇರೆಗೆ ಸದರೀ ಸಂಭಾವನೆಗಳನ್ನು ಪಾವತಿಸಲಾಗುತ್ತಿದೆ. ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ಮಾರ್ಗದರ್ಶನ ಕೋರಲಾಗುವುದು. |

| | |
|---|---|
| ಮೈಸೂರು ವಿಶ್ವವಿದ್ಯಾನಿಲಯದ ಆದೇಶದಂತೆ ಪಾವತಿಸಬೇಕಾಗಿರುತ್ತದೆ. ಆದರೆ ಪರೀಕ್ಷಾಂಗ ವಿಭಾಗದ ಖಾಯಂ ನೌಕರರು ಪರೀಕ್ಷಾ ಕರ್ತವ್ಯವು ಅವರ ದಿನನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಯಾವುದೇ ಸಹಾಯಧನ ಮತ್ತು ಸಂಭಾವನೆಗಳನ್ನು ಪಡೆಯಲು ಕೆ.ಸಿ.ಎಸ್.ಆರ್. ನಿಯಮಾವಳಿಗಳಲ್ಲಿ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯಿದೆಯಲ್ಲಿ ಅವಕಾಶವಿಲ್ಲದಿದ್ದರೂ ಸಹ ಪಡೆದಿರುತ್ತಾರೆ. ನೌಕರರಿಗೆ ಪಾವತಿಸಲಾಗಿರುವ ಸಹಾಯಧನ ಮತ್ತು ಸಂಭಾವನೆಗಳ **ಒಟ್ಟು ಮೊತ್ತ ರೂ.68,510/-ಗಳನ್ನು** **ಅನುಬಂಧ-85ರಲ್ಲಿ** ವಿವರಿಸಲಾಗಿದ್ದು ಇದನ್ನು ಸಂಬಂಧಿಸಿದ ನೌಕರರುಗಳಿಂದ ವಸೂಲಿಸಿ ಪರೀಕ್ಷಾ ಖಾತೆಗೆ ಜಮಾ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | |
| **128. ಪ್ರಶ್ನೆ ಪತ್ರಿಕೆಗಳನ್ನು ಸ್ಥಳೀಯ ಕಾಲೇಜುಗಳಿಗೆ ವಿತರಿಸಿರುವ ಖಾಯಂ ಸಿಬ್ಬಂದಿಗಳಿಗೆ ಸಂಭಾವನೆಯನ್ನು ಪಾವತಿಸಿರುವುದು:- (ಪರೀಕ್ಷಾ ವಿಭಾಗ)**<br><br>2015-16ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟ ಎನ್.ಡಿ.ಸಿ. ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ ಮೈಸೂರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಪವಿ/ಮಾವಿ/15/2014-15, ದಿನಾಂಕ:05.11.2015ರ ಆದೇಶದಂತೆ ನವೆಂಬರ್/ಡಿಸೆಂಬರ್-2015ರ ಮಾಹೆಗಳಲ್ಲಿ ನಡೆಸಲಾದ ವಿವಿಧ ಪದವಿ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಮೈಸೂರಿನ ಸ್ಥಳೀಯ ಪರೀಕ್ಷಾ ಕೇಂದ್ರಗಳಿಗೆ ವಿತರಿಸುವ ಕರ್ತವ್ಯಕ್ಕೆ ಪರೀಕ್ಷಾ ವಿಭಾಗದ ನೌಕರರುಗಳಿಗೆ ಸಂಭಾವನೆಯನ್ನು ನೀಡಿರುತ್ತಾರೆ. ಆದರೆ ನೌಕರರುಗಳನ್ನು ಪರೀಕ್ಷಾ ವಿಭಾಗದಲ್ಲಿ ಕರ್ತವ್ಯ ನಿರ್ವಹಣೆಗಾಗಿ ನೇಮಕ ಮಾಡಿಕೊಂಡಿರುವ ಹಿನ್ನಲೆಯಲ್ಲಿ ಈ ಪ್ರಶ್ನೆ ಪತ್ರಿಕೆಗಳ ವಿತರಣಾ ಕಾರ್ಯವು ನೌಕರರ ದಿನನಿತ್ಯ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಹಾಗೂ ಕೆ.ಸಿ.ಎಸ್.ಆರ್ ನಿಯಮ 28(ಸಿ) V ರನ್ವಯ ವಿಶೇಷವಾದ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶದ ಮೂಲಕ ಅನ್ಯತ ಉಪ ಸಂಬಂಧಿಸಿದನ್ನು ಒಟ್ಟು ವಿಶೇಷ ಅನುಮತಿ ಇಲ್ಲದೆ ಯಾವುದೇ ಸಂಭಾವನೆಯನ್ನು ಪಡೆಯುವಂತಿಲ್ಲ.<br><br>ಕೆ.ಸಿ.ಎಸ್.ಆರ್. ನಿಯಮ 28(ಎ) (ಬಿ) ಹಾಗೂ (ಇ)ಗಳನ್ವಯ ಸರ್ಕಾರಿ ನೌಕರರು ಕಛೇರಿ ಕರ್ತವ್ಯದ ಹೆಚ್ಚುಹೊತ್ತು ಕರ್ತವ್ಯ ನಿರ್ವಹಿಸುವುದು, ಹೊಣೆಗಾರಿಕೆಯಾಗಿರುವುದರಿಂದ ಯಾವುದೇ ಸಂಭಾವನೆಯನ್ನು ಪಡೆಯುವುದಕ್ಕೆ ಅವಕಾಶವಿಲ್ಲದಿರುವುದರಿಂದ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯಿದೆ ನಿಯಮ 2000ರ ನಿಯಮ 41(5)(6) ಮತ್ತು (7)ಗಳನ್ವಯ ಯಾವುದೇ ಆದೇಶಗಳು/ಆದ್ಯಾ ದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರ/ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯದೆ ಇರುವುದರಿಂದ, ಸದರಿ ನೌಕರರಿಗೆ **ಅನುಬಂಧ-86ರಲ್ಲಿ** | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ, ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳ ಪರೀಕ್ಷೆ ಕೇಂದ್ರಗಳಿಗೆ ಪಶ್ನೆ ಪತ್ರಿಕೆಗಳನ್ನು ಮತ್ತು ಉತ್ತರ ಪ್ರತಿಗಳನ್ನು ವಿತರಿಸುವ ಸಲುವಾಗಿ ನೌಕರರನ್ನು ನಿಯೋಜಿಸಲಾಗಿತ್ತು. ಈ ನೌಕರರು ಬೆಳಿಗ್ಗೆ 6.00 ಗಂಟೆಗೆ ಕೇಂದ್ರ ಸ್ಥಳ ಬಿಟ್ಟು ಹೊರಗಿನ ಸ್ಥಳಗಳಲ್ಲಿ ತಡರಾತ್ರಿಯ ವರೆಗೂ ಕಾರ್ಯನಿರ್ವಹಿಸಿ ಬರಬೇಕಾಗಿರುತ್ತದೆ. ಸಂಭಾವನೆ ನೀಡದಿದ್ದರೆ ಯಾವೊಬ್ಬ ನೌಕರರೂ ಪರೀಕ್ಷೆ ಕಾರ್ಯಕ್ಕೆ ಬರಲು ಒಂದಲ್ಲಾ ಒಂದು ಕಾರಣ ನೀಡಿ ತಪ್ಪಿಸಿಕೊಳ್ಳುತ್ತಾರೆ. ಹೀಗಾಗಿ ಸುಸೂತ್ರವಾಗಿ ನಡೆಸಬೇಕಾದ ಪರೀಕ್ಷೆ ಕಾರ್ಯಗಳಿಗೆ ಸಂಭಾವನೆ ಪಾವತಿಸದೇ ಅನ್ಯಮಾರ್ಗವಿಲ್ಲ. 2016-17ರ ನೇ ಸಾಲಿನ ಕರಡು ಲೆಕ್ಕಪರಿಶೋಧನಾ ವರದಿಯ ಮರು ಪರಿಶೀಲನೆ ಸಂದರ್ಭದಲ್ಲಿ ತಾವು ಸೂಚಿಸಿದಂತೆ ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ನಿರ್ದೇಶನ ಕೋರಲಾಗುವುದು.<br><br>ಆದ್ದರಿಂದ, ಪ್ರಸ್ತುತ ಪಾವತಿ ಮೊತ್ತ ರೂ.37,820.00ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| | |
|---|---|
| ವಿವರಿಸಲಾಗಿರುವ ವಿವರಗಳಂತೆ ಪಾವತಿಸಲಾಗಿರುವ ಒಟ್ಟು ಸಂಭಾವನೆಯ **ಮೊತ್ತ ರೂ.37,820/–ಗಳನ್ನು ವಸೂಲಿ** ಮಾಡಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | |
| **129. ಪಿ.ಹೆಚ್.ಡಿ ಕೋರ್ಸ್‌ವರ್ಕ್‌ಗಳಿಗೆ ಪ್ರಶ್ನೆಪತ್ರಿಕೆ ತಯಾರಿಕೆ, ತರಗತಿ ತೆಗೆದುಕೊಂಡಿರುವುದು ಹಾಗೂ ಸಂಶೋಧನಾ ಪ್ರಬಂಧವನ್ನು ಮೌಲ್ಯಮಾಪನ ಮಾಡಲು ಯು.ಜಿ.ಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ ಮೌಲ್ಯ ಮಾಪನ ಭತ್ಯೆಯನ್ನು ಪಾವತಿಸಿರುವುದು:– (ಪರೀಕ್ಷಾ ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ವಿಭಾಗಕ್ಕೆ ಸಂಶೋಧನಾರ್ಥಿಗಳನ್ನು ಆಯ್ಕೆ ಮಾಡಲು ಪ್ರವೇಶಾತಿ ಪರೀಕ್ಷೆ (ಪ್ರೀ.ಪಿ.ಹೆಚ್.ಡಿ ಪರೀಕ್ಷೆ) ಹಾಗೂ ಕೋರ್ಸ್‌ವರ್ಕ್ ಪರೀಕ್ಷೆಗಳ ಪ್ರಶ್ನೆಪತ್ರಿಕೆ ತಯಾರಿಕೆ, ಮೌಲ್ಯ ಮಾಪನ ಕಾರ್ಯಗಳಿಗೆ ಹಾಗೂ ಸಂಶೋಧನಾ ಪ್ರಬಂಧವನ್ನು ಮೌಲ್ಯಮಾಪನ ಮಾಡುವ ಪ್ರಾಧ್ಯಾಪಕರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದನ್ನು ಲೆಕ್ಕತಪಾಸಣೆಯಲ್ಲಿ ಪರಿಶೀಲಿಸಲಾಗಿ ಯು.ಜಿ.ಸಿ. ವೇತನ ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ ಯಾವುದೇ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆಯನ್ನು ನೀಡಲು/ಪಡೆಯಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆ ತಯಾರಿಕೆ, ಮೌಲ್ಯಮಾಪನ, ಕೋರ್ಸ್‌ವರ್ಕ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ತಯಾರಿಕೆ ಹಾಗೂ ಮೌಲ್ಯಮಾಪನ, ಸಂಶೋಧನಾ ಪ್ರಬಂಧಗಳ ಮೌಲ್ಯಮಾಪನ ಕಾರ್ಯಗಳಿಗೆ ರೂ.27,34,524/–ಗಳನ್ನು ಪಾವತಿಸಲಾಗಿದ್ದು ಯು.ಜಿ.ಸಿ.ಯ ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ. **ಅನುಬಂಧ–87ರಲ್ಲಿ** ವಿವಿಧ ಸಂಶೋಧನೆಗೆ ಸಂಬಂಧಿಸಿದ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆಯನ್ನು ಪಾವತಿಸಿರುವ ಪ್ರಾಧ್ಯಾಪಕರುಗಳಿಂದ **ರೂ.27,34,524/–ಗಳನ್ನು ವಸೂಲಾತಿ** ಮಾಡಿ ಪರೀಕ್ಷಾ ಖಾತೆಗೆ ಜಮೆ ಮಾಡುವಂತೆ ಸೂಚಿಸಿದೆ. | ಪಿ.ಹೆಚ್.ಡಿ ಕೋರ್ಸ್‌ವರ್ಕ್‌ಗಳಿಗೆ ಪ್ರಶ್ನೆಪತ್ರಿಕೆ ತಯಾರಿಕೆ, ತರಗತಿ ತೆಗೆದುಕೊಂಡಿರುವುದು ಹಾಗೂ ಸಂಶೋಧನಾ ಪ್ರಬಂಧವನ್ನು ಮೌಲ್ಯಮಾಪನ ಮಾಡಲು ಸಂಭಾವನೆ ನೀಡುವುದರ ಕುರಿತು ದಿನಾಂಕ 23–07–2015ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿರುವಂತೆ ಪಾವತಿಗಳನ್ನು ಮಾಡಲಾಗಿದೆ. ಸಿಂಡಿಕೇಟ್ ನಿರ್ಣಯದ ಪ್ರತಿಯನ್ನು ಲಗತ್ತಿಸಿದೆ. |
| **130. ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕರುಗಳಿಗೆ ಮೌಲ್ಯಮಾಪನಾ ಕಾರ್ಯಕ್ಕೆ ಪ್ರಯಾಣ ಭತ್ಯೆ, ದಿನಭತ್ಯೆ ಜೊತೆಗೆ ಸಂಭಾವನೆಯನ್ನು ನಿಯಮ ಬಾಹಿರವಾಗಿ ಪಾವತಿಸಿರುವುದು:– (ಪರೀಕ್ಷಾ ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಎಫ್ & ಆರ್ ಓಚರ್‌ಗಳನ್ನು ಪರಿಶೀಲಿಸಲಾಗಿ ಮೌಲ್ಯಮಾಪನ ಕಾರ್ಯಕ್ಕೆ ಹೊರ ಜಿಲ್ಲೆಗಳಿಗೆ ಬೋಧಕರುಗಳು ಪ್ರಯಾಣ ಮಾಡಿರುವ ಹಾಗೂ ಪ್ರವಾಸಗಳಲ್ಲಿ ತಂಗಿದ್ದ ಅವಧಿಗಳಿಗೆ ಕರ್ನಾಟಕ ಸರ್ಕಾರಿ ಆದೇಶ ಸಂಖ್ಯೆ:ಆಇ/3/ಸೇನಿಸೇ/2012 ಬೆಂಗಳೂರು, ದಿನಾಂಕ:14.06.2012ರ ಆದೇಶದನ್ವಯ ವೇತನ ಶ್ರೇಣಿಗಳಿಗೆ ಅನುಸಾರವಾಗಿ ತಂಗಿದ್ದ ಅವಧಿಗೆ ದಿನಭತ್ಯೆಯನ್ನು ನಿಗದಿಪಡಿಸಲಾಗಿರುವ ದರಗಳಿಗಿಂತ ಹೆಚ್ಚುವರಿಯಾಗಿ ಪಡೆದಿರುವುದು ಮತ್ತು ಪ್ರವಾಸಕ್ಕೆ ವಾಸ್ತವವಾಗಿ ಇರುವ ಬಸ್‌ದರಗಳಿಗಿಂತ ಹೆಚ್ಚುವರಿಯಾಗಿ ಬಸ್‌ದರಗಳನ್ನು ಪಡೆದಿರುವುದು ಲೆಕ್ಕತಪಾಸಣೆಯಲ್ಲಿ ಕಂಡುಬಂದಿರುತ್ತದೆ. ಈ ರೀತಿ ನಿಯಮಗಳನ್ನು ಉಲ್ಲಂಘಿಸಿ ಹೆಚ್ಚುವರಿ ದಿನಭತ್ಯೆ | ಮೈಸೂರು ವಿಶ್ವವಿದ್ಯಾನಿಲಯವು ನಡೆಸಿದ ಪರೀಕ್ಷೆ ಕಾರ್ಯಗಳಿಗೆ ದೂರ ಜಿಲ್ಲೆಗಳಿಂದ ನಿಯೋಜನೆಗೊಂಡ ಬೋಧಕರುಗಳಿಗೆ ಅವರ ವೇತನ ಶ್ರೇಣಿಗಳಿಗನುಸಾರ ನಿಗಧಿತ ದರಕ್ಕಿಂತ ಹೆಚ್ಚುವರಿಯಾಗಿ ದಿನ ಭತ್ಯೆ; ವಾಸ್ತವವಾಗಿ ಇರುವ ಬಸ್ ದರಗಳಿಗಿಂತ ಹೆಚ್ಚಿನ ಪ್ರವಾಸ ದರ ಪಾವತಿಸಿರುವ ಒಟ್ಟು ಮೊತ್ತ ರೂ.47,638.00ಗಳನ್ನು ಆಯಾ ನೌಕರರಿಂದ ವಸೂಲಿಸಿ; ಜಮಾ ಮಾಡಿ ಚಲನ್ ಪ್ರತಿಗಳೊಂದಿಗೆ ಉತ್ತರ ಸಲ್ಲಿಸುವಂತೆ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಸೂಚನೆ ನೀಡಲಾಗಿದೆ. |

| | |
|---|---|
| ಮತ್ತು ಪ್ರವಾಸ ಭತ್ಯೆಗಳನ್ನು ಪಡೆದಿರುವ ವಿವರಗಳನ್ನು **ಅನುಬಂಧ–88ರಲ್ಲಿ** ವಿವರಿಸಲಾಗಿದೆ. ವಿವರಗಳಲ್ಲಿ ಸೂಚಿಸಿರುವ ಹೆಚ್ಚುವರಿ ದಿನಭತ್ಯೆ ಮತ್ತು ಪ್ರವಾಸ ಭತ್ಯೆಯ ಒಟ್ಟು **ಮೊತ್ತ ರೂ.47,638/–ಗಳನ್ನು ವಸೂಲಿಸಿ** ಪರೀಕ್ಷಾಂಗ ಖಾತೆಗೆ ಜಮಾ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | ಸದರಿ ಮೊತ್ತವನ್ನು ವಸೂಲಿಸಿ ಜಮೆ ಮಾಡಿದ ನಂತರವೇ ಅಂತಿಮ ಉತ್ತರ ಸಲ್ಲಿಸಲಾಗುವುದು. |
| **131. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿದ ಯು.ಜಿ.ಸಿ ವೇತನ ಪಡೆಯುವ ಪ್ರಾಧ್ಯಾಪಕರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದು:– (ಪರೀಕ್ಷಾ ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆಯನ್ನು ಪಾವತಿಸಿರುವ ವೋಚರ್‌ಗಳನ್ನು ಪರಿಶೀಲಿಸಲಾಗಿ ಯು.ಜಿ.ಸಿ ವೇತನವನ್ನು ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ ಸ್ನಾತಕ, ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಿಕೆ, ಮೌಲ್ಯಮಾಪನ ಮತ್ತು ಇನ್ನಿತರ ಪರೀಕ್ಷಾ ಕಾರ್ಯಗಳಿಗೆ ಯಾವುದೇ ಸಂಭಾವನೆ ಪಡೆಯಲು ಅವಕಾಶ ಇರುವುದಿಲ್ಲ. ಆದರೆ 2014–15ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ, ಸ್ನಾತಕೋತ್ತರ, ಸಂಶೋಧನಾ ತರಗತಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲು ಯು.ಜಿ.ಸಿ ವೇತನವನ್ನು ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆ/ಭತ್ಯೆಗಳನ್ನು ನೀಡಲು ಅವಕಾಶವಿಲ್ಲದಿರುವುದರಿಂದ ಪ್ರಾಧ್ಯಾಪಕರುಗಳಿಗೆ **ಅನುಬಂಧ–89ರಲ್ಲಿ** ವಿವರಿಸಿರುವ ಒಟ್ಟು ಮೊತ್ತ **ರೂ.2,15,000/–ಗಳನ್ನು ವಸೂಲಿಸಿ** ವಿಶ್ವವಿದ್ಯಾನಿಲಯದ ಎಫ್ & ಆರ್ ಖಾತೆಗೆ ಜಮೆ ಮಾಡಲು ಸೂಚಿಸಿದೆ. | ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಡಿಓಅರ್ 95/ಪಿಹೆಚ್‌ಡಿ/ಇಇ14/2015–15 ದಿನಾಂಕ 1.8.2015 ರ ಅನ್ವಯದಂತೆ 2015–15ನೇ ಸಾಲಿನ ಪಿ.ಹೆಚ್.ಡಿ ಪ್ರವೇಶ ಪರೀಕ್ಷೆ ನಡೆಸುವ ಸಲುವಾಗಿ 73 ವಿಷಯಗಳಲ್ಲಿ ಪ್ರಶ್ನೆ ಪತ್ರಿಕೆಯನ್ನು ಸಿದ್ದ ಪಡಿಸಲು ರಾಜ್ಯದ ಹಾಗೂ ಹೊರ ರಾಜ್ಯದ 43 ಅಧ್ಯಾಪಕರುಗಳಿಗೆ ತಲಾ ರೂ.5,000.00ಗಳಂತೆ ಒಟ್ಟು ರೂ.2,15,000.00ಗಳ ಗೌರವ ಸಂಭಾವನೆಯನ್ನು ಪಾವತಿ ಮಾಡಲಾಗಿದೆ. ವಿಶ್ವವಿದ್ಯಾನಿಲಯದ ದಿನಾಂಕ 1.8.2015ರ ಆದೇಶದ ಪ್ರತಿಯನ್ನು ಲಗತ್ತಿಸಿದೆ. |
| **133. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಪದವಿ ಕಾಲೇಜುಗಳ ಪ್ರಾಧ್ಯಾಪಕರುಗಳಿಗೆ ಮಾರ್ಗದರ್ಶಕರ ಮಾನ್ಯತೆ ನೀಡಲು ದಾಖಲಾತಿ ಪರಿಶೀಲಿಸಿದ ಪರೀಕ್ಷಾಂಗ ಸಿಬ್ಬಂದಿಗಳಿಗೆ ಸಂಭಾವನೆ ನೀಡಿರುವುದು:– (ಪರೀಕ್ಷಾ ವಿಭಾಗ)**<br><br>2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಓಚರ್ ಸಂಖ್ಯೆ:2085/30.06.2015ರಲ್ಲಿ ಧನಾದೇಶ ಸಂಖ್ಯೆ:520892/10.07.2015ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸರ್ಕಾರಿ ಹಾಗೂ ಅನುಧಾನಿತ ಪದವಿ ಕಾಲೇಜುಗಳಲ್ಲಿ ಅರ್ಹ ಪ್ರಾಧ್ಯಾಪಕರುಗಳಿಗೆ ಮಾರ್ಗದರ್ಶಕರಾಗಿ ಮಾನ್ಯತೆ ನೀಡಲು ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ಅರ್ಜಿಗಳ ಪರಿಶೀಲನೆಗೆ ದಿನಾಂಕ:20.06.2015 ರಿಂದ 27.06.2015ರವರೆಗೆ ಪರೀಕ್ಷಾಂಗ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ರೂ.30,000/–ಗಳನ್ನು ಸಂಭಾವನೆಯಾಗಿ ಪಾವತಿಸಿರುವುದನ್ನು ಲೆಕ್ಕತಪಾಸಣೆಯಲ್ಲಿ ಪರಿಶೀಲಿಸಲಾಗಿದ್ದು, ಕೆ.ಸಿ.ಎಸ್.ಆರ್ ನಿಯಮ 28(ಎ), 28(ಬಿ), 28(ಸಿ) ಮತ್ತು 28(ಇ)ರನ್ವಯ ಈ ಕಾರ್ಯವು ಖಾಯಂ ನೌಕರರುಗಳ ದಿನನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಹಾಗೂ 28(ಸಿ) V ರನ್ವಯ ವಿಶೇಷ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶದ ಮೂಲಕ ಅನ್ಯಥಾ ಉಪಸಂಬಂಧಿಸಿದ್ದನ್ನು ಬಿಟ್ಟು ವಿಶೇಷ | ದಿನಾಂಕ 20.06.2015 ರಿಂದ ದಿನಾಂಕ 27.06.2015ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತಿದ್ದ ಅರ್ಹ ಪ್ರಾಧ್ಯಾಪಕರುಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಮಾರ್ಗದರ್ಶಕರ ಕೊರತೆ ಇದ್ದು ಇವರುಗಳಿಗೆ ಮಾರ್ಗದರ್ಶಕರ ಮಾನ್ಯತೆಯನ್ನು ನೀಡುವ ಸಂಬಂಧ ಸಂಶೋಧನಾ ವಿಭಾಗದ ಅಧಿಕಾರಿಗಳು/ಸಿಬ್ಬಂದಿಗಳು ದೈನಂದಿನ ಕೆಲಸದ ಜೊತೆಯಲ್ಲಿ ಹಾಗೂ ಕಛೇರಿ ವೇಳೆಯನ್ನು ಮೀರಿ ಕಾರ್ಯನಿರ್ವಹಿಸಿರುವುದರಿಂದ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಂಭಾವನೆಯನ್ನು ಪಾವತಿಸಿದೆ.<br>ಈ ಕಂಡಿಕೆಯಲ್ಲಿನ ಸೂಚನೆಯನ್ವಯ ಸರ್ಕಾರಕ್ಕೆ ಪತ್ರ ಬರೆದು ಇಂತಹ ಪಾವತಿಗಳ ಅನಿವಾರ್ಯತೆ ಕುರಿತು ಸರ್ಕಾರದ ಮಾರ್ಗದರ್ಶನ ಕೋರಲಾಗುವುದು. |

ಅನುಮತಿ ಇಲ್ಲದೆ ಯಾವುದೆ ಸಂಭಾವನೆಯನ್ನು ಪಡೆಯುವಂತಿಲ್ಲ ಹಾಗೂ 28(ಎ), (ಬಿ), (ಇ) ಗಳನ್ವಯ ಸರ್ಕಾರಿ ನೌಕರನು ಕಛೇರಿಯ ಕರ್ತವ್ಯದ ಹೆಚ್ಚು ಹೊತ್ತು ಕರ್ತವ್ಯ ನಿರ್ವಹಿಸುವುದು ಅವನ ಹೊಣೆಯಾಗಿರುವುದರಿಂದ ಯಾವುದೇ ಸಂಭಾವನೆಯನ್ನು ಹೆಚ್ಚು ಹೊತ್ತು ಕೆಲಸ ನಿರ್ವಹಿಸಿರುವುದಕ್ಕೆ ನೀಡಲು ಬರುವುದಿಲ್ಲ ಮತ್ತು ಯಾವುದೇ ಆಧ್ಯಾದೇಶಗಳು, ಆದೇಶಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41(6), 41(7) ಗಳನ್ವಯ ಸರ್ಕಾರ/ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯದೆ ವಿಶೇಷ ಭತ್ಯೆಗಳನ್ನು ಪಾವತಿಸಲು ಅವಕಾಶವಿಲ್ಲದಿರುವುದರಿಂದ ಈ ಕೆಳಕಂಡ ನೌಕರರುಗಳಿಗೆ ಪಾವತಿಸಿರುವ ಸಂಭಾವನೆಯನ್ನು ವಸೂಲಿಸಿ ಸಂಬಂಧಪಟ್ಟ ಖಾತೆಗೆ ಜಮೆ ಮಾಡಲು ಸೂಚಿಸಿದೆ.

| ಕ್ರ. ಸಂ | ಅಧಿಕಾರಿ/ನೌಕರರ ಹೆಸರು | ಹುದ್ದೆ | ವಸೂಲಿಸಬೇಕಾದ ಮೊತ್ತ |
|---|---|---|---|
| 1 | ಶ್ರೀ.ಎಂ.ಎಸ್. ಮಹೇಶ್ ಕುಮಾರ್ | ಉಪಕುಲಸಚಿವರು | 6000 |
| 2 | ಶ್ರೀ.ಕೆ.ಎನ್. ಮಂಜುನಾಥ | ಅಧೀಕ್ಷಕರು | 5000 |
| 3 | ಶ್ರೀಮತಿ. ವೀಣಾಕುಮಾರಿ.ಎಂ.ಬಿ | ಟಿ.ಸಿ.ಸಿ | 4000 |
| 4 | ಕುಮಾರಿ ಪುಶ್ಪಲ | ಎಸ್.ಡಿ.ಸಿ | 4000 |
| 5 | ಕು. ಆಶಾ.ಕೆ.ಬಿ | ಎಸ್.ಡಿ.ಸಿ | 4000 |
| 6 | ಶ್ರೀ ನಾಗೇಂದ್ರ.ಎಸ್ | ಎಸ್.ಡಿ.ಸಿ | 4000 |
| 7 | ಶ್ರೀ ರಾಘವೇಂದ್ರ.ಕೆ | ಎಸ್.ಡಿ.ಸಿ | 1000 |
| 8 | ಶ್ರೀ ವೆಂಕಟೇಶ್.ವಿ | ಸೇವಕ | 1000 |
| 9 | ಶ್ರೀ ಮಧುಸೂದನ್.ಎಸ್ | ಸೇವಕ | 1000 |
| | | **ಒಟ್ಟು ಮೊತ್ತ ರೂ.** | **30,000** |

ಈ ಮೇಲೆ ತಿಳಿಸಿರುವ ನೌಕರರುಗಳಿಂದ **ರೂ.30,000/–ಗಳನ್ನು ವಸೂಲಿಸಿ** ಪರೀಕ್ಷಾ ಖಾತೆಗೆ ಜಮೆಮಾಡಿ, ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ.

**134. ನವೆಂಬರ್/ಡಿಸೆಂಬರ್–2015ನೇ ಸಾಲಿನ ಸೆಮಿಸ್ಟರ್ ಪರೀಕ್ಷೆಗಳಿಗೆ ಉತ್ತರ ಪತ್ರಿಕೆಗಳನ್ನು ಸರಬರಾಜು ಮಾಡಿರುವಲ್ಲಿ ನ್ಯೂನತೆಗಳು:– (ಪರೀಕ್ಷಾ ವಿಭಾಗ)**

ಗುತ್ತಿಗೆದಾರರು :– ನವಕುಮಾರ್.ಆರ್. M/s Hitech Print System Ltd,

Flat No.93, Lokesh Nilaya $17^{th}$ B
Main hall II nd stage, Indira nagar
Bangalore-38

ಕಾರ್ಯಾದೇಶ:– Ex 1.7/stat/AB/2013-14/03.11.2015,

ಖಾಲಿ ಉತ್ತರ ಪತ್ರಿಕೆ ಒಂದಕ್ಕೆ 6 ರೂ. 65 ಪೈಸೆ,
ಒಪ್ಪಂದ ಕರಾರು ಪತ್ರದ ದಿನಾಂಕ:05.11.2015,
ಒಟ್ಟು ಒಪ್ಪಂದ – 32 ಲಕ್ಷ ಖಾಲಿ ಉತ್ತರ ಪತ್ರಿಕೆ (8 ಲಕ್ಷ ಸೆಮಿಸ್ಟರ್ ಒಂದಕ್ಕೆ)
ಧನಾದೇಶ ಸಂಖ್ಯೆ – 524183/26.04.16
ಬಿಲ್ಲಿನ ಮೊತ್ತ – 4775332
ಆದಾಯ ತೆರಿಗೆ – 112418
4887750 (8.00 ಲಕ್ಷ ಉತ್ತರ ಪತ್ರಿಕೆಗಳು)

ಸರಬರಾಜು ಮಾಡಿರುವುದು 8 ಲಕ್ಷ ಆದರೆ ಪಾವತಿಸಿರುವುದು 7,35,000 ಸಂಖ್ಯೆಗೆ 7,35,000x6.65=48,87,750/– (ಸರಬರಾಜುದಾರರಿಗೆ 46,43,362 + ಆದಾಯ ತೆರಿಗೆ 2,44,388) ಕಾರಣ ಸಿಂಡಿಕೇಟ್ ಸಭೆ 23.02.2016ರಂದು ನಡೆದಿದ್ದು ಈ ಸಭೆಯಲ್ಲಿ ವಿಷಯ ಸಂಖ್ಯೆ:2016/2.40 ವಿಷಯದ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ಮುಖಾಂತರ ಎಲ್ಲಾ ಪದವಿ ಪರೀಕ್ಷೆಗಳಿಗೆ ಬಾರ್‌ಕೋಡ್ ಹಾಗೂ ಓ.ಎಂ.ಆರ್. ಉತ್ತರ ಪತ್ರಿಕೆಗಳನ್ನು ಖರೀದಿಸಿರುವ ಬಗ್ಗೆ ಸಭೆ ನಿರ್ಣಯ ಕೈಗೊಂಡಿದ್ದು, ಕುಲಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯವರು ನೀಡಿರುವ ವರದಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಮಿತಿಯ ಅಗತ್ಯ ದಾಖಲೆಗಳೊಡನೆ ಗಮನಿಸಿರುವ ಲೋಪದೋಷಗಳನ್ನು ಪರಿಗಣಿಸಿದ ಸಿಂಡಿಕೇಟ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಲಿತಾಂಶ ನೀಡುವಾಗ ವ್ಯತ್ಯಾಸ ಅಥವಾ ವಿಳಂಬವಾಗುವುದರಿಂದ ಶ್ರೀನವಕುಮಾರ್.ಆರ್ (ಹೈಟೆಕ್ ಪ್ರಿಂಟರ್ ಸಿಸ್ಟಮ್ ಲಿ. ಬೆಂಗಳೂರು) ಇವರು ಇದುವರೆವಿಗೆ ಸರಬರಾಜು ಮಾಡಿರುವ ಬಾರ್‌ಕೋಡೆಡ್ ಓ.ಎಂ.ಆರ್. ಹಾಗೂ ಉತ್ತರ ಪತ್ರಿಕೆಗಳನ್ನು ವಿಶ್ವವಿದ್ಯಾನಿಲಯ ಬಳಸಿರುವುದಕ್ಕೆ ಮಾತ್ರ ಹಣ ಪಾವತಿಸಿ ಉಳಿದವುಗಳನ್ನು ಅವರಿಗೆ ಹಿಂದಿರುಗಿಸಲು ಮತ್ತು ವಿಶ್ವವಿದ್ಯಾನಿಲಯ ಇವರಿಗೆ ನೀಡಿರುವ ಕಾರ್ಯಾದೇಶಗಳನ್ನು ರದ್ದುಪಡಿಸಿ ನಿಯಮಾನುಸಾರ ಮುಂದಿನ ಕ್ರಮಕ್ಕೆಗೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿರುವುದರಿಂದ ಹೈಟೆಕ್ ಪ್ರಿಂಟರ್ಸ್

ನವೆಂಬರ್/ಡಿಸೆಂಬರ್ 2015 ರಲ್ಲಿ ನಡೆದ ಎಲ್ಲಾ ಪದವಿ ಪರೀಕ್ಷೆಗಳಿಗೆ ಒಟ್ಟು 8 ಲಕ್ಷ ಉತ್ತರ ಪತ್ರಿಕೆಗಳನ್ನು M/s Hitech Print System Ltd, ಬೆಂಗಳೂರು ಇವರು ಮುದ್ರಿಸಿ ಕೊಡಲು ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸದರಿ ಸಂಸ್ಥೆಯು 8 ಲಕ್ಷ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿತ್ತು. ಈ ಉತ್ತರ ಪತ್ರಿಕೆಗಳನ್ನು ಮುದ್ರಿಸುವಲ್ಲಿ ಅನೇಕ ಲೋಪದೋಶಗಳು ಕಂಡು ಬಂದಿದ್ದು ಈ ಪೈಕಿ ಈಗಾಗಲೇ ಉಪಯೋಗಿಸಲಾಗಿರುವ 7,35,000 ಉತ್ತರ ಪತ್ರಿಕೆಗಳಿಗೆ ಮಾತ್ರ ಹಣ ಪಾವತಿಸಿ ಉಳಿದವುಗಳನ್ನು ಹಿಂದಿರುಗಿಸುವಂತೆ ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಕ್ರಮ ವಹಿಸಿದೆ. ಹಾಗೂ ಈ ಸಂಸ್ಥೆಯ ಕರಾರು ಒಪ್ಪಂದವನ್ನು ರದ್ದು ಪಡಿಸಿಲಾಗಿದೆ. ಕೆ.ಟಿ.ಪಿ.ಪಿ ಆಕ್ಟ್ ಪ್ರಕಾರ 90 ದಿನಗಳು ಮಾತ್ರ ಇ.ಎಂ.ಡಿ ಹಣವನ್ನು ಇಟ್ಟುಕೊಳ್ಳಲು ಅವಕಾಶವಿರುವುದರಿಂದ ಇದನ್ನು ಮುಟ್ಟುಗೋಲು ಹಾಕಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಏಕೆಂದರೆ ಬಿಲ್ಲು ಪಾವತಿ ಮಾಡಲು 5 ತಿಂಗಳು ಆಗಿರುತ್ತದೆ.

ಸಿಸ್ಟಮ್ ಲಿ. ರವರು ಸರಬರಾಜು ಮಾಡಿರುವ ಖಾಲಿ ಉತ್ತರ ಪತ್ರಿಕೆಗಳಲ್ಲಿ ಲೋಪದೋಷ ಇದ್ದು, ಗುತ್ತಿಗೆ ಕರಾರು ನಿಯಮಗಳಿಗೆ ವಿರುದ್ಧವಾಗಿದ್ದು, ಸರಬರಾಜು ಮಾಡುವ ಕಾರ್ಯದಲ್ಲಿ ಸ್ಯಾಂಪಲ್ (Sample) ಉತ್ತರ ಪತ್ರಿಕೆಗಳು ಮಾತ್ರ ಸೂಕ್ತವಾಗಿದ್ದು, ನಂತರ ಸರಬರಾಜು ಮಾಡಿದ ಉತ್ತರ ಪತ್ರಿಕೆಗಳಲ್ಲಿ ಲೋಪದೋಷಗಳಿದ್ದು, ನಿಯಮಬಾಹಿರವಾಗಿ ಸರಬರಾಜು ಮಾಡಿರುತ್ತಾರೆ. ಒಟ್ಟು ಸರಬರಾಜು ಮಾಡಿರುವುದು 8,00,000 ಉತ್ತರ ಪತ್ರಿಕೆಗಳು. ಇದರಲ್ಲಿ 65,000 ಲೋಪದೋಷದಿಂದ ಕೂಡಿದ್ದು 7,35,000 ಉತ್ತರ ಪತ್ರಿಕೆಗಳಿಗೆ ಪಾವತಿ ಮಾಡಲಾಗಿರುತ್ತದೆ. ದೋಷಪೂರಿತ ಖಾಲಿ ಉತ್ತರ ಪತ್ರಿಕೆಗಳನ್ನು ದಾಸ್ತಾನಿಗೆ ತೆಗೆದುಕೊಂಡು ನಾಶಪಡಿಸಲು (Destroyed) ಕ್ರಮ ತೆಗೆದುಕೊಳ್ಳಲು ಸೂಚಿಸಿದೆ. ಹಾಗೂ ದೋಷಪೂರಿತವೆಂದು ತಿಳಿದಿದ್ದರೂ ಸಹ ಯಾವುದೇ ಕ್ರಮಕೈಗೊಳ್ಳದಿರುವುದರಿಂದ ಸಂಬಂಧಪಟ್ಟವರನ್ನು ನೇರ ಹೊಣೆಗಾರರನ್ನಾಗಿಸಿ 65000 x 6.65 = **4,32,250/–ಗಳನ್ನು ವಸೂಲಿಸಿ** ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಿ ವಿವರಗಳನ್ನು ಲೆಕ್ಕ ತಪಾಸಣೆಗೆ ಒದಗಿಸಲು ಸೂಚಿಸಿದೆ.

ಇದು ಒಂದು ಗಂಭೀರ ಆರೋಪವಾಗಿದ್ದು, ಮುದ್ರಣ ಒಪ್ಪಂದ ಕರಾರು ಪತ್ರದ ಷರತ್ತಿನನ್ವಯ Incase there are Inacuracies in respect of defective materials or mistaking in generating which accounts more than 1st of the total answer booklet in the work order is liable for cancellation in that event the UOM reserve to Right to forfeit for EMD/SD deposit by High tech system, Bangalore.

ಮೇಲ್ಕಂಡ ಷರತ್ತಿನನ್ವಯ ಲೋಪದೋಷವಿರುವಂತಹ ಖಾಲಿ ಉತ್ತರ ಪತ್ರಿಕೆಗಳನ್ನು ಸರಬರಾಜು ಮಾಡಿದ್ದಲ್ಲಿ ಸದರಿ ಗುತ್ತಿಗೆಯನ್ನು ರದ್ದುಗೊಳಿಸಿ ಗುತ್ತಿಗೆದಾರರು ಇಟ್ಟಿರುವ ಠೇವಣಿಯನ್ನು ಮೈಸೂರು ವಿಶ್ವವಿದ್ಯಾನಿಲಯ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ. ಆದ್ದರಿಂದ ಇ.ಎಂ.ಡಿ/ಎಸ್.ಡಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸೂಚಿಸಿದೆ.

ಈ ಮೇಲ್ಕಂಡ ವಿವರದನ್ವಯ ಗುತ್ತಿಗೆದಾರರು ಸರಬರಾಜು ಮಾಡಿರುವ ಉತ್ತರ ಪತ್ರಿಕೆಗಳು ಲೋಪದೋಷದಿಂದ ಕೂಡಿದ್ದು, ಗುತ್ತಿಗೆಕರಾರು ಅನ್ವಯ ಸದರಿ ಗುತ್ತಿಗೆಯನ್ನು ರದ್ದುಪಡಿಸಿ ಇಡುಗಂಟನ್ನು ಮುಟುಗೋಲು ಹಾಕಿಕೊಳ್ಳಬೇಕಾಗಿತ್ತು ಹಾಗೂ ಪಾವತಿಯನ್ನು ಮಾಡುವಂತಿರಲಿಲ್ಲ ಕರ್ನಾಟಕ ಸಂಹಿತೆ ಪಿ.ಡಬ್ಲ್ಯೂ.ಡಿ ನಿಯಮಾವಳಿ ಪ್ರಕಾರ ಸದರಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಬೇಕಾಗಿತ್ತು. ಆದರೆ ಮೈಸೂರು ವಿಶ್ವವಿದ್ಯಾನಿಲಯದಿಂದ ಗುತ್ತಿಗೆದಾರರು ಸರಬರಾಜು ಮಾಡಿರುವ 8 ಲಕ್ಷ ಖಾಲಿ ಉತ್ತರ ಪತ್ರಿಕೆಗಳಲ್ಲಿ

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸರಬರಾಜು ಮಾಡಿರುವುದು – 151800 ಸಂಖ್ಯೆ

ನೇರವಾಗಿ ಕಾಲೇಜುಗಳಿಗೆ ಸರಬರಾಜು ಮಾಡಿರುವುದು – 648200 ಸಂಖ್ಯೆ

| | |
|---|---|
| (ಕ್ರಮಾಂಕ AD100001 ರಿಂದ 900000)<br>ಗುತ್ತಿಗೆದಾರರಿಗೆ ಪಾವತಿಸಿರುವುದು (ಸಿಂಡಿಕೇಟ್ ಆದೇಶದ ಪ್ರಕಾರ) 7,35,000 ಪ್ರತಿಗಳಿಗೆ 6.65 ರಂತೆ ರೂ.48,87,750 ನ್ನು Hightech print system Ltd. ಗೆ ಪಾವತಿಸಿರುವುದು ನಿಯಮಬಾಹಿರವಾಗಿದ್ದು, ಇದು ಒಂದು ಗಂಭೀರ ಆರೋಪವಾಗಿರುತ್ತದೆ. | |
| **134(ಎ). ಉತ್ತರ ಪತ್ರಿಕೆಗಳನ್ನು ಕಾಲೇಜುಗಳಿಗೆ ಸರಬರಾಜು ಮಾಡುವಲ್ಲಿ ಬುಕ್‌ಲೆಟ್‌ಗಳು ಕಾಣೆಯಾಗಿರುವುದು :– (ಪರೀಕ್ಷಾ ವಿಭಾಗ)**<br><br>ಮದ್ದಾನೇಶ್ವರ ಜಿ.ಎಫ್.ಜಿ ಕಾಲೇಜು ಕಬ್ಬಹಳ್ಳಿಗೆ ಮಂಜೂರಾಗಿರುವುದು, 1000 ಉತ್ತರ ಪತ್ರಿಕೆಗಳು (ಕ್ರಮಾಂಕ 202001 ರಿಂದ 203000) ಆದರೆ ಕಾಲೇಜಿನಲ್ಲಿ ಸ್ವೀಕೃತಿಯಾಗಿರುವುದು 937 ಮಾತ್ರ ಈ ಕ್ರಮಾಂಕದಲ್ಲಿ 20242570 ರಿಂದ 202469 missing (43 ಬುಕ್‌ಲೆಟ್‌ಗಳು) ಕಾಣೆಯಾಗಿದೆ ಎಂದು ನಮೂದಿಸಿದ್ದು, 43 ಬುಕ್‌ಲೆಟ್‌ಗಳು ದಾಸ್ತಾನು ಲೆಕ್ಕದ ಬಗ್ಗೆ ಲೆಕ್ಕಪರಿಶೋಧನೆಗೆ ವಿವರ ಹಾಜರುಪಡಿಸಿಲ್ಲವಾದ್ದರಿಂದ 43x6.65=**286 ನ್ನು ವಸೂಲಾತಿಗೆ** ಸೂಚಿಸಿದೆ. ಹಾಗೂ 43 ಬುಕ್‌ಲೆಟ್‌ಗಳು ಏನಾಗಿದೆ ಎಂಬುದರ ಬಗ್ಗೆ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲ.<br>ಗುತ್ತಿಗೆದಾರರು ನೇರವಾಗಿ ಕಾಲೇಜುಗಳಿಗೆ ಖಾಲಿ ಉತ್ತರ ಪತ್ರಿಕೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕಾಲೇಜುಗಳಿಗೆ ಸರಬರಾಜು ಮಾಡಿದ್ದು, ಪರೀಕ್ಷೆಗಳು ಮುಗಿದ ನಂತರ ಬಾಕಿ ಉಳಿಕೆ ಖಾಲಿ ಉತ್ತರ ಪತ್ರಿಕೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದವರು ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ಯಾವುದೇ ಕ್ರಮಕೈಗೊಂಡಿಲ್ಲ, ಬಾಕಿ ಉಳಿಕೆ ಖಾಲಿ ಉತ್ತರ ಪತ್ರಿಕೆಗಳು ಕಾಲೇಜುಗಳ ವಶದಲ್ಲಿರುವುದರಿಂದ ಇದನ್ನು ದುರುಪಯೋಗ ಮಾಡಿಕೊಳ್ಳುವ ಸಂಭವ ಇರುತ್ತದೆ. ಈ ಬಗ್ಗೆ ಆಡಳಿತಾತ್ಮಕ ಕ್ರಮ ಅಗತ್ಯ. | ಶ್ರೀ ಮದ್ದಾನೇಶ್ವರ ಜಿ.ಎಫ್.ಜಿ ಕಾಲೇಜು ಕಬ್ಬಹಳ್ಳಿ ಇವರಿಗೆ ಕಡಿಮೆ ಸರಬರಾಜು ಮಾಡಲಾದ 43 ಉತ್ತರ ಪತ್ರಿಕೆಗಳ ಸಂಬಂಧ ಆ ಕಾಲೇಜಿನಿಂದ ದಾಸ್ತಾನು ವಹಿಯನ್ನು ತರಿಸಿ ಈ ಉತ್ತರ ಪತ್ರಿಕೆಗಳು ದುರುಪಯೋಗ ಆಗಿಲ್ಲದಿರುವ ಬಗ್ಗೆ ಪರಿಶೀಲಿಸಿ ಅವಶ್ಯಕ ಮಾಹಿತಿ ಒದಗಿಸುವಂತೆ ಪರೀಕ್ಷಾಂಗ ಶಾಖೆಗೆ ಸೂಚಿಸಲಾಗಿದೆ. |
| **135. ಖಾಲಿ ಅಂಕಪಟ್ಟಿ ಮುದ್ರಣ ಹಾಗೂ ಅಂಕಪಟ್ಟಿಯಲ್ಲಿ ವಿವರಗಳನ್ನು ಮುದ್ರಣ ಮಾಡುವಾಗಿನ ನ್ಯೂನತೆಗಳು:– (ಪರೀಕ್ಷಾ ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯ 2015–16ನೇ ಸಾಲಿನಲ್ಲಿ ಮೆ॥ ಮದ್ದಾಲ ಇಂಡಸ್ಟ್ರೀಸ್, ಗುಂಟೂರು, ಆಂದ್ರಪ್ರದೇಶ ಇಲ್ಲಿಂದ ಖಾಲಿ ಅಂಕಪಟ್ಟಿಗಳನ್ನು ಖರೀದಿಸಿ ಪರೀಕ್ಷಾ ಶಾಖೆಯಲ್ಲಿ ಕೆಳಕಂಡ ವಿವರದಂತೆ ದಾಸ್ತಾನು ಸ್ವೀಕೃತಿ ಹಾಗೂ ಖಾಲಿ ಅಂಕಪಟ್ಟಿಗಳನ್ನು ಐ.ಇ.ಎಂ ಸಂಸ್ಥೆಗೆ ವಿವರ ಮುದ್ರಿಸಿ ನೀಡಲು, | ದಾಸ್ತಾನು ಪುಸ್ತಕದ ಪುಟ ಸಂಖ್ಯೆ 79 ಮತ್ತು 80 ರಲ್ಲಿನ ಕ್ರಮಸಂಖ್ಯೆಗಳು ತಪ್ಪಾಗಿರುವುದನ್ನು ಲೆಕ್ಕ ಪರಿಶೋಧಕರು ಹಿಂದಿನ ಲೆಕ್ಕ ತನಿಖಾ ಸಮಯದಲ್ಲಿ ಗಮನಿಸಿದ ಸಂದರ್ಭದಲ್ಲಿ ಸಂಬಂಧಿಸಿದ ಕಾರ್ಯನಿರ್ವಾಹಕರು ಲೆಕ್ಕ ಪರಿಶೋಧಕರ ಸಲಹೆ ಪಡೆದು |

ನೀಡಿರುವ ವಿವರ ಕೆಳಕಂಡಂತೆ ಇದೆ.

| | | | |
|---|---|---|---|
| ಪ್ರಾರಂಭ ಶಿಲ್ಕು | 80,000 ಸಂಖ್ಯೆ | 2015-16ನೇ ಸಾಲಿನಲ್ಲಿ ನೀಡಿಕೆ ಮೈಸೂರು ವಿಶ್ವವಿದ್ಯಾನಿಲಯದ ಖಾಲಿ ಅಂಕಪಟ್ಟಿಗಳಲ್ಲಿ ಮುದ್ರಿಸಲು ಐ.ಇ.ಎಂ. ಸಂಸ್ಥೆಗೆ ನೀಡಿರುವುದು | 2,64,000 |
| ಖರೀದಿ (ಸ್ವೀಕೃತಿ) (ಮದ್ದಾಲ ಇಂಡಸ್ಟ್ರೀಲ್) | 300000 ಸಂಖ್ಯೆ | ಅಂತಿಮ ಶಿಲ್ಕು (ಪರೀಕ್ಷಾ ವಿಭಾಗದಲ್ಲಿ ಉಳಿಕೆ) | 1,16,000 |
| | **3,80,000** | | **3,80,000** |

ಮೇಲ್ಕಂಡ ವಿವರವನ್ನು ಪರೀಕ್ಷಾ ವಿಭಾಗದ ದಾಸ್ತಾನು ಪುಸ್ತಕದಲ್ಲಿ ಪರಿಶೀಲಿಸಲಾಗಿ ದಿನಾಂಕ:04.09.2015ರಲ್ಲಿ ಅಂಕಪಟ್ಟಿ ಕ್ರ.ಸಂ.480001 ರಿಂದ 5,10,000ರವರೆಗೆ 30,000 ಸಂಖ್ಯೆ ಖಾಲಿ ಅಂಕಪಟ್ಟಿಯನ್ನು ಐ.ಇ.ಎಂ ಸಂಸ್ಥೆಗೆ ನೀಡಿದ್ದು, ದಿನಾಂಕ:14.09.2015ರಲ್ಲಿ 509001 ರಿಂದ 519000ರವರೆಗೆ 10000 ಸಂಖ್ಯೆ ಖಾಲಿ ಅಂಕಪಟ್ಟಿಗಳನ್ನು ಐ.ಇ.ಎಂ ಸಂಸ್ಥೆಗೆ ನೀಡಲಾಗಿದೆ ಎಂದು ದಾಸ್ತಾನು ಪುಸ್ತಕದಲ್ಲಿ ನಮೂದಿಸಲಾಗಿದೆ. ಇದು ಹೇಗೆ ಸಾಧ್ಯ? ಈಗಾಗಲೇ ದಿ:04.09.2015ರಲ್ಲಿ ನೀಡಲಾಗಿರುವ ಖಾಲಿ ಅಂಕಪಟ್ಟಿಯ ಕ್ರಮ ಸಂಖ್ಯೆಯಲ್ಲಿ ಇದು ಸೇರಿರುತ್ತದೆ ಇದರಿಂದಾಗಿ ಒಟ್ಟು 1000 ಖಾಲಿ ಅಂಕಪಟ್ಟಿಗಳು ದಾಸ್ತಾನು ನೀಡಿಕೆ ಬಗ್ಗೆ ಲೆಕ್ಕ ತಾಳೆಹೊಂದುವುದಿಲ್ಲ ಇದರಿಂದ 1000 ಖಾಲಿ ಅಂಕಪಟ್ಟಿಗಳು ದುರುಪಯೋಗವಾಗಿರುವ ಸಂಭವವಿರುತ್ತದೆ. ಆದ್ದರಿಂದ 34x1000=34000 ಅನ್ನು ವಸೂಲಿಗೆ ಸೂಚಿಸಲಾಗಿದೆ. ಹಾಗೂ ಈ ಸಂಖ್ಯೆಗಳನ್ನು ಹೊಂದಿರುವ ಖಾಲಿ ಅಂಕಪಟ್ಟಿಗಳು ಎರಡೆರಡು ಬಾರಿ ಮುದ್ರಣಗೊಂಡಿವೆಯೇ ಎಂಬ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಿದೆ.

ಪರೀಕ್ಷಾ ವಿಭಾಗದಿಂದ ಐ.ಇ.ಎಂ ಸಂಸ್ಥೆಯವರು ಖಾಲಿ ಅಂಕಪಟ್ಟಿಯನ್ನು ಕೆಳಕಂಡ ವಿವರದನ್ವಯ ಪಡೆದಿದ್ದು ಸದರಿ ವಿವರವನ್ನು ದಾಖಲಾತಿಗಳೊಡನೆ ಪರಿಶೀಲಿಸಲಾಗಿ, ಈ ಪರಿಶೀಲನೆಯಲ್ಲಿ ಲೆಕ್ಕತಪಾಸಣಾ ವಿಚಾರಣೆ ಸಂಖ್ಯೆ:20/16.02.2018ರಲ್ಲಿ ನೀಡಲಾಗಿ ಅಂಕಪಟ್ಟಿ ಮುದ್ರಣ ಕಾರ್ಯದಲ್ಲಿ ಐ.ಇ.ಎಂ ಸಂಸ್ಥೆಯಲ್ಲಿ ಮುದ್ರಣವಾಗಿರುವ ಅಂಕಪಟ್ಟಿ ಹಾನಿಯಾಗಿರುವ ಅಂಕಪಟ್ಟಿ (Damaged) ವಿವರಗಳನ್ನು ಸಲ್ಲಿಸಲು ಸೂಚಿಸಿ ವಿಚಾರಣೆ ಪತ್ರ ನೀಡಲಾಗಿತ್ತು, ನೀಡಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಕೆಳಕಂಡ ವಿವರದಂತೆ ದಾಖಲಾತಿ ನೀಡಲಾಗಿದೆ.

ಕ್ರಮಸಂಖ್ಯೆಗಳ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳಲಾಗಿದೆ. ಹಾಗೂ ದಾಸ್ತಾನು ಪುಸ್ತಕದ ಪ್ರಕಾರ ಪಟ್ಟಿಯನ್ನು ತಯಾರಿಸಿ ಸಲ್ಲಿಸಲಾಗಿತ್ತು.

ದಾಸ್ತಾನು ವಹಿಯ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಆಕ್ಷೇಪಿಸಿರುವ ಮೊತ್ತ ರೂ1,29,506/-ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

| 2015–16ನೇ ಸಾಲು | | | | |
|---|---|---|---|---|
| **ಖಾಲಿ ಅಂಕಪಟ್ಟಿಗಳ ಕ್ರಮಾಂಕ** | **ಖಾಲಿ ಅಂಕಪಟ್ಟಿ ಸ್ವೀಕೃತಿ** | **ಅಂಕಪಟ್ಟಿ ಮುದ್ರಣ** | **ಅಂಕಪಟ್ಟಿ ಹಾನಿಯಾಗಿರುವುದು** | **ಷರಾ** |
| BBA396001 to BBA538000 | 1,42,000 | 1,40,080 | 1,920 | |
| BBA538001 to BBA675000 | 1,38,000 | 1,36,111 | 1,889 | |
| | 2,80,000 | 2,76,191 | 3,809 | |

2,80,000 ಅಂಕಪಟ್ಟಿ ಮುದ್ರಣದಲ್ಲಿ 276191 ಅಂಕಪಟ್ಟಿಗಳು ಐ.ಇ.ಎಂ. ಸಂಸ್ಥೆಯಲ್ಲಿ ಮುದ್ರಣವಾಗಿದ್ದು, 3809 ಅಂಕಪಟ್ಟಿ ಹಾನಿಗೊಳಗಾಗಿದೆ ಎಂದು (Damaged) ನಮೂದಿಸಿರುತ್ತಾರೆ. ಸದರಿ ಹಾನಿಗೊಳಗಾದ ಅಂಕಪಟ್ಟಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲವಾದ್ದರಿಂದ 3809x34 **ರೂ.1,29,506/–ನ್ನು ವಸೂಲಿ ಮಾಡಲು ಸೂಚಿಸಿದೆ.**

ಮುಂದುವರೆದು 276191 ಅಂಕಪಟ್ಟಿಗಳು ಐ.ಇ.ಎಂ ಸಂಸ್ಥೆಯಿಂದ ಮುದ್ರಣಗೊಂಡು ಪರೀಕ್ಷಾ ವಿಭಾಗದಲ್ಲಿ ಸ್ವೀಕೃತಿ ಮಾಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಸದರಿ ಅಂಕಪಟ್ಟಿಗಳನ್ನು ಸಂಬಂಧಿಸಿದ ಕಾಲೇಜುಗಳಿಗೆ ರವಾನೆ ಮಾಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲವಾದ್ದರಿಂದ ಕೂಡಲೆ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದೆ.

**136. ಖಾಲಿ ಪದವಿ ಪ್ರಮಾಣ ಪತ್ರ ಹಾಗೂ ಖಾಲಿ ಪದವಿ ಪ್ರಮಾಣ ಪತ್ರದಲ್ಲಿ ವಿವರ ತುಂಬುವಿಕೆ, ರವಾನೆ ಬಗ್ಗೆ ನ್ಯೂನತೆ ಕುರಿತು:– (ಪರೀಕ್ಷಾ ವಿಭಾಗ)**

ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನಲ್ಲಿ ಮೆ॥ ಮದ್ದಾಲ ಇಂಡಸ್ಟ್ರೀಸ್, ಗುಂಟೂರು ಆಂಧ್ರಪ್ರದೇಶ ಇಲ್ಲಿ ಖಾಲಿ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಿ ಪರೀಕ್ಷಾ ವಿಭಾಗದಲ್ಲಿ ಕೆಳಕಂಡ ವಿವರದಂತೆ ದಾಸ್ತಾನು ಸ್ವೀಕೃತಿ ಹಾಗೂ ಖಾಲಿ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವ ಶಾಖೆಗೆ ದಾಸ್ತಾನು ನೀಡಿಕೆ ವಿವರಗಳನ್ನು **ಅನುಬಂಧ–90ರಲ್ಲಿ** ನೀಡಲಾಗಿದೆ, ಕೆಳಗಿನಂತೆ ಸಂಕ್ಷಿಪ್ತ ವಿವರಣೆ ನೀಡಲಾಗಿದೆ.

ದಿನಾಂಕ 17.09.2014 ರಂದು ಇನ್‌ವಾಯ್ಸ್ ಸಂಖ್ಯೆ 696ರ ಪ್ರಕಾರವಾಗಿ 5 ಬಾಕ್ಸ್‌ಗಳು ಸ್ವೀಕೃತವಾಗಿದ್ದು; ದಾಸ್ತಾನು ಪಡೆಯುವ ಸಂದರ್ಭದಲ್ಲಿ 5 ಬಾಕ್ಸ್‌ಗಳ ಪೈಕಿ 1 ಪುಸ್ತಕದಲ್ಲಿ 1500 ಪ್ರಮಾಣ ಪತ್ರಗಳು ಇದ್ದುದು ಕಂಡುಬಂದಿದೆ. ಇದ್ದ ಒಟ್ಟು 5 ಬಾಕ್ಸ್‌ಗಳಲ್ಲಿನ ಒಟ್ಟು 500 ಪದವಿ ಪ್ರಮಾಣ ಪತ್ರಗಳಿವೆ ಎಂಬುದಾಗಿ ಇದನ್ನು ದಾಸ್ತಾನು ಪುಸ್ತಕದ ಪುಟ 12 ಮತ್ತು 13ರಲ್ಲಿ ನಮೂದಿಸಲಾಗಿತ್ತು. ಮತ್ತು ದಿನಾಂಕ 7.11.2014 ರಂದು ಒಟ್ಟು 9500

| ಪರೀಕ್ಷಾ ಶಾಖೆಯಲ್ಲಿ ಸ್ವೀಕೃತಿ | | ಪರೀಕ್ಷಾ ಶಾಖೆಯಿಂದ ಘಟಿಕೋತ್ಸವ ಶಾಖೆಗೆ ನೀಡಿರುವುದು | |
|---|---|---|---|
| ಪ್ರಾರಂಭ ಶಿಲ್ಕು | 11,600 ಸಂಖ್ಯೆ | ಘಟಿಕೋತ್ಸವ ಶಾಖೆಗೆ ನೀಡಿಕೆ | 28,100 ಸಂಖ್ಯೆ |
| ಸ್ವೀಕೃತಿ | 30,000 ಸಂಖ್ಯೆ | ಅಂತಿಮ ಶಿಲ್ಕು | 13,500 ಸಂಖ್ಯೆ |
| | **41,600 ಸಂಖ್ಯೆ** | | **41,600 ಸಂಖ್ಯೆ** |

ಖಾಲಿ ಪದವಿ ಪ್ರಮಾಣ ಪತ್ರ ದಾಸ್ತಾನು ಪುಸ್ತಕದಲ್ಲಿ ಪುಟ ಸಂಖ್ಯೆ:12ರಲ್ಲಿ ದಿನಾಂಕ:07.11.2014ರಂದು 9500 ಪ್ರಮಾಣ ಪತ್ರ (ಸಂಖ್ಯೆ:25501 ರಿಂದ 35000) ನೀಡಿಕೆಯಾಗಿದ್ದು, 2015–16ನೇ ಸಾಲಿನಲ್ಲಿ ಆರಂಭ ಶಿಲ್ಕು 11600 ಹಾಗೂ ಹೊಸದಾಗಿ 30000 ಖಾಲಿ ಪದವಿ ಪ್ರಮಾಣ ಪತ್ರಗಳು, ಪರೀಕ್ಷಾ ವಿಭಾಗದಲ್ಲಿ ಸ್ವೀಕೃತಿಯಾಗಿದ್ದು ಒಟ್ಟು ಶಿಲ್ಕು 41600 ಇದರಲ್ಲಿ 2015–16ನೇ ಇಸವಿಯ ಘಟಿಕೋತ್ಸವ ಶಾಖೆಗೆ 28,100 ನೀಡಿಕೆಯಾಗಿರುತ್ತದೆ. ಆದರೆ ಪರೀಕ್ಷಾ ವಿಭಾಗದ ದಾಸ್ತಾನು ಪುಸ್ತಕದಲ್ಲಿ ಅಂತಿಮ ಶಿಲ್ಕು 14000 ಇರುತ್ತದೆ. ವಾಸ್ತವವಾಗಿ 13500 ಇರಬೇಕಾದಲ್ಲಿ 14000 ಇರಲು ಹೇಗೆ ಸಾಧ್ಯ ಹಾಗೂ ದಿನಾಂಕ:27.04.2015ರಂದು ಅಂತಿಮ ಶಿಲ್ಕು 1500 ಇದ್ದರೂ ಪವನ್‌ಕುಮಾರ್, ಪ್ರಥಮ ದರ್ಜೆ ಸಹಾಯಕರು, ಇವರಿಗೆ 2000 ಖಾಲಿ ಪದವಿ ಪ್ರಮಾಣ ಪತ್ರ ನೀಡಲಾಗಿದೆ ಎಂದು ದಾಖಲಿಸಿದೆ ಇದು ಹೇಗೆ ಸಾಧ್ಯ ಎಂಬುದಕ್ಕೆ ಯಾವುದೇ ಕಾರಣವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

2015–16ರಲ್ಲಿ ಪರೀಕ್ಷಾ ವಿಭಾಗದಿಂದ ಘಟಿಕೋತ್ಸವ ಶಾಖೆಗೆ ಒಟ್ಟು 28100 ಖಾಲಿ ಪದವಿ ಪ್ರಮಾಣ ಪತ್ರಗಳನ್ನು ನೀಡಿದ್ದು ಘಟಿಕೋತ್ಸವ ಶಾಖೆಯಲ್ಲಿ 28100 ಖಾಲಿ ಪದವಿ ಪ್ರಮಾಣ ಪತ್ರಗಳನ್ನು ಸ್ವೀಕರಿಸಿರುವುದರ ಬಗ್ಗೆ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:20/16.02.2018 ಮತ್ತು 13/12.02.2018 ನ್ನು ನೀಡಿ ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಿ ನೀಡಿದಾಗ್ಯೂ ಸಹ ಯಾವುದೇ ದಾಸ್ತಾನು ಸ್ವೀಕೃತಿ ಹಾಗೂ ರವಾನೆ ಮಾಡಿರುವ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದು ಒಂದು ಗಂಭೀರ ಲೋಪವಾಗಿರುತ್ತದೆ. ಬಹುಮುಖ್ಯವಾದ ಪದವಿ ಪ್ರಮಾಣ ಪತ್ರಗಳನ್ನು ಒಂದು ಶಾಖೆಯಲ್ಲಿ ಸ್ವೀಕೃತಿ ಲೆಕ್ಕಕ್ಕೆ ತೆಗೆದುಕೊಳ್ಳದೆ ಹಾಗೂ ರವಾನೆ (Despatch) ವಿವರ ನೀಡದೆ ಪದವಿ ಪ್ರಮಾಣ ಪತ್ರಗಳ ಭರ್ತಿ ಮಾಡುವಾಗ ಹಾನಿಗೊಳಗಾದ ಪದವಿ ಪ್ರಮಾಣ ಪತ್ರಗಳ ಲೆಕ್ಕವನ್ನು ಸಹ ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲವಾದ್ದರಿಂದ ಇದು ಒಂದು ಗಂಭೀರ ಕರ್ತವ್ಯ ಲೋಪವಾಗಿದ್ದು, ಈ ಪದವಿ ಪ್ರಮಾಣ ಪತ್ರಗಳು ದುರುಪಯೋಗವಾಗಿದ್ದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಘನತೆಗೆ ಕುಂದುತರುವಂತಹ

ಪ್ರಮಾಣ ಪತ್ರಗಳು ಬಂದಿರುತ್ತವೆ. ಹಿಂದೆ ಕಳುಹಿಸಲಾಗಿದ್ದ 5 ಬಾಕ್ಸ್‌ಗಳ ಕ್ರಮ ಸಂಖ್ಯೆಗಳನ್ನು ನಮೂದಿಸದ ಕಾರಣ ಲೆಕ್ಕದಲ್ಲಿ ವ್ಯತ್ಯಾಸವಾಗಿರುತ್ತದೆ. ಲೆಕ್ಕ ತನಿಖಾ ಸಮಯದಲ್ಲಿ ಕಾರ್ಯ ನಿರ್ವಾಹಕರು ಈ ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ನಿರ್ವಹಿಸಿರುತ್ತಾರೆ. ಈಗ ದಾಸ್ತಾನು ಮತ್ತು ವಿತರಣಾ ಲೆಕ್ಕದಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ಈ ಸಂಬಂಧ ದಾಸ್ತಾನು ಮತ್ತು ವಿತರಣಾ ವಹಿಯ ಪ್ರಕಾರವಾಗಿ ಒಂದು ತಃಖ್ತೆ ತಯಾರಿಸಿ ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗಿತ್ತು ಆದಾಗ್ಯೂ ದಾಸ್ತಾನು ಮತ್ತು ವಿತರಣಾ ವಹಿಯ ಜೆರಾಕ್ಸ್ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ರೂ.9,83,500ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

| | |
|---|---|
| ಕೆಲಸವಾಗಿರುತ್ತದೆ. ಇದು ಘಟಿಕೋತ್ಸವ ಶಾಖೆಯ ಸಿಬ್ಬಂದಿವರ್ಗದವರ ಕರ್ತವ್ಯ ನಿರ್ಲಕ್ಷತೆಯನ್ನು ತೋರಿಸುತ್ತದೆ. ಪದವಿ ಪ್ರಮಾಣ ಪತ್ರಗಳ ಸ್ವೀಕೃತಿ ದಾಸ್ತಾನು ರವಾನೆ ವಿವರಗಳು ಹಾಜರುಪಡಿಸಿಲ್ಲವಾದ್ದರಿಂದ ಪಾವತಿಸಿರುವ ಹಣ ರೂ.(28100x35=) **9,83,500/–ನ್ನು ಆಕ್ಷೇಪಿಸಲಾಗಿದೆ.** ವಿವರಗಳನ್ನು **ಅನುಬಂಧ–90ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | |
| **137. ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕ ಕಾಯಿದೆ 2000ರ ನಿಯಮ 4 (ಜಿ) ಅಡಿಯಲ್ಲಿ ವಿನಾಯಿತಿ ಪಡೆದಿರುವ ವಿವರಗಳನ್ನು ಹಾಜರುಪಡಿಸದಿರುವುದು :– (ಯುವರಾಜ ಕಾಲೇಜು)**<br><br>ಯುವರಾಜ ಕಾಲೇಜಿನ ವಿವಿಧ ವಿಭಾಗಗಳಲ್ಲಿ ಪರೀಕ್ಷಾ ಕಾರ್ಯ ಕೈಗೊಳ್ಳಲು ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಲು ಮೆ॥ಮಣಿಪಾಲ್ ಪ್ರಿಂಟಿಂಗ್ ಅಂಡ್ ಟೆಕ್ನಾಲಜಿ, ಮಣಿಪಾಲ್ ಇವರಿಗೆ ಪಾವತಿ ಮಾಡಿರುವ ವಿವರ ಈ ಕೆಳಗಿನಂತಿದೆ.<br><br>1. ಧನಾದೇಶ ಸಂಖ್ಯೆ: 207944/28.12.2015 — ರೂ.1,42,337/–<br>2. ದಿನಾಂಕ: 29.06.2015 — ರೂ.1,78,333/–<br>3. ದಿನಾಂಕ: 11.12.2015 — ರೂ.54,131/–<br>**ಒಟ್ಟು ಮೊತ್ತ — ರೂ. 3,74,801/–**<br><br>ಆದರೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಕಾಯಿದೆ 1999–2000ರ ನಿಯಮ 4(ಜಿ) ಅಡಿಯಲ್ಲಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿಯನ್ನು ದಿನಾಂಕ:19.08.2003ರ ಅಧಿಸೂಚನೆ ಸಂಖ್ಯೆ:ಪಿ.ಡಬ್ಲ್ಯೂಡಿ/433/ಎಫ್‌ಸಿ/3/2003/19.08.2003, ಬೆಂಗಳೂರು ರವರ ಅಧಿಸೂಚನೆಯ ಅನ್ವಯ ಪ್ರಶ್ನೆಪತ್ರಿಕೆ ತಯಾರಿಕೆ ಮತ್ತು ಮುದ್ರಣದ ಗೌಪ್ಯತೆ ಕಾಪಾಡಿಕೊಳ್ಳಬೇಕಾಗಿರುವುದರಿಂದ ನಿಯಮ 4(ಜಿ) ಅನ್ವಯ ಟೆಂಡರ್ ಪ್ರಕ್ರಿಯೆಯ ವಿನಾಯಿತಿಯನ್ನು ನೀಡಿರುವುದು ಸರಿಯಷ್ಟೆ. ಆದರೆ ಸರ್ಕಾರದ ಅಧಿಸೂಚನೆಯಲ್ಲಿ ವಿನಾಯತಿಯು ಯಾವ ಆರ್ಥಿಕ ವರ್ಷಗಳವರೆಗೆ ಈ ವಿನಾಯಿತಿಯು ಚಾಲ್ತಿಯಲ್ಲಿರುತ್ತದೆ ಎಂಬುದರ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರು/ಪರೀಕ್ಷಾ ನಿಯಂತ್ರಕರು, ಯುವರಾಜ ಕಾಲೇಜು ರವರು ಪತ್ರ ವ್ಯವಹಾರ ಮಾಡಿ ಸ್ಪಷ್ಟೀಕರಣವನ್ನು ಪಡೆಯದೆ, 2003–04ನೇ ಸಾಲಿನಿಂದ 2015–16ನೇ ಸಾಲುಗಳವರೆಗೂ ಮೆ॥ ಮಣಿಪಾಲ್ ಪ್ರಿಂಟಿಂಗ್ ಮತ್ತು ಟೆಕ್ನಾಲಜಿ | ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕ ಕಾಯಿದೆ 2000ರ ನಿಯಮ 4 (ಜಿ) ಅಡಿಯಲ್ಲಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿಯನ್ನು ದಿನಾಂಕ 19.08.2006ರ ಅಧಿಸೂಚನೆ **ಸಂಖ್ಯೆ:ಪಿ.**ಡಬ್ಲ್ಯೂಡಿ/433/ಎಫ್‌ಸಿ/3/2003/19.08.2003, ಬೆಂಗಳೂರು ರವರ ಅಧಿಸೂಚನೆ ಅನ್ವಯ ಪ್ರಶ್ನೆ ಪತ್ರಿಕೆ ತಯಾರಿಕೆ ಮತ್ತು ಮುದ್ರಣದ ಗೌಪ್ಯತೆ ಕಾಪಾಡಿಕೊಳ್ಳಬೇಕಾಗಿರುವುದರಿಂದ ನಿಯಮ 4(ಜಿ) ಟೆಂಡರ್ ಪ್ರಕ್ರಿಯೆಯ ವಿನಾಯಿತಿಯನ್ನು ನೀಡಿರುವುದು ಸರಿಯಷ್ಟೆ.. ಈ ಆದೇಶದಲ್ಲಿ ದಿನಾಂಕವನ್ನು ತಿಳಿಸದೆ ಇರುವ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಬಂದಿರುತ್ತೇವೆ. ಇನ್ನು ಮುಂದೆ ಸರ್ಕಾರದಿಂದ ಅನುಮತಿ ಪಡೆದು ಪ್ರತಿ ವರ್ಷವು ದರ ನಿಗದಿಗೊಳಿಸಿ ಪ್ರತಿ ವರ್ಷವು ವಿನಾಯಿತಿಯನ್ನು ನವೀಕರಿಸಿ ಮುದ್ರಣ ಕೆಲಸವನ್ನು ಕೈಗೊಳ್ಳಲಾಗುವುದು.<br><br>ಪರೀಕ್ಷಾ ಕಾರ್ಯದ ಗೌಪ್ಯತೆ ಕಾಪಾಡುವ ಉದ್ದೇಶದಿಂದ ವಿಶ್ವವಿದ್ಯಾನಿಲಯದ ಕ್ರಮವನ್ನು ಅನುಸರಿಸಲಾಗಿತ್ತು. ಆದ್ದರಿಂದ ಸದರಿ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಲಾಗಿದೆ. |

| | |
|---|---|
| ರವರು ಕೋರುವ ಪ್ರಿಂಟಿಂಗ್ ದರಗಳಲ್ಲೇ ಪಾವತಿ ಮಾಡಲಾಗುತ್ತಿದ್ದು, ದರ ನಿಗಧಿಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಲೆಕ್ಕ ತನಿಖೆಯಲ್ಲಿ ಗಮನಿಸಲಾಗಿದ್ದು, ಈ ಪ್ರಕ್ರಿಯೆಯಿಂದ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ. ಆದ್ದರಿಂದ ಪ್ರಶ್ನೆ ಪತ್ರಿಕೆಗಳ ಮುದ್ರಣವನ್ನು ಮಾಡಿಸುವ ಪೂರ್ವಾನ್ವಯವಾಗಿ ಸೂಕ್ತ ಆದೇಶವನ್ನು ಪಡೆದು ನಂತರ ದರ ನಿಗಧಿಯನ್ನು ಸಂಬಂಧಪಟ್ಟ ಮುದ್ರಣ ಸಂಸ್ಥೆಯವರ ಜೊತೆ ದರ ನಿಗದಿಯ ಬಗ್ಗೆ ಸಂಧಾನ ಪ್ರಕ್ರಿಯೆ ಕೈಗೊಂಡು ದರ ನಿಗದಿ ಮಾಡಿಕೊಂಡು ಮುದ್ರಣ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ. ಆದರೆ ಸರ್ಕಾರದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ನಿಯಮ 1999–2000ರ ನಿಯಮ 4(ಜಿ) ಅಡಿಯಲ್ಲಿ ಪ್ರತಿ ವರ್ಷವೂ ವಿನಾಯಿತಿಯನ್ನು ನವೀಕರಿಸಿ ತದನಂತರ ದರ ನಿಗದಿಯ ಸಂಧಾನ ನಡೆಸಿ, ಪ್ರಶ್ನೆ ಪತ್ರಿಕೆಗಳನ್ನು ಮುದ್ರಣ ಮಾಡಿಸದೇ ಇರುವುದರಿಂದ **ರೂ.3,74,801/–ಗಳನ್ನು ಆಕ್ಷೇಪಿಸಲಾಗಿದೆ.** | |
| **<u>138. ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಖಾಯಂ ಬೋಧಕೇತರ ನೌಕರರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದು :– (ಯುವರಾಜ ಕಾಲೇಜು)</u>**<br><br>2015–16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಎಫ್&ಆರ್ ಖಾತೆಯ ಓಚರ್‌ಗಳನ್ನು ಪರಿಶೀಲಿಸಲಾಗಿ ವಿವಿಧ ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಖಾಯಂ ಬೋಧಕೇತರ ನೌಕರರು (ನಾನ್ ಟೀಚಿಂಗ್ ಸ್ಟಾಫ್)ಗಳಿಗೆ ಸಂಭಾವನೆಯನ್ನು ಪಾವತಿಸಿರುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿದ್ದು, ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ) ಮತ್ತು (ಇ) ಗಳ ಅನ್ವಯ ಪರೀಕ್ಷಾಂಗ ಕರ್ತವ್ಯವು ಯುವರಾಜ ಕಾಲೇಜಿನ ನೌಕರರ ದಿನನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ ನಿಯಮಾನುಸಾರ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮ 514ರ ಅನ್ವಯ ಕರ್ತವ್ಯ ನಿರ್ವಹಿಸುವ ಕೇಂದ್ರ ಸ್ಥಾನದಿಂದ 8 ಕಿ.ಮೀ ಮೀರುವ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ ದಿನಭತ್ಯೆಯನ್ನು ಪಾವತಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೆ ಯುವರಾಜ ಕಾಲೇಜಿನಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿರುವ ನೌಕರರುಗಳಿಗೆ ಯಾವುದೇ ದಿನಭತ್ಯೆ, ಸಂಭಾವನೆಯನ್ನು ಪಡೆಯಲು ಅವಕಾಶವಿರುವುದಿಲ್ಲ. ಆದರೆ ಕುಲಸಚಿವರ ಆದೇಶ ಸಂಖ್ಯೆ:ಪ.ವಿ/117/20/2015–16 ದಿನಾಂಕ:04.06.2015ರ ಆದೇಶವನ್ನು ಕುಲಸಚಿವರು ಪರೀಕ್ಷಾಂಗ ಇವರು ಮಾಡಿಕೊಂಡಿರುವ ಆದೇಶದನ್ವಯ ಪಾವತಿಸಿರುತ್ತಾರೆ. ಆದರೆ ಸದರಿ ಆದೇಶವು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41(5), (6), (7)ರ ನಿಯಮಗಳನ್ವಯ ಕುಲಸಚಿವರ ಆದೇಶಗಳು ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಯನ್ನು ಪಡೆದ ನಂತರ ಸದರಿ ಆದೇಶದಂತೆ ಸಂಭಾವನೆಯನ್ನು ಪಾವತಿಸಬೇಕಾಗಿರುತ್ತದೆ. ಆದರೆ ಕೆ.ಸಿ.ಎಸ್.ಆರ್ ನಿಯಮ 28(ಎ), (ಬಿ), (ಸಿ), (ಇ)ಗಳ ಅನ್ವಯ ಹಾಗೂ | ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯವು ಒಂದು ಪ್ರಮುಖವಾಗಿದ್ದು; ಸಮಯಾನುಸಾರ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ಪರೀಕ್ಷೆ ನಡೆಸಿ ಫಲಿತಾಂಶವನ್ನು ನಿಗದಿತ ಸಮಯದಲ್ಲೇ ಪ್ರಕಟಿಸಬೇಕಾಗಿರುತ್ತದೆ. ಈ ಪರೀಕ್ಷಾ ಕಾರ್ಯಗಳಿಗೆ ಅವಶ್ಯಕ ಬೋಧಕೇತರ ನೌಕರರನ್ನು ನಿಯೋಜಿಸಿಕೊಂಡು ಎಲ್ಲಾ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಬೇಕಾಗಿರುತ್ತದೆ. ಈ ನೌಕರರು ಕಛೇರಿ ಸಮಯವನ್ನು ಮೀರಿ ಕಾರ್ಯ ನಿರ್ವಹಿಸಬೇಕಾಗಿದ್ದುದರಿಂದ ಸಂಭಾವನೆ ನೀಡದೆ ಇದ್ದ ಪಕ್ಷದಲ್ಲಿ ನೌಕರರು ಪರೀಕ್ಷಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಅಥವಾ ಪರೀಕ್ಷೆ ಕಾರ್ಯಗಳನ್ನು ಹೆಚ್ಚಿಗೆ ಸಮಯ ಮಾಡುವುದರಿಂದ ತಪ್ಪಿಸಿಕೊಳ್ಳುತ್ತಾರೆ. ಹಿಂಗಾಗಿ ಹಿಂದಿನಿಂದಲೂ ವಿಶ್ವವಿದ್ಯಾನಿಲಯವು ನಿಗದಿ ಪಡಿಸಿದ ದರದಲ್ಲಿ ಸಂಭಾವನೆಯನ್ನು ಪಾವತಿಸಲಾಗಿದೆ. ಈ ಸಂಭಾವನೆ ಮೊತ್ತವನ್ನು ಸರ್ಕಾರದಿಂದ ಬಿಡುಗಡೆಯಾಗುತ್ತಿರುವ ಅನುದಾನದಿಂದ ಭರಿಸಲಾಗುತ್ತಿಲ್ಲ ಎಂಬ ವಿಚಾರವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.<br><br>ಆದ್ದರಿಂದ, ಆಕ್ಷೇಪಿಸಿರುವ ಮೊತ್ತ ರೂ.63,209.00ಗಳನ್ನು ತೀರುವಳಿ ಮಾಡಿಕೊಡುವಂತೆ ತಮ್ಮಲ್ಲಿ ಕೋರಲಾಗಿದೆ. |

| | |
|---|---|
| ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 41(5), (6), (7)ರ ನಿಯಮಗಳ ಉಲ್ಲಂಘನೆ ಮಾಡಿ ಖಾಯಂ ಬೋಧಕೇತರ ನೌಕರರುಗಳಿಗೆ ಸಂಭಾವನೆಯನ್ನು ಪಾವತಿಸಿರುವ ಒಟ್ಟು ಮೊತ್ತ **ರೂ.63,209/-ಗಳನ್ನು** ಅನುಬಂಧ-10ರಲ್ಲಿ ವಿತರಿಸಲಾಗಿರುವ ನೌಕರರುಗಳಿಂದ ವಸೂಲಿಸಿ ಪರೀಕ್ಷಾ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ವಿವರಗಳನ್ನು **ಅನುಬಂಧ-91ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | |
| **139. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿದ ಯು.ಜಿ.ಸಿ ವೇತನ ಪಡೆಯುವ ಬೋಧಕ ವರ್ಗದವರಿಗೆ ಸಂಭಾವನೆಯನ್ನು ಪಾವತಿಸಿರುವುದು :- (ಯುವರಾಜ ಕಾಲೇಜು)**<br><br>ಯುವರಾಜ ಕಾಲೇಜಿನ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆಯನ್ನು ಪಾವತಿಸಿರುವ ವೋಚರ್‌ಗಳನ್ನು ಪರಿಶೀಲಿಸಲಾಗಿ ಯು.ಜಿ.ಸಿ ವೇತನವನ್ನು ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ 6ನೇ ವೇತನ ಆಯೋಗದ ನಿಯಮಾವಳಿ ಮತ್ತು ಕೆ.ಸಿ.ಎಸ್.ಆರ್ ನಿಯಮ 28 (ಎ), (ಬಿ), (ಸಿ), (ಇ) ಅನ್ವಯ ಸ್ನಾತಕ, ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆ ಸಿದ್ದಪಡಿಸುವಿಕೆ, ಮೌಲ್ಯಮಾಪನ ಮತ್ತು ಇನ್ನಿತರ ಪರೀಕ್ಷಾ ಕಾರ್ಯಗಳಿಗೆ ಯಾವುದೇ ಸಂಭಾವನೆ ಪಡೆಯಲು ಅವಕಾಶ ಇರುವುದಿಲ್ಲ. ಆದರೆ 2015-16ನೇ ಸಾಲಿನ ಯುವರಾಜ ಕಾಲೇಜಿನ ಸ್ನಾತಕ, ಸ್ನಾತಕೋತ್ತರ, ಸಂಶೋಧನಾ ತರಗತಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲು ಯು.ಜಿ.ಸಿ ವೇತನವನ್ನು ಪಡೆಯುತ್ತಿರುವ ಬೋಧಕ ವರ್ಗದವರಿಗೆ 6ನೇ ಯು.ಜಿ.ಸಿ ಪರಿಷ್ಕೃತ ನಿಯಮಾವಳಿ ಹಾಗೂ ಕೆ.ಸಿ.ಎಸ್.ಆರ್ ನಿಯಮ 28 (ಎ) (ಬಿ) (ಸಿ) (ಇ) ಅನ್ವಯ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆ/ಭತ್ಯೆಗಳನ್ನು ನೀಡಲು ಅವಕಾಶವಿರುವುದಿಲ್ಲ. ಆದ್ದರಿಂದ ಬೋಧಕ ವರ್ಗದವರಿಗೆ ಅನುಬಂಧ-11ರಲ್ಲಿ ವಿತರಿಸಿರುವ ಒಟ್ಟು ಮೊತ್ತ ರೂ.**28,060/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಯುವರಾಜ ಕಾಲೇಜಿನ ಎಫ್&ಆರ್ ಖಾತೆಗೆ ಜಮೆ ಮಾಡಲು ಸೂಚಿಸಿದೆ. | ಪ್ರಶ್ನೆ ಪತ್ರಿಕೆಗಳನ್ನು ಸಿದ್ದಪಡಿಸುವ ಕಾರ್ಯವು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯದ ಒಂದು ಭಾಗವಾಗಿದ್ದು; ಈ ಕಾರ್ಯಕ್ಕೆ ನಿಗದಿಪಡಿಸಿದ ದರದಲ್ಲಿ ಸಂಭಾವನೆ ಪಾವತಿಸಲಾಗಿರುತ್ತದೆ. ಸಂಭಾವನೆಗಳನ್ನು ನೀಡದಿದ್ದರೆ ಯಾವುದೇ ಬೋಧಕ ವರ್ಗದವರು ಇಂತಹ ಪರೀಕ್ಷಾ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿಗದಿತ ಸಮಯದಲ್ಲೇ ಮುಗಿಸಬೇಕಾಗಿರುವುದರಿಂದ ಯಾವುದೇ ಕಾರಣ ನೀಡಿ ಇಂತಹ ಕಾರ್ಯಗಳಿಂದ ದೂರ ಉಳಿಯುತ್ತಾರೆ. ಸಂಭಾವನೆ ನೀಡದಿದ್ದರೆ ಯಾವುದೇ ಪರೀಕ್ಷೆ ಕಾರ್ಯಗಳು ಸುಗಮವಾಗಿ ನಡೆಯುವುದಿಲ್ಲ. ಸಂಭಾವನೆ ಪಾವತಿ ಮೊತ್ತವನ್ನು ಸರ್ಕಾರದಿಂದ ಬಿಡುಗಡೆಯಾದ ಅನುದಾನದಿಂದ ಭರಿಸಲಾಗುತ್ತಿಲ್ಲ.ಆಂತರಿಕ ಮೂಲದಿಂದಲೇ ಭರಿಸಲಾಗುತ್ತದೆ.<br><br>ಆದಾಗ್ಯೂ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಹಾಗೂ ಸ್ವಾಯತ್ತತೆ ಪಡೆದಿರುವ ಯುವರಾಜ ಕಾಲೇಜಿನ ಎಲ್ಲಾ ಪರೀಕ್ಷಾ ಕಾರ್ಯಗಳಿಗೆ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಂಭಾವನೆ ನೀಡುವುದನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್.-5/142/2012-13 ದಿನಾಂಕ 19-08-2017 ರನ್ವಯದಂತೆ ನಿಲ್ಲಿಸಲಾಗಿದೆ. ಪ್ರತಿಯನ್ನು ಲಗತ್ತಿಸಿದೆ. ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |
| **140. ಪರೀಕ್ಷಾ ಕಾರ್ಯಗಳಾದ ಪ್ರಾಯೋಗಿಕ ಪರೀಕ್ಷೆ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗಿರುವ ಬೋಧಕರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದು :- (ಯುವರಾಜ ಕಾಲೇಜು)**<br><br>2015-16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಎಫ್&ಆರ್ ಖಾತೆಯ ಓಚರ್‌ಗಳನ್ನು ಪರಿಶೀಲಿಸಲಾಗಿ ಪರೀಕ್ಷಾ ಕಾರ್ಯಗಳಾದ ಪ್ರಾಯೋಗಿಕ ಪರೀಕ್ಷೆ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗಿರುವ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವೃಂದದವರಿಗೆ ಸಂಭಾವನೆಯನ್ನು ಪಾವತಿಸಿರುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ ಆರನೇ ಪರಿಷ್ಕೃತ ಯು.ಜಿ.ಸಿ ನಿಯಮಾವಳಿಯ | ಇದುವರೆಗೂ ಪರೀಕ್ಷಾ ಕಾರ್ಯಗಳಿಂದ ಪ್ರಾಯೋಗಿಕೆ ಪರೀಕ್ಷೆ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗಿದ್ದ ಬೋಧಕ ವರ್ಗದವರಿಗೆ ವಿಶ್ವವಿದ್ಯಾನಿಲಯ ನಿಗದಿ ಪಡಿಸಿರುವ ದರದಲ್ಲಿ ಸಂಭಾವನೆಗಳನ್ನು ಪಾವತಿಸಲಾಗಿದೆ. |

| | |
|---|---|
| ಅನ್ವಯ ಹಾಗೂ ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ) ಗಳನ್ವಯ ಪ್ರಾಯೋಗಿಕ ಪರೀಕ್ಷೆಗಳು ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಗಳು ಬೋಧಕ ವರ್ಗದವರ ಕರ್ತವ್ಯದ ಒಂದು ಭಾಗವಾಗಿರುವುದರಿಂದ (ಆದ್ಯ ಕರ್ತವ್ಯವಾಗಿರುತ್ತದೆ) ಸಂಭಾವನೆಯನ್ನು ಪಡೆಯಲು ಅವಕಾಶವಿರುವುದಿಲ್ಲ ಹಾಗೂ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಆದೇಶಗಳು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5), (6), (7) ಗಳನ್ವಯ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಯು.ಜಿ.ಸಿ ವೇತನ ಪಡೆಯುತ್ತಿರುವ ಖಾಯಂ ಬೋಧಕರುಗಳಿಗೆ ಪ್ರಾಯೋಗಿಕ ಪರೀಕ್ಷೆಗಳು ಮತ್ತು ಉತ್ತರ ಪತ್ರಿಕೆಗಳು ಮೌಲ್ಯ ಮಾಪನಾ ಕಾರ್ಯಕ್ಕೆ ಸಂಭಾವನೆಯನ್ನು ಪಾವತಿಸಬಹುದಾಗಿದೆ. ಆದರೆ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ) 6ನೇ ಯು.ಜಿ.ಸಿ ಪರಿಷ್ಕೃತ ವೇತನ ನಿಯಮಾವಳಿಗಳು ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5), (6), (7)ರ ನಿಯಮಗಳನ್ನು ಉಲ್ಲಂಘಿಸಿ ನೀಡಿರುವ ಸಂಭಾವನೆಯ ಮೊತ್ತ **ರೂ.4,33,474/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಯುವರಾಜ ಕಾಲೇಜಿನ ಎಫ್ & ಆರ್ ಖಾತೆಗೆ ಜಮೆ ಮಾಡುವಂತೆ ಹಾಗೂ ಜಮೆ ಮಾಡಿದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–92ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿಎಲ್5/142/2012–13 ದಿನಾಂಕ 20.12.2013ರ ಪ್ರತಿಯನ್ನು ಈ ಕೂಡ ಲಗತ್ತಿಸಿದೆ.<br><br>ಆದಾಗ್ಯೂ; ಯುಜಿಸಿ ವೇತನ ಪಡೆಯುತ್ತಿರುವ ಉಪನ್ಯಾಸಕರುಗಳಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿಎಲ್5/142/2012–13 ದಿನಾಂಕ 19–08–2017 ರನ್ವಯ ದಿನಾಂಕ 01–08–2017ರಿಂದ ಜಾರಿಗೆ ಬಂದಂತೆ ಸಂಭಾವನೆ ಪಾವತಿಗಳನ್ನು ನಿಲ್ಲಿಸಲಾಗಿದೆ. ಪ್ರತಿಯನ್ನು ಲಗತ್ತಿಸಿದೆ.<br><br>ಆದ್ದರಿಂದ ರೂ.4,33,474.00ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ. |
| **141. ಪರೀಕ್ಷಾ ಕಾರ್ಯಗಳಿಗೆ ಹಾಜರಾದ ಬೋಧಕ ವೃಂದದವರಿಗೆ ದಿನಭತ್ಯೆ/ಪ್ರಯಾಣಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದು :– (ಯುವರಾಜ ಕಾಲೇಜು)**<br><br>ಯುವರಾಜ ಕಾಲೇಜಿನ 2015–16ನೇ ಸಾಲಿನ ಪರೀಕ್ಷಾ ಕಾರ್ಯಗಳಿಗೆ ಅಂದರೆ ಪ್ರಶ್ನೆ ಪತ್ರಿಕೆ ತಯಾರಿಸುವಿಕೆ, ಮೌಲ್ಯಮಾಪನ ಜೊತೆಗೆ ಬಿ.ಓ.ಇ ಸಭೆಗಳಿಗೆ ಹಾಜರಾಗುವ ಪ್ರಾಧ್ಯಾಪಕರುಗಳಿಗೆ ಪ್ರಯಾಣ ಭತ್ಯೆ, ದಿನಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ, ಯು.ಜಿ.ಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ 6ನೇ ಯು.ಜಿ.ಸಿ ವೇತನ ಪರಿಷ್ಕರಣೆ ನಿಯಮಾವಳಿಗಳಲ್ಲಿ ಯಾವುದೇ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ. ಆದರೆ ಯುವರಾಜ ಕಾಲೇಜಿನ ಪರೀಕ್ಷಾ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವ ಪ್ರಾಧ್ಯಾಪಕರುಗಳಿಗೆ ನಿಯಮಾನುಸಾರ ದಿನಭತ್ಯೆ, ಪ್ರಯಾಣ ಭತ್ಯೆಗಳ ಜೊತೆಗೆ ಸಂಭಾವನೆಯನ್ನು ಪಾವತಿಸಿರುವುದರಿಂದ ಯು.ಜಿ.ಸಿ ನಿಯಮಾವಳಿ ಹಾಗೂ ಕೆ.ಸಿ.ಎಸ್.ಆರ್ ನಿಯಮ 514ರ ನಿಯಮಾವಳಿಯ ಉಲ್ಲಂಘನೆಯಾಗಿರುತ್ತದೆ. ಪ್ರಾಧ್ಯಾಪಕರುಗಳಿಗೆ ಸಂಭಾವನೆಯನ್ನು ಪಾವತಿಸಿರುವ ಮೊತ್ತ **ರೂ.1,31,204/–ಗಳನ್ನು** **ಅನುಬಂಧ–93ರಲ್ಲಿ** ವಿವರಿಸಿರುವಂತೆ ಸದರಿ ಪ್ರಾಧ್ಯಾಪಕರುಗಳಿಂದ **ವಸೂಲಿಸಿ** ಪರೀಕ್ಷಾ ಖಾತೆಗೆ ಜಮೆ ಮಾಡಲು ಸೂಚಿಸಿದೆ. | ಪರೀಕ್ಷಾ ಕಾರ್ಯಗಳಿಗೆ ಹೊರ ಸ್ಥಳದಿಂದ ಹಾಜರಾದ ಅಧ್ಯಾಪಕ ವರ್ಗದವರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ಸಂಭಾವನೆಗಳನ್ನು ವಿಶ್ವವಿದ್ಯಾನಿಲಯ ನಿಗದಿಪಡಿಸಿದ ದರದಲ್ಲಿ ಪಾವತಿಸಲಾಗುತ್ತಿತ್ತು. ಆದರೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್.5/142/2012–13 ದಿನಾಂಕ 19.08.2017ರನ್ವಯ ಯು.ಜಿ.ಸಿ ವೇತನ ಪಡೆಯುತ್ತಿರುವ ಅಧ್ಯಾಪಕರುಗಳಿಗೆ ಪರೀಕ್ಷಾ ಸಂಭಾವನೆ ನೀಡುವುದನ್ನು ದಿನಾಂಕ 01.08.2017ರಿಂದ ನಿಲ್ಲಿಸಲಾಗಿದೆ. ಪ್ರತಿಯನ್ನು ಲಗತ್ತಿಸಲಾಗಿದೆ. |

| | |
|---|---|
| **142. ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸ್ಥಳೀಯ ಭತ್ಯೆ ಪಾವತಿಸಿರುವುದು :– (ಯುವರಾಜ ಕಾಲೇಜು)**<br><br>2015–16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಎಫ್&ಆರ್ ಖಾತೆಯ ಓಚರ್‌ಗಳನ್ನು ಪರಿಶೀಲಿಸಲಾಗಿ ವಿವಿಧ ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯುವರಾಜ ಕಾಲೇಜಿನ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವೃಂದದವರಿಗೆ ಸ್ಥಳೀಯ ಭತ್ಯೆ ಪಾವತಿಸಿರುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ 6ನೇ ಪರಿಷ್ಕೃತ ಯು.ಜಿ.ಸಿ ನಿಯಮಾವಳಿ ಅನ್ವಯ ಹಾಗೂ ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ) ಗಳನ್ವಯ ಪರೀಕ್ಷಾ ಕರ್ತವ್ಯವು ಯುವರಾಜ ಕಾಲೇಜಿನ ಬೋಧಕ ವರ್ಗದವರ ದಿನ ನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ (ಆಧ್ಯ ಕರ್ತವ್ಯವಾಗಿರುತ್ತದೆ) ಸ್ಥಳೀಯ ಭತ್ಯೆಯನ್ನು ಪಡೆಯಲು ಅವಕಾಶವಿರುವುದಿಲ್ಲ ಹಾಗೂ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಆದೇಶಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5), (6), (7) ಗಳನ್ವಯ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಯು.ಜಿ.ಸಿ ವೇತನ ಪೆಯುತ್ತಿರುವ ಖಾಯಂ ಬೋಧಕರುಗಳಿಗೆ ಯುವರಾಜ ಕಾಲೇಜಿನಲ್ಲೆ ಪರೀಕ್ಷಾ ಕಾರ್ಯ ನಿರ್ವಹಣೆಗೆ ಸ್ಥಳೀಯ ಭತ್ಯೆಯನ್ನು ಪಾವತಿಸಬಹುದಾಗಿದೆ ಆದರೆ ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ), 6ನೇ ಯು.ಜಿ.ಸಿ ಪರೀಷ್ಕೃತ ವೇತನ ನಿಯಮಾವಳಿಗಳು ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5), (6), (7)ರ ನಿಯಮಗಳನ್ನು ಉಲ್ಲಂಘಿಸಿ ಸ್ಥಳೀಯ ಭತ್ಯೆಯನ್ನು ನೀಡಿರುವ ಮೊತ್ತ **ರೂ.72,463/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಯುವರಾಜ ಕಾಲೇಜಿನ ಎಫ್&ಆರ್ ಖಾತೆಗೆ ಜಮೆ ಮಾಡಿದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–94ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್5/ಯು.ಎ–1/318/92–93, ದಿನಾಂಕ27–03–2010 ಅನ್ವಯದಂತೆ ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯುಜಿಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ನಿಗದಿತ ದರದಲ್ಲಿ ಸ್ಥಳೀಯ ಭತ್ಯೆಗಳನ್ನು ಪಾವತಿ ಮಾಡಿದೆ. ಪ್ರತಿಯನ್ನು ಲಗತ್ತಿಸಿದೆ.<br><br>ಆದ್ದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **143. 2015–16ನೇ ಸಾಲಿನ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಯುವರಾಜ ಕಾಲೇಜಿನ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವುದು :– (ಯುವರಾಜ ಕಾಲೇಜು)**<br><br>2015–16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಎಫ್&ಆರ್ ಖಾತೆಯಲ್ಲಿ ಓಚರ್‌ಗಳನ್ನು ಪರಿಶೀಲಿಸಲಾಗಿ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯುವರಾಜ ಕಾಲೇಜಿನ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವೃಂದದವರಿಗೆ ಸಭಾ ಭತ್ಯೆ ಪಾವತಿಸಿರುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ ಆರನೇ ಪರಿಷ್ಕೃತ ಯು.ಜಿ.ಸಿ ನಿಯಮಾವಳಿ ಅನ್ವಯ ಹಾಗೂ ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ) | ಯುವರಾಜ ಕಾಲೇಜಿನ ಬೋಧಕ ವರ್ಗದವರು ಯುಜಿಸಿ ವೇತನ ಪಡೆಯುತ್ತಿದ್ದರೂ ಸಹ ಅವರು ಬಿ.ಓ.ಇಯ ಶಾಸನಬದ್ಧ ಸಮಿತಿ ಸಭೆಯ ಸದಸ್ಯರಾಗಿದ್ದುದರಿಂದ ಇವರಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಯು.ಎ2/119/2003–04 ದಿನಾಂಕ 24–7–2012ರ ಅನ್ವಯದಂತೆ ಸಭಾ ಭತ್ಯೆಯನ್ನು ಪಾವತಿ ಮಾಡಲಾಗಿದೆ. ಆದೇಶದ ಪ್ರತಿಯನ್ನು ಲಗತ್ತಿಸಿದೆ. |

| | |
|---|---|
| ಗಳನ್ವಯ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯುವರಾಜ ಕಾಲೇಜಿನ ಬೋಧಕ ವರ್ಗದವರ ದಿನ ನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ (ಆದ್ಯ ಕರ್ತವ್ಯವಾಗಿರುತ್ತದೆ) ಸಭಾ ಭತ್ಯೆಯನ್ನು ಪಡೆಯಲು ಅವಕಾಶವಿರುವುದಿಲ್ಲ ಹಾಗೂ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಆದೇಶಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5), (6), (7) ಗಳನ್ವಯ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಯು.ಜಿ.ಸಿ ವೇತನ ಪಡೆಯುತ್ತಿರುವ ಖಾಯಂ ಬೋಧಕರುಗಳು ಯುವರಾಜ ಕಾಲೇಜಿನಲ್ಲೇ ನಡದ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಯುವರಾಜ ಕಾಲೇಜಿನ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಬಹುದಾಗಿದೆ. ಆದರೆ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ), 6ನೇ ಯು.ಜಿ.ಸಿ ಪರಿಷ್ಕೃತ ವೇತನ ನಿಯಮಾವಳಿಗಳು ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5), (6), (7)ರ ನಿಯಮಗಳನ್ನು ಉಲ್ಲಂಘಿಸಿ ಸಭಾ ಭತ್ಯೆಯನ್ನು ನೀಡಿರುವ ಮೊತ್ತ **ರೂ.10,500/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಯುವರಾಜ ಕಾಲೇಜಿನ ಎಫ್&ಆರ್ ಖಾತೆಗೆ ಜಮೆ ಮಾಡಿ ಜಮೆ ಮಾಡಿದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–95ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ಆದ್ದರಿಂದ ರೂ10,500–00ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **144. ಶೈಕ್ಷಣಿಕ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳ ಸಭೆಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವುದು :– (ಯುವರಾಜ ಕಾಲೇಜು)**<br><br>2015–16ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಎಫ್&ಆರ್ ಖಾತೆಯಲ್ಲಿ ಓಚರ್‌ಗಳನ್ನು ಪರಿಶೀಲಿಸಲಾಗಿ ಶೈಕ್ಷಣಿಕ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳ ಸಭೆಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕರುಗಳಿಗೆ ಸಭಾ ಭತ್ಯೆ ಪಾವತಿಸಿರುವುದು ಕಂಡುಬಂದಿರುತ್ತದೆ. ಶೈಕ್ಷಣಿಕ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳ ಕೆಲಸ ಕಾರ್ಯಗಳು ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಒಂದು ಭಾಗವಾಗಿರುವುದರಿಂದ 6ನೇ ಯು.ಜಿ.ಸಿ ಪರಿಷ್ಕೃತ ನಿಯಮಾವಳಿಯನ್ವಯ ಶೈಕ್ಷಣಿಕ ಚಟುವಟಿಕೆಗಳು/ಪರೀಕ್ಷಾ ಚಟುವಟಿಕೆಗಳಿಗೆ ಯಾವುದೇ ಸಂಭಾವನೆಯನ್ನಾಗಲಿ, ಸಭಾ ಭತ್ಯೆಯನ್ನಾಗಲಿ ಪಾವತಿಸಲು ಅವಕಾಶವಿರುವುದಿಲ್ಲ. ಅದೇ ರೀತಿ ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ) ಗಳನ್ವಯ ಶೈಕ್ಷಣಿಕ ಮಂಡಳಿಗಳು ಮತ್ತು ಪರೀಕ್ಷಾ ಮಂಡಳಿಗಳ ಕಾರ್ಯ ಚಟುವಟಿಕೆಗಳು ಕರ್ತವ್ಯದ ಒಂದು ಭಾಗವಾಗಿರುವುದರಿಂದ ಸಭಾ ಭತ್ಯೆಯನ್ನು ಪಡೆಯಲು ಅವಕಾಶವಿರುವುದಿಲ್ಲ. ಆದರೆ ಮಾನ್ಯ ಕುಲಪತಿಗಳ ಅನುಮೋದನೆಯನ್ನು ಪಡೆದು ಕುಲಸಚಿವರು ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕರು ಹಾಜರಾಗುವ ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳ ಸಭೆಗಳಿಗೆ ಸಭಾ ಭತ್ಯೆ ಪಾವತಿಸಲು ಆದೇಶ ಮಾಡಿಕೊಂಡು ಅದರಂತೆ ಸಭಾ ಭತ್ಯೆಗಳನ್ನು | ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯಿದೆ 2000ರಲ್ಲಿನ ನಿಯಮಗಳಂತೆ ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಸಮಿತಿ, ಸಿಂಡಿಕೇಟ್ ಸಭೆ, ಶೈಕ್ಷಣಿಕ ಮಂಡಳಿ, ನೇಮಕಾತಿ ಮಂಡಳಿ ಹೀಗೆ ಅನೇಕ ರೀತಿಯ ಸಭೆ, ಸಮಿತಿಗಳಿಗೆ ಆಯಾ ವಿಷಯಗಳಲ್ಲಿ ಪರಿಣಿತಿ ಹೊಂದಿದ ನುರಿತ ತಜ್ಞರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಈ ಸಮಿತಿ ಸದಸ್ಯರು ಆಯಾ ಸಭೆಗಳಿಗೆ ಹಾಜರಾಗಿ ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಯುವರಾಜ ಕಾಲೇಜಿನ ಈ ಬೋಧಕ ವರ್ಗದವರು ಶೈಕ್ಷಣಿಕ ಮತ್ತು ಪರೀಕ್ಷಾ ಮಂಡಳಿಗಳ ಸದಸ್ಯರಾಗಿರುವುದರಿಂದ ಇವರು ಯು.ಜಿ.ಸಿ ವೇತನ ಪಡೆಯುತ್ತಿದ್ದರೂ ಸಹ ಇವರು ಇತರೆ ಸದಸ್ಯರುಗಳಿಗೆ ನೀಡುವಂತೆ ಇವರಿಗೂ ಸಭಾ ಭತ್ಯೆಯನ್ನು ಪಾವತಿ ಮಾಡಲಾಗಿದೆ.<br><br>ಆದಾಗ್ಯೂ; ಈ ಕಂಡಿಕೆಯಲ್ಲಿನ ಲೆಕ್ಕ ತನಿಖಾ ಸೂಚನೆಗಳಂತೆ ಈ ಬಗ್ಗೆ ಸರ್ಕಾರಕ್ಕೆ ಪತ್ರ |

| | |
|---|---|
| ಮತ್ತು ಇನ್ನಿತರೆ ಭತ್ಯೆಗಳನ್ನು ಪಾವತಿಸಲಾಗುತ್ತಿದೆ. ಆದರೆ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು ಯಾವುದೇ ಆದೇಶಗಳನ್ನು/ಆಧ್ಯಾದೇಶಗಳನ್ನು ಜಾರಿಗೆ ತರುವ ಮುನ್ನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5), (6), (7)ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೊದನೆಯನ್ನು ಪಡೆಯಬೇಕಾಗಿರುತ್ತದೆ. ಆದರೆ ಯಾವುದೇ ಅನುಮೋದನೆಯನ್ನು ಪಡೆಯದೇ ಕುಲಸಚಿವರ ಆದೇಶದನ್ವಯ ಸಭಾ ಭತ್ಯೆಯನ್ನು ಪಾವತಿಸಿರುವುದು ಈ ಮೇಲೆ ತಿಳಿಸಿರುವ ನಿಯಮಗಳು ಉಲ್ಲಂಘನೆಯಾಗಿರುವುದರಿಂದ **ರೂ. 4,94,344/-ಗಳನ್ನು ಸಂಬಂಧಪಟ್ಟ ಬೋಧಕರಿಂದ ವಸೂಲಿಸಿ** ಎಫ್&ಆರ್ ಖಾತೆಗೆ ಜಮೆ ಮಾಡಿ ಜಮೆ ಮಾಡಿದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ-96ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ಬರೆದು ಮಾರ್ಗದರ್ಶನ ಕೋರಲಾಗುತ್ತದೆ. |
| **145. 2015-16ನೇ ಸಾಲಿನ ಪಿ.ಜಿ. ಪ್ರವೇಶಾತಿ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸಿರುವ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಂಭಾವನೆ ಪಾವತಿಸಿರುವುದು:- (ಗಣಕ ಕೇಂದ್ರ, ಮಾನಸ ಗಂಗೋತ್ರಿಯ)**<br>2012-13 ರಿಂದ 2015-16ನೇ ಸಾಲುಗಳ ಲೆಕ್ಕತನಿಖೆಯಲ್ಲಿ ಬಿ.ಆರ್.ವಹಿಯನ್ನು ಪರಿಶೀಲಿಸಲಾಗಿ, 2015-16ನೇ ಸಾಲಿನ ಪಿ.ಜಿ. ಪ್ರವೇಶಾತಿ ಪರೀಕ್ಷಾ ಕಾರ್ಯಗಳಲ್ಲಿ ವಿವಿಧ ಕಾರ್ಯ ನಿರ್ವಹಿಸಿರುವ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಂಭಾವನೆಯನ್ನು ಪಾವತಿಸಿರುವುದು ಲೆಕ್ಕತನಿಖೆಯಲ್ಲಿ ಕಂಡು ಬಂದಿರುತ್ತದೆ. ಪಿ.ಜಿ. ಪ್ರವೇಶಾತಿ ಪರೀಕ್ಷಾ ಕಾರ್ಯಗಳು, ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ದಿನನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ (ಆದ್ಯ ಕರ್ತವ್ಯವಾಗಿರುತ್ತದೆ) 6ನೇ ಯು.ಜಿ.ಸಿ ಪರಿಷ್ಕೃತ ನಿಯಮಾವಳಿಗಳನ್ವಯ ಪರೀಕ್ಷಾ ಚಟುವಟಿಕೆಗಳಿಗೆ ಯಾವುದೇ ಸಂಭಾವನೆಯನ್ನು ಪಡೆಯಲು ಅವಕಾಶವಿರುವುದಿಲ್ಲ. ಅದೇ ರೀತಿ ಕೆ.ಸಿ.ಎಸ್.ಆರ್. ನಿಯಮಾವಳಿ 28(ಎ), (ಬಿ), (ಸಿ), (ಇ) ಗಳನ್ವಯ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಯು.ಜಿ.ಸಿ ವೇತನ ಪಡೆಯುತ್ತಿರುವ ಖಾಯಂ ಬೋಧಕರುಗಳಿಗೆ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆ ಪಾವತಿಸಬಹುದಾಗಿದೆ. ಆದರೆ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ. ಕೆ.ಸಿ.ಎಸ್.ಆರ್. ನಿಯಮಾವಳಿ 28(ಎ), (ಬಿ), (ಸಿ), (ಇ) ಗಳನ್ವಯ 6ನೇ ಯು.ಜಿ.ಸಿ ಪರಿಷ್ಕೃತ ವೇತನ ನಿಯಮಾವಳಿಗಳು ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000ರ ನಿಯಮ 41(5), (6), (7)ರ ನಿಯಮಗಳನ್ನು ಉಲ್ಲಂಘಿಸಿ ಸಂಭಾವನೆಯನ್ನು ಪಾವತಿಸಿರುವ ಮೊತ್ತ **ರೂ.4,12,500/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ,** ಸಂಬಂಧಪಟ್ಟ ಖಾತೆಗೆ ಜಮೆ ಮಾಡಿ, ಜಮೆ ಮಾಡಿದ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ-97ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | 2015-16 ನೇ ಸಾಲಿನಲ್ಲಿ ಪಿ.ಜಿ.ಪ್ರವೇಶಾತಿ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸಿರುವ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಂಭಾವನೆಯನ್ನು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವಂತೆ ದಿನ ಒಂದಕ್ಕೆರೂ2,000/-ರಂತೆ ಪಾವತಿ ಮಾಡಲಾಗಿರುತ್ತದೆ.<br>ಆದರೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್5/142/2012-13 ದಿನಾಂಕ 19-08-2017ರ ಅನ್ವಯದಂತೆ ದಿನಾಂಕ 01-08-2017ರ ನಂತರ ಯು.ಜಿ.ಸಿ ವೇತನ ಪಡೆಯುತ್ತಿರುವ ಅಧ್ಯಾಪಕರಿಗೆ ಸಂಭಾವನೆಯನ್ನು ಪಾವತಿ ಮಾಡಲಾಗುತ್ತಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ. ವಿಶ್ವವಿದ್ಯಾನಿಲಯದ ದಿನಾಂಕ 19-08-2017ರ ಆದೇಶದ ಪ್ರತಿಯನ್ನು ಲಗತ್ತಿಸಿದೆ. |

| | |
|---|---|
| **146. ಪ್ರೊ॥ ಸಿ.ಬಸವರಾಜು, ಕುಲಸಚಿವರು (ಆಡಳಿತ) ಮೈ.ವಿ.ವಿ ರವರು Edusat live ಕಾರ್ಯಗಾರದಲ್ಲಿ ಭಾಗವಹಿಸಿರುವುದಕ್ಕೆ ಭತ್ಯೆಯನ್ನು ಪಡೆದಿರುವುದು :- (ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)**<br><br>2014-15 ಮತ್ತು 2015-16ನೇ ಸಾಲುಗಳು ಲೆಕ್ಕತಪಾಸಣೆಯಲ್ಲಿ Broad casting ಕಾರ್ಯಗಾರಕ್ಕೆ ಆಗಮಿಸಿದ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನವನ್ನು ಪಾವತಿಸಿರುವ ಕಡತಗಳನ್ನು ಪರಿಗಣಿಸಲಾಗಿ ಧನಾದೇಶ ಸಂಖ್ಯೆ:736929/16.04.2014 ರಲ್ಲಿ ರೂ.4,000/-ಗಳನ್ನು ಪ್ರೊ॥ ಬಸವರಾಜು (ಕುಲಸಚಿವರು) ರವರು Broadcasting ಕಾರ್ಯಗಾರಕ್ಕೆ 4 ತಾಸು (ಗಂಟೆ)ಗಳ ಕಾರ್ಯಗಾರದಲ್ಲಿ ಭಾಗವಹಿಸಿರುವುದಕ್ಕೆ ಗೌರವಧನವನ್ನು ಪಾವತಿಸಿರುವುದನ್ನು ಗಮನಿಸಲಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಇ.ಎಂ.ಎಂ.ಆರ್.ಸಿ ಕಾರ್ಯಗಾರಗಳಲ್ಲಿ ಭಾಗವಹಿಸುವುದು ಕೂಡ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಕೆ.ಸಿ.ಎಸ್.ಆರ್ ನಿಯಮಾವಳಿ 28(ಎ), (ಬಿ), (ಸಿ), (ಇ)ಗಳನ್ವಯ ಯಾವುದೇ ಗೌರವಧನವನ್ನು ಪಡೆಯಲು ಅರ್ಹರಿರುವುದಿಲ್ಲ. ಆದ್ದರಿಂದ ಕೆ.ಸಿ.ಎಸ್.ಆರ್ ನಿಯಮಾವಳಿಗಳನ್ನು ಉಲ್ಲಂಘಿಸಿ ಗೌರವಧನ ಪಾವತಿಸಿರುವ ಮೊತ್ತ **ರೂ.4,000/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಇ.ಎಂ.ಎಂ.ಆರ್.ಸಿ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಜಮಾ ಮಾಡಲಾದ ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಪ್ರೊ॥ ಸಿ.ಬಸವರಾಜು, ಕುಲಸಚಿವರು, ಇ.ಎಂ.ಎಂ.ಆರ್.ಸಿ ಕೇಂದ್ರದಲ್ಲಿ Edusat live Broad casting ಕಾರ್ಯಗಾರದಲ್ಲಿ External Content ETV Expert ಆಗಿ ಕಾರ್ಯನಿರ್ವಹಿಸಿದ ಬಾಬ್ತು ರೂ4,000/-ಗಳ ಗೌರವಧನ ಪಾವತಿಸಿದ್ದು, Broad casting ಕಾರ್ಯಗಾರದಲ್ಲಿ 4 ದಿನಗಳು ಪ್ರತಿದಿನ ಒಂದು ಗಂಟೆಯಂತೆ ಒಟ್ಟು 4 ದಿನ 4 ಗಂಟೆ ಕಾರ್ಯಗಾರದಲ್ಲಿ ಭಾಗವಹಿಸಿದ್ದುದರಿಂದ ಯು.ಜಿ.ಸಿ ಪರಿಷ್ಕೃತ ದರಪಟ್ಟಿಯನ್ವಯ ಗೌರವಧನ ಪಾವತಿಸಲಾಗಿದೆ. ಈ ಪರಿಷ್ಕೃತ ದರಪಟ್ಟಿಯು ಕೇಂದ್ರ ಸರ್ಕಾರದ ಗೌರ್ನಿಂಗ್ ಬೋರ್ಡ್‌ನಿಂದ ಅನುಮೋದಿತವಾಗಿರುವ ಅಂಶವನ್ನು ತಮ್ಮಲ್ಲಿ ನಿವೇದಿಸುತ್ತಾ ಕನ್‌ಸೋರ್ಟಿಯಮ್ ಫೊರ್ ಎಜುಕೇಷನಲ್ ಕಮುನಿಕೇಷನ್, ನವದೆಹಲಿ ರವರ ಪತ್ರ ಸಂಖ್ಯೆ F.No.CEC/2/43/GB33/27112 ದಿನಾಂಕ 17-04-2014 ರಂದು ಅನುಮೋದಿತ ದರಪಟ್ಟಿಯ ಪ್ರತಿಯನ್ನು ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ4,000/-ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **147.. ವಿಶ್ವವಿದ್ಯಾನಿಲಯ ಧನಸಹಾಯಗಳ ಆಯೋಗದಡಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳಿಗೆ ಪರೀಕ್ಷಾ ಮೌಲ್ಯಮಾಪನ ಸಂಭಾವನೆಯನ್ನು ನಿಯಮಕ್ಕೆ ವಿರುದ್ಧವಾಗಿ ಪಾವತಿಸಿರುವುದು:- (ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ)**<br>ಪರೀಕ್ಷಾಂಗ ವಿಭಾಗದ ವೋಚರ್‌ಗಳನ್ನು ಪರಿಶೀಲಿಸಲಾಗಿ, ಜುಲೈ-2015 ಮತ್ತು ಜನವರಿ-2016ರ ಮಾಹೆಗಳಲ್ಲಿ ಕ್ರಮವಾಗಿ ಎಂ.ಎಸ್.ಸಿ(ವಿದ್ಯುನ್ಮಾನ) 2ನೇ ಮತ್ತು 4ನೇ ಸೆಮಿಸ್ಟರ್ ಹಾಗೂ ಎಂ.ಎಸ್.ಸಿ(ವಿದ್ಯುನ್ಮಾನ) 1ನೇ ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳ ಪರೀಕ್ಷಾ ಮೌಲ್ಯಮಾಪನ ಕರ್ತವ್ಯಕ್ಕೆ ವಿಶ್ವವಿದ್ಯಾನಿಲಯ ಧನಸಹಾಯಗಳ ಆಯೋಗದಡಿ (ಯು.ಜಿ.ಸಿ) ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳನ್ನು ನಿಯೋಜಿಸಿ, ಪರೀಕ್ಷಾ ಮೌಲ್ಯಮಾಪನ ಭತ್ಯೆ ಒಟ್ಟು ರೂ.22,860/-ಗಳನ್ನು ಪಾವತಿಸಲಾಗಿದೆ.<br><br>ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ರವರ ಆದೇಶ ಸಂಖ್ಯೆ: ಇಡಿ/30/ಯುಪಿಇ/2000/ ದಿನಾಂಕ:19.05.2003 ರನ್ವಯ ಉಪಕಂಡಿಕೆ(01)ರಲ್ಲಿ ವಿವರಿಸಿರುವಂತೆ, | ವಿಶ್ವವಿದ್ಯಾನಿಲಯದ ಪ್ರಾಯೋಗಿಕ ಪರೀಕ್ಷೆಗಳು ಮತ್ತು ಮೌಲ್ಯಮಾಪನ ಕಾರ್ಯಗಳಿಗೆ ಪ್ರಾಧ್ಯಾಪಕರುಗಳನ್ನು ನಿಯೋಜಿಸಿಕೊಂಡು ವಿಶ್ವವಿದ್ಯಾನಿಲಯ ನಿಗದಿಪಡಿಸಿದ್ದಂತೆ ಸಂಭಾವನೆಗಳನ್ನು ಪಾವತಿಮಾಡಲಾಗಿತ್ತು. ಪರೀಕ್ಷಾ ಕಾರ್ಯಗಳಿಗೆ ಸಂಭಾವನೆಗಳನ್ನು ನೀಡದಿದ್ದರೆ ಪ್ರಾಧ್ಯಾಪಕರುಗಳು ಯಾವುದಾದರೊಂದು ಕಾರಣ ನೀಡಿ ಈ ಕಾರ್ಯಗಳಿಂದ ದೂರ ಉಳಿಯುತ್ತಾರೆ. ಪರೀಕ್ಷಾ ಕಾರ್ಯಗಳು ವಿಶ್ವವಿದ್ಯಾನಿಲಯದಲ್ಲಿ ಅತೀ ಪ್ರಾಮುಖ್ಯವಾಗಿದ್ದು; ಸಮಯಾನುಸಾರ ಪರೀಕ್ಷೆ ಕಾರ್ಯಗಳನ್ನು ನಡೆಸಿ ಫಲಿತಾಂಶ ಪ್ರಕಟಿಸಬೇಕಾಗಿರುತ್ತದೆ. ಹಾಗಾಗಿ ಪರೀಕ್ಷಾ ಕಾರ್ಯಕ್ಕೆ ಸಂಭಾವನೆ ಪಾವತಿಸದೇ ಅನ್ಯಮಾರ್ಗಗಳಿಲ್ಲ. ಇದೆಲ್ಲವನ್ನು ಪರಿಗಣಿಸಿ ಸದರೀ ಸಂಭಾವನೆ ಪಾವತಿಗೆ ಸರ್ಕಾರದಿಂದ ಯಾವುದೇ ಅನುದಾನ ನೀಡಲಾಗುವುದಿಲ್ಲವೆಂದು ಹಾಗೂ ವಿಶ್ವವಿದ್ಯಾನಿಲಯದ ಆಂತರಿಕ |

| | |
|---|---|
| ಯು.ಜಿ.ಸಿ ಪ್ರಾಧ್ಯಾಪಕರುಗಳಿಗೆ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕರ್ತವ್ಯಕ್ಕೆ ಸಂಭಾವನೆಯನ್ನು ಪಡೆಯುವುದಕ್ಕೆ ಅರ್ಹರಾಗಿರುವುದಿಲ್ಲವೆಂದು ಆದೇಶಿಸಿದ್ದರೂ ಸಹ ರೂ.22,860/-ಗಳನ್ನು ಪಾವತಿಸಲಾಗಿದೆ. (ವಿಚಾರಣಾ ಪತ್ರಸಂಖ್ಯೆ:08/2018-19/25.05.2018).<br><br>ಆದುದರಿಂದ **ಅನುಬಂಧ-98 ರಲ್ಲಿ** ವಿವರಿಸಲಾಗಿರುವ ವಿವರಗಳಂತೆ ಸಂಭಾವನೆ ಪಡೆಯಲಾಗಿರುವ ಪ್ರಾಧ್ಯಾಪಕರುಗಳಿಂದ ಒಟ್ಟು **ರೂ.22,860/-ಗಳನ್ನು ವಸೂಲಿ** ಮಾಡಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮಾ ಮಾಡಿ ವರದಿ ಸಲ್ಲಿಸಲು ತಿಳಿಸಲಾಗಿದೆ. | ನಿಧಿಯಿಂದಲೇ ಭರಿಸಬೇಕೆಂದು ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ಸಂಭಾವನೆಯನ್ನು ವಿಶ್ವವಿದ್ಯಾನಿಲಯದ ನಿಧಿಯಿಂದಲೇ ಭರಿಸಲಾಗಿದೆ. ಸರ್ಕಾರದಿಂದ ಯಾವುದೇ ಅನುದಾನ ಕೋರಲಾಗುವುದಿಲ್ಲ.<br>ಆದಾಗ್ಯೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿಎಲ್5/142/2012-13 ದಿನಾಂಕ 19-08-2017 ರನ್ವಯ ದಿನಾಂಕ 01-08-2017ರಿಂದ ಜಾರಿಗೆ ಬಂದಂತೆ ಯು.ಜಿ.ಸಿ ವೇತನ ಪಡೆಯುವ ಮೌಲ್ಯಮಾಪಕರಿಗೆ ಸಂಭಾವನೆ ನೀಡುವುದನ್ನು ನಿಲ್ಲಿಸಲಾಗಿದೆ. ಪ್ರತಿಯನ್ನು ಲಗತ್ತಿಸಿದೆ.<br>ಆದ್ದರಿಂದ ಈ ಸಂಬಂಧದ ಆಕ್ಷೇಪಣೆ ಮೊತ್ತ ರೂ.22,860.00ಗಳನ್ನು ಕೈ ಬಿಡಲು ಕೋರಿದೆ. |
| **148. ಖಾಯಂ ನೌಕರರಿಗೆ ಪರೀಕ್ಷಾ ಕಾರ್ಯಗಳಿಗೆ ಸಂಭಾವನೆ ಪಾವತಿಸಿರುವುದು:- (ಲಲಿತ ಕಲೆಗಳ ಕಾಲೇಜು)**<br>2015-16ನೇ ಸಾಲಿನ ಪ್ರಾಂಶುಪಾಲರ ಬ್ಯಾಂಕ್ ಖಾತೆಯ ಹಣಕಾಸು ವ್ಯವಹಾರಗಳಲ್ಲಿ ಭರಿಸಲಾಗಿರುವ ವೆಚ್ಚದ ಓಚರ್‌ಗಳನ್ನು ಪರಿಶೀಲಿಸಲಾಗಿ, **ಅನುಬಂಧ-99ರಲ್ಲಿ** ವಿವರಿಸಲಾಗಿರುವ ವಿವರಗಳಂತೆ ಒಟ್ಟು ರೂ.8,050/-ಗಳನ್ನು ಪರೀಕ್ಷಾ ಸಂಭಾವನೆ ರೂಪದಲ್ಲಿ ಪಾವತಿಸಿರುವುದು ಕಂಡು ಬಂದಿರುತ್ತದೆ. ಆದರೆ ಕೆ.ಸಿ.ಎಸ್.ಆರ್. ನಿಯಮ 28(ಎ) (ಬಿ) (ಸಿ) (ಇ) ರನ್ವಯ ಪರೀಕ್ಷಾ ಕರ್ತವ್ಯವು ನೌಕರರುಗಳ ದಿನ ನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಈ ಮೇಲೆ ತಿಳಿಸಿರುವ ಪಾವತಿಯು ನಿಯಮ ಬಾಹಿರವಾಗಿರುತ್ತದೆ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000ರ ನಿಯಮ 41(5), (6), (7)ರ ನಿಯಮಗಳನ್ನು ಉಲ್ಲಂಘಿಸಿ ಸಂಭಾವನೆಯನ್ನು ಪಾವತಿಸಿರುವುದರಿಂದ, ನೀಡಲಾಗಿರುವ ಪರೀಕ್ಷಾ ಸಂಭಾವನೆಯ ಮೊತ್ತಗಳನ್ನು **ಅನುಬಂಧ-99ರಲ್ಲಿ** ವಿವರಿಸಲಾಗಿರುವ ನೌಕರರುಗಳಿಂದ **ರೂ.8,050/-ಗಳನ್ನು ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ, ಜಮೆ ಮಾಡಿದ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದೆ. | 2015-16ನೇ ಸಾಲಿನಲ್ಲಿ ನೌಕರರಿಗೆ ಪರೀಕ್ಷಾ ಕಾರ್ಯಕ್ಕೆ ಸಂಭಾವನೆಯನ್ನು ಪಾತಿಸುರುವ ಬಗ್ಗೆ ಅನುಬಂಧ-99ರ ರೀತ್ಯಾ ವಸೂಲಿಸಿ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಿದ್ದು ಸಂಬಂಧಪಟ್ಟ ನೌಕರರುಗಳಿಗೆ ಸೂಚನೆ ನೀಡಿ ವಸೂಲಾತಿ ಬಗ್ಗೆ ಅಗತ್ಯ ಕ್ರಮ ವಹಿಸಿ ಅವರುಗಳಿಂದ ವಸೂಲಿಸಿದ ಹಣವನ್ನು ಸಾಮಾನ್ಯ ಖಾತೆಗೆ ಜಮಾ ಮಾಡಿ ಚಲನ್ ಪ್ರತಿಗಳೊಂದಿಗೆ ವರದಿ ಸಲ್ಲಿಸುವುದಾಗಿ ನಿರ್ದೇಶಿಸಿದೆ. |
| **149. ಹೆಚ್ಚುವರಿ ವೇಳೆ ಕಾರ್ಯನಿರ್ವಹಿಸಿದ ಪ್ರಯುಕ್ತವೆಂದು ಸಂಭಾವನೆ ಪಾವತಿಸಿರುವುದು:- (ಕಾಲೇಜು ಅಭಿವೃದ್ಧಿ ಮಂಡಳಿ)**<br>2015-16ನೇ ಸಾಲಿನ ಶೈಕ್ಷಣಿಕ ವರ್ಷಗಳ ಸಂಕ್ಷಿಪ್ತ ಸಂಯೋಜನಾ ವರದಿಯ ಪ್ರತಿ ಸಿದ್ಧಪಡಿಸಲು ಹೆಚ್ಚುವರಿ ಗಂಟೆ ಕೆಲಸ ನಿರ್ವಹಿಸಿದ್ದಕ್ಕೆ ಹೆಚ್ಚುವರಿಯಾಗಿ ರೂ.25000/- ಗಳನ್ನು ಪಾವತಿಸಿದೆ.<br>ಕೆ.ಸಿ.ಎಸ್.ಆರ್.ನ 8(14)ರಲ್ಲಿ ತಿಳಿಸಿದಂತೆ ಸರ್ಕಾರಿ ನೌಕರನ ಕಾರ್ಯವು 24 ಗಂಟೆಗಳಾಗಿದ್ದು, | ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಸಿಡಿಸಿ/ಬಿ4/154/20005-06(ಇತರೆ) ದಿನಾಂಕ 30.4.2015ರ ಅನ್ವಯದಂತೆ ವ್ಯಾಪ್ತಿಗೆ ಬರುವ 2015 ಯುಜಿ ಮತ್ತು 93 ಸ್ನಾತಕೋತ್ತರ ಕೋರ್ಸುಗಳ ಸುಮಾರು 1585 ಪುಟಗಳ ವಿಸ್ತರಣಾ ವರದಿಗಳ 12 ಪ್ರತಿಗಳನ್ನು ಮತ್ತು 155 |

ಹೆಚ್ಚುವರಿ ವೇತನ ಪಾವತಿಸಲು ಅವಕಾಶವಿರುವುದಿಲ್ಲ. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:06/2017–18, ದಿ:26.03.2018ರಲ್ಲಿ ಸ್ಪಷ್ಟೀಕರಣ ನೀಡಲು ಕೋರಲಾಗಿತ್ತು. ಆದರೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಹಾಗಾಗಿ **ರೂ.25,000/–ಗಳನ್ನು ಸಂಬಂಧಪಟ್ಟವರಿಂದ ವಸೂಲಿ** ಮಾಡಲು ಸೂಚಿಸಿದೆ. ಪಾವತಿಯ ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ನೌಕರರ ಹೆಸರು | ಪದನಾಮ | ಪಾವತಿಸಿರುವ ಮೊತ್ತ ರೂ. |
|---|---|---|---|
| 1 | ಪಿ. ಮಾದಶೆಟ್ಟಿ | ಅಧೀಕ್ಷಕರು | 4,100 |
| 2 | ಕೆ.ಎಂ. ಮಹದೇವ | ಹಿರಿಯ ಸಹಾಯಕ | 2,000 |
| 3 | ಮಹಾದೇವು | ಪ್ರ.ದ.ಸ | 2,500 |
| 4 | ಎಂ. ಗುರುಸ್ವಾಮಿ | ಪ್ರ.ದ.ಸ | 2,500 |
| 5 | ರಾಜಶೇಖರಮೂರ್ತಿ | ದ್ವಿ.ದ.ಸ | 2,500 |
| 6 | ಮಂಜುನಾಥ್.ಬಿ.ಎಂ | ಟೆಕ್ನಿಷಿಯನ್ | 2,000 |
| 7 | ಪುಷ್ಪಲತಾ.ಟಿ | ಟಿ.ಸಿ.ಸಿ | 4,000 |
| 8 | ಮಂಜುನಾಥ್.ಎನ್ | ಅಟೆಂಡರ್ | 3,000 |
| 9 | ಜವರ | ನಿಲಯ ಸಹಾಯಕರು | 1,000 |
| 10 | ಪುಟ್ಟಜವರ | ಅಟೆಂಡರ್ | 500 |
| 11 | ಮಹಮ್ಮದ್ ಜಬಿ | ಡ್ರೈವರ್ | 900 |
| | | **ಒಟ್ಟು ರೂ.** | **25,000** |

ಪುಟಗಳ ಸಂಕ್ಷಿಪ್ತ ಯೋಜನೆಗಳ ವರದಿಯ 100 ಪ್ರತಿಗಳನ್ನು ಸಿದ್ಧಪಡಿಸುವ ಸಲುವಾಗಿ ನೌಕರರು ಕಛೇರಿ ವೇಳೆಯನ್ನು ಹೊರತುಪಡಿಸಿ ಕಾರ್ಯನಿರ್ವಹಿಸಿದುದರಿಂದ ಅವರ ಕಾರ್ಯ ವೈಖರಿಗನುಗುಣವಾಗಿ ಸಂಭಾವನೆ ನೀಡಲು ಮಂಜೂರಾತಿ ನೀಡಲಾಗಿದೆ.

ಲೆಕ್ಕ ತನಿಖೆಯಲ್ಲಿ ಸೂಚಿಸಿರುವಂತೆ ಇನ್ನು ಮುಂದೆ ಅಂದರೆ 2016–17ನೇ ಸಾಲಿನಿಂದ ಇಂತಹ ಸಂಭಾವನೆ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ ಎಂಬ ಮಾಹಿತಿಯನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

ಆದ್ದರಿಂದ ಪ್ರಸ್ತುತ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

**ಆದಾಯ ತೆರಿಗೆ/ಮಾರಾಟ ತೆರಿಗೆ/ಆಸ್ತಿ ತೆರಿಗೆ (Income Tax/VAT/Asset Tax)**

**150. ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ಪಾವತಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ (VAT) ಕಟಾಯಿಸದಿರುವುದು :– (ಹಣಕಾಸು ವಿಭಾಗ)**

ಮೈಸೂರು ವಿಶ್ವವಿದ್ಯಾನಿಲಯವು ಸ್ವಂತ ಮುದ್ರಣಾಲಯವನ್ನು ಹೊಂದಿದ್ದು, ವಿಶ್ವವಿದ್ಯಾನಿಲಯದ ಎಲ್ಲಾ ಲೇಖನ ಸಾಮಾಗ್ರಿ ಮತ್ತು ಇತರೆ ಮುದ್ರಣ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಮುದ್ರಣ ಕಾರ್ಯಕ್ಕೆ ಸಂಬಂಧಿಸಿದ ಕ್ರೆಡಿಟ್ ಬಿಲ್ಲುಗಳನ್ನು ಪರಿಶೀಲಿಸಿದಾಗ ವಾಣಿಜ್ಯ ತೆರಿಗೆ ಇಲಾಖಾ ನಿಯಮದಂತೆ ಪ್ರತಿ ಪಾವತಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ (ವ್ಯಾಟ್) ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡದಿರುವುದು ಕಂಡುಬಂದಿರುತ್ತದೆ. ಮಾರಾಟ ತೆರಿಗೆಯನ್ನು ಕಟಾಯಿಸದಿರುವುದಕ್ಕೆ ವಿಶ್ವವಿದ್ಯಾನಿಲಯವು

ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯವು ಇತರೆ ಅಂಗ ಸಂಸ್ಥೆಗಳಂತೆ ಒಂದು ಸಂಸ್ಥೆ. ಇದು ಖಾಸಗೀ, ವಾಣಿಜ್ಯ ಸಂಸ್ಥೆ ಆಗಿರುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಇತರೆ ಅಂಗ ಸಂಸ್ಥೆಗಳ ಬೇಡಿಕೆಗಳಿಗನುಸಾರವಾಗಿ ಮುದ್ರಣಾ ಕಾರ್ಯ ಕೈಗೊಂಡು ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡುವ ಕಾರ್ಯನಿರ್ವಹಿಸುತ್ತಿದೆ. ಈ ಮುದ್ರಿತ ಸಾಮಗ್ರಿಗಳನ್ನು ಖಾಸಗೀ ಮಾರಾಟಗಾರರಿಗೆ ಮಾರಾಟಕ್ಕಾಗಿ ಸರಬರಾಜು ಮಾಡಿದರೆ ಮಾತ್ರ ಮಾರಾಟ ತೆರಿಗೆ

<table>
<tr>
<td>4ಜಿ ವಿನಾಯಿತಿ ಹೊಂದಿರುವ ಸರ್ಕಾರದ ಆದೇಶವಿದ್ದಲ್ಲಿ ಆದೇಶ ಪ್ರತಿಯನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವುದು.</td>
<td>ವಿಧಿಸಬಹುದಾಗಿರುತ್ತದೆ. ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಯಾಗಿದ್ದು; ವಿಶ್ವವಿದ್ಯಾನಿಲಯದ ನಿಧಿಯಿಂದಲೇ ಮುದ್ರಣ ವೆಚ್ಚ ಭರಿಸಿ ನಮೂನೆಗಳನ್ನು ಮುದ್ರಿಸಿದ ಕಾರ್ಯಕ್ಕೆ ವಿಶ್ವವಿದ್ಯಾನಿಲಯದ ನಿಧಿಯಿಂದಲೇ ಭರಿಸುತ್ತಿರುವ ಅಂಗ ಸಂಸ್ಥೆಗಳಿಗೆ ಸರಬರಾಜು ಆದ ಫಾರಂಗಳಿಗೆ ಮಾರಾಟ ತೆರಿಗೆ ಕಟಾಯಿಸುವುದು ಸಮರ್ಪಕವಲ್ಲ. ಖಾಸಗೀ ಸಂಸ್ಥೆಗಳಿಂದ ಖರೀದಿಸಲು ಸಾಮಗ್ರಿಗಳಿಗೆ ಮಾರಾಟ ತೆರಿಗೆ ಕಟಾಯಿಸಲಾಗುತ್ತದೆ.<br>ಆದ್ದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.</td>
</tr>
<tr>
<td><u>153. ವಿವಿಧ ಔಷಧಿ ಸರಬರಾಜುದಾರರಿಗೆ ಎರಡುಬಾರಿ ಮೌಲ್ಯವರ್ಧಿತ ತೆರಿಗೆಯನ್ನು ಪಾವತಿಸಿರುವುದು :– (ಆರೋಗ್ಯ ಕೇಂದ್ರ, ಮಹಾರಾಜ, ಯುವರಾಜ ಕಾಲೇಜು ಆವರಣ)</u><br><br>2015–16ನೇ ಸಾಲಿನಲ್ಲಿ ವಿವಿಧ ಸರಬರಾಜುದಾರರಿಂದ ಖರೀದಿಸಿರುವ ಔಷಧಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಟೆಂಡರ್‌ನಲ್ಲಿ ಅಂಗೀಕರಿಸಲಾದ ದರಪಟ್ಟಿಯಲ್ಲಿ ಈಗಾಗಲೇ ಮೌಲ್ಯವರ್ಧಿತ ತೆರಿಗೆಯನ್ನು ಸೇರಿಸಿದ್ದರೂ ಸಹ ಮತ್ತೊಮ್ಮೆ ಪ್ರತ್ಯೇಕವಾಗಿ ಬಿಲ್ಲಿನಲ್ಲಿಯೂ ಮೌಲ್ಯವರ್ಧಿತ ತೆರಿಗೆಯನ್ನು ಸೇರಿಸಿ ಪಾವತಿಸಲಾಗಿದ್ದು, ಇದು ಎರಡುಬಾರಿ ಪಾವತಿಸಿದಂತಾಗಿದೆ. ಆದ್ದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದು, ವಿವಿಧ ಔಷಧಿ ಸರಬರಾಜುದಾರರಿಗೆ ಹೆಚ್ಚುವರಿಯಾಗಿ ಪಾವತಿಸಿರುವ ಒಟ್ಟು ರೂ.28,418/–ಗಳನ್ನು ಸಂಬಂಧಪಟ್ಟ ಸರಬರಾಜುದಾರರಿಂದ ವಸೂಲಿಸಿ ವಿಶ್ವವಿದ್ಯಾನಿಲಯ ಲೆಕ್ಕಶೀರ್ಷಿಕೆ ಖಾತೆಗೆ ಜಮೆ ಮಾಡಿ ಜಮೆ ಮಾಡಿದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ತಿಳಿಸಿದೆ. ವಿವರಗಳನ್ನು <u>ಅನುಬಂಧ–100ರಲ್ಲಿ</u> ವಿವರಿಸಲಾಗಿದೆ. (ವಿಚಾರಣಾ ಪತ್ರ ಸಂಖ್ಯೆ:11/2018–19 ದಿನಾಂಕ:05.06.2018ರಲ್ಲಿ ತಿಳಿಸಲಾಗಿತ್ತು.)</td>
<td>2015-16ನೇ ಸಾಲಿನಲ್ಲಿ ವಿವಿಧ ಔಷಧ ಸರಬರಾಜುದಾರರ ಬಿಲ್ಲುಗಳಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ವಾಸ್ತವ್ಯ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಪಾವತಿಸಲಾಗಿದ್ದುಅನುಬಂಧ 100ರ ರೀತ್ಯಾ ಹೆಚ್ಚುವರಿಯಾಗಿ ಪಾವತಿಸಿರುವ ಮೌಲ್ಯವರ್ಧಿತ ತೆರಿಗೆಯ ಒಟ್ಟು ಮೊತ್ತ ರೂ.28,418.00ಗಳ ಪೈಕಿ ಈ ಕೆಳಗೆ ವಿವರಿಸಿರುವ ಸಂಸ್ಥೆಗಳಿಂದ ಸದರಿ ಹೆಚ್ಚುವರಿ ಮೊತ್ತಗಳನ್ನು ವಸೂಲುಮಾಡಿ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಗೆ ಜಮಾಮಾಡಲಾಗಿದೆ. ಜಮಾ ವಿವರ ಕೆಳಗಿನಂತೆ ವಿವರಿಸಿದೆ.
<table>
<tr><td>1.ಮೆ॥ಮೇಟ ಮೆಡಿಕಲ್ಸ್ ಹುಬ್ಬಳ್ಳಿ.</td><td>ರೂ.22,002.00</td><td>ಚಲನ್ ಸಂಖ್ಯೆ:7935/27.11.2018 (ಚಲನ್ ಪ್ರತಿ ಲಗತ್ತಿಸಿದೆ)</td></tr>
<tr><td>2.ಮೆ॥ವಿನಯ್‌ಅಸೋಸಿಯೇಟ್ಸ್, ಮೈಸೂರು.</td><td>ರೂ.4,235.00</td><td>ಚಲನ್ ಸಂಖ್ಯೆ:7487/14.08.18 (ಚಲನ್ ಪ್ರತಿ ಲಗತ್ತಿಸಿದೆ)</td></tr>
<tr><td>ಒಟ್ಟು ರೂ</td><td>26,237.00</td><td></td></tr>
</table>
ಒಟ್ಟು ರೂ.26,237.00ಗಳ ಜಮಾ ಚಲನ್ ಪ್ರತಿಗಳನ್ನು ಈ ಕೂಡ ಲಗತ್ತಿಸುತ್ತಾ ಬಾಕಿ ಉಳಿದ ಮೊತ್ತ ರೂ.2181.00ಗಳನ್ನು ಔಷಧ ಸರಬರಾಜುದಾರರಾದ ಮೆ॥ ಸುಜಲ್ ಫಾರ್ಮ, ಬೆಂಗಳೂರು ರವರಿಂದ ಕೂಡಲೇ ವಸೂಲಿಸಿ ಜಮೆ ಮಾಡಿ ವರದಿಸಲ್ಲಿಸಲಾಗುವುದು.ಆದುದರಿಂದಕಂಡಿಕೆಯಒಟ್ಟುವಸೂಲಾತಿಮೊತ್ತರೂ.28,418.00ಗಳ ಪೈಕಿ ರೂ.26,237.00ಗಳ ವಸೂಲಾತಿಯನ್ನು ತೀರುವಳಿಗೊಳಿಸುವಂತೆ ಕೋರಿದೆ.</td>
</tr>
</table>

**154. ಖರೀದಿ ಬಿಲ್ಲುಗಳಲ್ಲಿ ಆದಾಯ ತೆರಿಗೆ ಹಾಗೂ ಟಿನ್ ಸಂಖ್ಯೆ ಇಲ್ಲದ ಪಾವತಿ ಓಚರ್‌ಗಳಲ್ಲಿ ಮಾರಾಟ ತೆರಿಗೆಯನ್ನು ಕಟಾಯಿಸಿ ಸಂಬಂಧಪಟ್ಟ ಇಲಾಖೆಗೆ ಪಾವತಿಸದಿರುವುದು :– (ಯುವರಾಜ ಕಾಲೇಜು)**

2015–16ನೇ ಸಾಲಿನ ಯುವರಾಜ ಕಾಲೇಜಿನ ವತಿಯಿಂದ ಎಲ್ಲಾ ಖಾತೆಗಳಲ್ಲಿ ವೆಚ್ಚ ಭರಿಸಲಾಗಿರುವ ವೋಚರ್ಸ್‌ಗಳನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ ಪಾವತಿಯ ವೋಚರ್‌ಗಳಲ್ಲಿನ ಮೂಲ ಬಿಲ್ಲುಗಳಲ್ಲಿ ಆದಾಯ ತೆರಿಗೆಯನ್ನು ಕಟಾಯಿಸದಿರುವುದು ಹಾಗೂ ವೆಚ್ಚದ ವೋಚರ್ಸ್‌ಗಳಲ್ಲಿ ಟಿನ್ ನಂ. ಇಲ್ಲದಿರುವ ವೋಚರ್‌ಗಳಿಗೆ ಮಾರಾಟ ತೆರಿಗೆಯನ್ನು ಮೂಲ ಪಾವತಿ ಬಿಲ್ಲುಗಳಲ್ಲಿ ಕಟಾಯಿಸಿ ಮಾರಾಟ ತೆರಿಗೆ ಇಲಾಖೆಗೆ ಪಾವತಿಸಬೇಕಾಗಿರುತ್ತದೆ. ಮೂಲ ಪಾವತಿಯ ಬಿಲ್ಲಿನಲ್ಲಿ ಆದಾಯ ತೆರಿಗೆ ಕಟಾಯಿಸದಿರುವ ಮೊತ್ತ ರೂ.2,00,432/– ಗಳು ಹಾಗೂ ಮಾರಾಟ ತೆರಿಗೆ ಕಟಾಯಿಸದಿರುವ ಮೊತ್ತ **ರೂ.2,00,432/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ಇಲಾಖೆಗೆ ಜಮೆ ಮಾಡಿ ಜಮೆ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–101ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ.

ಸಂಬಂಧಿಸಿದ ಎಲ್ಲಾ ಸಂಸ್ಥೆಗಳಿಗೆ ಪತ್ರ ವ್ಯವಹಾರ ಮಾಡಲಾಗಿದೆ. ಸಂಬಂಧಿಸಿದವರಿಂದ ವಸೂಲು ಮಾಡಿ ಆದಾಯ ತೆರಿಗೆ ಬಾಬ್ತು ಸಂಬಂಧಿಸಿದ ಖಾತೆಗಳಿಗೆ ಜಮೆ ಮಾಡಿ ಲೆಕ್ಕ ತನಿಖೆಗೆ ಒದಗಿಸಲಾಗುವುದು.

**155. ಖರೀದಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ, ಆದಾಯ ತೆರಿಗೆ ಮತ್ತು ರಾಜಧನಗಳ ಮೊಬಲಗುಗಳನ್ನು ಕಟಾಯಿಸದಿರುವುದು :– (ತೋಟಗಾರಿಕೆ ವಿಭಾಗ)**

2014–15 ರಿಂದ 2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ, ಕೆಲವು ಖರೀದಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ, ಆದಾಯ ತೆರಿಗೆ ಮತ್ತು ರಾಜಧನಗಳನ್ನು ಕಟಾಯಿಸದೆ ಇರುವ ವಿವರಗಳನ್ನು **ಅನುಬಂಧ–102ರಲ್ಲಿ** ವಿವರಿಸಲಾಗಿದ್ದು, ವಿವರಗಳನ್ವಯ ಒಟ್ಟು **ರೂ.11,761/–ಗಳನ್ನು ವಸೂಲಿಸಿ** ಸಂಬಂಧಪಟ್ಟ ಇಲಾಖೆಗಳಿಗೆ ತೆರಿಗೆ ಮೊಬಲಗುಗಳನ್ನು ಜಮಾ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

ತೋಟಗಾರಿಕೆ ವಿಭಾಗಕ್ಕೆ ಸಂಬಂಧಿಸಿದಂತೆ ಅನುಬಂಧ102ರಲ್ಲಿ ತಿಳಿಸಿರುವಂತೆ ಆಯಾ ಸರಬರಾಜು ಸಂಸ್ಥೆಗಳಿಂದ ಕಟಾವು ಮಾಡಬೇಕಾಗಿದ್ದ ಮಾರಾಟ ತೆರಿಗೆ, ಆದಾಯ ತೆರಿಗೆ ಹಾಗೂ ರಾಜಧನದ ಮೊತ್ತಗಳನ್ನು ವಸೂಲಿಸಿ ಸಂಬಂಧಿಸಿದ ಖಾತೆಗಳಿಗೆ ಜಮೆ ಮಾಡಲಾಗಿದೆ.

ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ | ಸಂಸ್ಥೆಯ ಹೆಸರು | ಬಿಆರ್ ಸಂಖ್ಯೆ | ಬಿಲ್ಲಿನ ಮೊತ್ತ | ಮಾರಾಟ ತೆರಿಗೆ | ಆದಾಯ ತೆರಿಗೆ | ರಾಜ ಧನ | ಒಟ್ಟು | ಚಲನ್ ಸಂಖ್ಯೆ ದಿನಾಂಕ |
|---|---|---|---|---|---|---|---|---|
| 1 | ಮೇ॥ ಎಂ.ಆರ್ ಎಂಟರ್ ಪ್ರೈಸಸ್. | 24/ 18.6.12 | 65000 | – | 1300 | – | 1300 | 0003/ 14.8.2018 |
| 2 | ಮೇ॥ ಗ್ರೀನ್ ಯಾರ್ಡ್ | 26/ 26.6.14 | 99150 | 3966 | 1983 | – | 5949 | 0004/ 14.8.2018 CR.081800 4000001880 |

| | | | | | | | | |
|---|---|---|---|---|---|---|---|---|
| 3 | ಮೇ॥ ಗ್ರೀನ್ ಯಾರ್ಡ್ | 84/ 16.2.16 | 34200 | 1368 | 684 | 1710 | 3762 | 0005/ 14.8.2018 CR.081808 5300006370 |
| 4 | ಮೆ॥ ಶಾ ಸೇಲ್ಸ್ ಅಂಡ್ ಸರ್ವಿಸಸ್ | 67/ 15.12.15 | 37500 | – | 750 | – | 750 | 0006/ 14.8.2018 CR.081800 4000001906 /16.8.18 |
| | | | 235850 | 5334 | 4717 | 1710 | 11761 | |

**ಮೊತ್ತಗಳನ್ನು ಸಂಬಂದಿಸಿದ ಖಾತೆಗಳಿಗೆ ಜಮೆ ಮಾಡಿರುವ ಬಗ್ಗೆ ಚಲನ್ ಪ್ರತಿಗಳನ್ನು ಲಗತ್ತಿಸಿದೆ. ಆದ್ದರಿಂದ ರೂ.11761.00ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ.**

**156. ಮುದ್ರಣ ವೆಚ್ಚಗಳ ಹಾಗೂ ಖರೀದಿಗಳ ಬಿಲ್ಲುಗಳಲ್ಲಿ ಆದಾಯ ತೆರಿಗೆ ಕಟಾಯಿಸದಿರುವುದು:– (ಮಹಾರಾಜ ಕಾಲೇಜು)**

2015–16ನೇ ಸಾಲಿನ ಲೆಕ್ಕತನಿಖೆಯಲ್ಲಿ ಮಹಾರಾಜ ಕಾಲೇಜಿನ ವಿವಿಧ ಖಾತೆಗಳಲ್ಲಿನ ಪಾವತಿಗಳಿಗೆ ಸಂಬಂಧಿಸಿದ ಓಚರ್‌ಗಳನ್ನು ಪರಿಶೀಲಿಸಲಾಗಿ ಕಾಲೇಜಿನ ವಾರ್ಷಿಕ ಸಂಚಿಕೆಯ ಮುದ್ರಣ ವೆಚ್ಚಗಳ ಮತ್ತು ಅವಶ್ಯಕವಿರುವ ವಿವಿಧ ವಸ್ತುಗಳ ಖರೀದಿಯ ಪಾವತಿಗಳಿಗೆ ಆದಾಯ ತೆರಿಗೆಯನ್ನು ಪಾವತಿಯ ಮೂಲ ಬಿಲ್ಲುಗಳಲ್ಲಿ ಕಟಾಯಿಸಿ ಆದಾಯ ತೆರಿಗೆ ಇಲಾಖೆಯ ಲೆಕ್ಕಶೀರ್ಷಿಕೆಗೆ ಪಾವತಿಸಬೇಕಾಗಿರುತ್ತದೆ. **ಅನುಬಂಧ–103ರಲ್ಲಿ** ವಿವರಿಸಿರುವಂತೆ ಬಿಲ್ಲುಗಳಲ್ಲಿ ಪಾವತಿಯ ಸಮಯದಲ್ಲಿ ಮೂಲ ಓಚರ್‌ಗಳಲ್ಲೇ ಆದಾಯ ತೆರಿಗೆಯನ್ನು ಕಟಾಯಿಸಿ ಪಾವತಿಸಬೇಕಿದ್ದ ಮೊತ್ತ **ರೂ.25,273.26 ಗಳನ್ನು ವಸೂಲಿಸಿ** ಆದಾಯ ತೆರಿಗೆ ಇಲಾಖೆಯ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ, ಜಮೆ ಮಾಡಲಾದ ವಿವರವನ್ನು ಲೆಕ್ಕತನಿಖೆಗೆ ಹಾಜರುಪಡಿಸಬೇಕೆಂದು ಸೂಚಿಸಿದೆ.

ಆದಾಯ ತೆರಿಗೆಯನ್ನು ಆಯಾ ಸಂಸ್ಥೆಗಳಿಂದ ವಸೂಲಿಸಿ ಜಮೆ ಮಾಡಿದ ನಂತರ ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ವಿವರ ಒದಗಿಸಲಾಗುವುದು.

| | |
|---|---|
| **157. ಆದಾಯ ತೆರಿಗೆ ಕಟಾಯಿಸದಿರುವುದು:– (ಲಲಿತ ಕಲೆಗಳ ಕಾಲೇಜು)**<br><br>2015–16ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ಪದವಿ/ಡಿಪ್ಲೊಮೊ ಮುಂತಾದ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆಯುವ ಉದ್ದೇಶದಿಂದ ಸ್ಥಳೀಯ ದಿನಪತ್ರಿಕೆಯಾದ Star of Mysore ನ ಪತ್ರಿಕೆಯಲ್ಲಿ ಪ್ರಕಟಿಸಲಾದ ಪ್ರಕಟಣೆಯ ಬಾಬ್ತು M/s Academy News Papers Pvt. Ltd. ಮೈಸೂರು ಇವರಿಗೆ ಪ್ರಕಟಣೆ ಬಿಲ್ಲು ಸಂಖ್ಯೆ:4912/ದಿನಾಂಕ:28.06.2015ರ ಬಿಲ್ಲಿಗೆ ಪ್ರತಿಯಾಗಿ ಧನಾದೇಶ ಸಂಖ್ಯೆ:142918/27.06.2015ರ ಮೂಲಕ ರೂ.35,000/– ಗಳನ್ನು ಪಾವತಿಸಿರುವುದಕ್ಕೆ ಆದಾಯ ಇಲಾಖೆ ಕಾಯ್ದೆ 194(ಸಿ) ಅನ್ವಯ ಶೇ.1ರಷ್ಟು ಆದಾಯ ತೆರಿಗೆ ರೂ.350/–ಗಳನ್ನು ಕಟಾಯಿಸದೆ ಬಿಲ್ಲು ಪಾವತಿಸಿರುವುದರಿಂದ ಆದಾಯ ತೆರಿಗೆ ಬಾಬ್ತು **ರೂ.350/– ಗಳನ್ನು ವಸೂಲಿ** ಮಾಡಿ ಆದಾಯ ಇಲಾಖೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಮೆ॥ ಅಕಾಡೆಮಿ ಪೇಪರ್ ಪ್ರೈ.ಲಿ ಮೈಸೂರು ಇವರಿಗೆ ಪ್ರಕಟಣೆ ಬಿಲ್ಲು ಬಾಬ್ತು ರೂ.35,000.00ಗಳನ್ನು ಪಾವತಿಸಿರುವ ಸಂಬಂಧ ಸದರಿಯವರಿಂದ ವಸೂಲಾಗಬೇಕಾದ ಆದಾಯ ತೆರಿಗೆ ಬಾಬ್ತು ರೂ.350.00ಗಳನ್ನು ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಚಲನ್ ಸಂಖ್ಯೆ.: 281, ದಿನಾಂಕ: 01.03.2019ರಲ್ಲಿ ಜಮಾ ಮಾಡಿದ್ದು ಚಲನ್ ಪ್ರತಿ ಲಗತ್ತಿಸಿರುತ್ತದೆ. ಆದರಿಂದ ರೂ.350.00ಗಳ ವಸೂಲಾತಿ ಕಂಡಿಕೆಯನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |
| **ಯೋಜನೆಗಳು (Projects)**<br><br>**158. The Nursery- co-operative society ltd. Bangalore ಇವರಿಗೆ ಮಾನಸಗಂಗೋತ್ರಿ ಆವರಣದಲ್ಲಿ ಉದ್ಯಾನವನ ಕಾಮಗಾರಿ ಮಾಡಿಸಲು ಹೆಚ್ಚುವರಿ ವೆಚ್ಚ ಭರಿಸಿರುವುದು :– (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಆಚರಣೆ ಸಂಬಂಧ (Centenary celebrations) ಮಾನಸಗಂಗೋತ್ರಿಯ ಎಲ್ಲಾ ಆವರಣದಲ್ಲಿ ಉದ್ಯಾನವನ ಕಾಮಗಾರಿಯನ್ನು ಮಾಡಿಸಲು The Nursery- co-operative society ltd. Bangalore ಇವರಿಗೆ ಕೆಳಕಂಡಂತೆ ಒಟ್ಟು ಮೊತ್ತ ರೂ. 17,96,225/–ಗಳನ್ನು ಪಾವತಿಸಲಾಗಿದೆ.<br><br>1) ಬಿ.ಆರ್ ಸಂಖ್ಯೆ: 60/15–16 ದಿ:25.11.2015 ಬಿಲ್ ಸಂಖ್ಯೆ:1068/19.11.2015 ರೂ. 921571 ಧನಾದೇಶ ಸಂಖ್ಯೆ: 987949/ ದಿ:08.12.2015<br>2) ಬಿ.ಆರ್ ಸಂಖ್ಯೆ: 59/15–16 ದಿ: 25.11.2015 ಬಿಲ್ ಸಂಖ್ಯೆ: 1068/ 23.11.2015 ರೂ.874654 ಧನಾದೇಶಸಂಖ್ಯೆ:987931/08.12.2015<br>ಒಟ್ಟು ರೂ.1796225/–<br><br>ಉದ್ಯಾನದ ಕಾಮಗಾರಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್06/61/2010–11,ದಿ:18.05.2015 ರಲ್ಲಿ ತೋಟಗಾರಿಕಾ ವಿಭಾಗಕ್ಕೆ ಸಾವಯವ ಗೊಬ್ಬರ, | ಸರ್ಕಾರದ ಅಧಿಸೂಚನೆ ಸಂಖ್ಯೆ:ಅಇ/133 ವೆಚ್ಚ 12/15, ದಿನಾಂಕ: 26.03.2015 ರನ್ವಯದಂತೆ ತೋಟಗಾರಿಕೆ ವಿಭಾಗದಲ್ಲಿ ಉತ್ತಮ ಗುಣಮಟ್ಟದ ಅಲಂಕಾರಿಕೆ ಗಿಡ, ತರಕಾರಿ, ಹೂವಿನ ಬೀಜಗಳು, ಓಷಧಿ ಸಾವಯಗೊಬ್ಬರ, ನರ್ಸರಿ ಪರಿಕರಗಳು, ಉದ್ಯಾನ ವನ ನಿರ್ಮಾಣ, ನಿರ್ವಹಣೆ ಇತ್ಯಾಧಿಗಳನ್ನು ಇಲಾಖೆಯು ನಿಗಧಿ ಪಡಿಸಿರುವ ದರದಲ್ಲೇ ಪೂರೈಕೆ ಮಾಡುವ ಕಾರ್ಯವನ್ನು ನೇರವಾಗಿ The Nursery- co-operative society ltd. Bangalore (ತೋಟಗಾರಿಕೆ ಇಲಾಖೆಯ ಒಂದು ಅಂಗ) ಇವರಿಗೆ ರೂ.15.00 ಲಕ್ಷಗಳ ಅನುದಾನ ವಂತಿಕೆಗೆ ಒಳಪಟ್ಟು ಒಂದು ವರ್ಷದ ಅವರಿಗೆ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ.4(ಜಿ)ರಡಿ ಪ್ರದತ್ತವಾಗಿರುವ ಅಧಿಕಾರ ಚಲಾಯಿಸಿ ತೋಟಗಾರಿಕೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ಅನುದಾನವು The Nursery- co-operative society ltd. Bangalore ಇವರಿಗೆ ನಿಗಧಿ ಮಾಡಿರುವ ಅನುದಾನವಾಗಿರುತ್ತದೆಯೇ ವಿನಹ ಮೈಸೂರು |

| | |
|---|---|
| ಹೂವಿನ ಬೀಜಗಳು ಮುಂತಾದ ಪರಿಕರಗಳನ್ನು ಖರೀದಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: D/133 ವೆಚ್ಚ–12/15 ದಿ:26.03.2015 ರ ಪ್ರಕಾರ ನೇರವಾಗಿ ಖರೀದಿಸಲು ರೂ.15.00ಲಕ್ಷಗಳ ಮಿತಿಗೊಳಪಟ್ಟು ಮೊತ್ತಕ್ಕೆ ಮಂಜೂರಾತಿ ನೀಡಿದೆ. ಬಿಲ್ಲುಗಳ ಪರಿಶೀಲನೆಯಿಂದ ರೂ.15.00 ಲಕ್ಷಕ್ಕೆ ಮೀರಿ ರೂ.2,96,225/–ಗಳ ಅಧಿಕ ವೆಚ್ಚ ಭರಿಸಲಾಗಿದೆ. ಹಾಗೂ ಕೆ.ಟಿ.ಪಿ.ಪಿ ಕಾಯ್ದೆ 2000 ನಿಯಮಗಳಂತೆ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಕರೆದು ಖರೀದಿಸಿರುವ ಬಗ್ಗೆ ಕಡತದಲ್ಲಿ ಮಾಹಿತಿ ಕಂಡು ಬಂದಿರುವುದಿಲ್ಲ. ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ: 157/ದಿ:20.01.2018 ರಲ್ಲಿ ಕೋರಲಾಗಿದ್ದು ಯಾವುದೇ ಮಾಹಿತಿ ಒದಗಿಸಿರುವುದಿಲ್ಲ. ನಿಯಮ ಪಾಲಿಸದೆ ಅಧಿಕ ವೆಚ್ಚ ಭರಿಸಲಾಗಿದ್ದು, ವಿವರಗಳನ್ನು ಒದಗಿಸುವವರೆಗೆ **ರೂ.2,96,225/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ವಿಶ್ವವಿದ್ಯಾನಿಲಯದ ತೋಟಗಾರಿಗೆ ವಿಭಾಗಕ್ಕೆ ಮಂಜೂರು ಮಾಡಿದ ಅನುದಾನ ಆಗಿರುವುದಿಲ್ಲ.<br><br>ಆದ್ದರಿಂದ, ಅನುದಾನಕ್ಕಿಂತ ಹೆಚ್ಚಿನ ವೆಚ್ಚ ಭರಿಸಿರುವುದಿಲ್ಲ.<br><br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ವಿ.ವಿ ಶತಕ/17(2)/2014–15, ದಿನಾಂಕ:25.06.2015 ಮತ್ತು ಆದೇಶ ಸಂಖ್ಯೆ:ವಿ.ವಿ ಶತಕ/17(3)/2014–15, ದಿನಾಂಕ:25.06.2015ರಲ್ಲಿ ಈ ಕೆಳಕಾಣಿಸಿದ ಕಾರ್ಯಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಗಿದೆ.<br><br>1 – ತೋಟಗಾರಿಕೆ ಅಭಿವೃದ್ಧಿಗಾಗಿ(ಗ್ರಂಥಾಲಯ ಕಟ್ಟಡ ಎದುರು) – 8,74,654/–<br>2 – ತೋಟಗಾರಿಕೆ ಅಭಿವೃದ್ಧಿಗಾಗಿ(ಅರ್ಥಶಾಸ್ತ್ರ ವಿಭಾಗ ಮುಂಭಾಗ) – 9,21,571/–<br>ಒಟ್ಟು – 17,96,225/–<br><br>ಹಾಗೂ ಸದರಿ ವೆಚ್ಚ ರೂ.17,96,225/–ಗಳನ್ನು ಶತಮಾನೋತ್ಸವ ಆಚರಣೆ 1916–2016 ಶೀರ್ಷಿಕೆಯಿಂದ ಭರಿಸಲು ಅನುಮೋದಿಸಲಾಗಿರುತ್ತದೆ.<br><br>ವಿಶ್ವವಿದ್ಯಾನಿಲಯದ ಆದೇಶದ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ; ರೂ.2,96,225/–ಗಳ ವಸೂಲಾತಿ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ. |

| | |
|---|---|
| **159. ವಿಶ್ವವಿದ್ಯಾನಿಲಯದ ವಿವಿಧ ಸಂಶೋಧನಾ ಕಾರ್ಯದ ಯೋಜನೆಗಳ ವೆಚ್ಚದ ವಿವರ ಹಾಗೂ (ಯು.ಸಿ)ಗಳನ್ನು ಸಲ್ಲಿಸದಿರುವುದು:– (ಹಣಕಾಸು ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ಅಂಗಸಂಸ್ಥೆಗಳಿಗೆ 2015–16ನೇ ಸಾಲಿನಲ್ಲಿ ಭಾರತ ಸರ್ಕಾರದ ಯು.ಜಿ.ಸಿ/ಸಿಎಸ್ಐಆರ್/DEC/PURSE/DANIDA/ ಇತರೆ ಪ್ರಾಯೋಜಿತ ಸಂಸ್ಥೆಗಳಿಂದ ಸಂಶೋಧನಾ ಕಾರ್ಯಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳು ಹಾಗೂ ಸಂಶೋಧನಾ ವೆಚ್ಚ ಭರಿಸಲಾದ ವೆಚ್ಚದ ವಿವರಗಳು ಸಂಶೋಧನಾ ಪ್ರಗತಿಯ ವರದಿಗಳನ್ನು ಪ್ರಾಯೋಜಿತ ಸಂಸ್ಥೆಗೆ ಸಲ್ಲಿಸಿರುವ ವಿವರಗಳು/ ಅನುದಾನ ಬಳಕೆ ಪ್ರಮಾಣ ಪತ್ರಗಳನ್ನು (ಯು.ಸಿ) ಸಲ್ಲಿಸಿರುವ ವಿವರಗಳು ಹಾಗೂ 2015–16ನೇ ಸಾಲಿನಲ್ಲಿ ಪ್ರಗತಿಯಲ್ಲಿರುವ ಎಲ್ಲಾ ಪ್ರಾಯೋಜಿತ ಸಂಶೋಧನಾ ಕಾರ್ಯಗಳ ಪ್ರಗತಿಯ ವಿವರಗಳು ಹಾಗೂ ವೆಚ್ಚದ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:58/ ದಿ:06.12.2017 ರಲ್ಲಿ ಕೋರಲಾಗಿದ್ದು ಯಾವುದೇ ಉತ್ತರ ನೀಡಿರುವುದಿಲ್ಲ. ಕೂಡಲೇ ಮಾಹಿತಿಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ. ಹಾಗೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಡಿವಿ4/677/93–94 ದಿ:14.05.1998 ರ ಪ್ರಕಾರ ಪ್ರಾಯೋಜಿತ ಸಂಸ್ಥೆಗಳು ಭಾರತ ಸರ್ಕಾರದ ಯೋಜನೆಗಳ ಯು.ಜಿ.ಸಿ ಹಾಗೂ ಇತರೆ ಸಂಸ್ಥೆಗಳಿಂದ ಬಿಡುಗಡೆಯಾದ ಅನುದಾನವನ್ನು ಎಸಿ/ಡಿಸಿ ಬಿಲ್ಲುಗಳ ಮೂಲಕ ಸ್ವೀಕೃತಿ ಮತ್ತು ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದ Principal Investigator & ವಿಭಾಗಗಳ ಅಧ್ಯಕ್ಷರುಗಳಿಂದ ದೃಢೀಕರಿಸಿದ ನಗದು ಪುಸ್ತಕವನ್ನು ಮತ್ತು ಖರೀದಿಸಿದ ಸಾಮಗ್ರಿಗಳ ದಾಸ್ತಾನು ಲೆಕ್ಕಗಳ ದಾಸ್ತಾನು ಪುಸ್ತಕ (Stock book)ವನ್ನು ವಿಭಾಗದಲ್ಲಿ ನಿರ್ವಹಿಸತಕ್ಕದ್ದು ಎಂದು ನಿರ್ದೇಶಿಸಲಾಗಿದೆ. ಅದರಂತೆ ವಿವರಗಳನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಅಂಗ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ವಿವಿಧ ಯೋಜನೆಗಳು ಮತ್ತು ಸಂಶೋಧನಾ ಕಾರ್ಯಕ್ಕೆ ಹಾಗೂ ಇತರೆ ಸೆಮಿನಾರ್, ವರ್ಕ್‌ಷಾಪ್‌ಗಳಿಗೆ ಮತ್ತು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ವಿವಿಧ ಮೂಲಗಳು ಅಂದರೆ ಭಾರತ ಸರ್ಕಾರದ ಯುಜಿಸಿ, ಸಿಎಸ್ಐಆರ್, ಡಿಎಸ್‌ಟಿ; ಕರ್ನಾಟಕ ಸರ್ಕಾರದ ಹಾಗೂ ಇತರೆ ಪ್ರಾಯೋಜಿತ ಸಂಸ್ಥೆಗಳಿಂದ ಅನುದಾನ ಬಿಡುಗಡೆ ಆಗುತ್ತದೆ. ಈ ಅನುದಾನಗಳು ಬಿಡುಗಡೆ ಆದ ಕೂಡಲೇ ಆಯಾ ವಿಭಾಗದವರು; ಅಂಗ ಸಂಸ್ಥೆಗಳು ಅವರವರಿಗೆ ಸಂಬಂಧಿಸಿದ ಯೋಜನೆಗಳ ಅನುದಾನ ಬಿಡುಗಡೆಗೆ ಸಂಬಂಧಿಸಿದ ನಿಯಮ ಮತ್ತು ಷರತ್ತುಗಳಿಗನುಸಾರ ಯೋಜನೆಗಳನ್ನು ಅನುಷ್ಟಾನಗೊಳಿಸಿ ಪೂರ್ಣಗೊಳಿಸುತ್ತಾರೆ. ಹಾಗೂ ಆಯಾ ವಿಭಾಗಗಳ ಯೋಜನೆಗಳ ಸಂಬಂಧ ಹಣಕಾಸು ಅಧಿಕಾರಿಗಳ ಮುಖಾಂತರ ಪಾವತಿಗಳನ್ನು ಮಾಡುತ್ತಾರೆ ಮತ್ತು ಆಯಾ ವಿಭಾಗಗಳಲ್ಲಿ ಈ ಸಂಬಂಧ ಲೆಕ್ಕ ಪತ್ರಗಳನ್ನು ನಿರ್ವಹಿಸುತ್ತಾರೆ. ಆಯಾ ವಿಭಾಗಗಳ ಮತ್ತು ಯೋಜನೆಗಳಿಗೆ ಸಂಬಂಧಿಸಿದ ಬಳಕೆ ಪ್ರಮಾಣ ಪತ್ರಗಳನ್ನು ಆಗಿಂದಾಗ್ಗೆ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳ ಸಹಿಯೊಂದಿಗೆ ಅಪರ ನಿರ್ದೇಶಕರು, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಕರ್ನಾಟಕ ಸರ್ಕಾರ ಮೈಸೂರು ಇವರ ಪರಿಶೀಲನೆ ಮತ್ತು ದೃಢೀಕರಣಗಳೊಂದಿಗೆ ಆಯಾ ಅನುದಾನ ನೀಡಿಕೆ ಪ್ರಾಧಿಕಾರಗಳಿಗೆ ಸಲ್ಲಿಸಲಾಗುತ್ತದೆ. ಈ ಸಂಬಂಧ ವಿವಿಧ ಯೋಜನೆ ಮತ್ತು ಸಂಶೋಧನೆಗೆ ಸಂಬಂದಿಸಿದಂತೆ ಹಣಕಾಸು ಶಾಖೆಯಲ್ಲಿ ಪ್ರತ್ಯೇಕವಾಗಿ ನಗದು ಪುಸ್ತಕ, ಓಚರ್ಸ್ ಇತ್ಯಾದಿ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಇಟ್ಟು ಲೆಕ್ಕ ಪರಿಶೋಧನಾ ಸಮಯದಲ್ಲಿ ಪರಿಶೀಲನೆಗೆ ಹಾಜರುಪಡಿಸಲಾಗುತ್ತದೆ. |

| | |
|---|---|
| **160. ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಧ್ಯಯನ ಕೇಂದ್ರಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗಿ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸದೆ ಇರುವ ಬಗ್ಗೆ :– (ಹಣಕಾಸು ವಿಭಾಗ).**<br><br>ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಧ್ಯಯನ ಕೇಂದ್ರ ಸ್ಥಾಪಿಸುವ ಸಲುವಾಗಿ ಕರ್ನಾಟಕ ಸರ್ಕಾರದ ನಡಾವಳಿ ಸರ್ಕಾರಿ ಆದೇಶ ಸಂಖ್ಯೆ:ಇಡಿ/130/ಯುವಿವಿ/2013/ಬೆಂಗಳೂರು ದಿನಾಂಕ:12.03.2015ರ ಪ್ರಕಾರ (14–15ರಲ್ಲಿ) ರೂ.5 ಕೋಟಿ ಗಳನ್ನು ಬಿಡುಗಡೆ ಮಾಡಿದ್ದು, ರಾಜಶ್ರೀ ನಾಲ್ವಡಿಕೃಷ್ಣರಾಜ ಒಡೆಯರ್ ಸಾಮಾಜಿಕ ಅಧ್ಯಯನಕೇಂದ್ರ ಸ್ಥಾಪಿಸಲು ಕ್ರಮಕೈಗೊಳ್ಳುವುದು ಹಾಗೂ ಹಣ ಉಪಯುಕ್ತತೆ ಪ್ರಮಾಣಪತ್ರವನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿ ಆದೇಶ ಹೊರಡಿಸಿದ್ದರೂ ಸಹ, 5 ಕೋಟಿರೂಗಳನ್ನು 3/2015ರಲ್ಲಿ ಎಸ್.ಪಿ.ಎಸ್ ಖಾತೆಗೆ ಜಮಾಮಾಡಿ ದಿನಾಂಕ:30.07.2015ರಲ್ಲಿ Endowment ಖಾತೆಗೆ ಹಣ ವರ್ಗಾಯಿಸಿ ತದನಂತರ ದಿನಾಂಕ:07.08.2015ರಲ್ಲಿ 5 ಕೋಟಿ ಹಣವನ್ನು 3 ವರ್ಷಗಳ ಅವಧಿಗೆ ಠೇವಣಿಯಲ್ಲಿ ಇಡಲಾಗಿದೆ, ಇದರಿಂದಾಗಿ ಕರ್ನಾಟಕ ಸರ್ಕಾರದ ಆದೇಶ ಪತ್ರದ ಷರತ್ತಿಗೆ ಅನುಗುಣವಾಗಿ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಧ್ಯಯನ ಕೇಂದ್ರ ಸ್ಥಾಪಿಸದೆ ಯಾವುದೇ ರೀತಿ ಹಣ ಉಪಯುಕ್ತತೆ ಪ್ರಮಾಣ ಪತ್ರವನ್ನು ಸಲ್ಲಿಸದೆ ಇರುವುದು ಸರ್ಕಾರಿ ಆದೇಶವನ್ನು ಪಾಲಿಸದೆ ಇರುವುದರಿಂದ ಹಾಗೂ 3/15 ರಿಂದ 30.07.2015ರವರೆಗೆ ಎಸ್.ಪಿ.ಎಸ್ ಖಾತೆಯಲ್ಲಿ 5 ಕೋಟಿ ಹಣ ಉಳಿಸಿರುವುದರ ಬಗ್ಗೆ ಬ್ಯಾಂಕ್ ನೀಡಿರುವ ಬಡ್ಡಿಯ ಮೊತ್ತದ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವುದು ಸಂಶಯವಾಗಿರುತ್ತದೆ. ಹಾಗೂ 5.00 ಕೋಟಿ ಮೊತ್ತವನ್ನು ಬಳಸದೆ/ಉಪಯೋಗಿಸದೆ ಉಳಿಕೆ ಇರುವುದು ನಿರ್ಬಂಧಿತ ಅನುದಾನ (blocked Grant) ಆದ್ದರಿಂದ **ರೂ.5.00 ಕೋಟಿಯನ್ನು ಆಕ್ಷೇಪಿಸಲಾಗಿದೆ.** | ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಧ್ಯಯನ ಕೇಂದ್ರಕ್ಕೆ ಸರ್ಕಾರದ ಆದೇಶ ಸಂಖ್ಯೆ:ಇಡಿ/130/ಯುಎಂವಿ/2013, ದಿನಾಂಕ: 11.9.2014ರ ಅನ್ವಯದಂತೆ ರೂ.5,00,00,000/–ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಸಂಬಂಧ ಇತಿಹಾಸ ವಿಭಾಗದಲ್ಲಿ ಹಾಲಿ ಇದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠಕ್ಕೆ ವಿಲೀನಗೊಳಿಸಲಾಗಿದೆ. ಸದರೀ ಅನುದಾನದ ಮೊತ್ತವು ಕಾರ್ಫಸ್ ಫಂಡ್ ಆಗಿದ್ದು ಸದರೀ ಮೊತ್ತಕ್ಕೆ ಬರುವ ಬಡ್ಡಿಯಲ್ಲಿ ವೆಚ್ಚಗಳನ್ನು ಭರಿಸುತ್ತಿರುವುದರಿಂದ ಉಪಯುಕ್ತತೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಇದುವರೆಗೂ ಸಲ್ಲಿಸಲಾಗಿರುವುದಿಲ್ಲ. ಸದರಿ ಮೊತ್ತವನ್ನು 3/2015 ರಿಂದ 7/2015ರ ವರೆಗೆ ಎಸ್.ಪಿ.ಎಸ್ ಖಾತೆಯಲ್ಲಿರಿಸಿದ್ದು; ಬಂದ ಬಡ್ಡಿ ಹಣವನ್ನು ದತ್ತಿ ಖಾತೆಗೆ ವರ್ಗಾಯಿಸಿಕೊಳ್ಳಲಾಗಿದೆ. ಇದುವರೆಗೆ ಒಟ್ಟು ಮೊತ್ತ ರೂ.44,26,076/–ಗಳ ಬಡ್ಡಿ ಲಭಿಸಿದ್ದು; ಈ ಪೈಕಿ ರೂ.5,95,876/–ಗಳ ವೆಚ್ಚ ಭರಿಸಲಾಗಿದೆ.<br><br>ಸರ್ಕಾರಿ ದಿನಾಂಕ:11.9.2014ರ ಆದೇಶದ ಪ್ರತಿ ದಿನಾಂಕ: 1.2.2014 ರಂದು ಮತ್ತು ದಿನಾಂಕ 30.7.2015 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರತಿ; ಕುಲಾಧಿಪತಿಗಳಿಂದ ಅನುಮೋದನೆಯಾಗಿರುವ (ದಿನಾಂಕ 2.4.2016ರ ಸರ್ಕಾರದ ಪತ್ರದ ಮೂಲ) ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ; ಕಂಡಿಕೆಯ ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |
| **ಎ.ಸಿ/ಎನ್.ಡಿ.ಸಿ/ಡಿ.ಸಿ ಬಿಲ್ಲು (A.C/N.D.C/D.C Bill)**<br><br>**161. ಡಿ.ಸಿ.ಬಿಲ್ಲುಗಳ ಮೂಲಕ ಪಾವತಿಸಿರುವ ಬಿಲ್ಲುಗಳಿಗೆ ದರಪಟ್ಟಿಗಳನ್ನು ನೀಡದಿರುವುದು:– (ಆಡಳಿತ ವಿಭಾಗ)**<br>2015–16ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಡಿ.ಸಿ. ಬಿಲ್ಲುಗಳನ್ನು ಪರಿಶೀಲಿಸಲಾಗಿ ಐದು ಸಾವಿರಕ್ಕಿಂತ ಮೇಲ್ಪಟ್ಟು ಒಂದು ಲಕ್ಷದವರೆಗಿನ ಪಾವತಿಗಳಿಗೆ ಕೆ.ಟಿ.ಪಿ.ಪಿ ಕಾಯ್ದೆ 2000ರನ್ವಯ ಕೊಟೇಷನ್ (ದರಪಟ್ಟಿ) ಮೂಲಕ ಸಾಮಾಗ್ರಿಗಳನ್ನು ಖರೀದಿ ಮಾಡಬೇಕಾಗಿದೆ. ಹಾಗೂ ಹಲವು ಪ್ರಕರಣಗಳಲ್ಲಿ ಒಂದೇ ಸಂಸ್ಥೆಗೆ ಭಾಗಗಳಾಗಿ ವಿಂಗಡಿಸಿ ತಮ್ಮ ಅಧಿಕಾರ ವ್ಯಾಪ್ತಿಗೆ ಬರುವಂತೆ ಮಾಡಿಕೊಂಡು ಪಾವತಿಸಿದೆ. ಇದು ನಿಯಮಬಾಹಿರ. ಈ ಸಂಬಂಧ ಸಭೆ, ಸಮಾರಂಭಗಳಿಗೆ ಊಟೋಪಾಚಾರ ಬಾಬ್ತು ಹಾಗೂ ಶಾಮಿಯಾನ ಹಾಕಿಸಿದ ಬಾಬ್ತು ರೂ.7,05,919/–ಗಳ ಪಾವತಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು | 2015-16ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ನಡೆದ ವಿವಿಧ ಸಭೆ ಸಮಾರಂಭಗಳಿಗೆ ವಿವಿಧ ದಿನಾಂಕಗಳಂದು ದೇಶ ಮತ್ತು ವಿದೇಶಗಳಿಂದ ಗಣ್ಯಾತಿ ಗಣ್ಯರುಗಳಿಗೆ ಹಾಗೂ ಸಂಶೋಧಕರುಗಳಿಗೆ ತಂಗುವಿಕೆ ಮತ್ತು ಊಟೋಪಚಾರ ಹಾಗೂ ಶಾಮಿಯಾನ ಇತರೆ ಪೀಠೋಪಕರಣಗಳ ಬಾಡಿಗೆ ಬಾಬ್ತು ಸಂಬಂಧವಾಗಿ ಮಾನ್ಯ ಕುಲಪತಿಯವರ ಅನುಮೋದನೆಯ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶದನ್ವಯ ಘಟನೋತ್ತರ ಮಂಜೂರಾತಿ ಆದೇಶ ಪಡೆದುಕೊಂಡು ಸದರಿ ವೆಚ್ಚವನ್ನು ಭರಿಸಿದೆ. ಆದೇಶದ ಪ್ರತಿಗಳನ್ನು ಲಗತ್ತಿಸಿ |

| | |
|---|---|
| ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:17/2017–18/08.03.2018ರಲ್ಲಿ ಕೋರಲಾಗಿತ್ತು. ಆದರೆ ಯಾವುದೇ ಮಾಹಿತಿಯನ್ನು ಲಿಖಿತವಾಗಿ ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ **ಅನುಬಂಧ–104ರಲ್ಲಿ** ವಿವರಿಸಿರುವಂತೆ **ರೂ.7,05,919/–ಗಳನ್ನು ಆಕ್ಷೇಪಣೆಯಲ್ಲಿ** ಇಡಲಾಗಿದೆ. | ಸಲ್ಲಿಸುತ್ತಾ ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.7,05,919/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **162. ಪೂರ್ಣ ಪ್ರಮಾಣದಲ್ಲಿ ಡಿ.ಸಿ. ಬಿಲ್ಲುಗಳನ್ನು ಹಾಜರುಪಡಿಸದಿರುವುದು:– (ಆಡಳಿತ ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ 2015–16ನೇ ಸಾಲಿನ ಲೆಕ್ಕಪರಿಶೋಧನಾ ಸಮಯದಲ್ಲಿ ಹಾಜರುಪಡಿಸಿರುವ ದಾಖಲಾತಿಗಳಂತೆ ಬಿ.ಆರ್.ವಹಿಯಲ್ಲಿ ದಾಖಲಾಗಿರುವಂತೆ ಡಿ.ಸಿ.ಬಿಲ್ಲುಗಳಲ್ಲಿ ಕೆಲವು ಡಿ.ಸಿ. ಬಿಲ್ಲುಗಳಲ್ಲಿ ಮಾತ್ರ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಇನ್ನೂ ಹಲವಾರು ಡಿ.ಸಿ. ಬಿಲ್ಲುಗಳನ್ನು ಲೆಕ್ಕ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ಬಾಕಿಯಿರುವ ಡಿ.ಸಿ. ಬಿಲ್ಲುಗಳನ್ನು ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:13/2017–18 ದಿನಾಂಕ:06.03.2018ರಲ್ಲಿ ಕೋರಲಾಗಿತ್ತು. ಆದರೆ **ಅನುಬಂಧ–105ರಲ್ಲಿ** ವಿವರಿಸಿರುವಂತೆ ಒಟ್ಟು ರೂ.18,25,886/– ಗಳ ಡಿ.ಸಿ. ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸುವವರೆಗೂ ಸದರಿ ಮೊತ್ತ **ರೂ.18,25,886/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಅಧಿಕಾರಿಗಳು ಡ್ರಾಯಿಂಗ್ ಆಧಿಕಾರಿಯಾಗಿದ್ದು; ಕುಲಸಚಿವರು ಆಡಳಿತ ಕಛೇರಿಯೂ ಸೇರಿದಂತೆ ಎಲ್ಲಾ ಬಿಲ್ಲುಗಳನ್ನೂ ಪಾವತಿಗಾಗಿ ಹಣಕಾಸು ಶಾಖೆಗೆ ಕಳುಹಿಸಿಕೊಡಲಾಗುತ್ತದೆ. ಹಣಕಾಸು ಶಾಖೆಯಲ್ಲಿ ಪಾವತಿ ನಂತರ ಎಲ್ಲಾ ಓಚರ್‌ಗಳೂ ಹಣಕಾಸು ಶಾಖೆಯಲ್ಲೇ ಉಳಿಯುತ್ತವೆ. ಹಣಕಾಸು ಶಾಖೆಯಲ್ಲಿ ಎಲ್ಲಾ ಪಾವತಿಗಳಿಗೂ ಪ್ರತ್ಯೇಕವಾಗಿ ಶೀರ್ಷಿಕೆವಾರು ನಗದು ಪುಸ್ತಕಗಳನ್ನು ನಿರ್ವಹಿಸಲಾಗಿದ್ದು; ಲೆಕ್ಕ ತನಿಖಾ ಸಮಯದಲ್ಲಿ ಈ ಎಲ್ಲಾ ಡಿ.ಸಿ ಬಿಲ್ಲುಗಳನ್ನು ನಗದು ಪುಸ್ತಕದೊಂದಿಗೆ ತಾಳೆ ನೋಡಿ ಲೆಕ್ಕಪರಿಶೋಧಕರು ಪರಿಶೀಲನೆ ನಡೆಸಿರುತ್ತಾರೆ. ಜೆರಾಕ್ಸ್ ಪ್ರತಿ ಡಿ.ಸಿ ಬಿಲ್ಲುಗಳನ್ನು ಮಾತ್ರ ಆಡಳಿತ ಶಾಖೆಯಲ್ಲಿ ನಿರ್ವಹಿಸಲಾಗಿದ್ದು; ಲೆಕ್ಕ ಪರಿಶೋಧನಾ ಸಮಯದಲ್ಲಿ ಅವುಗಳನ್ನು ಹಾಜರುಪಡಿಸಲಾಗಿತ್ತು.<br><br>ಆದ್ದರಿಂದ ಆಕ್ಷೇಪಣೆ ಮೊತ್ತ ರೂ.18,25,886/–ಗಳನ್ನು ತೀರಿವಳಿಗೊಳಿಸಲು ಕೋರಿದೆ. |
| **163. ಎ.ಸಿ.ಬಿಲ್ಲುಗಳ ಮೂಲಕ ಡ್ರಾ ಮಾಡಿರುವ ಮೊತ್ತಕ್ಕೆ ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸದಿರುವುದು:– (ಆಡಳಿತ ವಿಭಾಗ)**<br>2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಲ್ಲಿ ನಗದು ಪುಸ್ತಕದಲ್ಲಿ ದಾಖಲಾಗಿರುವಂತೆ ಒಟ್ಟು ರೂ.18,37,930/–ಗಳನ್ನು ವಿಶ್ವವಿದ್ಯಾನಿಲಯದ 95ನೇ ಘಟಿಕೋತ್ಸವ, ವಾಹನ ಖರೀದಿ, ಕುಲಸಚಿವರ ಅತಿಥಿಭತ್ಯೆ, ವಾಹನಗಳ ದುರಸ್ತಿ/ವಿಮಾ ಪಾಲಿಸಿ ಹಾಗೂ ಇತರೆ ಕಾರಣಗಳಿಗಾಗಿ, ಎ.ಸಿ.ಬಿಲ್ಲುಗಳ ಮೂಲಕ ಮುಂಗಡ ಹಣವನ್ನು ಡ್ರಾ ಮಾಡಲಾಗಿದೆ. ಹೀಗೆ ಡ್ರಾ ಮಾಡಿದ ಎ.ಸಿ.ಬಿಲ್ಲುಗಳಿಗೆ 1958ರ ಸಾದಿಲ್ವಾರು ವೆಚ್ಚದ ಕೈಪಿಡಿಯ ನಿಯಮ 36, 37ಗಳಂತೆ ಎನ್.ಡಿ.ಸಿ. ಬಿಲ್ಲುಗಳನ್ನು ಒಂದು ತಿಂಗಳೊಳಗೆ ಸಲ್ಲಿಸಬೇಕಾಗಿದೆ. ಹಿಂದಿನ ಎ.ಸಿ.ಬಿಲ್ಲುಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದ ಹೊರತು ಮತ್ತೊಂದು ಎ.ಸಿ.ಬಿಲ್ಲುಗಳನ್ನು ಡ್ರಾ ಮಾಡುವಂತಿಲ್ಲ. ಆದರೆ ಹಿಂದಿನ ಬಿಲ್ಲುಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದಿದ್ದರೂ ಸಹ ಮತ್ತೊಮ್ಮೆ ಎ.ಸಿ.ಬಿಲ್ಲುಗಳನ್ನು ಡ್ರಾ ಮಾಡಿರುವುದು ನಿಯಮಗಳಿಗೆ ವಿರುದ್ಧವಾಗಿದೆ. | ಈ ಕಂಡಿಕೆಯಲ್ಲಿ ತಿಳಿಸಿರುವ ಮೊತ್ತ ರೂ.18,27,930/–ಗಳ ಎ.ಸಿ ಬಿಲ್ಲುಗಳ ಮುಂಗಡಗಳೂ ಹೊಂದಾಣಿಕೆ ಆಗಿರುತ್ತವೆ.<br><br>ಈ ಪೈಕಿ ತಕ್ಷಣಕ್ಕೆ ಲಭ್ಯವಿರುವ ರೂ.14,41,930/–ಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆಗಳನ್ನು ಅವಶ್ಯಕ ಚಲನ್ ಪ್ರತಿ ಹಾಗೂ ದನಾಧೇಶವನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ.<br><br>ಆದ್ದರಿಂದ ರೂ.14,41,930/–ಗಳ ವಸೂಲಾತಿ ಮೊತ್ತವನ್ನು ತೀರುವಳಿಗೊಳಿಸಲು ಕೋರಿದೆ.<br><br>ಉಳಿದ ಮೊತ್ತ ರೂ.3,86,000/–ಗಳಿಗೆ ಹೊಂದಾಣಿಕೆ ವಿವರಗಳನ್ನು ಆದಷ್ಟು ಜಾಗ್ರತೆಯಿಂದ ತನಿಖಾ ಕಛೇರಿಗೆ ಸಲ್ಲಿಸಲಾಗುವುದು. |

| | |
|---|---|
| ಮುಂದುವರೆದಂತೆ ಇಲಾಖೆಗೆ ವಾಹನ ಖರೀದಿಗೆ 1) ರೂ.2,50,000/– ಚೆಕ್ ನಂ:538179/ 21.05.2015, 2) ರೂ.3,00,000/– ಚೆಕ್ ನಂ:538291/19.12.2015, 3) ರೂ.3,00,000/– ಗಳು ಚೆಕ್ ನಂ:5141600 ರಲ್ಲಿನಂತೆ ಒಟ್ಟು ರೂ.8,50,000/–ಗಳನ್ನು ಡ್ರಾ ಮಾಡಿದೆ. ಎಂ.ಸಿ.ಇ. ನಿಯಮಾವಳಿಗಳಂತೆ ರೂ.2,00,000/– ಗಳಿಗಿಂತ ಹೆಚ್ಚಿನ ಮೊತ್ತದ ಎ.ಸಿ. ಬಿಲ್ಲುಗಳನ್ನು ಡ್ರಾ ಮಾಡಲು ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿದೆ. ಆದರೆ ಇಲ್ಲಿ ಅನುಮತಿ ಪಡೆದಿರುವ ಮಾಹಿತಿಯಿರುವುದಿಲ್ಲ. ಹಾಗೂ ಎ.ಸಿ. ಬಿಲ್ಲುಗಳಿಗೆ ನಿಗಧಿತ ಅವಧಿಯೊಳಗೆ ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರದ ಸಂಖ್ಯೆ:1) 01/2017–18/20.02.2018, 2) 02 & 03/26.02.2018, 3) 12/06.03.2018, 4) 18/09.03.2018ರಲ್ಲಿ ಕೋರಲಾಗಿತ್ತು. ಆದರೆ ಪೂರ್ಣವಾಗಿ ಮಾಹಿತಿಗಳನ್ನು ನೀಡಿರುವುದಿಲ್ಲ. ಭಾಗಶಃ ನೀಡಿರುತ್ತಾರೆ. ಮುಂದುವರೆದಂತೆ ಎ.ಸಿ.ಬಿಲ್ಲುಗಳನ್ನು ಅತ್ಯಂತ ತುರ್ತು ಸಂದರ್ಭಗಳಲ್ಲಿ ಮಾತ್ರ ಡ್ರಾ ಮಾಡಬೇಕಾಗಿರುತ್ತದೆ. ಆದರೆ ಸುಮಾರು ಮೂರು ವರ್ಷಗಳಿಗೂ ಮೇಲ್ಪಟ್ಟು ಎ.ಸಿ.ಬಿಲ್ಲುಗಳಲ್ಲಿ ಡ್ರಾ ಮಾಡಿರುವ ಮೊತ್ತಕ್ಕೆ ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸದಿರುವುದರಿಂದ **ಅನುಬಂಧ–106ರಲ್ಲಿ** ತಿಳಿಸಿರುವಂತೆ ಒಟ್ಟು ಮೊತ್ತ **ರೂ.18,27,930/– ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿ** ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಲು ಹಾಗೂ ಕಾನೂನಿನಂತೆ ಕ್ರಮವಹಿಸಲು ಸೂಚಿಸಿದೆ. | |
| **164. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವಕೋಶ ಪುನರ್ ಮುದ್ರಣ ಕಾರ್ಯಕ್ಕಾಗಿ ಬಿಡುಗಡೆಯಾದ ಹಣವನ್ನು ವಿನಿಯೋಗಿಸದಿರುವುದು :– (ಹಣಕಾಸು ವಿಭಾಗ)**<br>ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ಕನ್ನಡ ವಿಶ್ವಕೋಶ ನಗದುಪುಸ್ತಕವನ್ನು ಪರಿಶೀಲಿಸಲಾಗಿ ಕನ್ನಡ ವಿಶ್ವಕೋಶ ಸಂಪುಟ ರಚನೆಗಾಗಿ ಸರ್ಕಾರದಿಂದ ರೂ.1.00ಕೋಟಿ ಅನುದಾನ 2008–09ರಲ್ಲಿ ಬಿಡುಗಡೆಯಾಗಿದ್ದು, ಸರ್ಕಾರದ ಅನುದಾನವನ್ನು ನಿಗದಿತ ಅವಧಿಯೊಳಗೆ ನಿಗದಿತ ಉದ್ದೇಶಕ್ಕೆ ಬಳಸಿಕೊಳ್ಳದೆ ಎ.ಸಿ ಬಿಲ್ಲು ಮೂಲಕ ಡ್ರಾ ಮಾಡಿ ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುವುದು ಕಂಡುಬಂದಿದೆ. ಯಾವುದೇ ನಿಧಿಯಲ್ಲಿರುವ ಹಣವು ಕೂಡಲೇ ಬಳಕೆ ಮಾಡಲು ಉದ್ದೇಶಿಸಿದ್ದಲ್ಲಿ, ಸದರಿ ಹಣವನ್ನು ಠೇವಣಿ ಮಾಡಲು ಅವಕಾಶವಿರುತ್ತದೆ. ಆದರೆ ಠೇವಣಿ ಉದ್ದೇಶಕ್ಕೆ ಎ.ಸಿ ಬಿಲ್ಲಿನ ಮೂಲಕ ಡ್ರಾ ಮಾಡಿರುವ ಕ್ರಮ ಸರಿಯಲ್ಲ. ಎ.ಸಿ. ಬಿಲ್ಲಿನ ಮೂಲಕ ಡ್ರಾ ಮಾಡುವಾಗ ಮುಂಗಡ ಹಣಕ್ಕೆ ಹೊಂದಾಣಿಕೆ ವಿವರಗಳನ್ನು ಹಣ ಡ್ರಾ ಮಾಡಿದ 30 ದಿವಸಗಳೊಳಗಾಗಿ ಖರ್ಚು ಮಾಡಿ ಲೆಕ್ಕ ಸಲ್ಲಿಸಬೇಕಾಗಿರುತ್ತದೆ. ಆದರೆ ಇಲ್ಲಿ ಹೀಗೆ ಮಾಡದೆ ನಿಶ್ಚಿತ ಠೇವಣಿಯಲ್ಲಿಡಲಾಗಿದೆ ಹಾಗೂ ಅನುದಾನ ಬಳಕೆಯಾಗದಿರುವ ಬಗ್ಗೆ ಸೂಕ್ತ ಕಾರಣಗಳನ್ನು ನೀಡುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ: 86/ ದಿನಾಂಕ:23.12.2017ರಲ್ಲಿ ಕೋರಲಾಗಿದ್ದು, ಮಾಹಿತಿ ನೀಡಿರುವುದಿಲ್ಲ. ಈ ಬಗ್ಗೆ 2013–14ರ ಮೈಸೂರು ವಿಶ್ವವಿದ್ಯಾನಿಲಯ ವಾರ್ಷಿಕ ಲೆಕ್ಕ ತಪಾಸಣಾ ವರದಿಯಲ್ಲಿ ಆಕ್ಷೇಪಣೆ ಮಾಡಲಾಗಿತ್ತು. ಪ್ರಸ್ತುತ 2015–16ನೇ ಲೆಕ್ಕ ತಪಾಸಣಾ | ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್1/68/1970–71 ದಿನಾಂಕ 05–11–2016 ರ ಅನ್ವಯದಂತೆ ಕನ್ನಡ ವಿಶ್ವಕೋಶ ಪುನರ್ ಮುದ್ರಣ ಕಾರ್ಯಕ್ಕೆ ಸರ್ಕಾರದಿಂದ ಬಿಡುಗಡೆ ಆಗಿದ್ದ ಮೊತ್ತ ರೂ1.00 ಕೋಟಿಯ ಪೈಕಿ ರೂ34,20,000.00ಗಳನ್ನು ಸದರೀ ಖಾತೆಯಿಂದ ಪ್ರಸಾರಾಂಗದ ಆವರ್ತನಾ ನಿಧಿಗೆ ವರ್ಗಾವಣೆ ಮಾಡಿಕೊಳ್ಳಲು ಹಾಗೂ ವೆಚ್ಚ ಭರಿಸಲು ಮಂಜೂರಾತಿ ನೀಡಲಾಗಿದೆ.ಪ್ರತಿಯನ್ನು ಲಗತ್ತಿಸಿದೆ.<br>ಇದರನ್ವಯ, ತನಿಖಾ ವರದಿಯ ಭಾಗ–4 ರ ಕಂಡಿಕೆ 25.00 ರಲ್ಲಿನ ಉತ್ತರದಲ್ಲಿ ವಿವರಿಸಿರುವಂತೆ ನಿಯಮಾನುಸಾರ ಇ ಪ್ರೊಕ್ಯೂರ್‌ಮೆಂಟ್ ಟೆಂಡರ್ ನಿಯಮ ಪಾಲಿಸುವುದರೊಂದಿಗೆ ವಿಶ್ವಕೋಶ ಪುನರ್ ಮುದ್ರಣಾ ಕಾರ್ಯವನ್ನು ಕಡಿಮೆದರ ನಮೂದಿಸಿದ್ದ ಸಂಸ್ಥೆಗೆ ವಹಿಸಿಕೊಟ್ಟು 2016–2017ನೇ ಸಾಲಿನಲ್ಲಿ ರೂ34,20,000.00ಗಳ ವೆಚ್ಚಗಳನ್ನು ಭರಿಸಲಾಗಿದೆ. ಸರ್ಕಾರದಿಂದ ಅನುದಾನದ ಮೊತ್ತವು ಕನ್ನಡ ವಿಶ್ವಕೋಶ ಮುದ್ರಣ ಕಾರ್ಯಕ್ಕಾಗಿಯೇ ಬಿಡುಗಡೆ ಆಗಿರುವುದರಿಂದ ಸಮಯಾನುಸಾರ ಅವಶ್ಯಕತೆಗನುಸಾರವಾಗಿ |

| | |
|---|---|
| ಸಂದರ್ಭದಲ್ಲಿ ಕನ್ನಡ ವಿಶ್ವಕೋಶ ನಿಧಿಯಲ್ಲಿನ ಬಿಡುಗಡೆಯಾದ ಹಣವನ್ನು ಸಂಪುಟ ರಚನೆಯ ಮುದ್ರಣ ಕಾರ್ಯದ ನಿಗದಿತ ಉದ್ದೇಶಕ್ಕೆ ಬಳಸದೆ ಹಣ ಬಿಡುಗಡೆಯಾಗಿ 7 ವರ್ಷಗಳಾದರೂ ಫಲಪ್ರದವಾಗಿ ಯೋಜನೆಗೆ ಬಳಸದಿರುವುದನ್ನು ಲೆಕ್ಕ ತಪಾಸಣೆಯಲ್ಲಿ ಗಮನಿಸಿದೆ. ಹಿಂದಿನ ಸಾಲುಗಳಿಂದಲೂ ಅನುದಾನ ಸದ್ಬಳಕೆಯಾಗದೆ ವಿಶ್ವವಿದ್ಯಾನಿಲಯದಲ್ಲೆ ಅನುದಾನ ಮುಂದುವರೆಸಿರುವುದು ಸರ್ಕಾರವು ನಿಗದಿತ ಉದ್ದೇಶಕ್ಕೆ ಬಿಡುಗಡೆ ಮಾಡಿರುವ ಅನುದಾನವನ್ನು ಬಳಸಿಕೊಳ್ಳದೆ ಅನುದಾನವನ್ನು ನಿರ್ಬಂಧಪಡಿಸಲಾಗಿದೆ (Block) ಎಂದು ಅಭಿಪ್ರಾಯಿಸಿದೆ. ಕೂಡಲೇ ಈ ಕುರಿತು ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ. ಹಾಗೂ ಬಿಡುಗಡೆಯಾಗಿರುವ ಹಣವನ್ನು ನಿಗದಿತ ಉದ್ದೇಶಕ್ಕೆ ನಿಯಮಾವಳಿಗಳ ರೀತ್ಯಾ ಬಳಸಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಸರ್ಕಾರಕ್ಕೆ ಹಿಂದಿರುಗಿಸಲು ಸೂಚಿಸಿದೆ. ನಿಗದಿತ ಉದ್ದೇಶದ ಹಣವನ್ನು ಸೂಕ್ತ ಸಮಯದಲ್ಲಿ ಬಳಸದೇ ಯೋಜನೆಯನ್ನು ಅನುಷ್ಠಾನಗೊಳಿಸದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. | ನಿಯಮಗಳನ್ನು ಪಾಲಿಸುವುದರೊಂದಿಗೆ ಮುದ್ರಣಾ ಕಾರ್ಯ ಮಾಡಿಸಿ ಪಡೆಯಲಾಗಿರುತ್ತದೆ. ಈ ಮುದ್ರಣಾ ಕಾರ್ಯವು ಮುಂದುವರಿದ ಕಾರ್ಯವಾಗಿರುವುದರಿಂದ ಮತ್ತು ಸರ್ಕಾರದಿಂದ ಬಿಡುಗಡೆ ಆಗಿರುವ ಅನುದಾನವು ಅದೇ ಉದ್ದೇಶಕ್ಕೆ ಆಗಿರುವುದರಿಂದ ಮುದ್ರಣಾ ಕಾರ್ಯ ಮುಗಿಯುವವರೆಗೆ ಹಣವನ್ನು ಇಟ್ಟುಕೊಂಡು ಖರ್ಚುಗಳನ್ನು ಭರಿಸುವುದು ಅನಿವಾರ್ಯವಾಗಿರುತ್ತದೆ.<br><br>ಆದ್ದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| **<u>165. 103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಖಾತೆಯಡಿ ಎ.ಸಿ. ಬಿಲ್ಲಿನ ಮೂಲಕ ಮುಂಗಡ ಡ್ರಾ ಮಾಡಿ ನಿರ್ದಿಷ್ಟ ಉದ್ದೇಶಕ್ಕೆ ಬಳಸದೆ ವಿಳಂಬವಾಗಿ ಪೂರ್ಣ ಹಣವನ್ನು ಹಿಂದಿರುಗಿಸಿರುವುದು:– (ಹಣಕಾಸು ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ 103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್–2016 ರಲ್ಲಿ Audio Visual facilities ಕಾರ್ಯಕ್ರಮಕ್ಕಾಗಿ ಎ.ಸಿ. ಬಿಲ್ಲಿನ ಮೂಲಕ ಮುಂಗಡ ಹಣವನ್ನು ಎ.ಸಿ ಬಿಲ್ಲು ದಿನಾಂಕ:08.09.2015, ಧನಾದೇಶ ಸಂಖ್ಯೆ:512893/ ದಿ:09.09.2015 ರಲ್ಲಿ ಮುಂಗಡ ಹಣ ರೂ.10.00 ಲಕ್ಷ ನೀಡಲಾಗಿದೆ. ಮುಂಗಡ ಹಣವನ್ನು ಬ್ಯಾಂಕ್ ಖಾತೆ ಸಂಖ್ಯೆ: 64148299721ಯಲ್ಲೆ ಉಳಿಸಿಕೊಂಡಿದ್ದು, ನಿರ್ದಿಷ್ಟ ಉದ್ದೇಶಕ್ಕೆ ಬಳಸದೆ ಜಿಆರ್ಎ ಖಾತೆಗೆ ಧನಾದೇಶ ಸಂಖ್ಯೆ: 521563/ ದಿ:31.03.2016 ಬ್ಯಾಂಕ್ ಚಲನ್ ಸಂಖ್ಯೆ: 15954/ ದಿ:31.03.2016 ರೂ.10.00 ಲಕ್ಷಗಳನ್ನು ವಿಳಂಬವಾಗಿ ಜಮೆ ಮಾಡಲಾಗಿದೆ. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ–36, 37 ರಂತೆ ಮುಂಗಡದ ಹಣಕ್ಕೆ 1 ತಿಂಗಳೊಳಗಾಗಿ ಎನ್.ಡಿ.ಸಿ ಬಿಲ್ಲು ಸಲ್ಲಿಸಬೇಕಾಗಿರುತ್ತದೆ. ಅನುದಾನ ಬಳಸಿಕೊಳ್ಳದೆ 6 ತಿಂಗಳು ವಿಳಂಬವಾಗಿ ಬ್ಯಾಂಕ್‌ಗೆ ಜಮೆ ಮಾಡಿರುವುದು ನಿಯಮಬಾಹಿರವಾಗಿದ್ದು ವಿಳಂಬದ ಅವಧಿಗೆ ಬಡ್ಡಿ ಹಣವನ್ನು ವಸೂಲಿಸಲು ಸೂಚಿಸಿದೆ ಹಾಗೂ ಇಂತಹ ಖಾತೆಗಳಿಗೆ ಹಣ ಜಮಾ ಮಾಡಿದವರ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸುವುದು. | ಮೈಸೂರು ವಿಶ್ವವಿದ್ಯಾನಿಲಯದ 103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್–2016ರ Audio Visual Facilities ಕಾರ್ಯಕ್ರಮಕ್ಕಾಗಿ ಎ.ಸಿ ಬಿಲ್ಲಿನ ಮೂಲಕ ಹಣವನ್ನು ಸಾಮಾನ್ಯ ರೆವಿನ್ಯೂ ಖಾತೆ ಸಂಖ್ಯೆ 54007591471ರ ಧನಾದೇಶ ಸಂಖ್ಯೆ 512893 ದಿನಾಂಕ 09.09.2015 ರಂದು ರೂ 10.00ಲಕ್ಷಗಳನ್ನು ಪಡೆದಿದ್ದು ಸ್ಥಳೀಯ ಕಾರ್ಯದರ್ಶಿ ಭಾರತೀಯ ವಿಜ್ಞಾನ ಕಾಂಗ್ರೆಸ್ ಖಾತೆ ಸಂಖ್ಯೆ 64172141733ಕ್ಕೆ ದಿನಾಂಕ:11.09.2015ರಲ್ಲಿ ಜಮಾ ತೆಗೆದುಕೊಳ್ಳಲಾಗಿದೆ. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್–2/73/2015–16 ದಿನಾಂಕ 03.09.2015ರನ್ವಯ ದಿನಾಂಕ 19.08.2015 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಮತ್ತು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸ್ಥಳೀಯ ಕಾರ್ಯದರ್ಶಿ 103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಮೈಸೂರು ಅವರಿಗೆ ದಿನಾಂಕ:03.01.2016 ರಿಂದ 07.01.2016ರವರೆಗೆ ಜರುಗಲಿರುವ ಭಾರತೀಯ ವಿಜ್ಞಾನ ಕಾಂಗ್ರೆಸ್–2016 ಸಮಾರಂಭದ ಪೂರ್ವಭಾವಿ ಸಿದ್ಧತೆಗಳಿಗಾಗಿ ಮುಂಗಡವಾಗಿ ಪಡೆದ ಹಣಕ್ಕೆ ಹೊಂದಾಣಿಕೆ (ಎನ್.ಡಿ.ಸಿ) ಹುಂಡಿಗಳನ್ನು ಸಮಾರಂಭ ಮುಗಿದ ನಂತರ ಅಂದರೆ ದಿನಾಂಕ 07.01.2016 ರಿಂದ 31.03.2016 ಒಳಗಾಗಿ ಸಲ್ಲಿಸಲು ಅನುಮತಿಸಲಾಗಿದೆ. ಅಲ್ಲದೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಜಿ.ಎಲ್2/71/2015–16 ದಿನಾಂಕ 21.09.2015 ರಂದು |

<table>
<tr>
<td></td>
<td>103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾರಂಭದ ಪೂರ್ವ ಸಿದ್ಧತೆಗೆ ಸಂಬಂಧಪಟ್ಟ ಕೆಲಸಗಳನ್ನು ಪಾರದರ್ಶಕ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕಾರ್ಯನಿರ್ವಹಿಸಲು ಒಟ್ಟು ವೆಚ್ಚ ರೂ.10,21,00,000/–ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. (ಕ್ರಮಾಂಕ–03ರಲ್ಲಿ ರೂ.15,00,000/–) ಆದ್ದರಿಂದ ಹಿಂದೆ ಪಡೆದಿದ್ದ ಮುಂಗಡ ಹಣವನ್ನು ಭಾರತೀಯ ವಿಜ್ಞಾನ ಕಾಂಗ್ರೆಸ್ ಖಾತೆಯಲ್ಲಿಯೇ ಉಳಿಸಿಕೊಂಡಿದ್ದು ದಿನಾಂಕ31.03.2016ರಂದು ಜಿ.ಆರ್.ಎಖಾತೆಗೆ ಜಮಾ ಮಾಡಲಾಗಿದೆ.<br><br>ವಿಶ್ವವಿದ್ಯಾನಿಲಯದ ಆದೇಶದನ್ವಯ ಸ್ಥಳೀಯ ಕಾರ್ಯದರ್ಶಿ ಭಾರತೀಯ ವಿಜ್ಞಾನ ಕಾಂಗ್ರೆಸ್ ಖಾತೆ ಸಂಖ್ಯೆಯಲ್ಲಿ ಉಳಿದ ಮೊತ್ತ ಮತ್ತು ಬಡ್ಡಿ ಸೇರಿದಂತೆ ಒಟ್ಟು ರೂ.2,46,55,103/–ಗಳನ್ನು ದಿನಾಂಕ 14.02.2017ರಂದು ವಿಶ್ವವಿದ್ಯಾನಿಲಯದ ಶತಮಾನೋತ್ಸವ ನಿಧಿ ಖಾತೆ ಸಂಖ್ಯೆ 64188362460 ಕ್ಕೆ ಜಮಾ ಮಾಡಿದೆ. ರೂ 10.00ಲಕ್ಷಗಳ ಜಮಾ ವಿಳಂಬದ ಅವಧಿಗೆ ಬಂದ ಬಡ್ಡಿಯನ್ನೂ ಸಹ ಜಿ.ಆರ್.ಎ. ಖಾತೆಗೆ ಜಮಾ ಮಾಡಲಾಗಿರುತ್ತದೆ ಎಂದು ನಿವೇದಿಸುತ್ತಾ ವಿಶ್ವವಿದ್ಯಾನಿಲಯದ ಆದೇಶದ ಜೆರಾಕ್ಸ್ ಪ್ರತಿ ಮತ್ತು ಆಯಾಯ ಬ್ಯಾಂಕ್ ಖಾತೆಯ ಡೆಬಿಟ್ ಮತ್ತು ಕ್ರೆಡಿಟ್ ವಿವರದ ಜೆರಾಕ್ಸ್ ಪ್ರತಿ ಲಗತ್ತಿಸಿ ಸಲ್ಲಿಸಿದೆ.</td>
</tr>
<tr>
<td><u>166. ಎ.ಸಿ ಬಿಲ್ಲಿನ ಮೂಲಕ ಪಡೆದ ಮುಂಗಡದ ಮೊತ್ತಕ್ಕೆ ಎನ್.ಡಿ.ಸಿ ಬಿಲ್ಲುಗಳ ಹೊಂದಾಣಿಕೆಯಾಗದಿರುವುದು:– (ಹಣಕಾಸು ವಿಭಾಗ)</u><br><br>ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನವರೆಗೆ ಎ.ಸಿ ಬಿಲ್ಲುಗಳ ಮೂಲಕ ರೂ.2,95,57,698/– ಮುಂಗಡ ಹಣ ಡ್ರಾ ಮಾಡಲಾಗಿರುತ್ತದೆ. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ 37ರನ್ವಯ ಎ.ಸಿ ಬಿಲ್ಲಿನ ಮುಂಗಡ ಹಣ ಡ್ರಾ ಮಾಡಿದ್ದಲ್ಲಿ 30 ದಿನಗಳೊಳಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಬೇಕಾಗಿರುತ್ತದೆ. ನಿಗದಿತ ಅವಧಿಯೊಳಗೆ ಎನ್.ಡಿ.ಸಿ ಬಿಲ್ಲುಗಳು ಹೊಂದಾಣಿಕೆಯಾಗದಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ: 99/ದಿ:22.01.2018 ರನ್ನು ನೀಡಲಾಗಿದ್ದು ಯಾವುದೇ ಉತ್ತರ ಬಂದಿರುವುದಿಲ್ಲ.<br><br>ಸಂಕ್ಷಿಪ್ತ ಸಾದಿಲ್ವಾರು ಬಿಲ್ಲು (ಎ.ಸಿ ಬಿಲ್ಲು) ಮೂಲಕ ಮೊಬಲಗನ್ನು ಡ್ರಾ ಮಾಡುವುದು ತುರ್ತು ಅನಿವಾರ್ಯ ಸಂದರ್ಭಗಳಿದ್ದಲ್ಲಿ ಮಾತ್ರ ಹಣ ಡ್ರಾ ಮಾಡಬೇಕಾಗಿರುತ್ತದೆ. ಹಾಜರುಪಡಿಸಲಾದ ಎನ್.ಡಿ.ಸಿ ಬಿಲ್ಲುಗಳನ್ನು ಪರಿಶೀಲಿಸಿದಾಗ ಉಪಕರಣಗಳ/ಸಾಮಗ್ರಿಗಳ ಖರೀದಿಗಳ ಬಗ್ಗೆ ಹಣ ಡ್ರಾ</td>
<td>ಈ ಕಂಡಿಕೆಯಲ್ಲಿ ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಿದ ಮುಂಗಡ ಮೊತ್ತಗಳಿಗೆ ಎನ್.ಡಿ.ಸಿ ಬಿಲ್ಲುಗಳ ಮೂಲಕ ಹೊಂದಾಣಿಕೆ ಆಗಿಲ್ಲವೆಂಬುದಾಗಿ ಮೊತ್ತ ರೂ 2,95,57,698/– ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.<br><br>ಆದರೆ, ಕಂಡಿಕೆಯೊಂದಿಗೆ ಲಗತ್ತಿಸಿರುವ ಅನುಬಂಧ 107ರ ನಾಲ್ಕು ತಃಖ್ತೆಯನ್ವಯ ಈ ಕೆಳಕಾಣಿಸಿದಂತೆ ಒಟ್ಟು ಮೊತ್ತ ರೂ.1,04,00,152/–ಗಳು ಹೊಂದಾಣಿಕೆ ಆಗದೇ ಬಾಕಿ ಉಳಿದಿರುವ ಮೊತ್ತವಾಗಿರುತ್ತದೆ.<br><br><table><tr><td><u>2014-15</u></td><td><u>30,05,000/-</u><br><u>13,65,500/-</u></td></tr><tr><td><u>2015-16</u></td><td>50,000/-</td></tr></table></td>
</tr>
</table>

<table>
<tr>
<td>ಮಾಡಿದ್ದು, ಇದು ತುರ್ತು ಅನಿವಾರ್ಯತೆ ಇಲ್ಲದಿರುವುದು ಕಂಡು ಬಂದಿದೆ. ಇಂತಹ ಪ್ರಕರಣಗಳಲ್ಲಿ ಉಪಕರಣಗಳ ಸರಬರಾಜು ಅಗತ್ಯತೆ ಪಡೆದುಕೊಂಡು ಖರೀದಿ ಪ್ರಕ್ರಿಯೆ ನಿಯಮಾನುಸಾರ ಮಾಡಿ ಕ್ರೆಡಿಟ್ ಬಿಲ್ ಪಡೆದು ಡಿ.ಸಿ ಬಿಲ್ಲುಗಳ ಮೂಲಕ ಹಣ ಪಾವತಿಸಬೇಕಾಗಿರುತ್ತದೆ. ಆದರೆ, ಸದರಿ ಪ್ರಕರಣಗಳಲ್ಲಿ ಅನಾವಶ್ಯಕವಾಗಿ ಎ.ಸಿ ಬಿಲ್ಲಿನ ಮೂಲಕ ತುರ್ತು ಸಂದರ್ಭ ಇಲ್ಲದಿದ್ದರೂ ಮುಂಗಡಹಣ ಡ್ರಾ ಮಾಡಲಾಗಿದೆ. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ–37 ರ ಪ್ರಕಾರ ಈ ಮಾಹೆಯಲ್ಲಿ ಪಡೆದ ಹಣಕ್ಕೆ ಮುಂದಿನ ಮಾಹೆಯ 7ನೇ ತಾರೀಖಿನೊಳಗಾಗಿ ಹೊಂದಾಣಿಕೆ ಬಿಲ್ಲನ್ನು ಸಲ್ಲಿಸಬೇಕಾಗಿರುತ್ತದೆ. ಎ.ಸಿ ಬಿಲ್ಲಿನ ಮೂಲಕ ಪಡೆದ ಮುಂಗಡದ ಮೊಬಲಗು ಹೊಂದಾಣಿಕೆಯಾಗದಿರುವುದರಿಂದ ವಿವರಗಳನ್ನು ಲೆಕ್ಕ ತಪಾಸಣೆಗೆ ಒದಗಿಸುವವರೆಗೆ. 2015–16ನೇ ಸಾಲಿನವರೆಗಿನ (ಹಿಂದಿನ ಸಾಲುಗಳ ಎ.ಸಿ ಬಿಲ್ಲು ಹಣವು ಸೇರಿ) ರೂ.2,95,57,698/–ಗಳನ್ನು ಸಂಬಂಧಿತರಿಗೆ ಆರ್ಥಿಕ ಹೊಣೆಗಾರಿಕೆ ನಿಗದಿಪಡಿಸಿ, ಸದರಿ ಮೊತ್ತವನ್ನು ಬಡ್ಡಿ ಸಮೇತ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ವಿವರವನ್ನು ಲೆಕ್ಕ ತಪಾಸಣೆಗೆ ಒದಗಿಸಲು ತಿಳಿಸಲಾಗಿದೆ. ವಿವರವನ್ನು <u>ಅನುಬಂಧ–107ರಲ್ಲಿ</u> ನೀಡಿದೆ.</td>
<td>
<table>
<tr><td></td><td><u>59,79,652/-</u></td></tr>
<tr><td>ಒಟ್ಟು ಮೊತ್ತ</td><td><u>1,04,00,152/-</u></td></tr>
</table>
ಹಾಗಾಗಿ ವ್ಯತ್ಯಾಸದ ಮೊತ್ತ ರೂ.(2,95,57,698–1,04,00,152)=1,91,57,546/–ಗಳಿಗೆ ವಿವರ ಲಭ್ಯವಿರುವುದಿಲ್ಲ.
ಅನುಬಂಧ 107ರಲ್ಲಿ ತಿಳಿಸಿರುವ ಒಟ್ಟು ಮೊತ್ತ ರೂ.1,04,00,152/–ಗಳೂ ಹೊಂದಾಣಿಕೆ ಆಗಿರುತ್ತದೆ. ಈ ಪೈಕಿ ಹೊಂದಾಣಿಕೆ ಆಗಿರುವ ಮೊತ್ತಗಳ ಸಂಬಂಧ ರೂ. . . . . . . . ಗಳಿಗೆ ಪ್ರಪತ್ರಗಳ ದೃಢೀಕೃತ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ.
ಆದ್ದರಿಂದ ರೂ.1,04,00,152/–ಗಳ ಪೈಕಿ; ಪ್ರಪತ್ರ ಸಲ್ಲಿಸುತ್ತಿರುವ ರೂ. . . . . . . . ಗಳಿಗೆ ಸಂಬಂಧಿಸಿದ ಮೊತ್ತವನ್ನು ತೀರಿವಳಿಗೊಳಿಸಲು ಕೋರಿದೆ. ಹಾಗೂ ವಿವರ ಲಭ್ಯವಿಲ್ಲದ ಮೊತ್ತ ರೂ.1,91,57,546/–ಗಳಿಗೆ ಅವಶ್ಯಕ ವಿವರ ತಃಖ್ತೆಯನ್ನು ಕಳಿಹಿಸಿ ಕೊಡುವಂತೆ ಕೋರಲಾಗಿದೆ.
</td>
</tr>
<tr>
<td><u>167. ಯು.ಪಿ.ಇ ಯೋಜನೆಯಡಿ ಉಪಕರಣಗಳ ಖರೀದಿಗಾಗಿ ಎ.ಸಿ.ಬಿಲ್ಲಿನ ಮೂಲಕ ಮುಂಗಡ ಹಣ ಕಾಯ್ದಿರಿಸಿರುವುದು :– (ಹಣಕಾಸು ವಿಭಾಗ)</u><br><br>ಮೈಸೂರು ವಿಶ್ವವಿದ್ಯಾನಿಲಯದ ಯು.ಪಿ.ಇ ಯೋಜನೆಯಡಿ 2015–16ನೇ ಸಾಲಿನಲ್ಲಿ ಉಪಕರಣಗಳ ಖರೀದಿಗಾಗಿ ವಿಭಾಗಗಳಿಗೆ ಒಟ್ಟಾರೆ ರೂ.1,83,49,394/–ಗಳನ್ನು ಎಲ್.ಸಿ ಅಕೌಂಟ್ ತೆರೆಯಲು ಎಸ್.ಬಿ.ಐ ವಿಶ್ವವಿದ್ಯಾನಿಲಯ ಆವರಣ ಶಾಖೆ ಬ್ಯಾಂಕ್ ಖಾತೆ ಸಂಖ್ಯೆ: 64095498688 ವರ್ಗಾವಣೆ ಮಾಡಲಾಗಿದೆ. ಸರಬರಾಜು ಆಗಿರುವ ಉಪಕರಣಗಳು ದಾಸ್ತಾನಿಗೆ ಬಂದಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.</td>
<td>ಮಾಹಿತಿಗಾಗಿ.</td>
</tr>
<tr>
<td><u>168.. ಜಿ.ಆರ್.ಎ, ಎಫ್&ಆರ್ ಖಾತೆಗಳಲ್ಲಿ ಎ.ಸಿ ಬಿಲ್ಲುಗಳ ಮೂಲಕ ಮುಂಗಡ ಡ್ರಾ ಮಾಡಿದ್ದು, ವಿಳಂಬವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿರುವ ಬಗ್ಗೆ :– (ಹಣಕಾಸು ವಿಭಾಗ)</u><br><br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಎಫ್&ಆರ್ ಖಾತೆಯಲ್ಲಿ 2015–16ನೇ ಸಾಲಿಗೆ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಬೇಕಾದ ವೆಚ್ಚಗಳನ್ನು ಭರಿಸಲು ಎ.ಸಿ ಬಿಲ್ಲುಗಳ ಮೂಲಕ</td>
<td>ಕರ್ನಾಟಕ ಸಾದಿಲ್ವಾರು ವೆಚ್ಚದ ಕೈಪಿಡಿಯ ನಿಯಮ 35 ಮತ್ತು 36ರಂತೆ ತಕ್ಷಣಕ್ಕೆ ಪಾವತಿಸಬೇಕಾದ ಮೊತ್ತಗಳ ಸಂಬಂಧ ಮಾತ್ರ ಎ.ಸಿ.ಬಿಲ್ಲುಗಳ ಮೂಲಕ ಮುಂಗಡಗಳನ್ನು</td>
</tr>
</table>

| | |
|---|---|
| ಡ್ರಾ ಮಾಡಲಾಗಿರುತ್ತದೆ. ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 35 ಹಾಗೂ 36ರಂತೆ ಎ.ಸಿ ಬಿಲ್ಲುಗಳನ್ನು ಡ್ರಾ ಮಾಡಿದ 1 ತಿಂಗಳ ಒಳಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಪಾವತಿಸಲಾದ ಓಚರ್‌ಗಳೊಂದಿಗೆ ಸಲ್ಲಿಸಬೇಕಾಗಿರುತ್ತದೆ. ಜಿ.ಆರ್.ಎ ಮತ್ತು ಎಫ್&ಆರ್ ಖಾತೆಯಲ್ಲಿ ಡ್ರಾ ಮಾಡಲಾದ ಒಟ್ಟು **ರೂ.1,51,08,780/–** ಮುಂಗಡ ಮೊತ್ತಕ್ಕೆ ಎನ್.ಡಿ.ಸಿ ಬಿಲ್ಲುಗಳನ್ನು ವಿಳಂಭವಾಗಿ ಸಲ್ಲಿಸಲಾಗಿರುತ್ತದೆ. ವಿವರನ್ನು **ಅನುಬಂಧ–108ರಲ್ಲಿ** ನೀಡಲಾಗಿದೆ. ಎನ್.ಡಿ.ಸಿ ಬಿಲ್ಲುಗಳನ್ನು ಪರಿಶೀಲಿಸಿದಾಗ 3 ತಿಂಗಳಿನಿಂದ 7 ತಿಂಗಳ ಅವಧಿಯಷ್ಟು ವಿಳಂಬವಾಗಿ ಸಲ್ಲಿಸಿರುವುದು ಕಂಡುಬಂದಿರುತ್ತದೆ. ನಿಯಮಾನುಸಾರ ಸದರಿ ವಿಳಂಬದ ಅವಧಿಗೆ ಸಂಬಂಧಿಸಿದ ಮುಂಗಡ ಪಡೆದ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ. ವಿಳಂಬದ ಅವಧಿಗೆ ಬಡ್ಡಿಯನ್ನು ಸಂಬಂಧಿಸಿದ ಅಧಿಕಾರಿಗಳಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಸೂಚಿಸಿದೆ. ವಿವರಗಳನ್ನು **ಅನುಬಂಧ–108ರಲ್ಲಿ** ನೀಡಿದೆ. ಮುಂಗಡ ಪಡೆದಿರುವ ಹಣದಲ್ಲಿ ಖರ್ಚಾಗದೆ ಉಳಿದ ಮೊತ್ತವನ್ನು ಕೂಡ ವಿಳಂಬವಾಗಿ ಸಂಬಂಧಿಸಿದ ಖಾತೆಗೆ ಜಮೆ ಮಾಡಿರುವುದು ಕಂಡುಬಂದಿರುತ್ತದೆ. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ 36 ಹಾಗೂ 37ರಂತೆ ಹೊಂದಾಣಿಕೆ ಬಿಲ್ಲಿನ ಜೊತೆಯಲ್ಲಿಯೇ ಖರ್ಚಾಗದೆ ಉಳಿದ ಮೊತ್ತವನ್ನು ಜಮೆ ಮಾಡಬೇಕಾಗಿರುತ್ತದೆ. | ಡ್ರಾ ಮಾಡಿ ಪಾವತಿಸುವುದು ಹಾಗೂ ಇದಕ್ಕೆ ಲೆಕ್ಕಗಳನ್ನು ಹೊಂದಾಣಿಕೆ ವಿವರಗಳ ಮೂಲಕ ಒಂದು ತಿಂಗಳೊಳಗೇ ಸಲ್ಲಿಸಬೇಕಾಗಿರುವುದು ಸರಿಯಷ್ಟೆ.<br><br>ಆದರೆ ವಿಶ್ವವಿದ್ಯಾನಿಲಯದಲ್ಲಿ ಅನೇಕ ಕಾರ್ಯಕ್ರಮಗಳು ನಿಗದಿತ ಸಮಯದಲ್ಲಿ ಮುಗಿಯದೇ ಮುಂಗಡ ಹಣವನ್ನು ಹಾಗೆಯೇ ಇಟ್ಟುಕೊಂಡು ಕಾರ್ಯಕ್ರಮ ಮುಗಿದ ನಂತರವೇ ಪೂರ್ತಾ ಮೊತ್ತಗಳನ್ನು ಪಾವತಿಸಿ ಲೆಕ್ಕ ಸಲ್ಲಿಸಬೇಕಾದ ಅನಿವಾರ್ಯತೆಗಳು ಉದ್ಭವಿಸುತ್ತದೆ.<br><br>ಹೀಗಾಗಿ ಡ್ರಾ ಮಾಡಿದ ಮೊತ್ತಗಳನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಿ ಹೊಂದಾಣಿಕೆ ಲೆಕ್ಕ ಸಲ್ಲಿಕೆಯಲ್ಲಿ ಸ್ವಲ್ಪ ಮಟ್ಟಿಗೆ ವಿಳಂಬವಾಗಿರುತ್ತದೆ. ಮುಂದೆ ಈ ರೀತಿ ವಿಳಂಬಕ್ಕೆ ಅವಕಾಶವಾಗದಂತೆ ಆದಷ್ಟು ಜಾಗ್ರತೆ ವಹಿಸಿ ಹೊಂದಾಣಿಕೆ ವಿವರಗಳನ್ನು ನಿಗದಿತ ಸಮಯದಲ್ಲೇ ಸಲ್ಲಿಸುವಂತೆ ಎಲ್ಲಾ ಅಧಿಕಾರಿ ವರ್ಗದವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. |
| **169. ಡಾ॥ ಬಿ.ಆರ್ ಅಂಬೇಡ್ಕರ್ ದಿನಾಚರಣೆ ಸಂಬಂಧ ಪಡೆದ ಮುಂಗಡ ಹಣ ಬಳಸದೆ ವಿಳಂಬವಾಗಿ ಬ್ಯಾಂಕಿಗೆ ಜಮಾ ಮಾಡಿರುವ ಕುರಿತು :– (ಹಣಕಾಸು ವಿಭಾಗ)**<br><br>ಡಾ॥ ಬಿ.ಆರ್ ಅಂಬೇಡ್ಕರ್ ದಿನಾಚರಣೆಯನ್ನು ಆಚರಿಸುವ ಸಂಬಂಧ ಪಡೆದಿರುವ ಎ.ಸಿ ಬಿಲ್ಲಿನ ಎನ್.ಡಿ.ಸಿ ಬಿಲ್ಲುಗಳ ಪರಿಶೀಲಿಸಲಾಗಿ ಎ.ಸಿ ಬಿಲ್ಲಿನಲ್ಲಿ ಪಡೆದಿರುವ ರೂ.8,00,000/–ಗಳನ್ನು (ಧನಾದೇಶ ಸಂಖ್ಯೆ:173601 ದಿನಾಂಕ:17.03.2016) ಉಪಯೋಗಿಸದೆ ದಿನಾಂಕ:27.06.2016ರಂದು ವಾಪಸ್ಸು ಜಿ.ಆರ್.ಎ ಖಾತೆಗೆ ಜಮಾ ಮಾಡಿರುತ್ತಾರೆ. (ಧನಾದೇಶ ಸಂಖ್ಯೆ:29454/27.06.2016) ಎನ್.ಡಿ.ಸಿ ಬಿಲ್ಲನ್ನು ದಿನಾಂಕ:08.08.2017ರಂದು ಸಲ್ಲಿಸಿರುತ್ತಾರೆ. ಎ.ಸಿ ಬಿಲ್ಲಿನಲ್ಲಿ ಡ್ರಾ ಮಾಡಿದ ಹಣವನ್ನು ಖರ್ಚು ಮಾಡದೆ ಹಿಂದಿರುಗಿಸಿರುವುದನ್ನು ಲೆಕ್ಕತಪಾಸಣೆಯಲ್ಲಿ ಆಕ್ಷೇಪಿಸಲಾಗಿದೆ. ಅವಶ್ಯಕತೆ ಇಲ್ಲದಿದ್ದರೂ ಸಹ ಹಣ ಡ್ರಾ ಮಾಡಿರುವ ಬಗ್ಗೆ ಸಂಬಂಧಿಸಿದವರಿಂದ ವಿವರಣೆ ಕೋರಿದೆ ಹಾಗೂ ಈ ಬಗ್ಗೆ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. ಮತ್ತು ದಿನಾಂಕ:17.03.2016 ರಿಂದ 27.06.2016ರವರೆಗೆ ಹಣ ಪಡೆದವರ ಖಾತೆಯಲ್ಲಿ **ರೂ.8,00,000/– ಗಳಿಗೆ ಬಂದ ಬ್ಯಾಂಕ್** ಬಡ್ಡಿ ಹಣವನ್ನು ಸಂಬಂಧಿಸಿದವರಿಂದ ವಸೂಲಿಸಿ ಜಿ.ಆರ್.ಎ ಖಾತೆಗೆ ಜಮೆ ಮಾಡಿರುವುದಿಲ್ಲ. ಬ್ಯಾಂಕ್ ಬಡ್ಡಿ ಹಣವನ್ನು ಜಿ.ಆರ್.ಎ ಖಾತೆಗೆ ಜಮೆ ಮಾಡಲು ಸೂಚಿಸಲಾಗಿದೆ. | ಇನ್ನು ಮುಂದೆ ಇಂತಹ ನ್ಯೂನತೆಗಳಿಗೆ ಅವಕಾಶವಾಗದಂತೆ ಎಚ್ಚರ ವಹಿಸಲು ಸಂಬಂಧಿಸಿದವರಿಗೆ ಸೂಚನೆ ನೀಡಲಾಗಿರುತ್ತದೆ. |

| | |
|---|---|
| **170. ವೋಚರ್ಸ್‌ಗಳ ಪರಿಶೀಲನೆಯಲ್ಲಿ ಕಂಡು ಬಂದಿರುವ ನ್ಯೂನತೆಗಳು:– (ಲಲಿತ ಕಲೆಗಳ ಕಾಲೇಜು)**<br><br>2015–16ನೇ ಸಾಲಿನ ಪ್ರಾಂಶುಪಾಲರ ಬ್ಯಾಂಕ್ ಖಾತೆಯಲ್ಲಿ ಭರಿಸಲಾಗಿರುವ ವೆಚ್ಚಗಳಿಗೆ ಸಂಬಂಧಪಟ್ಟಂತೆ ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ, ಈ ಕೆಳಗೆ ವಿವರಿಸಲಾಗಿರುವ ಕೆಲವು ನ್ಯೂನತೆಗಳು ಕಂಡು ಬಂದಿರುತ್ತವೆ.<br>1. ಧನಾದೇಶ ಸಂಖ್ಯೆ:606689/11.02.2016ರನ್ವಯ ಮೆ॥ ಎಸ್. ದೀಪಕ್, ದಿನಪತ್ರಿಕೆಗಳ ಏಜೆಂಟ್ ಮೈಸೂರು ಇವರಿಗೆ ರೂ.3,033/–ಗಳನ್ನು ಪಾವತಿ ಧನಾದೇಶ ಸ್ವೀಕೃತಿ ಪತ್ರವನ್ನು ಪಡೆದಿರುತ್ತಾರೆ. ಆದರೆ ಈ ಪಾವತಿಗೆ ಸಂಬಂಧಪಟ್ಟಂತೆ ದಿನಪತ್ರಿಕೆ ಸರಬರಾಜುವಿಗೆ ಸಂಬಂಧಪಟ್ಟಂತೆ ಬಿಲ್ಲನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಬಿಲ್ಲನ್ನು ಹಾಜರುಪಡಿಸುವವರೆಗೆ ಪಾವತಿ ಮೊತ್ತ ರೂ.3,033/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br>2. ಧನಾದೇಶ ಸಂಖ್ಯೆ:142912/22.04.2015ರನ್ವಯ ಮೆ॥ ಎಂ. ನಾಗೇಂದ್ರ ಭಟ್, ಅಡಿಗೆ ಕಂಟ್ರಾಕ್ಟರ್ ಇವರಿಗೆ ರೂ.4,500/–ಗಳನ್ನು ಪಾವತಿಸಿ ವೋಚರ್‌ನ್ನು ಪಡೆದಿರುತ್ತಾರೆ. ಆದರೆ ವೋಚರ್‌ನಲ್ಲಿ ಸರಬರಾಜು ಮಾಡಲಾದ ಪ್ರಮಾಣ ಎಷ್ಟು, ದರ ಎಷ್ಟು ಮುಂತಾದ ಯಾವುದೇ ಮಾಹಿತಿಗಳು ಇಲ್ಲದೆ ಕೇವಲ ಮಾವಿನಕಾಯಿ ಚಿತ್ರನ್ನ ಮತ್ತು ಮೊಸರನ್ನ ಎಂಬುದನ್ನು ಮಾತ್ರ ನಮೂದಿಸಿರುತ್ತಾರೆ. ಆದಕಾರಣ ಸದರಿ ಬಿಲ್ಲು ಸಂಪೂರ್ಣ ಮಾಹಿತಿಗಳೊಂದಿಗೆ ಬಿಲ್ಲನ್ನು ಪಡೆದು ಹಾಜರುಪಡಿಸುವವರೆಗೆ ರೂ.4,500/–ಗಳನ್ನು ಆಕ್ಷೇಪಿಸಿದೆ. ಒಟ್ಟಾರೆ ರೂ.**7,533/–** (ರೂ.3,033 + 4,500 ಗಳು) ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. | ಕಂಡಿಕೆಯಲ್ಲಿನ ಕ್ರಮಾಂಕ (1)ರ ಧನಾದೇಶ ಸಂಖ್ಯೆ:606689/11.2.16ರನ್ವಯ ಮೆ॥ಎಸ್.ದೀಪಕ್ ದಿನಪತ್ರಿಕೆಗಳ ಏಜೆಂಟ್ ಮೈಸೂರು ಇವರಿಗೆ ಪಾವತಿಸಲಾಗಿರುವ ರೂ.3,033.00ಗಳಿಗೆ ಸಂಬಂಧಿಸಿದಂತೆ ವಿವರವಾದ ಬಿಲ್ಲುಗಳನ್ನು ಲಗತ್ತಿಸಿ ಪರಿಶೀಲನೆಗಾಗಿ ಸಲ್ಲಿಸಿರುತ್ತದೆ.<br><br>ಕ್ರಮಾಂಕ (2)ರ ಧನಾದೇಶ ಸಂಖ್ಯೆ:142912 ದಿನಾಂಕ:22.04.2015ರನ್ವಯ ಮೆ॥ ಎಂ. ನಾಗೇಂದ್ರ ಭಟ್, ಅಡಿಗೆ ಕಂಟ್ರಾಕ್ಟರ್ ಇವರಿಗೆ ರೂ.4,500.00ಗಳನ್ನು ಪಾವತಿಸಿ ಪಡೆದಿರುವ ಸಂಪೂರ್ಣ ಮಾಹಿತಿಯ ಬಿಲ್ಲಿನ ಪ್ರತಿಯನ್ನು ಪರಿಶೀಲನೆಗಾಗಿ ಸಲ್ಲಿಸಿದೆ.<br><br>ಆದ್ದರಿಂದ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ರೂ.7,533.00ಗಳ (ರೂ.3,033 + 4,500 ಗಳು) ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **171. ಎ.ಸಿ. ಬಿಲ್ಲುಗಳಿಗೆ ಎದುರಾಗಿ ಎನ್.ಡಿ.ಸಿ. ಬಿಲ್ಲುಗಳನ್ನು ಭಾಗಶಃ ಹಾಜರುಪಡಿಸಿರುವುದು:– (ಕಾಲೇಜು ಅಭಿವೃದ್ಧಿ ಮಂಡಳಿ)**<br><br>2014–15 ಹಾಗೂ 2015–16ನೇ ಸಾಲುಗಳ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ ಡ್ರಾ ಮಾಡಿರುವ ಎ.ಸಿ.ಬಿಲ್ಲುಗಳಿಗೆ ಎದುರಾಗಿ ಎನ್.ಡಿ.ಸಿ. ಬಿಲ್ಲುಗಳನ್ನು ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:12/ 2018–19, ದಿನಾಂಕ: 05.04.2018ರಲ್ಲಿ ಕೋರಲಾಗಿತ್ತು. ಆದರೆ ಈ ಕೆಳಗೆ ನಮೂದಿಸಿರುವ ಕೆಲವು ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ. ಆದಕಾರಣ ಹಾಜರುಪಡಿಸದೆ ಇರುವ ಎನ್.ಡಿ.ಸಿ ಬಿಲ್ಲುಗಳ ಮೊತ್ತ **ರೂ.58,823/– ಗಳನ್ನು ಆಕ್ಷೇಪಿಸಲಾಗಿದೆ.**<br><br>\| **ಕ್ರ.** \| **ವಿವರ** \| **ಬಿ.ಆರ್.ಸಂಖ್ಯೆ/** \| **ಧನಾದೇಶ** \| **ಮೊತ್ತ** \| | ಈ ಎಲ್ಲಾ ಮೊತ್ತಗಳು ಎ.ಸಿ.ಬಿಲ್ಲುಗಳಿಗೆ ಸಂಬಂಧಿಸಿದವುಗಳಾಗಿರುವುದಿಲ್ಲ. ಬದಲಾಗಿ ಡಿ.ಸಿ.ಬಿಲ್ಲಿಗಳಿಗೆ ಸಂಬಂಧಿಸಿದವುಗಳಾಗಿರುತ್ತದೆ. ಡಿ.ಸಿ ಬಿಲ್ಲಿನ ಜೊತೆಯಲ್ಲಿ ಓಚರ್‌ನ್ನು ಲಗತ್ತಿಸಿ ಪಾವತಿ ಮಾಡುವ ಸಲುವಾಗಿ ಹಣಕಾಸು ವಿಭಾಗಕ್ಕೆ ಸಲ್ಲಿಸಲಾಗಿತ್ತು. ಪಾವತಿ ನಂತರ ಈ ಎಲ್ಲಾ ಡಿ.ಸಿ. ಬಿಲ್ಲು ಹಾಗೂ ಸಂಬಂಧಿಸಿದ ಓಚರ್‌ಗಳೆಲ್ಲವೂ ಹಣಕಾಸು ಶಾಖೆಯಲ್ಲೇ ಉಳಿದಿದ್ದು; ಈ ಎಲ್ಲಾ ಮೂಲ ಓಚರ್‌ಗಳನ್ನು ಹಣಕಾಸು ಶಾಖೆಯ ಲೆಕ್ಕ ತನಿಖಾ ಸಮಯದಲ್ಲಿ ಪರಿಶೀಲಿಸಲಾಗಿರುತ್ತದೆ. |

| ಸಂ | | ದಿನಾಂಕ | ಸಂಖ್ಯೆ/ ದಿನಾಂಕ | (ರೂ.ಗಳಲ್ಲಿ) |
|---|---|---|---|---|
| 1 | ಮುದ್ರಣಾಲಯ ಹಾಗೂ ಲೇಖನಾ ಸಾಮಗ್ರಿಗಳ ವಿಭಾಗ 500 File Jacket | 5/20.05.14 | – | 5,463 |
| 2 | ರಜತ್ ಸೇಲ್ಸ್ ಏಜೆನ್ಸೀಸ್ | 9/27.06.14 | 504349/ 09.07.14 | 9,174 |
| 3 | ಫೈಲ್ ರ್‍ಯಾಪರ್ ಹುಂಡಿ | 17/ | | 891 |
| 4 | Contigency Expenses | 21/ | | 9,606 |
| 5 | ರಜತ್ ಸೇಲ್ಸ್ ಏಜೆನ್ಸೀಸ್ | 35/ | | 4,958 |
| 6 | HCL Info systems | 26/ | 507394/ 20.12.14 | 21,992 |
| 7 | ಸಾದಿಲ್ವಾರು ವೆಚ್ಚಗಳು (17 ವೋಚರ್ಸ್) | 19/2015–16 | | 6,739 |
| | | | **ಒಟ್ಟು ರೂ.** | **58,823** |

ಇವುಗಳು ಎ.ಸಿ.ಬಿಲ್ಲು ಮುಂಗಡಗಳು ಆಗಿಲ್ಲವಾದ್ದರಿಂದ ಎನ್.ಡಿ.ಸಿ ಸಲ್ಲಿಸಿರುವುದಿಲ್ಲ.

ಆದ್ದರಿಂದ, ಈ ಸಂಬಂಧ ಆಕ್ಷೇಪಣೆ ಮೊತ್ತ ರೂ.58823.00ಗಳನ್ನು ಕೈ ಬಿಡಲು ಕೋರಿದೆ..

**172. ಎ.ಸಿ. ಬಿಲ್ಲಿನಲ್ಲಿ ಡ್ರಾ ಮಾಡಲಾದ ಮುಂಗಡ ಹಣಕ್ಕೆ ಎನ್.ಡಿ.ಸಿ. ಬಿಲ್ಲುಗಳನ್ನು ವಿಳಂಬವಾಗಿ ಸಲ್ಲಿಸಿರುವುದು ಹಾಗೂ ಎನ್.ಡಿ.ಸಿ ಬಿಲ್ ನಲ್ಲಿರುವ ನ್ಯೂನತೆಗಳು:– (ಕಾಲೇಜು ಅಭಿವೃದ್ಧಿ ಮಂಡಳಿ)**

2014–15 ಮತ್ತು 2015–16ನೇ ಸಾಲಿನ ಎ.ಸಿ.ಬಿಲ್ ವಹಿಯನ್ನು ಪರಿಶೀಲಿಸಿದಾಗ ಎ.ಸಿ.ಬಿಲ್ಲಿನಲ್ಲಿ ಡ್ರಾ ಮಾಡಲಾದ ಮುಂಗಡ ಹಣಕ್ಕೆ ವಿಳಂಬವಾಗಿ ಎನ್.ಡಿ.ಸಿ ಬಿಲ್ಲನ್ನು ನೀಡಿರುತ್ತಾರೆ. ವಿವರಗಳನ್ನು **ಅನುಬಂಧ–109ರಲ್ಲಿ** ನೀಡಿದೆ. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ 36 & 37ರ ಪ್ರಕಾರ ಎನ್.ಡಿ.ಸಿ ಬಿಲ್ಲುಗಳನ್ನು ಮುಂಗಡ ಡ್ರಾ ಮಾಡಿದ ಒಂದು ತಿಂಗಳೊಳಗಾಗಿ ಸಲ್ಲಿಸಬೇಕಾಗಿರುತ್ತದೆ.

**ಎನ್.ಡಿ.ಸಿ. ಬಿಲ್ಲಿನಲ್ಲಿನ ನ್ಯೂನತೆಗಳು:–**

1. ಪತ್ರ ಸಂಖ್ಯೆ:ಸಿ.ಡಿ.ಸಿ–1/ಯು.ಜಿ/ಪಿ.ಜಿ/New Ant/104/2015–16, ದಿನಾಂಕ:15.07.14ರಲ್ಲಿನ ಸ್ಥಳೀಯ ವಿಚಾರಣಾ ಸಮಿತಿ ತಂಡಕ್ಕೆ ಊಟೋಪಚಾರಕ್ಕಾಗಿ ರೂ.2,400/– ಗಳನ್ನು ಪಾವತಿಸಿದೆ. ಆದರೆ ನಿಯಮಾವಳಿಗಳಂತೆ ಕೇವಲ ರೂ.800/– ಗೆ ಮಾತ್ರ ಅವಕಾಶವಿರುತ್ತದೆ. ಅಂದರೆ ರೂ.1,600/–ಗಳನ್ನು ಹೆಚ್ಚಿಗೆ ಪಾವತಿಸಿದೆ. ಸದರಿ ಮೊತ್ತವನ್ನು ಸಂಬಂಧಪಟ್ಟವರಿಂದ

ಎ.ಸಿ ಬಿಲ್ಲಿನ ಮೇಲೆ ಡ್ರಾ ಮಾಡಲಾಗುವ ಮುಂಗಡ ಹಣಕ್ಕೆ ಹೊಂದಾಣಿಕೆ ಹುಂಡಿಗಳನ್ನು ನಿಯಮಾನುಸಾರ ನಿಗಧಿತ ಸಮಯದ ಒಳಗೆ ಸಲ್ಲಿಸಲು ಮುಂದೆ ಅಗತ್ಯ ಕ್ರಮವಹಿಸಲಾಗಿದೆ.

**1.** ಸ್ವಾಯತ್ತ ಕಾಲೇಜುಗಳ ಸಂಯೋಜನೆ ಮುಂದುವರಿಕೆಗೆ ಸಮಿತಿಯಲ್ಲಿ ಮಾನ್ಯ ಕುಲಪತಿಗಳು ಅಧ್ಯಕ್ಷರಾಗಿದ್ದು ಸಮಿತಿಯ ಸದಸ್ಯರಲ್ಲಿ ಪಿ.ಜಿ. ಕೋರ್ಸ್‌ಗಳಲ್ಲಿ ಪ್ರತಿ ವಿಷಯವಾರು ತಜ್ಞರು ಇರುತ್ತಾರೆ

**2.** ಕ್ರಮ ಸಂಖ್ಯೆ 2,3,4 ರಲ್ಲಿ ತಿಳಿಸಿರುವ ಪ್ರಾಧ್ಯಾಪಕರುಗಳನ್ನು ಬದಲಿ ವ್ಯವಸ್ಥೆಗಾಗಿ ನೇಮಕಮಾಡಿಕೊಂಡಿದ್ದು; ಅವರುಗಳು ಕಾಲೇಜುಗಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿರುತ್ತಾರೆ.

**3.** ಸಂಯೋಜನಾ ವರದಿಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸುವ ಸಂಬಂಧ ಇದೊಂದು ಬಹಳ ಜವಾಬ್ದಾರಿಯುತ ಕರ್ತವ್ಯವಾಗಿದ್ದು; ಕಾರಿನಲ್ಲಿ ಪ್ರಯಾಣ ಬೆಳೆಸಿ ರೂ.9477.00ಗಳ ಖರ್ಚನ್ನು ಭರಿಸಿದೆ.

| | |
|---|---|
| ವಸೂಲಾತಿಗೆ ಸೂಚಿಸಿದೆ.<br>2. ದಿನಾಂಕ:23.07.2014ರಂದು ಪ್ರೊ. ಮುಸಫರ್ ಅಸಾದಿರವರಿಗೆ ಹೆಚ್.ಡಿ. ದೇವೇಗೌಡ ಸರ್ಕಾರಿ ಪಿ.ಜಿ. ಕಾಲೇಜು ಪಡುವರ ಹಿಪ್ಪೆ ಕಾಲೇಜಿನ ಸ್ಥಳೀಯ ವಿಚಾರಣಾ ಸಮಿತಿಗೆ ಹಾಜರಾದ ಕುರಿತು ರೂ.1,000/– ಪಾವತಿಸಿದ್ದು, ಸದರಿಯವರನ್ನು ಸ್ಥಳೀಯ ವಿಚಾರಣಾ ಸಮಿತಿಗೆ ನೇಮಿಸಿದ ಕುರಿತು ಆದೇಶದ ಪ್ರತಿ ಕಡತದಲ್ಲಿ ಲಭ್ಯವಿಲ್ಲ.<br>3. ಪ್ರೊ.ಕೆ.ಟಿ. ಸುನೀತಾ, ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗದವರಿಗೆ ದಿನಾಂಕ:23.07.2014ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರದಲ್ಲಿ ಸ್ಥಳೀಯ ವಿಚಾರಣಾ ಸಮಿತಿಯಲ್ಲಿ ಭಾಗವಹಿಸಿದ್ದಕ್ಕಾಗಿ ರೂ.1,000/– ಪಾವತಿಸಿದ್ದು, ಸದರಿಯವರನ್ನು ಸ್ಥಳೀಯ ವಿಚಾರಣಾ ಸಮಿತಿಗೆ ನೇಮಿಸಿದ ಕುರಿತು ಆದೇಶದ ಪ್ರತಿ ಕಡತದಲ್ಲಿ ಲಭ್ಯವಿಲ್ಲ.<br>4. ಪ್ರೊ.ಆರ್. ರಾಮಕೃಷ್ಣ, ಪ್ರಾಧ್ಯಾಪಕರು ರವರಿಗೆ ದಿನಾಂಕ:23.07.2014ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ ಮತ್ತು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ ಸ್ಥಳೀಯ ವಿಚಾರಣಾ ಸಮಿತಿಯಲ್ಲಿ ಭಾಗವಹಿಸಿದಕ್ಕೆ ಗೌರವಧನವಾಗಿ ರೂ.1,000/–ಗಳನ್ನು ಪಾವತಿಸಿದ್ದು, ಆದೇಶದ ಪ್ರತಿ ಕಡತದಲ್ಲಿ ಲಭ್ಯವಿಲ್ಲ.<br>5. ದಿನಾಂಕ:10.02.2015ರಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ College potential for excellence for college ಪ್ರಸ್ತಾವನೆ ಮೌಲ್ಯಾಂಖನ ಕುರಿತ ಸಭೆಯಲ್ಲಿ ಊಟೋಪಾಚಾರಕ್ಕೆ ರೂ.1,680/– ಖರ್ಚು ಮಾಡಿದೆ. ಹಾಗೂ ಸಭೆಯಲ್ಲಿ ಹಾಜರಿದ್ದವರಿಗೆ ಸ್ವೀಟ್ ಹಾಗೂ ಗೋಡಂಬಿಗಾಗಿ ರೂ.555/– ಹಾಗೂ ಕಾಫೀ, ಟೀ ಗಾಗಿ ರೂ.250/– ಖರ್ಚು ಮಾಡಲಾಗಿದೆ. (ಲಘು ಉಪಹಾರಕ್ಕೆ ಮಾತ್ರ ಅವಕಾಶವಿದೆ).<br>6. ಹೊಸಕೋರ್ಸ್/ವಿಷಯ/ಹೆಚ್ಚುವರಿ ಪ್ರವೇಶಾತಿ/ಹೊಸ ಕಾಲೇಜು ಪ್ರಸ್ತಾವನೆಗಳನ್ನು ಬೆಂಗಳೂರಿನ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಉನ್ನತ ಶಿಕ್ಷಣ ಇಲಾಖೆಗೆ ಖುದ್ದಾಗಿ ತಲುಪಿಸಿ ಬರುವ ಸಂಬಂಧ ವಾಹನದಲ್ಲಿ ಹೋಗಿ ಬರಲು ರೂ.3,192/– ಖರ್ಚು ತೋರಿಸಿದ್ದು ಇದಕ್ಕೆ ಕೆ.ಸಿ.ಎಸ್.ಆರ್ ನಂತೆ ಲಭ್ಯವಾಗಬಹುದಾಜ ಟಿ.ಎ/ಡಿ.ಎ ಯನ್ನು ಪಾವತಿಸಬಹುದಾಗಿದೆ.<br>ಈ ಎಲ್ಲಾ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಣಾ ಪತ್ರ ಸಂಖ್ಯೆ:07/2017–18, ದಿ:26.03.2018ರಲ್ಲಿ ವಿವರಣೆ ನೀಡುವಂತೆ ಕೋರಲಾಗಿತ್ತು. ಆದರೆ ಯಾವುದೇ ಮಾಹಿತಿ ನೀಡದೆ ಇರುವುದರಿಂದ ಒಟ್ಟು **ರೂ.9,477/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಹಾಗೂ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ **ರೂ.1,600/–ಗಳನ್ನು ವಸೂಲಾತಿಗೆ ಸೂಚಿಸಿದೆ.** | **4.** ದಿನಾಂಕ: 10.02.2015 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಪ್ರಸ್ತಾವನೆ ಲಾಂಚನ ಕುರಿತ ಸಭೆಯಲ್ಲಿ ಊಟೋಪಚಾರಕ್ಕೆ ರೂ.1680.00ಗಳನ್ನು ಖರ್ಚು ಮಾಡಲಾಗಿದೆ. ಅಧಿಕ ಸಂಖ್ಯೆಯ ಗೌರವಾನ್ವಿತ ಅಧಿಕಾರಿಗಳು ಸಭೆಯಲ್ಲಿ ಭಾಗವಸಿದ್ದುದರಿಂದ ಹಾಗೂ ಊಟದ ಸಮಯ ಮೀರುತ್ತಿದ್ದುದರಿಂದ ಈ ವ್ಯವಸ್ಥೆ ಮಾಡಲಾಗಿದೆ.<br>ಆದ್ದರಿಂದ, ಇದನ್ನು ಒಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| | |
|---|---|
| **173. ಡಿ.ಸಿ. ಬಿಲ್ಲುಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸದೇ ಇರುವುದು:– (ಕಾಲೇಜು ಅಭಿವೃದ್ಧಿ ಮಂಡಳಿ)**<br>ಲೆಕ್ಕತಪಾಸಣಾ ಕಾರ್ಯದ ಭಾಗವಾಗಿ ಈ ಕೆಳಗೆ ನಮೂದಿಸಿರುವ ಡಿ.ಸಿ. ಬಿಲ್ಲುಗಳನ್ನು ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:12/2018–19/05.04.2018ರಲ್ಲಿ ಕೋರಲಾಗಿತ್ತು. ಆದರೆ ಇಲ್ಲಿಯವರೆಗೂ ಹಾಜರುಪಡಿಸದೇ ಇರುವ ಕಾರಣ ಅವುಗಳನ್ನು ಹಾಜರುಪಡಿಸುವವರೆಗೂ ಸದರಿ ಮೊತ್ತ ರೂ.3,20,911/–ಗಳನ್ನು ಆಕ್ಷೇಪಣೆಗೆ ಇಡಲಾಗಿದೆ. | ಈ ಎಲ್ಲಾ ಡಿ.ಸಿ ಬಿಲ್ಲುಗಳನ್ನು ಓಚರ್‌ಗಳೊಂದಿಗೆ ಪಾವತಿ ಮಾಡುವ ಸಲುವಾಗಿ ಹಣಕಾಸು ಶಾಖೆಗೆ ಸಲ್ಲಿಸಲಾಗಿ ಪಾವತಿ ನಂತರ ಈ ಎಲ್ಲಾ ಬಿಲ್ಲುಗಳೂ ಹಣಕಾಸು ಶಾಖೆಯಲ್ಲೆ ಉಳಿದಿದ್ದು; ಲೆಕ್ಕ ತನಿಖಾ ಸಮಯದಲ್ಲಿ ಲೆಕ್ಕ ಪರಿಶೋಧಕರು ಅವುಗಳನ್ನು ಪರಿಶೀಲಿಸಿರುತ್ತಾರೆ. ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಯಲ್ಲಿ ಜೆರಾಕ್ಸ್ ಪ್ರತಿಗಳನ್ನು ಮಾತ್ರ ನಿರ್ವಹಿಸಲಾಗಿದೆ.<br><br>ಆದ್ದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| ಕ್ರ ಸಂ | ವಿವರ | ಬಿ.ಆರ್.ಸಂಖ್ಯೆ/ ದಿನಾಂಕ | ಚೆಕ್ ಸಂಖ್ಯೆ & ದಿನಾಂಕ | ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | ಪತ್ರಿಕಾ ಪ್ರಕಟಣೆ | 16/2015–16 | 513662 02.11.2015 | 239891 |
| 2 | ಪುನೀತ್ ಇನ್ಫೋಟೆಕ್ ಲಿ., ಬೆಂಗಳೂರು ಜೆರಾಕ್ಸ್ ಯಂತ್ರ | 21/2015–16 | 514857 03.01.2016 | 18810 |
| 3 | MUPP, MGM, M.File Board, Notesheet | 23/2015–16 | 514880 05.01.2016 | 21850 |
| 4 | Section Services | 26/2015–16 20.01.2016 | 515406 06.02.2016 | 4000 |
| 5 | ನವನೀತ್ ಕೇಟರರ್ಸ್ | 32/2015–16 08.03.2016 | 516005 11.03.2016 | 36360 |
| | | | **ಒಟ್ಟು ರೂ.** | **320911** |

| | |
|---|---|
| **174. ಪತ್ರಿಕಾ ಪ್ರಕಟಣೆಯ ಬಾಬ್ತನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಮತ್ತು ಇತರೆ ನ್ಯೂನತೆಗಳು:– (ಕಾಲೇಜು ಅಭಿವೃದ್ಧಿ ಮಂಡಳಿ)**<br><br>2014–15 ಮತ್ತು 2015–16ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನಾ ವೇಳೆಯಲ್ಲಿ ಕಡತ ಸಂಖ್ಯೆ:ಸಿಡಿಸಿ–3/ ಪತ್ರಿಕಾ ಪ್ರಕಟಣೆ/275/2013–14/2014–15/2015–16ರಲ್ಲಿನ ಪತ್ರ ಸಂಖ್ಯೆ:ಸಿಡಿಸಿ–3/275/ಪ.ಪ್ರ/2013–14, ಬಿ.ಆರ್. ಸಂಖ್ಯೆ:16/2014–15 ದಿನಾಂಕ:04.09.2014 ಮತ್ತು ಶ್ರೇಯಾ | ಹೆಚ್ಚುವರಿ ಪಾವತಿ ಮೊತ್ತ ರೂ.20250.00ಗಳನ್ನು ವಸೂಲಿಸಿ ಜಮೆ ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸಲಾಗಿದೆ. |

| | |
|---|---|
| ಅಡ್ವರ್‌ಟೈಸರ್ಸ್ ಅವರ ಜಾಹೀರಾತು ಬಿಲ್ ಇನ್‌ವಾಯ್ಸ್ ನಂ:SAMYS/11113/438, ದಿನಾಂಕ:01.08.2014ನ್ನು ಪರಿಶೀಲಿಸಲಾಗಿ 2015–16ನೇ ಸಾಲಿನ ಸಂಯೋಜನಾ ಮಾನ್ಯತೆಗೆ ಸಂಬಂಧಿಸಿದಂತೆ ದಿನಾಂಕ:01.08.2014ರ ಪತ್ರಿಕಾ ಪ್ರಕಟಣೆಗೆಂದು ಉದಯವಾಣಿ– ಕರ್ನಾಟಕ ಆವೃತ್ತಿಗೆ ಪ್ರತಿ ಕಾಲಂ ಸೆಂ.ಮೀ.ಗೆ ರೂ.590/–ಗಳಂತೆ ಒಟ್ಟು 75 ಪ್ರ.ಕಾ.ಸೆಂ.ಮೀ.ಗಳಿಗೆ ರೂ.44,250/–ಗಳನ್ನು ಸಂದಾಯ ಮಾಡಿರುತ್ತಾರೆ. ಆದರೆ ಹಾಜರುಪಡಿಸಿದ್ದ ಸದರಿ ಪತ್ರಿಕೆಯನ್ನು ಪರಿಶೀಲಿಸಿದಾಗ ಆಯ ಕರ್ನಾಟಕ ಆವೃತ್ತಿಗೆ ಬದಲಾಗಿ ಬೆಂಗಳೂರು ಆವೃತ್ತಿಯದ್ದಾಗಿರುವುದು ಕಂಡುಬಂದಿರುತ್ತದೆ. ಮತ್ತು ಬೆಂಗಳೂರು ಆವೃತ್ತಿಯ ಪ್ರಕಟಣಾ ದರ ಪ್ರ.ಕಾ.ಸೆಂ.ಮೀ.ಗೆ ರೂ.320/–ಗಳು (ವಾರ್ತಾ ಇಲಾಖೆ ನಿಗದಿಪಡಿಸಿರುವ ದರಗಳಂತೆ) ಆಗಿದ್ದು, ಇದರಂತೆ ಪಾವತಿಸಬೇಕಿದ್ದ ಮೊತ್ತ ರೂ.24,000/–ಗಳು (75x320) ಹೀಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.20,250/–ಗಳನ್ನು ಸಂಬಂಧಪಟ್ಟ ಸಂಸ್ಥೆಯಿಂದ ಶೀಘ್ರ ವಸೂಲಿ ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:13/2018–19/06.04.2018ರಲ್ಲಿ ಕೋರಲಾಗಿತ್ತಾದರೂ ಇಲ್ಲಿಯವರೆಗೂ ಯಾವುದೇ ಉತ್ತರ ನೀಡದಿರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಪಾವತಿಸಿರುವ ಮೊತ್ತ ರೂ.20,250/– ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿಗೆ ಸೂಚಿಸಿದೆ.<br><br>ಮುಂದುವರಿದಂತೆ, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ವಾಪ್ರಯು/94/ವಾಪ್ರಜಾ/06, ದಿನಾಂಕ:20.11.2006 ಮತ್ತು ಮೈಸೂರು ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಜಿಎಲ್6/ಇತರೆ/1988–89 ದಿನಾಂಕ:05.02.2007ರನ್ವಯ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗ/ಕಛೇರಿಗಳು ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗುವ ಎಲ್ಲಾ ಜಾಹೀರಾತುಗಳನ್ನು ಕಡ್ಡಾಯವಾಗಿ ವಾರ್ತಾ & ಪ್ರಸಾರ ಇಲಾಖೆ ಅಥವಾ ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಮತ್ತು ಏಜೆನ್ಸೀಸ್ ಲಿಮಿಟೆಡ್ (ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿದೆ) ಇವರಿಂದ ಬಿಡುಗಡೆ ಮಾಡಬೇಕೆಂಬ ಸ್ಪಷ್ಟ ನಿರ್ದೇಶನಗಳಿದ್ದರೂ ಕೂಡ ಬೇರೊಂದು ಖಾಸಗಿ ಏಜೆನ್ಸಿಗೆ (Shreya Advertisers Inv. No:SAMYS/11113/438 ದಿನಾಂಕ:01.08.2014) ನೀಡಿರುವುದು ಸದರಿ ಆದೇಶಗಳಿಗೆ ವಿರುದ್ಧವಾಗಿರುತ್ತದೆ. ಈ ಸಂಬಂಧ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:13/2018–19/06.04.2018ರಲ್ಲಿ ಸ್ಪಷ್ಟೀಕರಣವನ್ನು ಕೋರಲಾಗಿತ್ತಾದರೂ ಇಲ್ಲಿಯವರೆಗೂ ಲಿಖಿತ ಉತ್ತರ ನೀಡದೆ ಇರುವುದಕ್ಕೆ ಸೂಕ್ತ ವಿವರಣೆ ನೀಡಲು ಹಾಗೂ ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಲು ಸೂಚಿಸಲಾಗಿದೆ. | |

<table>
<tr>
<td>
<u>175. DGS & D ರವರ Rate Contract ಹಾಗೂ ಸಮೃದ್ಧಿ ಟೆಕ್ನೋ ಸೆಲ್ಯೂಷನ್ಸ್ ರವರ Invoice ಬಿಲ್‌ನಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳು:– (ಕಾಲೇಜು ಅಭಿವೃದ್ಧಿ ಮಂಡಳಿ)</u><br><br>
2015–16ರಲ್ಲಿ ಹಾಜರುಪಡಿಸಲಾಗಿದ್ದ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ, ಕಛೇರಿ ಉಪಯೋಗಕ್ಕೆಂದು ಕಂಪ್ಯೂಟರ್, ಪ್ರಿಂಟರ್ ಮತ್ತು ಫ್ಯಾಕ್ಸ್ ಮೆಷಿನ್‌ಗಳ ಖರೀದಿಗೆ ಸಂಬಂಧಿಸಿದಂತೆ ವಿತರಕರ Invoice bill ಹಾಗೂ DGS & D ರವರ Rate contract ಪತ್ರದಲ್ಲಿ ಹಲವು ನ್ಯೂನತೆಗಳು ಕಂಡು ಬಂದಿದ್ದು, ಅವುಗಳನ್ನು ಕೆಳಗೆ ವಿವರಿಸಲಾಗಿದೆ.<br><br>
1. ಸಮೃದ್ಧಿ ಟೆಕ್ನೋ ಸೆಲ್ಯೂಷನ್ಸ್ – ಇವರು Acer Desk Top - Intel core i3 Lunux 09 ಮತ್ತು Acer Desk Top - Intel core i5, Lunux 09 ಕಂಪ್ಯೂಟರ್‌ಗಳನ್ನು HCL Infosystems ಇವರಿಂದ ಖರೀದಿಸಿ ಮೈಸೂರು ವಿಶ್ವವಿದ್ಯಾನಿಲಯ, ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಗೆ ವಿತರಿಸಿರುತ್ತಾರೆ. ಈ ಸಂಬಂಧ ಸದರಿ ವಿತರಕರು HCL Infosystems ರವರ ಅಧಿಕೃತ ವಿತರಕರು ಹೌದೋ ಇಲ್ಲವೋ ಎಂಬುವುದರ ಬಗ್ಗೆ ಸಂಪೂರ್ಣ ಮಾಹಿತಿ ಲಭ್ಯವಿರುವುದಿಲ್ಲ.<br>
2. ಸಮೃದ್ಧಿ ಟೆಕ್ನೋ ಸೆಲ್ಯೂಷನ್ಸ್ ರವರ Tax Invoice ನಲ್ಲಿ ನಮೂದಾಗಿರುವ Product specifications ಗಳು DGS & D Rate Contract ನಲ್ಲಿರುವ Product Specifications ಗಳಿಗೆ ತಾಳೆ ಆಗಿರುವುದಿಲ್ಲವಾದ್ದರಿಂದ ಕ್ಲೈಮ್ ಮಾಡಿರುವ ದರಗಳನ್ನು ಪರಿಗಣಿಸಲು ಬರುವುದಿಲ್ಲ.<br>
3. ಸಮೃದ್ಧಿ ಟೆಕ್ನೋ ಸೆಲ್ಯೂಷನ್ಸ್ Inv. No:194/2015–16 ದಿನಾಂಕ:22.01.2016ರಲ್ಲಿ ನಮೂದಾಗಿರುವ ಕ್ರ.ಸಂ:3 ಮತ್ತು 4ರಲ್ಲಿನ ಉತ್ಪನ್ನಗಳಿಗೆ ದರಪಟ್ಟಿ (ಕೊಟೇಷನ್) ಕರೆದಿದ್ದು, ಅವುಗಳಿಗೆ ಪ್ರತ್ಯೇಕ Inv. bill ಹಾಕದೇ DGS & D Contract Rate ನಲ್ಲಿ ನಮೂದಾಗಿರುವ ಉತ್ಪನ್ನಗಳೊಂದಿಗೆ (Inv.No:194/22.01.2016) ಕ್ರ.ಸಂ:1 & 2 ರೊಂದಿಗೆ ಬಿಲ್ ಮಾಡಿರುವುದು ಸರಿಯಲ್ಲ.<br>
4. DGS & D ರವರ Rate Contract ಪತ್ರದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಸಹಿ ಮತ್ತು ಮೊಹರು ಇರುವುದಿಲ್ಲ ಮತ್ತು ಈ ಸಂಬಂಧ ಮೂಲ ದಾಖಲಾತಿಗಳನ್ನು ಮತ್ತು ಇತರೆ
</td>
<td>
2015-16ನೇ ಸಾಲಿನಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಗೆ ಅವಶ್ಯಕವಿರುವ ಕಂಪ್ಯೂಟರ್, ಸ್ಕಾನರ್ ಹಾಗೂ ಫ್ಯಾಕ್ಸ್ ಯಂತ್ರಗಳನ್ನು ಹೆಚ್.ಸಿ.ಎಲ್ ಇಂಫೋಸಿಸ್ಟಂ.ಲಿ ನವದೆಹಲಿ ಇವರ ದರ ಒಪ್ಪಂದದ ಮೇಲೆ ಮೆ॥ ಸಮೃದ್ಧಿ ಟೆಕ್ನೋ ಸೆಲ್ಯೂಷನ್ಸ್ ರವರಿಂದ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಸಿ.ಡಿ.ಸಿ–4/ಬಿ/1999–2000 ದಿನಾಂಕ 12.1.2016ರ ಅನ್ವಯ ಖರೀದಿಸಿ ರೂ.288029.00ಗಳ ವೆಚ್ಚ ಭರಿಸಲಾಗಿದೆ.<br><br>
ಮೆ॥ ಸಮೃದ್ಧಿ ಟೆಕ್ನೋ ಸೆಲ್ಯೂಷನ್ಸ್ ಇವರ ಟ್ಯಾಕ್ಸ್ ಇನ್‌ವಾಯ್ಸ್‌ನಲ್ಲಿ ನಮೂದಾಗಿರುವ ವಸ್ತುಗಳ ಸ್ಪೆಸಿಫಿಕೇಶನ್‌ಗಳು ಡಿಜಿಎಸ್&ಡಿ ರವರ Rate Contract ನಲ್ಲಿರುವುದಕ್ಕೆ ತಾಳೆಯಾಗಿರುತ್ತದೆ.<br><br>
ವಿಶ್ವವಿದ್ಯಾನಿಲಯದ ಮೇಲಿನ ಆದೇಶದಲ್ಲಿ ಎಲ್ಲಾ ಅವಶ್ಯ ಸಾಮಾಗ್ರಿಗಳಿಗೂ ಮಂಜೂರಾತಿ ನೀಡಿರುವುದರಿಂದ ಕ್ರಮ ಸಂಖ್ಯೆ 3 ಮತ್ತು 4 ರ ದರ ಪಟ್ಟಿಯಲ್ಲಿ ಸಾಮಗ್ರಿಗಳು ಸೇರಿದಂತೆ ಒಟ್ಟಿಗೆ ಬಿಲ್ಲು ಸ್ವೀಕೃತಗೊಂಡಿರುವುದರಿಂದ ಇದನ್ನು ಪಾವತಿಗಾಗಿ ಅಂಗೀಕರಿಸಲಾಗಿದೆ.<br>
ಡಿಜಿಎಸ್&ಡಿ ದರ ಒಪ್ಪಂದದ ಪ್ರತಿಯು ಆನ್‌ಲೈನ್ ಪ್ರತಿ ಆಗಿರುವುದರಿಂದ ಡಿಜಿಟಲ್ ಸಹಿ ಆಗಿರುತ್ತದೆ. ಹಾಗೂ ಕಛೇರಿ ಮೊಹರು ಇರುವುದಿಲ್ಲ.<br><br>
ವಿಶ್ವವಿದ್ಯಾನಿಲಯದ ದಿನಾಂಕ 12.1.2016ರ ಆದೇಶದ ಪ್ರತಿ; ಡಿಜಿಎಸ್&ಡಿ ದರ ಒಪ್ಪಂದದ ಪ್ರತಿ; ಇತ್ಯಾದಿ ದಾಖಲಾತಿಗಳನ್ನು ಈ ಕೂಡ ಲಗತ್ತಿಸುತ್ತಾ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.
</td>
</tr>
</table>

| | |
|---|---|
| ಮಾಹಿತಿಗಳನ್ನು ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:10/2018–19/04.04.2018ರಲ್ಲಿ ಕೋರಲಾಗಿ ಇಲ್ಲಿಯವರೆಗೂ ಲಿಖಿತ ಉತ್ತರ ಬಾರದಿರುವುದರಿಂದ ಸ್ಪಷ್ಟೀಕರಣ ಕೋರಿದೆ. ಹಾಗೂ ಪೂರ್ಣ ಮಾಹಿತಿ ನೀಡುವವರೆಗೆ ಇದಕ್ಕಾಗಿ ಪಾವತಿಸಿರುವ **ರೂ.2,88,029/–** ಚೆಕ್ ನಂ.515558/15.02.2016 ಗಳನ್ನು ಆಕ್ಷೇಪಿಸಿದೆ. | |
| **<u>ಭಾಗ–4</u>** | |
| **03. <u>ಪರೀಕ್ಷಾ ಖಾತೆಸಂಖ್ಯೆ–54007591200 ಗೆ ಜಮೆ ಆಗಿರುವ ಮಾಹಿತಿಯನ್ನು ಒದಗಿಸುವ ಕುರಿತು :– (ಹಣಕಾಸು ವಿಭಾಗ)</u>**<br><br>ಪರೀಕ್ಷಾ ಖಾತೆ ಸಂಖ್ಯೆ–54007591200 ರ ಪರೀಕ್ಷಾ ಖಾತೆಗೆ 2015–16 ನೇ ಸಾಲಿನಲ್ಲಿ ಪ್ರಾಚಾರ್ಯರು, ಶ್ರೀ. ಡಿ.ದೇವರಾಜ ಅರಸು, ಪ್ರಥಮ ದರ್ಜೆ ಕಾಲೇಜು, ಹುಣಸೂರು ರವರಿಂದ ಚಲನ್ ಸಂಖ್ಯೆ–90976/ ದಿನಾಂಕ:28.04.2014 ರ ಚಲನ್‌ನಲ್ಲಿ ಒಟ್ಟು ರೂ.10.00ಲಕ್ಷ ರೂ.ಗಳು ಜಮೆ ಆಗಿರುವ ಬಗ್ಗೆ ಲೆಕ್ಕತಪಾಸಣೆಯಲ್ಲಿ ಗಮನಿಸಿದೆ. ಇದೇ ರೀತಿ 2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳಿಂದ ಸ್ವೀಕರಿಸಿರುವ ಪರೀಕ್ಷಾ ಶುಲ್ಕದ ಪೂರ್ಣ ವಿವರಗಳನ್ನು ಆ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪೂರ್ಣ ಮಾಹಿತಿಗಳೊಂದಿಗೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ವಿವರಗಳೊಂದಿಗೆ ಹಾಜರುಪಡಿಸುವುದು.<br><br>ಮುಂದುವರೆದಂತೆ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ದಾಖಲಾಗಿರುವಂತೆ ರೂ. 30,47,03,664/–ಗಳು ಜಮೆ ಆಗಿರುವುದಾಗಿ ದಾಖಲಾಗಿದೆ ಹಾಗೂ ಲೆಕ್ಕಶೀರ್ಷಿಕೆ–102 ರಿಂದ 166 ರವರೆಗೆ ಪರೀಕ್ಷಾ ಕಾರ್ಯಗಳ ಸಂಬಂಧ ಹಾಗೂ ಕಛೇರಿಯ ಸಿಬ್ಬಂದಿಯ ವೇತನ ಮತ್ತು ಭತ್ಯೆಗಳು ಮೌಲ್ಯಭವನದ ಕಾಮಗಾರಿ ವೆಚ್ಚವೂ ಸೇರಿದಂತೆ ಒಟ್ಟಾರೆ ರೂ. 27,19,28,188/–ಗಳು ವೆಚ್ಚವಾಗಿರುತ್ತದೆ. ಈ ಸಂಬಂಧ ಲೆಕ್ಕ ಸಮನ್ವಯ ಮಾಡಿದ ಪೂರ್ಣ ವಿವರಗಳನ್ನು ಲೆಕ್ಕತನಿಖೆಗೆ ಒದಗಿಸುವಂತೆ ಸೂಚಿಸಿದೆ. ಹಾಗೂ ಸ್ವೀಕೃತಿ ಮೊತ್ತವಾದ **ರೂ. 30,47,03,664/–ಗಳ** ವಿವರಗಳನ್ನು ಒದಗಿಸುವವರೆಗೆ **ಆಕ್ಷೇಪಣೆಯಲ್ಲಿಡಲಾಗಿದೆ.** | ಈ ಮೊತ್ತವು 2015–16 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಕಾಲೇಜು ವಿದ್ಯಾರ್ಥಿಗಳು ಪರೀಕ್ಷೆ ಹಾಗೂ ಪರೀಕ್ಷೆಗೆ ಸಂಬಂದಿಸಿದ ದಾಖಲಾತಿಗಳು ಮತ್ತು ವಿವರ ಪಡೆಯುವ ಸಲುವಾಗಿ ನೇರ ಬ್ಯಾಂಕ್‌ಗಳಲ್ಲಿ ಜಮೆ ಮಾಡಿದ ಮೊತ್ತವಾಗಿರುತ್ತದೆ. ಪರೀಕ್ಷೆ ಖಾತೆಯಡಿ ಸದರೀ ಸಾಲಿನಲ್ಲಿ ಒಟ್ಟು ಜಮೆ ಮೊತ್ತ ಇದಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ನಗದು ಪುಸ್ತಕ, ಚಲನ್ ಪ್ರತಿಗಳು ಹಾಗೂ ಬ್ಯಾಂಕ್ ಸ್ಕ್ರೋಲ್‌ನ ಪ್ರತಿಗಳನ್ನು ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗಿತ್ತು.ಆದಾಗ್ಯೂ ಸದರೀ ಮೊತ್ತವನ್ನು ಆಕ್ಷೇಪಣೆಯಲ್ಲಿ ಇಟ್ಟಿರುವ ಕಾರಣ ಸದರೀ ದಾಖಲೆ ಪತ್ರಗಳನ್ನು ಮತ್ತೊಮ್ಮೆ ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಒದಗಿಸಲಾಗುವುದು. |

| | |
|---|---|
| **05. <u>ಯು.ಪಿ.ಇ ಯೋಜನೆಯಡಿ ಖರೀದಿಸಲಾದ ಉಪಕರಣಕ್ಕೆ ದಾಸ್ತಾನಿನ ವಹಿ ಹಾಗೂ Installation certificate ಹಾಜರುಪಡಿಸದಿರುವುದು:– (ಹಣಕಾಸು ವಿಭಾಗ)</u>**<br><br>2015–16ನೇ ಸಾಲಿಗೆ ಯು.ಪಿ.ಇ ಯೋಜನೆಯಡಿ Thermo Fisher scientific (Hongkong) ltd. Hongkong ಇಲ್ಲಿಂದ–1 UNIT LAB INDIA, Instruments pvt. ltd. ಸಂಸ್ಥೆಯಿಂದ Coz Incubator ಉಪಕರಣಕ್ಕಾಗಿ University order No. Dv1/598 ದಿನಾಂಕ:30.05.2015ರಲ್ಲಿ ರೂ.4,70,319/–ಗಳನ್ನು ಪಾವತಿಸಲಾಗಿದೆ. ಸಂಸ್ಥೆಗೆ ನೀಡಲಾದ ಸರಬರಾಜು ಆದೇಶ ಹಾಗೂ ಸದರಿ ಉಪಕರಣವು ವಿಶ್ವವಿದ್ಯಾನಿಲಯದ ಯು.ಪಿ.ಇ ವಿಭಾಗದ ದಾಸ್ತಾನಿಗೆ ಪಡೆದಿರುವ ಕುರಿತು ದಾಸ್ತಾನಿನ ವಹಿ/ ದೃಢೀಕರಣ ಹಾಗೂ ಉಪಕರಣವನ್ನು ವಿಭಾಗಕ್ಕೆ ಅಳವಡಿಸಿರುವ ಕುರಿತು Installation Report (certificate) ಕಡತದಲ್ಲಿ ಲಭ್ಯವಿರುವುದಿಲ್ಲ. ಈ ಕುರಿತು ಮಾಹಿತಿ ಒದಗಿಸುವಂತೆ ಲೆಕ್ಕತನಿಖಾ ವಿಚಾರಣೆ ಸಂಖ್ಯೆ:187/ ದಿನಾಂಕ:29.01.2018 ರಲ್ಲಿ ಕೋರಿದ್ದು, ಯಾವುದೇ ವಿವರ ನೀಡಿಲ್ಲವಾದ ಕಾರಣ ಹಾಗೂ ಉಪಕರಣ ಖರೀದಿ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದಿರುವುದರಿಂದ **ರೂ.4,70,319/–ಗಳನ್ನು ಸಂಬಂಧಿತರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿದ ವಿವರಗಳನ್ನು ನೀಡುವಂತೆ ಸೂಚಿಸಿದೆ. | 2015–16ನೇ ಸಾಲಿನಲ್ಲಿ ಯುಪಿಇ ಯೋಜನೆಯಡಿ ರೂ.4,70,319/–ಗಳ ವೆಚ್ಚದಲ್ಲಿ ಖರೀದಿಸಲಾದ Coz Incubator ಉಪಕರಣವನ್ನು ಯುಪಿಇ ಯೋಜನೆ ಮಾನಸಗಂಗೋತ್ರಿ ಮೈಸೂರು ಇವರ ಕಛೇರಿಯಲ್ಲಿ ದಾಸ್ತಾನು ವಹಿಯ ಪುಟ 2ರಲ್ಲಿ ದಾಖಲಿಸಿಕೊಂಡು ದೃಢೀಕರಿಸಲಾಗಿದೆ ಹಾಗೂ ಸದರಿ ಉಪಕರಣವನ್ನು ಯುಪಿಇ ಎಫ್.ಎ1 ಲ್ಯಾಬ್ ವಿಜ್ಞಾನ ಭವನ ಮಾನಸಗಂಗೋತ್ರಿ ಮೈಸೂರು ಇಲ್ಲಿ ಅಳವಡಿಸಿದೆ ಹಾಗೂ ದೃಢೀಕರಿಸಿದೆ.<br><br>ದಾಸ್ತಾನು ವಹಿಯ ಪುಟ 2 ಹಾಗೂ ಸದರಿ ಉಪಕರಣವನ್ನು ಅಳವಡಿಸಿ ದೃಢೀಕರಿಸಿರುವ ಬಗ್ಗೆ ಅವಶ್ಯಕ ದಾಖಲೆಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ರೂ.4,70,319/–ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **09. <u>2015–16ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ ಹಾಜರುಪಡಿಸದಿರುವುದು:– (ಹಣಕಾಸು ವಿಭಾಗ)</u>**<br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2015–16ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನೆ ವರದಿಯನ್ನು ಸಲ್ಲಿಸದಿರುವುದು ಕಂಡುಬಂದಿದೆ. ಕರ್ನಾಟಕ ಆರ್ಥಿಕ ಸಂಹಿತೆ –ಅನುಚ್ಛೇಧ –169 ರಂತೆ ವಾರ್ಷಿಕವಾಗಿ ದಾಸ್ತಾನು ಪರಿಶೀಲನೆ ಕೈಗೊಂಡು ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ವರದಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ. | ಹಣಕಾಸು ಶಾಖೆಯ 2015–16ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಲೆಕ್ಕ ತನಿಖಾ ಕಛೇರಿಗೆ ಸಧ್ಯದಲ್ಲೇ ಹಾಜರು ಪಡಿಸಲಾಗುತ್ತದೆ. |
| **10. <u>ಮೈಸೂರು ವಿಶ್ವವಿದ್ಯಾನಿಲಯದ ಒಟ್ಟು ವಾಹನಗಳ ವಿವರ/ಕರ್ನಾಟಕ ಜೀವ ವಿಮಾ ಇಲಾಖೆಗೆ ವಾಹನ ವಿಮೆಯನ್ನು ಜಮೆ ಮಾಡಿದ ವಿವರ ಹಾಜರುಪಡಿಸದಿರುವುದು:– (ಹಣಕಾಸು ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸಲಾಗುತ್ತಿರುವ ಒಟ್ಟು ವಾಹನಗಳ ವಿವರ ಪ್ರತಿ ವಾಹನಕ್ಕೆ ಸಂಬಂಧಿಸಿದ ವಾಹನಗಳ ವಿಮೆಯನ್ನು ಕರ್ನಾಟಕ ಜೀವ ವಿಮಾ ಸಂಸ್ಥೆಗೆ ಜಮೆ ಮಾಡಿದ | ಮೈಸೂರು ವಿಶ್ವವಿದ್ಯಾನಿಲಯದ ಒಟ್ಟು ವಾಹನಗಳುಗೂ ಹಾಗೂ ಅವುಗಳ ಜೀವ ವಿಮೆಯನ್ನು ವಿಮಾ ಇಲಾಖೆಗೆ ಪಾವತಿಮಾಡಿರುವ ಸಂಬಂಧ ವಿವರ ತಃಖ್ತೆಯನ್ನು ಅವಶ್ಯಕ |

| | |
|---|---|
| ವಿವರ. ಅನುಪಯುಕ್ತ ವಾಹನಗಳ ವಿವರ ಹಳೆಯ ವಾಹನಗಳ ವಿಲೇವಾರಿ ಇತ್ಯಾದಿ ವಿವರಗಳನ್ನು ಕೋರಿ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–5/ದಿ:25.10.2017ರಲ್ಲಿ ತಿಳಿಸಲಾಗಿದ್ದರೂ ಯಾವುದೇ ಮಾಹಿತಿ ಒದಗಿಸಿರುವುದಿಲ್ಲ. ಕೂಡಲೇ ವಿವರಗಳನ್ನು ಒದಗಿಸುವಂತೆ ಸೂಚಿಸಿದೆ. | ಚಳನ್ ಪ್ರತಿಗಳೊಂದಿಗೆ ಲಗತ್ತಿಸಿ ಈ ಕೂಡ ಸಲ್ಲಿಸಿದೆ. ಯಾವಿದೇ ವಾಹನಕ್ಕೆ ವಿಮೆ ಪಾವತಿಸದಿರುವುದನ್ನು ರಸ್ತೆ ಸಾರಿಗೆ ಅಧಿಕಾರಿಗಳು ಪರೀಕ್ಷಿಸುತ್ತಾರೆ. ವಿಮೆ ಪಾವತಿಸದೇ ಯಾವುದೇ ವಾಹನವನ್ನು ರಸ್ತೆಗೆ ಇಳಿಸಲು ಸಾಧ್ಯವಾಗದು. ಎಲ್ಲಾ ವಾಹನಗಳಿಗೂ ವಿಮೆ ಪಾವತಿಸಲಾಗಿರುತ್ತದೆ. |
| **13. <u>ಪ್ರಯಾಣ ಭತ್ಯೆಯ ಬಿಲ್ಲುಗಳಿಗೆ ವಿಮಾನ ಪ್ರಯಾಣದ ಬೋರ್ಡಿಂಗ್ ಪಾಸ್ ಹಾಗೂ ಇತರೆ ಮಾಹಿತಿಗಳನ್ನು ನೀಡದಿರುವುದು :– (ಹಣಕಾಸು ವಿಭಾಗ)</u>**<br>2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟ ರಾಜ್ಯದ ಹೊರಗೆ ಹಾಗೂ ವಿದೇಶಗಳಲ್ಲಿನ ವಿದ್ಯಾ ಸಂಸ್ಥೆಗಳಿಗೆ (Outreach centre) ಪರೀಕ್ಷಾ ಕಾರ್ಯಗಳ ನಿಮಿತ್ತ ಹಾಗೂ ಇತರೆ ಕಾರಣಗಳಿಗಾಗಿ ವಿಶ್ವವಿದ್ಯಾನಿಲಯದ ಅನೇಕ ಅಧಿಕಾರಿಗಳು/ಇತರೆ ಕಾಲೇಜುಗಳ ಉಪನ್ಯಾಸಕರು/ಅಧ್ಯಾಪಕರುಗಳು ವಿಮಾನ ಪ್ರಯಾಣ ಮಾಡಿರುವುದಾಗಿ ಮುಂಗಡವಾಗಿ ವಿಮಾನ ಪ್ರಯಾಣದ ಟಿಕೇಟ್ ಕಾಯ್ದಿರಿಸಿ ಜೆರಾಕ್ಸ್ ದಾಖಲಾತಿಗಳನ್ನು ನೀಡಿ ಇದರೊಂದಿಗೆ ಟ್ಯಾಕ್ಸಿ ಚಾರ್ಜ್, ಹೊಟೇಲ್ ಬಿಲ್ಲುಗಳನ್ನು ಸೇರಿಸಿ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಪಡೆದಿರುವುದು ಕಂಡುಬಂದಿದೆ. ಕೆ.ಸಿ.ಎಸ್.ಆರ್ ನಿಯಮ 487(1) ಎ ರಂತೆ ರೂ.40,050/–ಗಳು ಹಾಗೂ ಹೆಚ್ಚಿಗೆ ವೇತನ ಪಡೆಯುವ ಸರ್ಕಾರಿ ನೌಕರರು ರಾಜ್ಯದ ಹೊರಗೆ ವಿಮಾನದ ಮೂಲಕ ಪ್ರಯಾಣ ಮಾಡಲು ಹಾಗೂ ಕೆ.ಸಿ.ಎಸ್.ಆರ್ ನಿಯಮ 451 (3) ಮತ್ತು 465 ರಂತೆ ವಿಶೇಷ ದಿನಭತ್ಯೆಗಳನ್ನು ಪಡೆಯಲು ಅವಕಾಶವಿದೆ. ಆದರೆ ಇದಕ್ಕೆ ವಿರುದ್ಧವಾಗಿ ಭತ್ಯೆಗಳನ್ನು ಪಡೆಯಲಾಗಿದೆ.<br><br>ಈ ಸಂಬಂಧ ವಿಮಾನ ಪ್ರಯಾಣ ಮಾಡಿದ ಬೋರ್ಡಿಂಗ್ ಪಾಸ್, ಟ್ಯಾಕ್ಸಿಯನ್ನು ರಾಜ್ಯದ ಹೊರಗೆ ಉಪಯೋಗಿಸಿದ ವಾಹನಗಳ ವಿವರಗಳು, ಆ ಸಂಸ್ಥೆಯ ವಿವರಗಳು, ಇತ್ಯಾದಿಗಳ ವಿವರಗಳು ಲಭ್ಯವಿಲ್ಲ ಹಾಗೂ ಟಿ.ಎ ಬಿಲ್ಲಿನಲ್ಲಿ ಪ್ರಯಾಣ ಮಾಡಿದ ಅಧಿಕಾರಿಗಳ ಮೂಲ ವೇತನದ ವಿವರಗಳು ದಾಖಲಾಗಿಲ್ಲ. ಇದರಿಂದ ಸಂಬಂಧ ಅಧಿಕಾರಿ/ನೌಕರರು ವಿಮಾನದ ಮೂಲಕ ಪ್ರಯಾಣ ಮಾಡಲು ಅರ್ಹರೇ ಎಂದು ತಿಳಿಯಲು ಸಾಧ್ಯವಾಗಿರುವುದಿಲ್ಲ. ಈ ಸಂಬಂಧ ಪೂರ್ಣ ಮಾಹಿತಿಗಳನ್ನು ಪೂರಕ ದಾಖಲಾತಿಗಳೊಂದಿಗೆ ಲೆಕ್ಕ ಪರಿಶೀಲನೆಗೆ ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:148/2017–18 ದಿನಾಂಕ:12.01.2018 ಹಾಗೂ ಸಂಖ್ಯೆ:153/2017–18 ದಿನಾಂಕ:17.0.2018ರಲ್ಲಿ ಕೋರಲಾಗಿತ್ತು. ಆದರೆ ಯಾವುದೇ ಮಾಹಿತಿಯನ್ನು ವಿಶ್ವವಿದ್ಯಾನಿಲಯದವರು ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಿನಭತ್ಯೆಗಳ ಜೊತೆಗೆ ಹೆಚ್ಚಿಗೆ ಪಾವತಿಸಿರುವ ಮೊತ್ತ **ರೂ.43,507/–ಗಳನ್ನು ವಸೂಲಾತಿಗೆ** ಹಾಗೂ ಬೋರ್ಡಿಂಗ್ ಪಾಸ್‌ಗಳನ್ನು ಹಾಜರುಪಡಿಸದ ಬಾಬ್ತು ಮೆ॥ Travel Next Tours & Travels | ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟ ರಾಜ್ಯದ ಹೊರಗೆ ಹಾಗೂ ವಿದೇಶಗಳಲ್ಲಿನ ವಿದ್ಯಾ ಸಂಸ್ಥೆಗಳಿಗೆ (Outreach centre) ಪರೀಕ್ಷಾ ಕಾರ್ಯಗಳ ನಿಮಿತ್ತ ವಿಶ್ವವಿದ್ಯಾನಿಲಯದ ಆದೇಶಗಳ ಅನುಸಾರವಾಗಿ ನೇಮಕಗೊಂಡಿರುವ ಅಧಿಕಾರಿಗಳು/ಇತರೆ ಕಾಲೇಜುಗಳ ಉಪನ್ಯಾಸಕರು/ಅಧ್ಯಾಪಕರುಗಳು ವಿಮಾನ ಪ್ರಯಾಣ ಮಾಡಿರುವುದಾಗಿ ಮುಂಗಡವಾಗಿ ವಿಮಾನ ಪ್ರಯಾಣದ ಟಿಕೇಟ್ ಕಾಯ್ದಿರಿಸಿ ಜೆರಾಕ್ಸ್ ದಾಖಲಾತಿಗಳನ್ನು ನೀಡಿ ಇದರೊಂದಿಗೆ ಟ್ಯಾಕ್ಸಿ ಚಾರ್ಜ್, ಹೊಟೇಲ್ ಬಿಲ್ಲುಗಳನ್ನು ಸೇರಿಸಿ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಪಾವತಿಮಾಡಲಾಗಿರುವುದು ಸರಿಯಷ್ಟೆ.<br><br>ಆದರೆ ಪರೀಕ್ಷಾ ಕಾರ್ಯಗಳು ಒಂದು ದಿನಕ್ಕಿಂತ ಹೆಚ್ಚಿನ ದಿನಗಳಲ್ಲಿ ನಡೆಯುವಾಗ ನೇಮಕಗೊಂಡಿರುವ ಅಧಿಕಾರಿಗಳು/ ಇತರೆ ಕಾಲೇಜುಗಳ ಉಪನ್ಯಾಸಕರು/ ಅಧ್ಯಾಪಕರುಗಳು ವಿಶ್ವವಿದ್ಯಾನಿಲಯಕ್ಕೆ ಮತ್ತೆ ಮತ್ತೆ ಬಂದು ಹೋಗಲು ಕಷ್ಟಸಾಧ್ಯವಾಗಿರುವುದರಿಂದ ಅವರಿಗೆ ತಂಗು ಭತ್ಯೆ, ಪರಸ್ಥಳಗಳಲ್ಲಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೆ ಒಳಪಟ್ಟ ವಾಹನಗಳ ಕೊರತೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ನಿಗದಿತ ಸಮಯಕ್ಕೆ ತಲುಪಲು ವಾಹನ ಬಾಡಿಗೆ, ವಿಮಾನ ಭತ್ಯೆಗಳನ್ನು ಪಾವತಿ ಮಾಡಲಾಗಿದೆ ಹಾಗೂ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸರಬರಾಜು ಮಾಡುವ ಕ್ರಿಯೆಯು ಗೌಪ್ಯವಾಗಿ ನಿರ್ವಹಿಸುವುದರಿಂದ ವಿಶ್ವವಿದ್ಯಾನಿಲಯವು ನೇಮಕ ಮಾಡಲಾಗಿರುವ ಅಧಿಕಾರಿ/ಅಧ್ಯಾಪಕರುಗಳಿಗೆ ವಿಶ್ವವಿದ್ಯಾನಿಲಯದ ಆದೇಶದನ್ವಯ ಭತ್ಯೆಗಳನ್ನು ಪಾವತಿ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದ ಆದೇಶದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ ಸದರಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |

| | |
|---|---|
| Myosre ಇವರ ಮೂಲಕ ಪಾವತಿಸಿರುವ ಒಟ್ಟು ಮೊತ್ತ **ರೂ.1,63,430/–ಗಳನ್ನು ಆಕ್ಷೇಪಿಸಿದೆ.** ಪಾವತಿಯ ವಿವರಗಳನ್ನು **ಅನುಬಂಧ–112ರಲ್ಲಿ** ನೀಡಿದೆ.<br><br>ಮುಂದುವರೆದಂತೆ ಧನಾದೇಶ ಸಂಖ್ಯೆ:520603/015.06.2015ರಲ್ಲಿ ಒಟ್ಟು ರೂ.36,903/–ಗಳನ್ನು ಡಾ॥ಎಸ್.ಶ್ರೀಕಂಠಸ್ವಾಮಿ (Associate Professor) (BR No 48/15–16/ದಿನಾಂಕ:01.06.2015) ಇವರು ದಿನಾಂಕ:08.02.2015 ರಿಂದ 12.02.2015ರ ಅವಧಿಯಲ್ಲಿ (7ನೇ ಸೆಮ್) Bed ಪರೀಕ್ಷಾ ಕಾರ್ಯದ ನಿಮಿತ್ತ, ದುಬಯ್/ಯು.ಎ.ಇಯ Everest Educationl Institute A1 Sai Educational Centre, Rakia Ras A1 Khaimah ಇಲ್ಲಿಗೆ ಪ್ರಯಾಣ ಮಾಡಿದ ಬಾಬ್ತು ಎಂದು ಡ್ರಾ ಮಾಡಿದೆ. ಇದರಲ್ಲಿ ರೂ.2,750/–ಗಳು Remuneration ರೂ.1000/– ದೂರವಾಣಿ ವೆಚ್ಚ ರೂ.27,431/–ಗಳನ್ನು ದಿನಾಂಕ:07.02.2015 ರಿಂದ 13.02.2015ರ ಅವಧಿಗೆ 7 ದಿನಗಳ D.A (1/4 ಭಾಗ) U.S.D 250 x 62.70 =15675/4 = 3918 = 75 ರಂತೆ ಪಾವತಿಸಲಾಗಿದೆ. ಹಾಗೂ ರೂ.2,861 x 2/5,722/–ಗಳು ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್ ಇವರಿಗೆ ಟ್ಯಾಕ್ಸಿ ಬಾಡಿಗೆ ಬಾಬ್ತು ಪಾವತಿಸಲಾಗಿದೆ (2ಸೈಡ್) ಈ ಸಂಬಂಧ ದುಬಾಯ್/ಯು.ಎ.ಇಗೆ ಪ್ರಯಾಣ ಮಾಡಿದ ಯಾವುದೇ ದಾಖಲಾತಿಗಳು ಲಭ್ಯವಿಲ್ಲ ಹಾಗೂ ಯಾವಾಗ ಡ್ರಾ ಮಾಡಿದೆ ತಿಳಿದಿಲ್ಲ. ಈ ಹಿನ್ನೆಲೆಯಲ್ಲಿ ಪೂರ್ಣ ಮಾಹಿತಿಯನ್ನು ನೀಡುವವರೆಗೆ **ರೂ.31,181/–ಗಳನ್ನು ಆಕ್ಷೇಪಿಸಿದೆ.** ಹಾಗೂ ಟ್ಯಾಕ್ಸಿ ಬಾಬ್ತನ್ನು ವಸೂಲಾತಿಗೆ ಸೂಚಿಸಿದೆ. ಹಾಗೂ ನಿಯಮಾನುಸಾರ ಭತ್ಯೆಗಳನ್ನು ಪಡೆಯಲು ಸೂಚಿಸಿದೆ.<br><br>ಮೇಲಿನ ಎಲ್ಲಾ ಪ್ರಕರಣಗಳ ಬಾಬ್ತು ಒಟ್ಟು **ರೂ.1,94,611/–ಗಳನ್ನು (ರೂ.1,63,430 + ರೂ.31,181) ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.43,507/–ಗಳನ್ನು (ರೂ.28,503 + ರೂ.15,004) ವಸೂಲಾತಿಗೆ** ಸೂಚಿಸಿದೆ. | |
| **14. ಜಾಹಿರಾತು ಬಿಲ್ಲುಗಳ ಪಾವತಿಗೆ ಸರ್ಕಾರದಿಂದ ನಿಗದಿಯಾಗಿರುವ ದರಗಳು ಹಾಗೂ ಇತರೆ ಮಾಹಿತಿಗಳನ್ನು ನೀಡದಿರುವುದು :– (ಹಣಕಾಸು ವಿಭಾಗ)**<br><br>2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿರುವ ವಿವಿಧ ಕಾರ್ಯಕ್ರಮಗಳು ಹಾಗೂ ವಿಶ್ವವಿದ್ಯಾನಿಲಯ ಪಿ.ಹೆಚ್.ಡಿ ಕೋರ್ಸ್‌ಗಳ ಬಗ್ಗೆ ಜಾಹಿರಾತು ನೀಡಿದ ಬಾಬ್ತು (ವಿವಿಧ ದಿನಪತ್ರಿಕೆಗಳಲ್ಲಿ) ವಿವಿಧ ಜಾಹಿರಾತು ಸಂಸ್ಥೆಗಳಿಗೆ ಹಣವನ್ನು ಪಾವತಿಸಲಾಗಿದೆ. ಪ್ರತಿಯೊಂದು ದಿನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿ.ಹೆಚ್.ಡಿ ಕೋರ್ಸ್‌ಗಳ ಬಗ್ಗೆ ಜಾಹಿರಾತು ನೀಡಲು ಕರ್ನಾಟಕ ಸರ್ಕಾರದ ವಾರ್ತಾ ಪ್ರಚಾರ ಮತ್ತು ಪತ್ರಿಕೋದ್ಯಮ ಇಲಾಖೆಯ ಉಪ ನಿರ್ದೇಶಕರವರಿಗೆ ಪತ್ರ ಬರೆದು ವಿವಿಧ ಮುಖ್ಯ ಪತ್ರಿಕೆಗಳಲ್ಲಿ ಪ್ರಚುರಪಡಿಸುವಂತೆ |

| | |
|---|---|
| ಪತ್ರಿಕೆಯು ತಾನು ಎಷ್ಟು ಪ್ರಮಾಣದಲ್ಲಿ ದಿನಪತ್ರಿಕೆ ಹಂಚಿಕೆ ಮಾಡಲಾಗುತ್ತಿದೆ. ಅದಕ್ಕೆ ಅನುಗುಣವಾಗಿ ಸರ್ಕಾರವು ಅಂದರೆ ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಪ್ರತಿಯೊಂದು ದಿನಪತ್ರಿಕೆಗೂ ಪ್ರತಿ ಸೆಂ.ಮೀ ಪ್ರತಿಕಾಲಂ ಕಲ್ಲರ್/ಬ್ಲಾಕ್ ಅಂಡ್ ವೈಟ್‌ಗಳ ಆಧಾರದಲ್ಲಿ ದರಗಳನ್ನು ನಿಗದಿಪಡಿಸಿರುತ್ತದೆ. ಜಾಹಿರಾತು ವೆಚ್ಚವು ವಾರ್ತಾ ಮತ್ತು ಪ್ರಚಾರ ಇಲಾಖಾ ಮೂಲಕ ಪ್ರಚುರಪಡಿಸಿ ನಿಗದಿಪಡಿಸಿದ ದರಗಳ ಆಧಾರದ ಮೇಲೆ ಪಾವತಿ ಮಾಡಬೇಕಾಗಿರುತ್ತದೆ. ಈಗ ಬಿಲ್ಲಿನಲ್ಲಿ ಕ್ಲೈಮ್ ಮಾಡಿರುವ ಜಾಹಿರಾತು ಸಂಸ್ಥೆಗಳ ದರಗಳ ನಿಖರತೆಯನ್ನು ತಿಳಿಯಲು ಸರ್ಕಾರ ನಿಗದಿಪಡಿಸಿರುವ ದರಗಳ ವಿವರಗಳು ಅತ್ಯವಶ್ಯಕವಾಗಿ ಬೇಕಾಗಿದೆ. ದಿನಪತ್ರಿಕೆಗಳು ನೇರವಾಗಿ ಬಿಲ್ಲುಗಳನ್ನು ಸಲ್ಲಿಸಿಲ್ಲ. ಖಾಸಗಿ ಜಾಹಿರಾತು ಸಂಸ್ಥೆಗಳು ಬಿಲ್ಲುಗಳನ್ನು ಸಲ್ಲಿಸಿವೆ. ಬಿಲ್ಲುಗಳ ಜೊತೆಯಲ್ಲಿ ಜಾಹಿರಾತು ನೀಡಿರುವ ದಿನ ಪತ್ರಿಕೆಯ ಪೂರ್ಣ ಪ್ರತಿಗಳು ಇರುವುದಿಲ್ಲ. ಕೇವಲ ಜೆರಾಕ್ಸ್ ಪ್ರತಿಗಳು (ಅದೂ ಅಪೂರ್ಣವಾಗಿ) ಮಾತ್ರ ಇರುತ್ತದೆ. | ಕೋರಲಾಗಿತ್ತು. ವಾರ್ತಾ ಮತ್ತು ಪ್ರಚಾರ ಇಲಾಖೆಯು ಅವರ ನಿಯಂತ್ರಣದಲ್ಲಿರುವ ಜಾಹಿರಾತು ಸಂಸ್ಥೆಗಳಿಗೆ ಈ ಪ್ರಚಾರ ಕಾರ್ಯವನ್ನು ವಹಿಸಿಕೊಡಲಾಗಿದೆ. ಹಾಗಾಗಿ ಜಾಹಿರಾತು ಸಂಸ್ಥೆಗಳು ಪ್ರಚಾರ ಕಾರ್ಯಪೂರ್ಣಗೊಳಿಸಿದ ತಕ್ಷಣ ಪ್ರಚಾರ ಇಲಾಖೆಯು ನಿಗದಿಪಡಿಸಿದ ದರಕ್ಕಾನುಸಾರವಾಗಿ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸಿರುತ್ತದೆ. ದಿನ ಪತ್ರಿಕೆಗಳು ನೇರವಾಗಿ ಬಿಲ್ಲು ಸಲ್ಲಿಸುವ ಕ್ರಮ ಇರುವುದಿಲ್ಲ. |
| **15. <u>ಪಿ.ಹೆಚ್.ಡಿಯ ಸಮಗ್ರ ಮಾಹಿತಿಯ ವಿವರಣಾ ಪುಸ್ತಕಗಳ (Prospectus ಗಳ) ಮುದ್ರಣದ ಬಿಲ್ಲುಗಳ ದರಪಟ್ಟಿಯ ಪೂರ್ಣ ಮಾಹಿತಿ ನೀಡದಿರುವುದು :– (ಹಣಕಾಸು ವಿಭಾಗ)</u>**<br><br>2015–16ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿ.ಹೆಚ್.ಡಿಯ ಸಮಗ್ರ ಮಾಹಿತಿಯ ವಿವರಣಾ ಪುಸ್ತಕಗಳ ಮುದ್ರಣದ (Prospectus) ಬಾಬ್ತು ಧನಾದೇಶ ಸಂಖ್ಯೆ:520433/04.06.2015ರಲ್ಲಿ ರೂ.95,746/–ಗಳನ್ನು ಹಾಗೂ ಟಿ.ಡಿ.ಎಸ್ ಬಾಬ್ತು ರೂ.2,254/–ಗಳನ್ನು (ಒಟ್ಟು 98000/–) ಧನಾದೇಶ ಸಂಖ್ಯೆ:520670/18.06.2015 ಮತ್ತು 520890/520891/ದಿನಾಂಕ:10.07.2015ರಲ್ಲಿ ರೂ.98,000/–ಗಳನ್ನು ಮೆ॥ಜ್ಞಾನೋದಯ ಅಕೆಡಮಿಕ್ ಪಬ್ಲಿಕೇಷನ್ಸ್, ಮೈಸೂರುರವರಿಗೆ ತಲಾ 700 ಸಂಖ್ಯೆಯಂತೆ ಒಟ್ಟು 1400 ಸಂಖ್ಯೆಯ ವಿವರಣಾ ಪುಸ್ತಕಗಳನ್ನು ತಲಾ 140/–ಗಳಂತೆ ದರಪಟ್ಟಿಯ ಮೂಲಕ (ಎರಡು ಸಲ) ಪಾವತಿಸಲಾಗಿದೆ. ಈ ಸಂಬಂಧ ದರಪಟ್ಟಿಯನ್ನು ಕರೆದಿರುವ ಮೂಲ ಕಡತ ಕೆ.ಕ್ಯೂ.1 ನಮೂನೆ ಪುಸ್ತಕಗಳ ದಾಸ್ತಾನು ಸ್ವೀಕೃತಿ ಮತ್ತು ವಿತರಣೆಗೆ ಮಾಹಿತಿಗಳು ಬಿಲ್ಲುಗಳೊಂದಿಗೆ ಲಭ್ಯವಿರುವುದಿಲ್ಲ. ಒಟ್ಟು ಪಾವತಿಯು ಒಂದು ಲಕ್ಷ ಮೀರಿರುವುದರಿಂದ ಕೆ.ಟಿ.ಪಿ.ಪಿ ನಿಯಮಗಳಂತೆ ಟೆಂಡರ್ ಕರೆಯಬೇಕಾಗಿತ್ತು. ಆದರೆ ನಿಮ್ಮ ಅಧಿಕಾರ ವ್ಯಾಪ್ತಿಗೆ ಬರುವಂತೆ ವಿಂಗಡಿಸಿ ಭಾಗಗಳಾಗಿ ಮಾಡಿರುವುದು ನಿಯಮಗಳಿಗೆ ವಿರುದ್ಧವಾಗಿದೆ. ಈ ಸಂಬಂಧ ಪೂರ್ಣ ಮಾಹಿತಿಯನ್ನು ನೀಡುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:155/2017–18 ದಿನಾಂಕ:18.01.2018ರಲ್ಲಿ ಕೋರಲಾಗಿತ್ತು. ಆದರೆ ಮಾಹಿತಿಯನ್ನು ನೀಡಿರುವುದಿಲ್ಲ. ಪೂರ್ಣ ಮಾಹಿತಿಯನ್ನು ನೀಡುವವರೆಗೆ ಪಾವತಿಸಿರುವ ಒಟ್ಟು **ರೂ.1,96,000/–ಗಳನ್ನು ಆಕ್ಷೇಪಿಸಲಾಗಿದೆ.** | ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ನಡೆಸುವ ಅಭ್ಯರ್ಥಿಗಳಿಗೆ ಸಮಗ್ರ ಮಾಹಿತಿಯನ್ನು ಒಳಗೊಂಡ ಒಟ್ಟು 700 ಪಿ.ಎಚ್.ಡಿ (Prospectus) ಗಳನ್ನು ಮಾನ್ಯ ಕುಲಪತಿಯವರ ಅನುಮೋದನೆ ಪಡೆದು ಹಾಗೂ ನಿಯಮಾನಿಸಾರ ಕೋಟೆಷನ್ ಕರೆದು ಕಡಿಮೆ ದರ ನಮೂದಿಸಿದ್ದ ಮೇ॥ ಜ್ಞಾನೋದಯ ಅಕೆಡಮಿಕ್ ಪಬ್ಲಿಕೇಷನ್ಸ್, ಮೈಸೂರು ಇವರನ್ನು ಅನಿಮೋದಿಸುವುದರೊಂದಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಡಿಓಆರ್/95/ಪಿ.ಎಚ್.ಡಿ/ಇತರೆ/2014–15 ದಿನಾಂಕ:16.4.2015 ರ ಅನ್ವಯ ಒಟ್ಟು 700 ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಕಾರ್ಯದೇಶ ನಿಡಲಾಗಿತ್ತು . ಸದರಿ ಮುದ್ರಣ ವೆಚ್ಚದ ಒಟ್ಟು ಮೊತ್ತ ರೂ.98,000/–ಗಳಾಗಿದ್ದುದರಿಂದ ಕೊಟೇಶನ್ ದರದ ಆಧಾರದಲ್ಲಿ ಮುದ್ರಣಾಕಾರ್ಯ ಕೈಗೊಳ್ಳಲಾಗಿತ್ತು.<br><br>ತದನಂತರ ಸದರೀ ಸಮಗ್ರಮಾಹಿತಿಯ ಪುಸ್ತಕವನ್ನು ಎಲ್ಲಾ ಆಧ್ಯಯನ ಕೇಂದ್ರಗಳಿಗೂ ಮತ್ತು ಕೇಂದ್ರದ ಮುಖ್ಯಸ್ತರಿಗೆ ಹಾಗೂ ಅಧಿಕಾರಿಗಳಿಗೂ ನೀಡುವ ಸಂಬಂಧ ತೀರ್ಮಾನ ತೆಗೆದು ಕೊಂಡುದರಿಂದ ಮತ್ತೊಮ್ಮೆ ಕೊಟೇಶನ್ ಕರೆಯಲು ಸಾಕಷ್ಟು ಸಮಯಾವಕಾಶ ಇಲ್ಲವಾಗಿದುದರಿಂದ ಈ ಕಾರ್ಯವನ್ನು ಸಹ ಮೇಲಿನ ಸಂಸ್ಥೆ ವಹಿಸಿಕೊಟ್ಟು ಮುದ್ರಣ ಕಾರ್ಯ ಮಾಡಿಸಲಾಗಿದೆ. ಸದರಿ ಕಾರ್ಯಕ್ಕೂ ಸಹ ರೂ.98,000/–ಗಳ ವೆಚ್ಚ ಭರಿಸಲಾಗಿದೆ. |

| | |
|---|---|
| | ಮುದ್ರಿಸಿ ಪಡೆಯಲಾದ ಒಟ್ಟು 1400 ಪುಸ್ತಕಗಳನ್ನು ದಾಸ್ತಾನು ಲೆಕ್ಕಕ್ಕೆ ತೆಗೆದುಕೊಂಡು ವಿತರಿಸಲಾಗಿರುವ ಬಗ್ಗೆ ಅವಶ್ಯಕ ದಾಖಲಾತಿಗಳನ್ನು ತನಿಖಾ ಕಛೇರಿಗೆ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕುಲಸಚಿವರು (ಪರೀಕ್ಷಾಂಗ)ರವರಿಗೆ ಕೋರಿದೆ. |
| **17.ಅಂಕಪಟ್ಟಿಗಳು/ಓ.ಎಂ.ಆರ್/ಬಾರ್‌ಕೋಡ್ ಇತ್ಯಾದಿಗಳ ಮುದ್ರಣದ ಟೆಂಡರ್ ಕಡತಗಳನ್ನು ಹಾಜರುಪಡಿಸದಿರುವುದು :– (ಹಣಕಾಸು ವಿಭಾಗ)**<br><br>ವಿಷಯಕ್ಕೆ ಸಂಬಂಧಿಸಿದಂತೆ ಧನಾದೇಶ ಸಂಖ್ಯೆ:1)520324/25.05.2015ರಲ್ಲಿ ರೂ.51,86,649/– (TDS) ಬಾಬ್ತು ರೂ.1,22,101/–ಗಳು ಧನಾದೇಶ ಸಂಖ್ಯೆ:520325/25.05.2015 2) ಧನಾದೇಶ ಸಂಖ್ಯೆ: 520703/24.06.2015 ರೂ.28,000/– 3)ಧನಾದೇಶ ಸಂಖ್ಯೆ:520945/17.07.2015 ರೂ.49,82,700/– (TDS ಬಾಬ್ತು) 4) ಧನಾದೇಶ ಸಂಖ್ಯೆ: 520946/17.07.2015 ರೂ.1,17,300/–ಗಳು ಸೇರಿದಂತೆ ಒಟ್ಟು ರೂ.1,04,36,750/– ಗಳನ್ನು ಮೆ॥ ಮದ್ದಲ ಇಂಡಸ್ಟ್ರೀಸ್ ಗುಂಟೂರು ಆಂದ್ರಪ್ರದೇಶ ಇವರಿಗೆ ಮೈಸೂರು ವಿಶ್ವವಿದ್ಯಾನಿಲಯ ಅಂಕಪಟ್ಟಿಗಳು/ಓ.ಎಂ.ಆರ್.ಬುಕ್‌ಲೆಟ್/ಬಾರ್‌ಕೋಡ್/ವಿಶ್ವವಿದ್ಯಾನಿಲಯದ ಪ್ರಮಾಣ ಪತ್ರಗಳ ಮುದ್ರಣಮಾಡಿ ಸರಬರಾಜು ಮಾಡಲು ಪಾವತಿಸಲಾಗಿದೆ. ಈ ಸಂಬಂಧ ಸದರಿ ಸಂಸ್ಥೆಯೊಂದಿಗೆ ಆಗಿರುವ ಟೆಂಡರ್ ಪ್ರಕ್ರಿಯೆ (ಮೂಲ ಕಡತಗಳನ್ನು) ಕರಾರು ಪತ್ರ ಪಡೆಯಲಾಗಿರುವ ಸಾಮಗ್ರಿಗಳನ್ನು ದಾಸ್ತಾನಿಗೆ ತೆಗೆದುಕೊಂಡಿರುವ ಹಾಗೂ ವಿತರಿಸಿರುವ ವಿವರಗಳನ್ನು ಹಾಗೂ ಇದಕ್ಕೆ ಪೂರಕವಾದ ಇತರೆ ದಾಖಲಾತಿಗಳನ್ನು ಲೆಕ್ಕ ಪರಿಶೀಲನೆಗೆ ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:182/17–18 ದಿನಾಂಕ:27.01.2018ರಲ್ಲಿ ಕೋರಲಾಗಿತ್ತು. ಆದರೆ ಯಾವುದೇ ಮಾಹಿತಿಗಳನ್ನು ಲಿಖಿತವಾಗಿ ನೀಡಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಪೂರ್ಣ ಮಾಹಿತಿಯನ್ನು ನೀಡುವವರೆಗೆ ಇದಕ್ಕಾಗಿ ಪಾವತಿಸಿರುವ ಒಟ್ಟು ಮೊತ್ತ **ರೂ.1,04,36,750/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಈ ವೆಚ್ಚಗಳಿಗೆ ನಿಯಮಾನುಸಾರ ವೆಚ್ಚವಾಗಿದೆ ಎಂದು ಖಚಿತ ಪಡಿಸಲು ಸಾಧ್ಯವಾಗಿರುವುದಿಲ್ಲ. ಈಬಗ್ಗೆ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದಲ್ಲಿ ವಿನೂತನವಾಗಿ ಉತ್ತಮ ವಿನ್ಯಸ ಮತ್ತು ಗುಣಮಟ್ಟದ ಹಾಗೂ ರಕ್ಷಣಾತ್ಮಕ ಗುಣಗಳನ್ನೂಳಗೊಂಡ ಅಂಕಪಟ್ಟಿಗಳು ಮತ್ತು ಪದವಿ ಪ್ರಮಾಣ ಪತ್ರಗಳನ್ನು (ಖಾಲಿ) ಮುದ್ರಿಸಿ ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000 ರಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ 26.12.2013 ರಂದು ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್ ಅನ್ನು ದಿನಾಂಕ 20.01.2014 ರಂದು ನಡೆದ ಟೆಂಡರ್ ಅಂಗೀಕಾರ ಸಮಿತಿಯಲ್ಲಿ ಮಂಡಿಸಿ ಅನಿಮೋದನೆ ಪಡೆಯಲಾಗಿತ್ತದೆ. ಇದರನ್ವಯ ಮೆ॥ಮುದ್ದಾಲ ಇಂಡಟ್ರೀಸ್ ರವರು ಸಲ್ಲಿಸಿದ ದರವು ಕಡಿಮೆ ದರವಾಗಿದು; ಇದನ್ನು ಅಂಗೀಕರಿಸಲಾಗಿದೆ ಹಾಗೂ ಈ ಸಂಬಂಧ ಕರಾರು ಒಪ್ಪಂದ ಮಾಡಿಕೊಂಡು ಮೇಲಿನ ಕಾರ್ಯವನ್ನು ವಹಿಸಿಕೊಟ್ಟು ಪೂರ್ಣಗೊಳಿಸಲಾಗಿರುತ್ತದೆ.<br><br>ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರತಿ, ಕರಾರು ಒಪ್ಪಂದ ಪ್ರತಿ ದಿನಾಂಕ 8.10.2013 ರಂದು ನಡೆದ ಟೆಂಡರ್ ಪರಿಶೀಲನಾ ವರದಿ ಹಾಗೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಪವಿ1.7/ಕಾಸ್ವೆ/2011.12 ದಿನಾಂಕ: 05.04.2016ರ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ. ಮೂಲ ಕಡತಗಳನ್ನು ಪರಿಶೀಲನಾ ಸಮಯದಲ್ಲಿ ಒದಗಿಸಲಾಗುತ್ತದೆ. ಮೇಲಿನ ಸಾಮಾಗ್ರಿಗಳನ್ನು ದಾಸ್ತಾನಿಗೆ ತೆಗೆದುಕೊಂಡು ವಿತರಿಸಿರುವ ಬಗ್ಗೆ ದಾಸ್ತಾನು ಮತ್ತು ವಿತರಣಾ ವಹಿಯನ್ನು ಲಿಕ್ಕ ಪರಿಶೋಧನಾ ಕಛೇರಿಗೆ ಸಲ್ಲಿಸಿ ಪರಿಶೀಲನೆಗೆ ಒಳಪಡಿಸಲು ಅಗತ್ಯ ಕ್ರಮ ವಹಿಸುವಂತೆ ಕುಲಸಚಿರವು(ಪರೀಕ್ಷಾಂಗ) ಇವರಿಗೆ ಕೋರಲಾಗಿದೆ. |
| **19. ಪರೀಕ್ಷಾ ಕಾರ್ಯಚಟುವಟಿಕೆಗಳನ್ನು ಹೊರಗುತ್ತಿಗೆಯಡಿ ನೀಡಿರುವ ಪೂರ್ಣ ಮಾಹಿತಿಯನ್ನು ಹಾಜರುಪಡಿಸದಿರುವುದು :– (ಹಣಕಾಸು ವಿಭಾಗ)**<br><br>ವಿಷಯಕ್ಕೆ ಸಂಬಂಧಿಸಿದಂತೆ ಬಿ.ಆರ್.ನಂ.128/15–16 ದಿನಾಂಕ:17.07.2015 ಧನಾದೇಶ | ಈ ಕಂಡಿಕೆಗೆ ಸಂಬಂಧಿಸಿದ ಆಕ್ಷೇಪಣೆಯು ಇದೇ ವರದಿಯ ಭಾಗ–3ರ ಕಂಡಿಕೆ–61 |

| | |
|---|---|
| ಸಂಖ್ಯೆ:520951/20.07.2015ರಲ್ಲಿ ರೂ.79,86,303/-ಗಳನ್ನು ಧನಾದೇಶ ಸಂಖ್ಯೆ:520952/ ದಿನಾಂಕ: 20.07.2015 ರಲ್ಲಿ ರೂ.1,88,009/-ಗಳು ಟಿ.ಡಿ.ಎಸ್ ಬಾಬ್ತು ಸೇರಿ ಒಟ್ಟು ರೂ.81,74,312/-ಗಳನ್ನು ಮೆ॥ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಮುಂಬೈ ಇವರಿಗೆ ಪಾವತಿಸಲಾಗಿದೆ. ಈ ಸಂಬಂಧ ಬಿಲ್ಲಿನೊಂದಿಗೆ ಅಡಕವಾಗಿರುವ ಜೆರಾಕ್ಸ್ ಪ್ರತಿಗಳಲ್ಲಿ ಪೂರ್ಣ ಮಾಹಿತಿಗಳು ಇರುವುದಿಲ್ಲ. ಈ ಸಂಬಂಧ ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಕರೆಯಲಾಗಿರುವ ಮೂಲ ಟೆಂಡರ್ ಕಡತ, ಇದರಲ್ಲಿ ಎಷ್ಟು ವರ್ಷಗಳ ಕಾರ್ಯಕ್ಕಾಗಿ ಟೆಂಡರ್ ಕರೆಯಲಾಗಿದೆ, ಈ ಸಂಬಂಧ ಪಡೆಯಲಾಗಿರುವ ಇ.ಎಂ.ಡಿ ಮೊತ್ತ ಎಷ್ಟು (ಮೂರು ವರ್ಷಗಳು ಸೇರಿ) ಇತ್ಯಾದಿ ವಿವರಗಳು ಲಭ್ಯವಿಲ್ಲ ಬಿಲ್ಲಿನಲ್ಲಿ ಕೇವಲ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯನ್ನು ಮಾತ್ರ (ಯು.ಜಿ/ಪಿ.ಜಿ/Regular/Repeater ಇತ್ಯಾದಿಗಳೆಂದು) ದಾಖಲಿಸಿದೆ. 2015-16ನೇ ಸಾಲಿನಲ್ಲಿ ಯು.ಜಿ/ಪಿ.ಜಿಯ ವಿವಿಧ ಕೋರ್ಸ್‌ಗಳಿಗಾಗಿ ಪ್ರವೇಶಾತಿ ಪಡೆದಿರುವ ವಿವರಗಳು ಲಭ್ಯವಿರುವುದಿಲ್ಲ. ಇದರೊಂದಿಗೆ ಈ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ಪಡೆದಿರುವ ಪರೀಕ್ಷಾಶುಲ್ಕಗಳ ವಿವರಗಳು ಲಭ್ಯವಿಲ್ಲ. ಇದರೊಂದಿಗೆ ವಿಶ್ವವಿದ್ಯಾನಿಲಯ ಪರೀಕ್ಷಾ ವಿಭಾಗದಲ್ಲಿ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಇರುವ ವಿವಿಧ ಸಿಬ್ಬಂದಿಗಳು ಹಾಗೂ ಅವರಿಗೆ ಹಂಚಿಕೆಯಾಗಿರುವ ಕಾರ್ಯಗಳೇನು, ವಿಶ್ವವಿದ್ಯಾನಿಲಯ ಸಿಬ್ಬಂದಿಗಳಿದ್ದು, ಹೊರಗುತ್ತಿಗೆಯನ್ನು ನೀಡುವ ಔಚಿತ್ಯವೇನು ಇತ್ಯಾದಿಗಳ ವಿವರಗಳನ್ನು ಲೆಕ್ಕಪರಿಶೀಲನೆಗೆ ಹಾಜರುಪಡಿಸುವಂತೆ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:185/17-18, ದಿನಾಂಕ:27.01.208ರಲ್ಲಿ ಕೋರಲಾಗಿತ್ತು. ಆದರೆ ಯಾವುದೇ ಮೂಲ ದಾಖಲಾತಿಗಳನ್ನು ಹಾಗೂ ಮಾಹಿತಿಗಳನ್ನು ನೀಡಿರುವುದಿಲ್ಲ. ಇದರಿಂದ ಪಾವತಿಗಳ ನಿಖರತೆ, ಸತ್ಯಾಸತ್ಯೆಯನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ.<br><br>ಈ ಹಿನ್ನೆಲೆಯಲ್ಲಿ ಇದರ ಪೂರ್ಣ ಮಾಹಿತಿಗಳನ್ನು ನೀಡುವವರೆಗೆ ಸದರಿ ಸಂಸ್ಥೆಗೆ ಪಾವತಿಸಿರುವ ಮಾಹಿತಿಗಳನ್ನು ನೀಡುವವರೆಗೆ ಸದರಿ ಸಂಸ್ಥೆಗೆ ಪಾವತಿಸಿರುವ ಒಟ್ಟು ಮೊತ್ತ **ರೂ.81,74,312/-ಗಳನ್ನು ಆಕ್ಷೇಪಿಸಲಾಗಿದೆ**. ಈ ವೆಚ್ಚಗಳಿಗೆ ನಿಯಮಾನುಸಾರ ವೆಚ್ಚವಾಗಿದೆ ಎಂದು ಖಚಿತ ಪಡಿಸಲು ಸಾಧ್ಯವಾಗಿರುವುದಿಲ್ಲ. ಈಬಗ್ಗೆ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. | ರಲ್ಲಿಯೂ ದಾಖಲಾಗಿರುವುದರಿಂದ ವಿವರವಾದ ಅನುಪಾಲನಾ ವರದಿಯನ್ನು ಕಂಡಿಕೆ 61ಕ್ಕೆ ನೀಡಲಾಗಿದೆ.<br><br>ಆದ್ದರಿಂದ ಈ ಕಂಡಿಕೆಯಲ್ಲಿ ಆಕ್ಷೇಪಿಸಿರುವ ಮೊತ್ತ ರೂ.81,74,312/-ಗಳನ್ನು ಇಲ್ಲಿ ತೀರುವಳಿಗೊಳಿಸಲು ಕೋರಿದೆ. |
| **20.ಕಡತಗಳನ್ನು ಆಡಿಟ್ ವಿಚಾರಣೆಗೆ ಹಾಜರುಪಡಿಸದೇ ಇರುವುದು :- (ಹಣಕಾಸು ವಿಭಾಗ)**<br><br>2015-16ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಹಣಕಾಸು ವಿಭಾಗದಲ್ಲಿ ಲೆಕ್ಕಪರಿಶೋಧನೆಯ ಸಮಯದಲ್ಲಿ ಆಡಿಟ್ ವಿಚಾರಣಾ ಪತ್ರಗಳಲ್ಲಿ ತಿಳಿಸಿರುವ ಕಡತಗಳನ್ನು ಆಡಿಟ್ ವಿಚಾರಣೆಗೆ ಹಾಜರುಪಡಿಸಿರುವುದಿಲ್ಲ. ಆಡಿಟ್ ವಿಚಾರಣೆಗೆ ಹಾಜರುಪಡಿಸದಿರುವ ಕಡತಗಳ ವಿವರಗಳನ್ನು ಅನುಬಂಧ- | ರೂ.2,17,64,826/-ಗಳ ಮೊತ್ತವು ವಿವಿಧ ವಿಭಾಗ ಮತ್ತು ಅಂಗ ಸಂಸ್ಥೆಗಳಿಗೆ ಖರೀದಿಸಲಾದ ಸಾಮಾಗ್ರಿಗಳಾಗಿದ್ದು, ಈ ಎಲ್ಲಾ ಅವಶ್ಯಕ ದಾಖಲಾತಿಗಳನ್ನು ಆಯಾ ವಿಭಾಗ ಮತ್ತು ಅಂಗ ಸಂಸ್ಥೆಗಳಿಂದ ಕ್ರೋಡೀಕರಿಸಿ ತನಿಖಾ ಕಛೇರಿಗೆ ಪರಿಶೀಲನೆಗಾಗಿ |

| | |
|---|---|
| 113ರಲ್ಲಿ ನಮೂದಿಸಲಾಗಿದೆ. ಆದ್ದರಿಂದ ಆಡಿಟ್ ವಿಚಾರಣೆಗೆ ಹಾಜರುಪಡಿಸದಿರುವ ಖರೀದಿ ಓಚರ್‌ಗಳು ಸಂಭಾವನೆ ವೋಚರ್‌ಗಳು ಮತ್ತು ಇತರ ಕಡತಗಳ ಮೊತ್ತ **ರೂ.2,17,64,826/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಈ ವೆಚ್ಚಗಳಿಗೆ ನಿಯಮಾನುಸಾರ ವೆಚ್ಚವಾಗಿದೆ ಎಂದು ಖಚಿತಪಡಿಸಲು ಸಾಧ್ಯವಾಗಿರುವುದಿಲ್ಲ. ಈಬಗ್ಗೆ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. | ಸಲ್ಲಿಸಲಾಗುವುದು. |
| **21. ಪರೀಕ್ಷಾ ಕಾರ್ಯ ನಿಮಿತ್ತ ಪ್ರಾಧ್ಯಾಪಕರು/ಅಧಿಕಾರಿಗಳು ವಿಮಾನಯಾನ ಕೈಗೊಂಡಿರುವುದಕ್ಕೆ ಬೋರ್ಡಿಂಗ್ ಪಾಸ್ ಹಾಜರುಪಡಿಸದಿರುವುದು:- (ಪರೀಕ್ಷಾ ವಿಭಾಗ)**<br><br>2015-16ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಯದ ಪರೀಕ್ಷಾಂಗ ವಿಭಾಗದ ಎಫ್ & ಆರ್ ಓಚರ್‌ಗಳನ್ನು ಪರಿಶೀಲಿಸಲಾಗಿ ಕೆಲವು ಅಧಿಕಾರಿಗಳು ಕಾರ್ಯನಿಮಿತ್ತ ಹೊರರಾಜ್ಯಗಳಾದ ದೆಹಲಿ, ಗುವಹಾಟಿ ಮುಂತಾದ ಸ್ಥಳಗಳಿಗೆ ವಿಮಾನಯಾನದ ಮುಖಾಂತರ ಪ್ರವಾಸ ಮಾಡಿರುವುದಕ್ಕೆ ವಿಮಾನಯಾನದ ಬೋರ್ಡಿಂಗ್ ಪಾಸ್‌ಗಳನ್ನು ಬಿಲ್ಲುಗಳೊಂದಿಗೆ ಅಡಕಗೊಳಿಸಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಬೋರ್ಡಿಂಗ್ ಪಾಸ್‌ಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವವರೆವಿಗೂ, ವಿಮಾನಯಾನದ ಒಟ್ಟು ವೆಚ್ಚ **ರೂ.68,075/-ಗಳನ್ನು ಆಕ್ಷೇಪಿಸಲಾಗಿದೆ.** ವಿವರಗಳನ್ನು ಅನುಬಂಧ-114ರಲ್ಲಿ ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | 2015-16ನೇ ಸಾಲಿನಲ್ಲಿ ಶಾಸನಬದ್ದ ಅಧಿಕಾರಿಯಾದ ಕುಲಸಚಿವ(ಪರೀಕ್ಷಾಂಗ)ರವರು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಗೌಪ್ಯತಾ ಕಾರ್ಯದ ಮೇಲೆ ವಿಮಾನದಲ್ಲಿ ಪ್ರಯಾಣ ಕೈಗೊಂಡು ಕಾರ್ಯಕ್ರಮ ಮುಗಿದ ನಂತರ ವಿಮಾನದ ಮೂಲಕವೇ ಹಿಂದಿರುಗಿರುತ್ತಾರೆ. ಇವರು ದೆಹಲಿಯಲ್ಲಿ 26.12.2014ರಂದು ನಡೆದ ಮೊದಲನೇ ಮತ್ತು ಮೂರನೇ ಸೆಮಿಸ್ಟರ್ ಎಂ.ಬಿ.ಎ ಪರೀಕ್ಷೆ ಸಂಬಂಧ ಪ್ರಯಾಣ ಕೈಗೊಂಡಿರುತ್ತಾರೆ. ಮತ್ತು ಇವರು ದಿನಾಂಕ 16.1.2015 ರಂದು ದೆಹಲಿಯ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:17/2000 ಕ್ಕೆ ಸಂಬಂಧಿಸಿದಂತೆ ಹಾಜರಾಗಿರುತ್ತಾರೆ.<br><br>ವಿಮಾನದ ಪ್ರಯಾಣ ಅವಧಿ ಅಂತರ ಹಾಗೂ ವೇಳಾ ಪಟ್ಟಿಯ ಅನ್ವಯ ಎರಡೂ ಕಡೆಯ ವಿಮಾನಯಾನಕ್ಕೆ ತಗಲುವ ಸಮಯದ ಲೆಕ್ಕಾಚಾರದಂತೆ ಕರಾರುವಕ್ಕಾಗಿ ನ್ಯಾಯಾಲಯದ ಕೆಲಸಕಾರ್ಯ ಹಾಗೂ ಪರೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಿ ಹಿಂದಿರುಗಿರುತ್ತಾರೆ.<br><br>ಆದರೆ ಬೋರ್ಡಿಂಗ್ ಪಾಸ್‌ಗಳನ್ನು ಬಿಲ್ಲಿನ ಜೊತೆ ಲಗತ್ತಿಸಿ ಸಲ್ಲಿಸಿರುವುದಿಲ್ಲ ಮುಂದೆ ಇಂತಹ ನ್ಯೂನತೆಗಳಿಗೆ ಅವಕಾಶವಾಗದಂತೆ ಎಚ್ಚರ ವಹಿಸಲಾಗುವುದು.<br><br>ಆದ್ದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| **22.ADHOC ನೌಕರರ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ತಪಾಸಣೆಗೆ ಹಾಜರುಪಡಿಸದಿರುವುದು :- (ಶೈಕ್ಷಣಿಕ ಬಹುಮಾದ್ಯಮ ಸಂಶೋಧನಾ ಕೇಂದ್ರ)** | |

| | |
|---|---|
| 2014–15 ರಿಂದ 2015–16ನೇ ಸಾಲುಗಳಲ್ಲಿ ಇ.ಎಂ.ಎಂ.ಆರ್.ಸಿ ಕಛೇರಿಗೆ ADHOC ಯೋಜನೆಯಡಿಯಲ್ಲಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದನ್ನು ಲೆಕ್ಕತಪಾಸಣೆಯಲ್ಲಿ ಪರಿಶೀಲಿಸಲಾಗಿದ್ದು, ADHOC ಯೋಜನೆ ಅಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಳ್ಳುವಾಗ ಯು.ಜಿ.ಸಿ–ಇ.ಎಂ.ಎಂ.ಆರ್.ಸಿ ಮಾರ್ಗಸೂಚಿ ಅನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಬಗ್ಗೆ ನೇಮಕಾತಿ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸದೆ ಇರುವುದರಿಂದ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಬಗ್ಗೆ ಲೆಕ್ಕ ತಪಾಸಣೆಯಲ್ಲಿ ತಿಳಿಯಲು ಸಾಧ್ಯವಾಗದೆ ಇರುವುದರಿಂದ ನೌಕರರಿಗೆ ಪಾವತಿಸಿರುವ ವೇತನ **ರೂ.2,61,574/–ಗಳನ್ನು ಆಕ್ಷೇಪಿಸಿದ್ದು,** ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮಕೈಗೊಂಡು ದಾಖಲಾತಿಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. ವಿವರವನ್ನು **ಅನುಬಂಧ–115ರಲ್ಲಿ** ವಿವರಿಸಿದೆ. | ಇ.ಎಂ.ಎಂ.ಆರ್.ಸಿ ಕೇಂದ್ರಕ್ಕೆ ADHOC ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಯು.ಜಿ.ಸಿ ಮಾರ್ಗಸೂಚಿಯನ್ವಯ ಇ.ಎಂ.ಎಂ.ಆರ್.ಸಿ ಕೇಂದ್ರದ ನಿರ್ದೇಶಕರಿಗೆ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರವನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಡಿ.ವಿ2/255(ಸಿ) 89–90 ದಿನಾಂಕ31–07–1998ರ ಕ್ರಮಾಂಕ (4)ರಲ್ಲಿ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಪ್ರದತ್ತವಾದ ಅವಕಾಶವಿರುತ್ತದೆ.ಅದರನ್ವಯ 3 ತಿಂಗಳಿಗೊಮ್ಮೆ ADHOC ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡು ನಂತರ ಬಿಡುಗಡೆಮಾಡಿ ಮತ್ತೆ ವಿಶ್ವವಿದ್ಯಾನಿಲಯದ ನಿಯಮದಂತೆ ಇ.ಎಂ.ಎಂ.ಆರ್.ಸಿ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ADHOC ಸಿಬ್ಬಂದಿಯನ್ನು ತಾತ್ಕಾಲಿಕ ನೇಮಕಾತಿ ಮಾಡಿಕೊಂಡು ಗ್ರೇಡೆಡ್ ಪೇಯಲ್ಲಿ ವೇತನ ಪಾವತಿಸಲಾಗಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಆದೇಶ ಸಂಖ್ಯೆ ಇ.ಎಂ.ಎಂ.ಆರ್.ಸಿ/121–124/2014–15 ದಿನಾಂಕ 07–05–2014ರ ಪ್ರತಿ ಲಗತ್ತಿಸಿದೆ. ಸದರಿ ಆಕ್ಷೇಪಿತ ಮೊತ್ತ ರೂ2,61,574/– ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **23.ANICAST STATION ಉಪಕರಣದ ಬಿಡಿಭಾಗಗಳನ್ನು ಖರೀದಿಸಲು ಕೈಗೊಂಡಿರುವ ಟೆಂಡರ್ ಪ್ರಕ್ರಿಯೆ ಕಡತವನ್ನು ಲೆಕ್ಕತಪಾಸಣೆಗೆ ಹಾಜರುಪಡಿಸದಿರುವುದು :– (ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)**<br><br>2014–15 ಮತ್ತು 2015–16ನೇ ಸಾಲುಗಳ ಲೆಕ್ಕ ತಪಾಸಣೆಯಲ್ಲಿ ANICAST STATION ಉಪಕರಣ ಬಿಡಿಭಾಗಗಳನ್ನು ಖರೀದಿಸಲು 'Telerad' a Division Sistronics (India)ltd ರವರಿಂದ ಧನಾದೇಶಸಂಖ್ಯೆ:812515/25.08.2014ರಲ್ಲಿ ರೂ.480210/–ಗಳನ್ನು ಪಾವತಿಸಿರುವುದನ್ನು ಪರಿಶೀಲಿಸಲಾಗಿದ್ದು, ಕೆ.ಟಿ.ಪಿ.ಪಿ ಕಾಯ್ದೆ 1999–2000ರ ನಿಯಮ 4ರ ಅನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡು ಖರೀದಿಸಬೇಕಾಗಿರುತ್ತದೆ. ಲೆಕ್ಕತಪಾಸಣಾ ವಿಚಾರಣೆ ಪತ್ರ ಸಂಖ್ಯೆ:4/28.06.2018ರಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಜರುಪಡಿಸುವಂತೆ ಕೋರಲಾಗಿದ್ದು, ಟೆಂಡರ್ ಪ್ರಕ್ರಿಯೆ ಕೈಗೊಂಡ ಪೂರ್ಣ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದಿಲ್ಲ. ANICAST STATION ಉಪಕರಣಗಳ ಬಿಡಿಭಾಗಗಳನ್ನು ಖರೀದಿಸಲು ಕೈಗೊಂಡಿರುವ ಟೆಂಡರ್ ಪ್ರಕ್ರಿಯೆ ಕಡತಗಳು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಆದೇಶಗಳ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವವರೆಗೆ **ರೂ.4,80,210/–ಗಳನ್ನು** | ಇ.ಎಂ.ಎಂ.ಆರ್.ಸಿ ಕೇಂದ್ರದ ಕಾರ್ಯನಿರ್ವಹಣೆಗೆ ಅತ್ಯಾವಶ್ಯಕವಾಗಿ ಬೇಕಾಗಿದ್ದ ANICAST STATION ಉಪಕರಣವನ್ನು ಖರೀದಿಸಲಾಗಿದ್ದು, ನಿಯಮಾನುಸಾರ ಕರ್ನಾಟಕ ಪಾರದರ್ಶಕ ಕಾಯಿದೆ 1999ರಂತೆ ಇ–ಟೆಂಡರ್ ಸಂಖ್ಯೆ E-Tender No.MU/EMMRC/Modules/2012-13-IND-114 Dt14-08-2012 ರ ಮೂಲಕ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಖರೀದಿಸಲಾಗಿದೆ. ಅಲ್ಲದೆ ಯು.ಜಿ.ಸಿ ನಿಯಮಾವಳಿಯ ಅನ್ವಯ ಮೈಸೂರು ವಿಶ್ವವಿದ್ಯಾನಿಲಯ ಇ.ಎಂ.ಎಂ.ಆರ್.ಸಿ ಕೇಂದ್ರಕ್ಕೆ ಪ್ರದತ್ತವಾಗಿ ನೀಡಿರುವ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರದ ಆದೇಶ ಸಂಖ್ಯೆ ಡಿ.ವಿ2/255(ಸಿ) 89–90 ದಿನಾಂಕ31–07–1998ರ ಕ್ರಮಾಂಕ (1)ರ ಉಪಕ್ರಮಾಂಕ (2)ರಲ್ಲಿ ವಿವರಿಸಿರುವಂತೆ ವೀಡಿಯೋ ಉಪಕರಣವಾದ ANICAST STATION ಉಪಕರಣದ |

| | |
|---|---|
| **ಆಕ್ಷೇಪಣೆಗೆ** ಸೂಚಿಸಿದ್ದು, ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಬಿಡಿಭಾಗಗಳನ್ನು ಖರೀದಿಸಿ ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಇ–ಟೆಂಡರ್ ಮತ್ತು ವಿಶ್ವವಿದ್ಯಾನಿಲಯದ ಆದೇಶದ ಪ್ರತಿ ಲಗತ್ತಿಸುತ್ತಾ ಆಕ್ಷೇಪಣೆ ಮೊತ್ತ ರೂ4,80,210/–ಗಳನ್ನು ಕೈ ಬಿಡುವಂತೆ ಕೋರಲಾಗಿದೆ. |
| **<u>24.ವಿಮಾನಯಾನ ಭತ್ಯೆ ಪಡೆದಿರುವುದಕ್ಕೆ ಬೋರ್ಡಿಂಗ್ ಪಾಸ್‌ಗಳನ್ನು ಹಾಜರುಪಡಿಸದಿರುವುದು:– (ವಿದ್ಯಾರ್ಥಿ ಕ್ಷೇಮಪಾಲನಾ)</u>**<br>ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ವತಿಯಿಂದ 31ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮ ಕೈಗೊಂಡಿದ್ದು, ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಸ್ಪರ್ಧೆಗಳಿಗೆ ತೀರ್ಪುಗಾರರನ್ನು ಹೊರರಾಜ್ಯಗಳಿಂದ ಕರೆಸಲಾಗಿದ್ದು, ತೀರ್ಪುಗಾರರು ವಿಮಾನಯಾನ ಕೈಗೊಂಡು ಭತ್ಯೆ ಪಡೆದಿರುವ ಓಚರ್‌ಗಳನ್ನು ಪರಿಶೀಲಿಸಲಾಗಿ (T.A. Journals) ಪ್ರಯಾಣ ಬೆಳೆಸಿರುವ ಒಂದು ಕಡೆಯ ಬೋರ್ಡಿಂಗ್ ಪಾಸನ್ನು ಹಾಜರು ಪಡಿಸಿದ್ದು, ಹಿಂದಿರುಗಿರುವ ಬೋರ್ಡಿಂಗ್ ಪಾಸ್‌ಗಳನ್ನು ಹಾಜರು ಪಡಿಸಿರುವುದಿಲ್ಲ. ಅನುಬಂಧ–04ರಲ್ಲಿ ವಿವರಿಸಿರುವ ತೀರ್ಪುಗಾರರು ವಾಪಸ್ಸು ಪ್ರಯಾಣ ಬೆಳೆಸಿರುವ ಬೋರ್ಡಿಂಗ್ ಪಾಸ್‌ಗಳನ್ನು ಲೆಕ್ಕ ತನಿಖೆಗೆ ಹಾಜರು ಪಡಿಸುವವರೆಗೂ **ರೂ.85,768/–ಗಳನ್ನು ಆಕ್ಷೇಪಣೆಗೆ** ಸೂಚಿಸಿದೆ. ವಿವರಗಳನ್ನು **<u>ಅನುಬಂಧ–116ರಲ್ಲಿ</u>** ನೀಡಲಾಗಿದ್ದು ವರದಿಗೆ ಲಗತ್ತಿಸಿದೆ. | 31ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮದಲ್ಲಿ ಹೊರ ರಾಜ್ಯಗಳಿಂದ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನುರಿತ ಕಲಾವಿದರನ್ನು ತೀರ್ಪುಗಾರರಾಗಿ ಆಹ್ವಾನಿಸಲಾಗಿತ್ತು. ಇವರುಗಳಿಗೆ ವಿಮಾನ ಭತ್ಯೆಯನ್ನು ಪಾವತಿಸಿ ನಿಯಮಾನುಸಾರ ಬೋರ್ಡಿಂಗ್ ಪಾಸ್‌ನ್ನು ಪಡೆಯಲಾಗಿದೆ. ಆದರೆ ವಾಪಸ್ಸು ಪ್ರಯಾಣ ಬೆಳೆಸಿರುವುದರ ಬೋರ್ಡಿಂಗ್ ಪಾಸ್‌ನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಲಾಗಿತ್ತು. ಈ ಸಂಬಂಧವಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಿದ ತೀರ್ಪುಗಾರರಿಗೆ ಬೋರ್ಡಿಂಗ್ ಪಾಸನ್ನು ಕಳುಹಿಸಿಕೊಡುವಂತೆ ಕೋರಿದ್ದು ಅವರುಗಳು ಈಗಾಗಲೇ ಕಾರ್ಯಕ್ರಮ ಮುಗಿದು 2 ವರ್ಷ 4 ತಿಂಗಳು ಮೇಲಾಗಿರುವುದರಿಂದ ನಮ್ಮಲ್ಲಿ ಲಭ್ಯವಿಲ್ಲವೆಂದು ತಿಳಿಸುತ್ತಾರೆ.<br><br>ಆದುದರಿಂದ ಇನ್ನು ಮುಂದೆ ಹಿಂದಿರುಗಿರುವ ಬೋರ್ಡಿಂಗ್ ಪಾಸ್‌ಗಳನ್ನು ಪಡೆಯಲಾಗುವುದೆಂದು ತಿಳಿಸುತ್ತಾ ಈ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |
| **<u>25.ಕನ್ನಡ ವಿಶ್ವಕೋಶ ಸಂಪುಟಗಳ ಮುದ್ರಣ ಮಾಡಿಸಲು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಜರುಪಡಿಸದಿರುವುದು :– (ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ)</u>**<br><br>2015–16ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಬಿ.ಆರ್. ಸಂಖ್ಯೆ:170 ದಿನಾಂಕ:23.02.2016ರಲ್ಲಿ ಧನಾದೇಶ ಸಂಖ್ಯೆ:806525 ರಲ್ಲಿ ರೂ.34,20,000/–ಗಳನ್ನು ಕನ್ನಡ ವಿಶ್ವಕೋಶದ ಸಂಪುಟ 3, 5 ಮತ್ತು 7ರ ಮುದ್ರಣ ಮಾಡಿಸಿ ಮೆ॥ ರಾಜಾ ಪ್ರಿಂಟರ್ಸ್, ಬೆಂಗಳೂರು ರವರಿಗೆ ಪಾವತಿಸಲಾಗಿರುವ ಓಚರ್‌ಗಳನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ–1999–2000ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ:09/ದಿನಾಂಕ:19.06.2018ರಲ್ಲಿ ಕೋರಲಾಗಿ | ಕನ್ನಡ ವಿಶ್ವಕೋಶ 03,05 ಮತ್ತು 07 ನೇ ಸಂಪುಟದ ಮುದ್ರಣಾಕಾರ್ಯಕ್ಕೆ ನಿಯಮಾನುಸಾರ ಇ– ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡು ಸಾರ್ವಜನಿಕ ಪ್ರಕಟಣೆ ಹೊರಡಿಸಿ ಪಾರದರ್ಶಕತೆ ಅಧ್ಯಾದೇಶ ಅಧ್ಯಾಯ 2 ಅಧಿನಿಯಮ 8 ರ ಅನ್ವಯ ದಿನಾಂಕ 4–2–2012ರಂದು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಿ ಟೆಂಡರ್ ಕಮಿಟಿಯಲ್ಲಿ ಒಪ್ಪಿಗೆ ಪಡೆದು ನಂತರ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್1/68/1970–71 ದಿನಾಂಕ 29–04–2015ರ ಅನ್ವಯ ಮೆ॥ರಾಜಾ ಪ್ರಿಂಟರ್ಸ್ ಬೆಂಗಳೂರು ಇವರ ದರವನ್ನು |

| | |
|---|---|
| ಇ–ಪ್ರೊಕ್ಯೂರ್‌ಮೆಂಟ್ ಕೈಗೊಂಡ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ. ಕನ್ನಡ ವಿಶ್ವಕೋಶ ಸಂಪುಟ 3,5 ಮತ್ತು 7ರ ಮುದ್ರಣ ಕಾರ್ಯ ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡ ಕಡತಗಳು, ದಾಸ್ತಾನು ವಹಿಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವವರೆಗೆ **ರೂ.34,20,000/–ಗಳನ್ನು ಆಕ್ಷೇಪಿಸಲಾಗಿದ್ದು,** ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಅಂಗೀಕರಿಸುವುದರೊಂದಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.<br><br>ವಿಶ್ವವಿದ್ಯಾನಿಲಯದ ದಿನಾಂಕ 29–04–2015 ಮತ್ತು ದಿನಾಂಕ 05–11–2016ರ ಪ್ರತಿಗಳು ಹಾಗೂ ಇ –ಟೆಂಡರ್‌ಗೆ ಸಂಬಂಧಿಸಿದ ಕಡತಗಳ ಪ್ರತಿಗಳನ್ನು ಈ ಕೂಡ ಲಗತ್ತಿಸುತ್ತಾ; ರೂ34,20,000/–ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **27. <u>ಸಿ & ಐ 65 ಇತರೆ ಸ್ಕಾಲರ್‌ಷಿಪ್ ಖಾತೆಗೆ ಸಂಬಂಧಿಸಿದ ವೋಚರ್ಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದು:– (ಮಹಾರಾಜ ಕಾಲೇಜು)</u>**<br><br>2015–16ನೇ ಸಾಲಿನಲ್ಲಿ ಸಿ & ಐ 65 ಇತರೆ ಸ್ಕಾಲರ್‌ಷಿಪ್‌ಗೆ ಸಂಬಂಧಿಸಿದ ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು ಪರಿಶೀಲಿಸಲಾಗಿ 2015–16ನೇ ಸಾಲಿನಲ್ಲಿ ಒಟ್ಟು ಸ್ವೀಕೃತಿಗಳು ರೂ.3,13,648/–ಗಳಾಗಿದ್ದು, ಒಟ್ಟು ವೆಚ್ಚ ರೂ.2,73,430/– ಗಳನ್ನು ವೆಚ್ಚಭರಿಸಲಾಗಿದ್ದು, ಸ್ವೀಕೃತಿ ಮತ್ತು ಪಾವತಿಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:39/2018–19 ದಿನಾಂಕ:17.05.2018 ಮತ್ತು ವಿಚಾರಣಾ ಪತ್ರ ಸಂಖ್ಯೆ:41/18.05.2018ರಲ್ಲಿ ಕೋರಲಾಗಿದ್ದು, ಯಾವುದೇ ಸ್ವೀಕೃತಿ ಮತ್ತು ವೆಚ್ಚಕ್ಕೆ ಸಂಬಂಧಿಸಿದ ಕಡತಗಳನ್ನು ಹಾಜರುಪಡಿಸಿರುವುದಿಲ್ಲ.<br><br>ಸಿ & ಐ 65 ಇತರೆ ಸ್ಕಾಲರ್‌ಷಿಪ್ ಖಾತೆಗೆ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದ ಇತರೆ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ವಿವಿಧ ಸ್ಕಾಲರ್‌ಷಿಪ್‌ಗಳನ್ನು ವಿದ್ಯಾರ್ಥಿಗಳಿಗೆ ಮಂಜೂರಾಗಿರುವ ವಿವರಗಳು ಹಾಗೂ ಯಾವ ಯಾವ ವಿದ್ಯಾರ್ಥಿಗಳಿಗೆ ಯಾವ ಸಂಸ್ಥೆಯಿಂದ ಸ್ಕಾಲರ್‌ಷಿಪ್/ಪ್ರೋತ್ಸಾಹಧನಗಳು ಮಂಜೂರಾಗಿರುವ ಕಡತಗಳನ್ನು ಹಾಗೂ ಮಂಜೂರಾತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ವಿತರಣೆ ಮಾಡಿರುವ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದರಿಂದ **ರೂ.2,73,430/– ಗಳನ್ನು ಆಕ್ಷೇಪಿಸಲಾಗಿದ್ದು,** ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಸ್ವೀಕೃತಿ ಮತ್ತು ಪಾವತಿಗಳಿಗೆ ಸಂಬಂಧಿಸಿದ ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. | 2015–16ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಮಂಜೂರಾಗಿರುವ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಕಡತಗಳು ಹಾಗೂ ಅವರಿಗೆ ಪಾವತಿಮಾಡಿರುವ ವಿದ್ಯಾರ್ಥಿ ವೇತನದ ಓಚರ್‌ಗಳನ್ನು ಕೂಡಲೇ ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಪ್ರಾಂಶುಪಾಲರು ಮಹಾರಾಜ ಕಾಲೇಜು ಮೈಸೂರು ರವರಿಗೆ ಸೂಚಿಸಲಾಗಿದೆ. |
| **28. <u>ಪ್ರಾಂಶುಪಾಲರ ಬ್ಯಾಂಕ್ ಖಾತೆಯಿಂದ ನಗದೀಕರಿಸಲಾಗಿರುವ ಮೊಬಲಗುಗಳ ವೋಚರ್ಸ್‌ಗಳನ್ನು ತಪಾಸಣೆಗೆ ಹಾಜರುಪಡಿಸದಿರುವುದು:– (ಲಲಿತ ಕಲೆಗಳ ಕಾಲೇಜು)</u>**<br><br>2015–16ನೇ ಸಾಲಿನ ಪ್ರಾಂಶುಪಾಲರ ಬ್ಯಾಂಕ್ ಖಾತೆ ಸಂಖ್ಯೆ:ಎಸ್.ಬಿ.ಎಂ 64044808884ರಲ್ಲಿ | ಪ್ರಸ್ತಾಪಿಸಿರುವ ಕಂಡಿಕೆಯ ಕ್ರಮ ಸಂಖ್ಯೆ (1)ರಲ್ಲಿ ಆದಾಯ ತೆರಿಗೆ ಜಮಾ ಮಾಡಿ ವೆಚ್ಚ |

ಈ ಕೆಳಗೆ ವಿವರಿಸಲಾಗಿರುವ ಧನಾದೇಶಗಳಿಗೆ ಪ್ರತಿಯಾಗಿ, ವೆಚ್ಚದ ವೋಚರ್ಸ್ ತಪಾಸಣೆಗೆ ಹಾಜರುಪಡಿಸದಿರುವುದಿಲ್ಲ. ಆದ್ದರಿಂದ ಧನಾದೇಶಗಳ ಒಟ್ಟು ಮೊತ್ತ **ರೂ.22,480/–ಗಳನ್ನು ಆಕ್ಷೇಪಿಸಿದೆ.**

| ಕ್ರ.ಸಂ | ಧನಾದೇಶಗಳ ಸಂಖ್ಯೆ/ದಿನಾಂಕ | ಧನಾದೇಶಗಳ ಮೂಲಕ ನಗದೀಕರಿಸಲಾಗಿರುವ ಮೊತ್ತ | ಹಣ ನಗದೀಕರಿಸಿರುವುದರ ಉದ್ದೇಶ |
|---|---|---|---|
| 1 | 142920<br>23.07.2015 | 15480 | ಆದಾಯ ತೆರಿಗೆ ಜಮೆ ಮಾಡಿರುವುದಕ್ಕೆ ವೆಚ್ಚಭರಿಸಿರುವುದಕ್ಕೆ (ವಿಳಂಬ ಅವಧಿಗೆ ಕಾರಣ ಸಲ್ಲಿಸಿರುವುದಿಲ್ಲ) |
| 2 | 606674<br>19.10.15 | 1000 | ಕಛೇರಿಯ ವೆಚ್ಚಕ್ಕಾಗಿ |
| 3 | 606674<br>05.03.16 | 6000 | ಮಹಿಳಾ ದಿನಾಚರಣೆಗಾಗಿ |
| | | **22480** | |

ಭರಿಸಿರುವುದರ ಬಗ್ಗೆ ಆದಾಯ ತೆರಿಗೆ ಇಲಾಖೆಯಿಂದ 2014–15ನೇ ಸಾಲಿನ ರಿಟರ್ನ್ಸ್ ಫೈಲ್ ಬಗ್ಗೆ ದಿನಾಂಕ:10.7.2015ರಂದು ತಿಳುವಳಿಕೆ ಪತ್ರ ಸ್ವೀಕರಿಸಿದ್ದು ಅದರನ್ವಯ ದಿನಾಂಕ:23.7.2015ರಂದು ಆದಾಯ ತೆರಿಗೆ ಜಮಾ ಮಾಡಲು ಧನಾದೇಶ ವಿತರಿಸಿ ತೆರಿಗೆ ಪಾವತಿಸಿರುತ್ತದೆ. ಈ ಸಂಬಂಧಪಟ್ಟ ಪ್ರತಿಗಳನ್ನು ಲಗತ್ತಿಸಿದೆ.

ಕ್ರಮಾಂಕ (2)ರ ಧನಾದೇಶ ಸಂಖ್ಯೆ 606674 ದಿನಾಂಕ:19.10.2015 ರೂ.1000.00ಗಳು ಇದೇ ವರದಿಯ IV ರ ಕಂಡಿಕೆ 29ರಲ್ಲಿ ಕ್ರಮ ಸಂಖ್ಯೆ (6)ರಲ್ಲಿ ಪುನರಾವರ್ತನೆಯಾಗಿರುತ್ತದೆ. ಮುಂದುವರೆದು ಕ್ರಮಾಂಕ (3)ರ ಧನಾದೇಶ ಸಂಖ್ಯೆ 606674 ಆಗಿರುವುದಿಲ್ಲ. ಬದಲಿಗೆ ಧನಾದೇಶ ಸಂಖ್ಯೆ 606693 ದಿನಾಂಕ 5.03.2016 ರೂ.6,000.00ಗಳು ಕಂಡಿಕೆ ಸಂಖ್ಯೆ 29ರ ವಿಚಾರಣ ಪತ್ರ ಸಂಖ್ಯೆ 08/25.5.2018ರ ಕ್ರಮಾಂಕ (10)ರಲ್ಲಿ ಇದು ಸಹ ಪುನರಾವರ್ತನೆಯಾಗಿರುತ್ತದೆ. ಕ್ರಮಾಂಕ (2) ಮತ್ತು (3)ರ ಒಟ್ಟು ಮೊತ್ತ ರೂ.7,000.00(1000+6000)ಗಳು ಪುನರಾವರ್ತನೆಯಾಗಿರುತ್ತದೆ. ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತಾ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಆದಾಯ ತೆರಿಗೆ ಪಾವತಿ ವಿಳಂಬಕ್ಕೆ ಕಾರಣ ಹಾಗೂ ಚಲನ್‌ಗಳ ಪ್ರತಿ ಹಾಜರುಪಡಿಸಿರುವುದು ಮತ್ತು ಪುನರಾವರ್ತನೆಯ ಮೊತ್ತ ಸೇರಿದಂತೆ ರೂ.22,480.00ಗಳ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ

**29. <u>ವೆಚ್ಚಭರಿಸಲಾಗಿರುವ ಓಚರ್‌ಗಳನ್ನು ಹಾಜರುಪಡಿಸದಿರುವುದು:– (ಲಲಿತ ಕಲೆಗಳ ಕಾಲೇಜು)</u>**

2015–16ನೇ ಸಾಲಿನ ಪ್ರಾಂಶುಪಾಲರ ಬ್ಯಾಂಕ್ ಖಾತೆ ಸಂಖ್ಯೆ:64044808884 ರ ಮೂಲಕ ಒಟ್ಟು ರೂ.8,34,197/–ಗಳ ಮೊತ್ತಕ್ಕೆ ವ್ಯವಹಾರಗಳನ್ನು ನಡೆಸಲಾಗಿದ್ದು, ಈ ಮೊತ್ತದಲ್ಲಿ ಒಟ್ಟು ರೂ.7,47,018/– ಗಳ ವೆಚ್ಚಕ್ಕೆ ಸಂಬಂಧಿಸಿದಂತೆ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ಉಳಿದ ರೂ.43,587/– ಗಳ ವೆಚ್ಚದ ಓಚರ್‌ಗಳನ್ನು ತಪಾಸಣೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧವಾಗಿ ಓಚರ್‌ಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:08 ದಿನಾಂಕ:25.05.2018ರಲ್ಲಿ ಕೋರಲಾಗಿ, ಹಾಜರುಪಡಿಸಿರುವುದಿಲ್ಲ ಹಾಗಾಗಿ **ರೂ.43,587/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

2015–16ನೇ ಸಾಲಿನ ಪ್ರಾಂಶುಪಾಲರ ಬ್ಯಾಂಕ್ ಖಾತೆ ಸಂಖ್ಯೆ:64044808884 ಕ್ಕೆ ಸಂಬಂಧಿಸಿದಂತೆ ವಿಚಾರಣ ಪತ್ರ ಸಂಖ್ಯೆ:08ರಲ್ಲಿ ರೂ.43,607ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಸದರಿ ಮೊತ್ತಕ್ಕೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ:01,02,04,05,08,09,11ರ ಒಟ್ಟು ಮೊತ್ತ ರೂ.34,607..ಗಳಿಗೆ ಓಚರ್‌ಗಳನ್ನು ಈ ಪತ್ರದ ಜೊತೆ ಲಗತ್ತಿಸಿದೆ.

ಕ್ರಮ ಸಂಖ್ಯೆ:03,06,07&10ರ ಧನಾದೇಶಗಳಲ್ಲಿನ ಮೊತ್ತ ರೂ.9,000.00ಗಳನ್ನು ಕಛೇರಿ ದೈನಂದಿನ ಕೆಲಸ ಕಾರ್ಯಕ್ಕಾಗಿ ಸಾದಿಲ್ವಾರು ವೆಚ್ಚ ಭರಿಸಿದೆ. ಅದರಲ್ಲಿ ರೂ.5,016.00ಗಳಿಗೆ ಓಚರ್ ಲಗತ್ತಿಸಲಾಗಿದೆ ಉಳಿದ ರೂ.3,984.00ಗಳಿಗೆ ಓಚರ್‌ಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರುಪಡಿಸಲಾಗುವುದಾಗಿ ನಿವೇದಿಸುತ್ತಾ, ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ

ರೂ.43,607.00ಗಳಲ್ಲಿ ರೂ.39,623.00ಗಳ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಿದೆ.

ವಿಚಾರಣ ಪತ್ರ ಸಂಖ್ಯೆ 08ರ ವಿವರ ಕೆಳಗಿನಂತೆ ವಿವರಿಸಿದೆ.

| ಕ್ರ.ಸಂ | ಧನಾದೇಶ ಸಂಖ್ಯೆ/ದಿನಾಂಕ | ಧನಾದೇಶಗಳ ಮೊತ್ತ | ವಿವರ |
|---|---|---|---|
| 1 | 142910/07.04.2015 | 5,520/- | ಶ್ರೀಮತಿ ಹೆಚ್.ಸಿ.ಸುನಿತ ಪ್ರದ.ಗು ಇವರ ವೈದ್ಯಕೀಯ ವೆಚ್ಚದ ಮರುಭರಿಕೆ ಮೊತ್ತ. |
| 2 | 142911/07.04.2015 | 1,000/- | ಶ್ರೀಮತಿ ನಿಂಗಮ್ಮ ಸೇವಕಿ ಇವರ ವೈದ್ಯಕೀಯ ವೆಚ್ಚದ ಮರುಭರಿಕೆ ಮೊತ್ತ. |
| 3 | 142914/12.06.2015 | 1,000/- | ಸಾದಿಲ್ವಾರು ವೆಚ್ಚ |
| 4 | 142920/23.7.2015 | 15,480/- | ಆದಾಯ ತೆರಿಗೆ ಪಾವತಿಸಿರುವ ಮೊತ್ತ |
| 5 | 606666/3.8.2015 | 1,420/- | 2014-15ನೇ ಸಾಲಿನ ಆದಾಯ ತೆರಿಗೆಯ ಕ್ಯೂ2 ಮತ್ತು ಕ್ಯೂ3 ಅಪ್‌ಲೋಡ್ ಮಾಡಿಸಿರುವ ಮೊತ್ತ |
| 6 | 606674/19.102015 | 1,000/- | ಸಾದಿಲ್ವಾರು ವೆಚ್ಚ |
| 7 | 606686/29.01.2016 | 1,000/- | ಸಾದಿಲ್ವಾರು ವೆಚ್ಚ |
| 8 | 606690/27.2.2016 | 4,797/- | ಸುಪ್ರೀಯ ಜೆ.ಎನ್ ಬಿ.ಪಿ.ಎ ವಿದ್ಯಾರ್ಥಿನಿ ಇವರಿಗೆ ವಿದ್ಯಾರ್ಥಿ ವೇತನ ಪಾವತಿ |
| 9 | 606691/2.3.2016 | 543/- | 2015-16ನೇ ಸಾಲಿನ ಆದಾಯ ತೆರಿಗೆಯ ಕ್ಯೂ3 ಅಪ್‌ಲೋಡ್ ಮಾಡಿಸಿರುವ ಮೊತ್ತ |
| 10 | 606693/5.3.2016 | 6,000/- | ಮಹಿಳಾ ದಿನಾಚರಣೆ ಆಚರಿಸುವ ಸಲುವಾಗಿ ಭರಿಸಿರುವ ವೆಚ್ಚ |
| 11 | 606695/20.03.2016 | 5,847/- | ಸೆಲ್ವಂ ಪ್ರಯಾಲೀನಿ ಪ್ರಥಮ ಬಿ.ಪಿ.ಎ ವಿದ್ಯಾರ್ಥಿನಿ ಇವರ ಪ್ರವೇಶಾತಿ ಶುಲ್ಕವನ್ನು ಜಿ.ಆರ್.ಎ ಖಾತೆಗೆ ಜಮಾ ಮಾಡಿರುವ ಮೊತ್ತ. |
| ಒಟ್ಟು ಮೊತ್ತ | | 43,607/- | |

| | |
|---|---|
| **30. <u>ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಹಾಜರುಪಡಿಸದಿರುವುದು :– (ಮುದ್ರಣಾಲಯ)</u>**<br><br>2015–16ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಹಾಜರುಪಡಿಸಲಾದ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ ಮುದ್ರಣಾಲಯ ಮತ್ತು ಲೇಖನ ಸಾಮಗ್ರಿಗಳ ವಿಭಾಗದ ತಾಂತ್ರಿಕ/ತಾಂತ್ರಿಕೇತರ ನೌಕರರುಗಳಿಗೆ ಮತ್ತು ಅವಲಂಬಿತರಿಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ಒಟ್ಟು ಮೊತ್ತ ರೂ.8,64,372/–ಗಳನ್ನು ಪಾವತಿಸಲಾಗಿರುತ್ತದೆ. ಈ ಸಂಬಂಧ ಪೂರಕ ಮರುಪಾವತಿ ಬಿಲ್ಲುಗಳನ್ನು ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:01/21.04.2015 ಹಾಗೂ 04/28.04.2018ರಲ್ಲಿ ತಿಳಿಸಲಾಗಿತ್ತಾದರೂ ಹಾಜರುಪಡಿಸದಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ 2 ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದ ವಿವರಗಳನ್ನು ವೈದ್ಯಕೀಯ ಹಾಜರಾತಿ ನಿಯಮ 1963 (MEDICAL ATTENDANCE) RULE-1963ರ Schedule-1 ರಲ್ಲಿನ ಅನುಮೋದನೆಗೊಂಡ ಆಸ್ಪತ್ರೆಗಳಿಂದ ವೈದ್ಯಕೀಯ ಶುಶ್ರೂಷೆ ಪಡೆದ ಬಗೆಗಿನ ವಿವರಗಳನ್ನಾಗಲಿ ಅಥವಾ KARNATAKA GOVERNMENT SERVANTS (MEDICAL ATTENDANCE) RULE-1963ರ ನಿಯಮ 14 ರನ್ವಯ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ಮಾಡಿರುವ ಬಗೆಗಿನ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ಮೇಲ್ಕಂಡ ಮೊತ್ತ **ರೂ.8,64,372/–ಗಳನ್ನು ಆಕ್ಷೇಪಿಸಲಾಗಿದೆ.** ವಿವರಗಳನ್ನು **<u>ಅನುಬಂಧ–117ರಲ್ಲಿ</u>** ನೀಡಲಾಗಿದೆ. | ವಿಶ್ವವಿದ್ಯಾನಿಲಯಕ್ಕೆ ಹಣಕಾಸು ಅಧಿಕಾರಿಗಳು ಡ್ರಾಯಿಂಗ್ ಅಧಿಕಾರಿಯಾಗಿದ್ದು; ವೈದ್ಯಕೀಯ ವೆಚ್ಚದ ಎಲ್ಲಾ ಮೂಲ ಬಿಲ್ಲುಗಳನ್ನು ಪಾವತಿ ಮಾಡುವ ಸಲುವಾಗಿ ಹಣಕಾಸು ಶಾಖೆಗೆ ಸಲ್ಲಿಸಲಾಗಿದೆ. ಸದರೀ ಬಿಲ್ಲುಗಳು ಪಾವತಿ ನಂತರ ಹಣಕಾಸು ಶಾಖೆಯಲ್ಲೇ ಇದ್ದು; ಲೆಕ್ಕ ತನಿಖಾ ಸಮಯದಲ್ಲಿ ಪರಿಶೋಧಕರು ಹಣಕಾಸು ಶಾಖೆಯಲ್ಲಿ ಈ ಎಲ್ಲಾ ಮೂಲ ಪಾವತಿ ಓಚರ್‌ಗಳನ್ನೂ ಪರಿಶೀಲನೆ ಮಾಡಿರುತ್ತಾರೆ. ಮುದ್ರಣಾಲಯ ಕಛೇರಿಯಲ್ಲಿ ಇವುಗಳ ಜೆರಾಕ್ಸ್ ಪ್ರತಿಗಳನ್ನು ಮಾತ್ರ ನಿರ್ವಹಿಸಲಾಗಿದೆ.<br><br>ಆದ್ದರಿಂದ, ಮುದ್ರಣಾಲಯ ಕಛೇರಿಗೆ ಸಂಬಂಧಿಸಿದಂತೆ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **31. <u>ಟೆಂಡರು/ಕೊಟೇಷನ್ ಮೂಲಕ ಸರಬರಾಜುದಾರರಿಗೆ ಪಾವತಿಸಿರುವ ಪಾವತಿಗಳ ಮೂಲ ಟೆಂಡರ್/ಕಡತಗಳನ್ನು ಹಾಜರುಪಡಿಸದಿರುವುದು:– (ಮುದ್ರಣಾಲಯ)</u>**<br><br>ವಿಷಯಕ್ಕೆ ಸಂಬಂಧಿಸಿದಂತೆ 2015–16ನೇ ಸಾಲಿನಲ್ಲಿ ಈ ಸಂಸ್ಥೆಗೆ ವಿವಿಧ ಸಾಮಗ್ರಿಗಳನ್ನು ಅನೇಕ ಸರಬರಾಜು ಸಂಸ್ಥೆಗಳು ಸರಬರಾಜು ಮಾಡಿದ್ದು, ಇವರಿಗೆ ಹಣ ಪಾವತಿಸಿರುವುದು ಕಂಡುಬಂದಿದೆ. ಇವುಗಳನ್ನು ಡಿ.ಸಿ ಬಿಲ್ಲುಗಳ ಮೂಲಕ/ಎ.ಸಿ ಬಿಲ್ಲುಗಳ ಮೂಲಕ ಪಾವತಿಸಲಾಗಿದ್ದು, ಬಿಲ್ಲುಗಳನ್ನು ಹಾಗೂ ಹಾಜರುಪಡಿಸಿರುವ ಕಡತಗಳನ್ನು ಪರಿಶೀಲಿಸಲಾಗಿ, ಅನೇಕ ಪ್ರಕರಣಗಳಲ್ಲಿ ಟೆಂಡರ್‌ಗಳ ಮೂಲಕ ಸರಬರಾಜು ಮಾಡಿದ್ದು, ಅವುಗಳ ಮೂಲ ಟೆಂಡರ್ ಕಡತಗಳನ್ನು ಲೆಕ್ಕಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಇವುಗಳಲ್ಲಿ ಹಲವು 2014–15ನೇ ಸಾಲಿನವುಗಳಾಗಿದ್ದು, ಹಲವು 2015–16ನೇ ಸಾಲಿನವುಗಳಾಗಿರುತ್ತವೆ. ಈ ಸಂಬಂಧ ಮೂಲ ಟೆಂಡರ್ ಕಡತಗಳನ್ನು ಹಾಜರುಪಡಿಸುವಂತೆ ಆಡಿಟ್ | ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯ ಕಛೇರಿಯು ಟೆಂಡರ್ ಅಂಗೀಕಾರ ಪ್ರಾಧಿಕಾರವಾಗಿರುವುದರಿಂದ ಈ ಟೆಂಡರ್‌ಗಳಿಗೆ ಸಂಬಂಧಿಸಿದ ಮೂಲ ಕಡತವು ಕುಲಸಚಿವರ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿದೆ. ಹಣಕಾಸು ಶಾಖೆಯಲ್ಲಿ ಲೆಕ್ಕ ಪರಿಶೋಧಕರು ಮೂಲ ಓಚರ್‌ಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಈ ಎಲ್ಲಾ ಟೆಂಡರ್ ಕಡತಗಳೊಂದಿಗೆ ಪರಿಶೀಲನೆ ನಡೆಸಿರುತ್ತಾರೆ.<br><br>ಮುದ್ರಣಾಲಯ ಕಛೇರಿಯಲ್ಲಿ ಮೂಲ ಟೆಂಡರ್ ಕಡತಗಳ ಜೆರಾಕ್ಸ್ ಪ್ರತಿಗಳನ್ನು ಮಾತ್ರ |

ವಿಚಾರಣಾ ಪತ್ರದ ಸಂಖ್ಯೆ:06/18–19 ದಿನಾಂಕ:28.04.2018 ಹಾಗೂ 17/18–19 ದಿನಾಂಕ:10.05.2018ರಲ್ಲಿ ಮತ್ತು ಅನೇಕ ಸಲ ಮೌಖಿಕವಾಗಿಯೂ ತಿಳಿಸಲಾಗಿತ್ತು. ಆದರೆ ಈ ಕೆಳಕಂಡ ಪ್ರಕರಣಗಳಲ್ಲಿ ಯಾವುದೇ ಮೂಲ ದಾಖಲಾತಿಗಳನ್ನು/ಕಡತಗಳನ್ನು ಹಾಜರುಪಡಿಸಿಲ್ಲ ಹಾಗೂ ಯಾವುದೇ ಲಿಖಿತ ಮಾಹಿತಿಯನ್ನು ಸಹ ನೀಡಿರುವುದಿಲ್ಲ. ಇದರಿಂದ ಸದರಿ ಪಾವತಿಗಳ ನಿಖರತೆ/ಸತ್ಯಾಸತ್ಯತೆಯನ್ನು ತಿಳಿಯಲು ಸಾದ್ಯವಾಗಿರುವುದಿಲ್ಲ. ದಾಸ್ತಾನು ಸ್ವೀಕೃತಿ ವಿವರಗಳನ್ನು ಮಾತ್ರ ಪರಿಶೀಲಿಸಿದೆ.

| ಕ್ರ. ಸಂ | ಬಿ.ಆರ್. ನಂಬರ್ | ದಿನಾಂಕ | ಬಿಲ್ಲಿನ ಒಟ್ಟು ಮೊತ್ತ | ಸರಬರಾಜು ಸಂಸ್ಥೆಯ ಹೆಸರು |
|---|---|---|---|---|
| 1 | 45/15–16 | 01.07.2015 | 110750 | ಮೆ॥ ಸಂಜೀವ್ ಅಸೋಸಿಯೇಟ್ಸ್, ಮೈಸೂರು |
| 2 | 52/15–16 | 10.07.2015 | 107701 | ಶ್ರೀ ವೆಂಕಟೇಶ್ವರ ಪೇಪರ್ ಪ್ರಾಡಕ್ಟ್ಸ್, ದಾವಣಗೆರೆ |
| 3 | 181/15–16 | 15.03.2016 | 1705393 | ಶ್ರೀ ವೆಂಕಟೇಶ್ವರ ಪೇಪರ್ ಪ್ರಾಡಕ್ಟ್ಸ್, ಬಿಲ್ಲು ಹಾಗೂ ಕಡತವನ್ನೂ ಸಹ ಹಾಜರುಪಡಿಸಿಲ್ಲ. |
| 4 | 131/15–16 | 08.12.2015 | 159570 | ಮೆ॥ ಸಾಹಿಲ್ ಏಜೆನ್ಸಿಸ್, ಮೈಸೂರು |
| 5 | 154/15–16 | 21.01.2016 | 210291 | ಮೆ॥ ಶೇಖರ್ ಬುಕ್ ಮ್ಯಾನ್ಯೂಫಾಕ್ಚರರ್ಸ್, ಬೆಂಗಳೂರು. |
| | | ಒಟ್ಟು | **2293705** | |

ಮೇಲಿನ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಟೆಂಡರ್‌ಗಳ ಮೂಲ ಕಡತಗಳನ್ನು ಹಾಜರುಪಡಿಸಲು ಸೂಚಿಸಲಾಗಿದೆ. ಅಲ್ಲಿಯವರೆಗೆ ಪಾವತಿಸಿರುವ ಒಟ್ಟು ಮೊತ್ತ **ರೂ.22,93,705/–ಗಳನ್ನು ಆಕ್ಷೇಪಿಸಲಾಗಿದೆ**

ನಿರ್ವಹಿಲಾಗುತ್ತಿದ್ದು; ಅವುಗಳನ್ನು ಮುಂದಿನ ಸ್ಥಳೀಯ ಪರಿಶೀಲನೆ ಸಮಯದಲ್ಲಿ ಹಾಜರು ಪಡಿಸಲಾಗುವುದು.

**32. <u>ಸ್ಥಳೀಯ ವಿಚಾರಣಾ ಸಮಿತಿಗಳು ಬಳಸಿಕೊಂಡ ವಾಹನಗಳ ಲಾಗ್‌ಬುಕ್‌ಗಳನ್ನು ಹಾಜರುಪಡಿಸಿಲ್ಲದ ಕುರಿತು:– (ಕಾಲೇಜು ಅಭಿವೃದ್ಧಿ ಮಂಡಳಿ)</u>**

2014–15 ಮತ್ತು 2015–16ನೇ ಸಾಲಿನಲ್ಲಿ ಸ್ಥಳೀಯ ವಿಚಾರಣಾ ಸಮಿತಿಗಳು ವಿವಿಧ ಕಾಲೇಜುಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ Kaveri Tours & Travels ನ ವಾಹನಗಳನ್ನು ಬಳಸಲಾಗಿದ್ದು, ಸದರಿ ವಾಹನಗಳ ಲಾಗ್‌ಬುಕ್‌ಗಳ ಮಾಹಿತಿಯನ್ನು ಹಾಗೂ ಈ ಸಂಬಂಧ ಟೆಂಡರ್

ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿಎಲ್.8/531/2000.01 ದಿನಾಂಕ 1.8.2013ರ ಅನ್ವಯದಂತೆ ಇ ಪ್ರೊಕ್ಯೂರ್‌ಮೆಂಟ್ ಮೂಲಕ ಬಾಡಿಗೆಗೆ ವಾಹನಗಳನ್ನು ಪಡೆಯಲು ಕರೆದಿದ್ದ ಟೆಂಡರ್‌ನಲ್ಲಿ ಯಶಸ್ವಿ ಬಿಡ್‌ದಾರರಾದ ಮೆ॥ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್ ಇವರ ದರವನ್ನು ಅನುಮೋದಿಸಿ ಆದೇಶ ನೀಡಲಾಗಿದೆ. ಅದರಂತೆ ವಿವಿಧ ಉದ್ದೇಶಗಳಿಗೆ

<table>
<tr>
<td>
ಕರೆದಿರುವ ಬಗ್ಗೆ ಮಾಹಿತಿಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:03/2017–18 ದಿನಾಂಕ:23.03.2018ರಲ್ಲಿ ಕೋರಲಾಗಿತ್ತು. ಆದರೆ ಈ ಕುರಿತು ಯಾವುದೇ ಮಾಹಿತಿ ನೀಡಿರುವುದಿಲ್ಲ. ಇದರಿಂದ ಇವರಿಗೆ ಪಾವತಿಸಿರುವ ಪಾವತಿಗಳ ನಿಖರತೆಯನ್ನು ಹಾಗೂ ಭೇಟಿಯ ವಿವರಗಳು, ಚಲಿಸಿರುವ ದೂರವನ್ನು (ಕಿ.ಮೀ) ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಇವರಿಗೆ ಪಾವತಿಸಿರುವ ಒಟ್ಟು ಮೊತ್ತ ರೂ.3,01,889/– ಗಳನ್ನು ಆಕ್ಷೇಪಿಸಲಾಗಿದೆ. ವಿವರಗಳು
<br><br>
<table>
<tr><th>ಕ್ರಸಂ</th><th>ಬಿ.ಆರ್.ಸಂಖ್ಯೆ</th><th>ಮೊತ್ತ</th></tr>
<tr><td>1</td><td>2/2015–16</td><td>205890</td></tr>
<tr><td>2</td><td>9/2015–16</td><td>37104</td></tr>
<tr><td>3</td><td>20/2015–16</td><td>39517</td></tr>
<tr><td>4</td><td>32/2015–16</td><td>19378</td></tr>
<tr><td></td><td>ಒಟ್ಟು ರೂ.</td><td>301889</td></tr>
</table>
</td>
<td>
ವಾಹನಗಳನ್ನು ಬಾಡಿಗೆಗೆ ಪಡೆದು ಉಪಯೋಗಿಸಲಾಗಿದೆ ಹಾಗೂ ಆಯಾ ವಾಹನಗಳು ಚಲಿಸಿದ ಸ್ಥಳ ಮತ್ತು ಕಿಲೋ.ಮೀಟರ್‌ಗಳ ಟ್ರಿಪ್ ವಿವರಗಳನ್ನು ಬಿಲ್ಲುಗಳಲ್ಲಿ ದಾಖಲಿಸಲಾಗಿದೆ.
<br><br>
ಇವುಗಳ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ರೂ.301889.00ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ.
</td>
</tr>
</table>